ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕದನ ವಿರಾಮ ಉಲ್ಲಂಘಿಸಿದರೆ ತಕ್ಕ ಉತ್ತರ ನೀಡಿ

ಜನರಲ್ ಉಪೇಂದ್ರ ದ್ವಿವೇದಿ
ಭಾರತ ಸೇನಾ ಮುಖ್ಯಸ್ಥ

ಕದನ ವಿರಾಮ ಒಪ್ಪಂದ ಉಲ್ಲಂಘಿಸುತ್ತಿರುವ ಪಾಕ್‌ಗೆ ಕಠಿಣ ಸಂದೇಶ ರವಾನೆ

ಕಾಶ್ಮೀರ ವಿಚಾರದಲ್ಲಿ ಅಮೆರಿಕಕ್ಕೆ ಸ್ಪಷ್ಟ ನಿಲುವು ತಿಳಿಸಿದ ಭಾರತ

ಪಿಒಕೆ ಬಿಟ್ಟು ತೊಲಗಿ

ದೆಹಲಿ: ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಹಿಂಪಡೆಯುವುದು ಹಾಗೂ ಉಗ್ರರ ಹಸ್ತಾಂತರದ ಕುರಿತಾಗಿ ಮಾತ್ರವೇ ಮಾತುಕತೆ ನಡೆಸಲಾಗುವುದು ಎಂದು ಅಮೆರಿಕಕ್ಕೆ ಭಾರತ ಸ್ಪಷ್ಟಪಡಿಸಿದೆ. ಕಾಶ್ಮೀರದ ವಿಚಾರದಲ್ಲಿ ಸ್ಪಷ್ಟ ನಿಲುವು ಹೊಂದಿದ್ದೇವೆ. ಪಿಒಕೆ ಹಿಂಪಡೆಯುವ ವಿಚಾರವಷ್ಟೇ ಬಾಕಿ ಇರುವುದು. ಅದನ್ನು ಬಿಟ್ಟರೆ ಮಾತನಾಡುವಂತಹದ್ದೇನೂ ಇಲ್ಲ. ಉಗ್ರರ ಹಸ್ತಾಂತರದ ಬಗ್ಗೆ ಅವರು ಪ್ರಸ್ತಾಪಿಸಿದರೆ, ನಾವೂ ಮಾತನಾಡುತ್ತೇವೆ. ಆದರೆ, ಬೇರೆ ವಿಚಾರಗಳ ಬಗ್ಗೆ ಮಾತನಾಡುವ ಉದ್ದೇಶವಿಲ್ಲ ಎಂದು ತಿಳಿಸಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬಹು ಸಮಯದಿಂದಲೂ ಇರುವ ಕಾಶ್ಮೀರ ಸಮಸ್ಯೆ ಬಗೆಹರಿಸಲು ಮಧ್ಯಸ್ಥಿಕೆ ವಹಿಸಲು ಸಿದ್ಧ ಎಂದು ಹೇಳಿದ್ದರು. ಅದನ್ನು, ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಸ್ವಾಗತಿಸಿದ್ದರು. ಇದೀಗ, ಈ ವಿಚಾರದಲ್ಲಿ ಭಾರತ ತನ್ನ ನಿಲುವು ಸ್ಪಷ್ಟಪಡಿಸಿದೆ.

ಪ್ರತಿಕ್ರಿಯೆ ಬಲಶಾಲಿಯಾಗಿರಬೇಕು

ಭಾನುವಾರ ರಕ್ಷಣಾ ಸಚಿವ ರಾಜನಾಥ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋಬಾಲ್ ಮತ್ತು ಸೇನಾಪಡೆಗಳ ಮುಖ್ಯಸ್ಥರ ಜತೆ ಭದ್ರತಾ ಸಭೆ ನಡೆಸಿದ ಪ್ರಧಾನಿ ಮೋದಿ, ಪಾಕಿಸ್ತಾನದ ಪ್ರತಿಯೊಂದು ಕ್ರಿಯೆಗೂ ದೇಶದ ಪ್ರತಿಕ್ರಿಯೆ ಹೆಚ್ಚು ಬಲಶಾಲಿಯಾಗಿರಬೇಕು. ಪಾಕ್‌ನಿಂದ ಬರುವ ಗುಂಡುಗಳಿಗೆ ಫಿರಂಗಿಗಳ ಮೂಲಕ ಪ್ರತಿಕ್ರಿಯಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಶಸ್ತ್ರ ಪಡೆಗಳಿಗೆ ಸೂಚನೆ ನೀಡಿದ್ದಾರೆ.

ಆಪರೇಷನ್ ಸಿಂಧೂರ ಮುಕ್ತಾಯವಾಗಿಲ್ಲ: ಆಪರೇಷನ್ ಸಿಂಧೂರ ಇನ್ನೂ ಮುಕ್ತಾಯಗೊಂಡಿಲ್ಲ. ಗಡಿಯಾಚೆಗಿನ ಭಯೋತ್ಪಾದನೆಗೆ ತೆರಬೇಕಾದ ಬೆಲೆ ಹೆಚ್ಚಾಗಲಿದೆ. ಕಾಶ್ಮೀರ ವಿಷಯದಲ್ಲಿ ಭಾರತ ಎಂದಿಗೂ ಮಧ್ಯಸ್ಥಿಕೆಯನ್ನು ಸ್ವೀಕರಿಸುವುದಿಲ್ಲ ಮತ್ತು ಚರ್ಚಿಸಬೇಕಾದ ಏಕೈಕ ವಿಷಯವೆಂದರೆ, ಪಾಕಿಸ್ತಾನವು ಆಕ್ರಮಣವಾಗಿ ವಶಪಡಿಸಿಕೊಂಡಿರುವ ಪ್ರದೇಶವನ್ನು ಹಿಂದಿರುಗಿಸಬೇಕಾಗಿರುವುದು ಎಂದು ಹೇಳಿದ್ದಾರೆ. ಈ ನಡುವೆ ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಜತೆ ದೂರವಾಣಿ ಮೂಲಕ ಮಾತನಾಡಿರುವ ನರೇಂದ್ರ ಮೋದಿ, ಕಾಶ್ಮೀರದ ವಿಷಯದಲ್ಲಿ ಮೂರನೆಯವರ ಮಧ್ಯಸ್ಥಿಕೆ ಬೇಕಾಗಿಲ್ಲ ಎಂದು ಕಡ್ಡಿ ಮುರಿದಂತೆ ಹೇಳಿದ್ದಾರೆ.

ಸಹಜ ಸ್ಥಿತಿಗೆ ಕಾಶ್ಮೀರ

ಸುಮಾರು ಐದಾರು ದಿನಗಳ ತೀವ್ರ ಕದನ ನಂತರ ಕಾಶ್ಮೀರ ಕಣಿವೆ ಸಾಮಾನ್ಯ ಸ್ಥಿತಿಗೆ ಮರಳಿದೆ. ಆರು ದಿನ ಗಳಲ್ಲಿ ವಿಮಾನಗಳು, ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಶಬ್ದ, ಸಪ್ಪಳ ಕೇಳಿಸಿದ್ದ ಕಣಿವೆ ರಾಜ್ಯದ ನಿವಾಸಿ ಗಳು ಮೊದಲ ರಾತ್ರಿಯನ್ನು ಶಾಂತವಾಗಿ ಕಳೆದರು. ಶನಿವಾರ ರಾತ್ರಿ 11 ಗಂಟೆ ನಂತರ ಕಾಶ್ಮೀರದ ನಿಯಂತ್ರಣ ರೇಖೆಯ ಯಾವುದೇ ವಲಯದಿಂದ ಕದನ ವಿರಾಮ ಉಲ್ಲಂಘನೆ ವರದಿಯಾಗಿಲ್ಲ. ಜಮ್ಮು ಪ್ರದೇಶದಾದ್ಯಂತ ರಾತ್ರಿ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

ಇನ್ನೂ ಆಪರೇಷನ್ ಸಿಂದೂರ ಮುಗಿದಿಲ್ಲ

ಪಹಲ್ಗಾಮ್ ಉಗ್ರದಾಳಿ ಬಳಿಕ ನಡೆದ ಆಪರೇಷನ್ ಸಿಂಧೂರ ಕಾರ್ಯಾಚರಣೆ ನಂತರ ಭಾರತ ಮತ್ತು ಪಾಕಿಸ್ತಾನ ನಡುವೆ ಭುಗಿಲೆದ್ದಿದ್ದ ಸೇನಾ ಸಂಘರ್ಷ ಕದನ ವಿರಾಮ ಘೋಷಣೆಯೊಂದಿಗೆ ಮುಗಿದಿದೆ ಎನ್ನುವಾಗಲೇ ಭಾರತೀಯ ವಾಯುಸೇನೆ ಆಪರೇಷನ್ ಸಿಂದೂರ ಕುರಿತು ಮಹತ್ವದ ಹೇಳಿಕೆಯೊಂದನ್ನು ನೀಡಿದೆ. ಭಾರತೀಯ ವಾಯುಪಡೆಯು ಆಪರೇಷನ್ ಸಿಂದೂರನಲ್ಲಿ ತನಗೆ ನಿಯೋಜಿಸಲಾದ ಕಾರ್ಯಗಳನ್ನು ನಿಖರತೆ ಮತ್ತು ವೃತ್ತಿಪರತೆಯೊಂದಿಗೆ ಯಶಸ್ವಿಯಾಗಿ ನಿರ್ವಹಿಸಿದೆ. ಕಾರ್ಯಾಚರಣೆಗಳನ್ನು ರಾಷ್ಟ್ರೀಯ ಉದ್ದೇಶಗಳಿಗೆ ಅನುಗುಣವಾಗಿ ಉದ್ದೇಶಪೂರ್ವಕ ಮತ್ತು ವಿವೇಚನಾಯುಕ್ತ ರೀತಿಯಲ್ಲಿ ನಡೆಸಲಾಯಿತು ಎಂದು ಹೇಳಿದೆ. ಇದೇ ವೇಳೆ ಭಾರತೀಯ ಸೇನೆ ಆರಂಭಿಸಿದ್ದ ಆಪರೇಷನ್ ಸಿಂದೂರ ಕಾರ್ಯಾಚರಣೆ ಇನ್ನೂ ನಡೆಯುತ್ತಿರುವುದರಿಂದ, ಸರಿಯಾದ ಸಮಯದಲ್ಲಿ ವಿವರವಾದ ಬ್ರೀಫಿಂಗ್ ಅನ್ನು ನಡೆಸಲಾಗುವುದು ಎಂದು ಹೇಳಿದೆ.

- ಒಟ್ಟು 80 ಎಕರೆ ವಿಸ್ತೀರ್ಣದಲ್ಲಿ ಘಟಕ ಸ್ಥಾಪನೆ
- ಉತ್ತರ ಪ್ರದೇಶ ಸರಕಾರದಿಂದ ಉಚಿತ ಜಾಗ
- 3.5 ವರ್ಷದಲ್ಲಿ ಘಟಕದ ನಿರ್ಮಾಣ ಪೂರ್ಣ

ಬ್ರಹ್ಮೋಸ್ ಉತ್ಪಾದನಾ ಘಟಕ ಉದ್ಘಾಟನೆ

ಲಖನೌ: ಉತ್ತರ ಪ್ರದೇಶದ ರಕ್ಷಣಾ ಕೈಗಾರಿಕಾ ಕಾರಿಡಾರ್‌ನಲ್ಲಿ ಬ್ರಹ್ಮೋಸ್ ಕ್ರೂಸ್ ಕ್ಷಿಪಣಿ ತಯಾರಿಕಾ ಘಟಕವನ್ನು ರಕ್ಷಣಾ ಸಚಿವ ರಾಜನಾಥ ಸಿಂಗ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾನುವಾರ ಉದ್ಘಾಟಿಸಿದ್ದಾರೆ. ₹300 ಕೋಟಿ ವೆಚ್ಚದ ಈ ಸೌಲಭ್ಯವು ಉತ್ತರ ಪ್ರದೇಶ ರಕ್ಷಣಾ ಕೈಗಾರಿಕಾ ಕಾರಿಡಾರ್‌ನ ಪ್ರಮುಖ ಭಾಗವಾಗಿದ್ದು, ರಕ್ಷಣಾ ಉತ್ಪಾದನೆಯಲ್ಲಿ ಭಾರತದ ಸ್ವಾವಲಂಬಿ ಬದ್ಧತೆಯನ್ನು ಪ್ರತಿಪಾದಿಸುತ್ತದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ಘಟಕದಲ್ಲಿ ಕ್ಷಿಪಣಿಗಳನ್ನು ತಯಾರಿಸುವುದರ ಜತೆಗೆ ಇತರ ಘಟಕಗಳಿಗೆ ಸಾಮಗ್ರಿಗಳನ್ನು ಸಹ ಪೂರೈಸಲಾಗುತ್ತದೆ. ಇದು ಆತ್ಮನಿರ್ಭರ ಭಾರತದ ಕಡೆಗೆ ಇಟ್ಟಿರುವ ಪ್ರಮುಖ ಹೆಜ್ಜೆಯಾಗಿದೆ ಮತ್ತು ಪ್ರಾದೇಶಿಕ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡಿದಂತಾಗಿದೆ ಎಂದು ರಕ್ಷಣಾ ಸಚಿವಾಲಯ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದೆ.

3490 ಕಿ.ಮೀ. ಸಂಚಾರ ಸಾಮರ್ಥ್ಯ

290ರಿಂದ 400 ಕಿ.ಮೀ.ವರೆಗೆ ಗುರಿ ಭೇದಿಸಬಲ್ಲ ದೀರ್ಘ ಶ್ರೇಣಿಯ ಈ ಕ್ಷಿಪಣಿಯು ಗಂಟೆಗೆ 3490 ಕಿ.ಮೀ. ವೇಗದಲ್ಲಿ ಸಂಚರಿಸಬಲ್ಲದ್ದಾಗಿದೆ. ಕ್ಷಿಪಣಿಯ ಬಿಡಿ ಭಾಗಗಳನ್ನು ಜೋಡಿಸುವ, ಕ್ಷಿಪಣಿಯನ್ನು ಪರೀಕ್ಷಿಸುವ ಸೌಲಭ್ಯವೂ ಇಲ್ಲಿ ಇರಲಿದೆ. ಈ ಕ್ಷಿಪಣಿಗಳನ್ನು ಭೂಮಿ, ಸಮುದ್ರ ಅಥವಾ ಗಾಳಿಯಿಂದ ಉಡಾಯಿಸಬಹುದಾಗಿದೆ.

ಪಾಕ್ ಸೇನೆಯ 40ಕ್ಕೂ ಹೆಚ್ಚು ಸೈನಿಕರು ಮೃತ

100ಕ್ಕೂ ಹೆಚ್ಚು ಉಗ್ರರು ಸಾವು

ದೆಹಲಿ: ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ಒಂಬತ್ತು ಭಯೋತ್ಪಾದಕ ಉಡಾವಣಾ ಪ್ಯಾಡ್‌ಗಳನ್ನು ಗುರಿಯಾಗಿಸಿಕೊಂಡು ನಿಖರವಾದ ವಾಯು ದಾಳಿಗಳನ್ನು ನಡೆಸಲಾಯಿತು. ಈ ಕಾರ್ಯಾಚರಣೆಯಲ್ಲಿ ಅನೇಕ ಉನ್ನತ ಭಯೋತ್ಪಾದಕ ಕಮಾಂಡರ್‌ಗಳು ಸೇರಿದಂತೆ 100ಕ್ಕೂ ಹೆಚ್ಚು ಭಯೋ ತ್ಪಾದಕರು ಸಾವನ್ನಪ್ಪಿದರು ಎಂದು ಭಾನುವಾರ ನಡೆದ ಪತ್ರಿಕಾ ಗೋಷ್ಠಿ ಯಲ್ಲಿ ಭಾರತೀಯ ಸೇನೆಯ ಡಿಜಿಎಂಒ ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಮಾಹಿತಿ ನೀಡಿದ್ದಾರೆ.

ಪ್ರತಿ ವಾಯು ದಾಳಿಯಲ್ಲೂ ಪಾಕ್ ಸೇನಾಧಿಕಾರಿಗಳೂ ಸೇರಿ 40ಕ್ಕೂ ಹೆಚ್ಚು ಸೈನಿಕರು ಮೃತಪಟ್ಟಿದ್ದಾರೆ. ಹತ್ಯೆಯಾದ ಭಯೋತ್ಪಾದಕರಲ್ಲಿ ಯೂಸುಫ್ ಅಜರ್, ಅಬ್ದುಲ್ ಮಲಿಕ್ ರೌಫ್ ಮತ್ತು ಮುದಾಸೀರ್ ಅಹ್ಮದ್ ನಂತಹ ಕುಖ್ಯಾತ ಭಯೋತ್ಪಾದಕರು ಸೇರಿದ್ದಾರೆ. ಐ ಈ ಸಂಘರ್ಷದಲ್ಲಿ ಐವರು ಭಾರತೀಯ ಯೋಧರು ಹುತಾತ್ಮರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ ಮಾತನಾಡಿ, ಮೂರು ದಿನಗಳಿಂದ ನಡೆದ ಭಾರತ-ಪಾಕಿಸ್ತಾನ ನಡುವಿನ ಸೇನಾ ಸಂಘರ್ಷದಲ್ಲಿ ಪಾಕಿಸ್ತಾನದ ಶೆಲ್, ಡ್ರೋನ್ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ ಎಂದು ತಿಳಿಸಿದ್ದಾರೆ.

ಪಾಕ್ ಬೆಂಬಲಕ್ಕೆ ನಿಂತ ಚೀನಾ

ಭಾರತ-ಪಾಕಿಸ್ತಾನ ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಿದ ಬಳಿಕವೂ ಕದನ ವಿರಾಮ ಉಲ್ಲಂಘಿಸಿರುವ ಪಾಕಿಸ್ತಾನದ ಬೆಂಬಲಕ್ಕೆ ಚೀನಾ ನಿಂತಿದೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಚೀನಾ ವಿದೇಶಾಂಗ ಸಚಿವಾಲಯ ಬೀಜಿಂಗ್ ಇಸ್ಲಾಮಾಬಾದ್ ಜತೆ ದೃಢವಾಗಿ ನಿಲ್ಲುತ್ತದೆ ಎಂದು ಹೇಳಿದೆ. ಪಾಕಿಸ್ತಾನದ ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವಲ್ಲಿ ಬೀಜಿಂಗ್ ಇಸ್ಲಾಮಾಬಾದ್ ಜತೆ ನಿಂತಿದೆ ಎಂದು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ತಿಳಿಸಿದ್ದಾರೆ.

ಮಾತುಕತೆಗೆ ಸಿದ್ಧ: ಪಾಕ್

ಭಾರತದೊಂದಿಗೆ ಮಾತುಕತೆಗೆ ನಾವು ಸಿದ್ಧವಿದ್ದೇವೆ ಎಂದು ಪಾಕ್ ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್ ತಿಳಿಸಿದ್ದಾರೆ. ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹಾಗೂ ಸೇನಾ ಮುಖ್ಯಸ್ಥ ಜನರಲ್ ಅಸಿಮ್ ಮುನೀರ್ ಅವರೊಂದಿಗೆ ಮಾತುಕತೆ ನಡೆಸಿದ ಬಳಿಕ, ಮುನೀರ್ ಈ ಕುರಿತು ಘೋಷಿಸಿದ್ದಾರೆ. ಎರಡೂ ದೇಶಗಳ ಡಿಜಿಎಂಒ ನಡುವೆಯೇ ಮಾತುಕತೆಗಳು ಆಗಬೇಕು. ಹೊರತುಪಡಿಸಿ ಬೇರೆಯವರೊಂದಿಗೆ ಅಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ.

ಕೂಡಲೇ ಮನೆಗೆ ಹಿಂದಿರುಗದಿರಿ

ಪಾಕಿಸ್ತಾನದ ಶೆಲ್ ದಾಳಿ ಭೀತಿಯಿಂದ ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಗೊಂಡಿದ್ದ ಗಡಿ ಭಾಗದ ಜನರು, ಸಂಘರ್ಷಕ್ಕೆ ವಿರಾಮ ಘೋಷಣೆಯಾಗಿದೆ ಎಂದು ಕೂಡಲೇ ತಮ್ಮ ಮನೆಗೆ ಹಿಂದಿರುಗದಿರಿ ಎಂದು ಜಮ್ಮು ಮತ್ತು ಕಾಶ್ಮೀರ ಅಧಿಕಾರಿಗಳು ಭಾನುವಾರ ಸೂಚನೆ ನೀಡಿದ್ದಾರೆ. ಪ್ರದೇಶದಲ್ಲಿ ಶೆಲ್‌ಗಳು ಸ್ಫೋಟಗೊಳ್ಳದೇ ಬಿದ್ದಿರುವ ಸಾಧ್ಯತೆ ಇದೆ. ಬಾಂಬ್ ನಿಷ್ಕ್ರಿಯ ದಳ ಪರಿಶೀಲಿಸಿ ನಿಷ್ಕ್ರಿಯ ಮಾಡುವವರೆಗೆ ಮನೆಗಳಿಗೆ ಹಿಂದಿರುಗಬೇಡಿ ಎಂದು ಪೊಲೀಸರು ಮಾರ್ಗಸೂಚಿಯಲ್ಲಿ ತಿಳಿಸಿದ್ದಾರೆ.

ಯುಎನ್‌ಎಸ್‌ಸಿ ಕದ ತಟ್ಟಿದ ಭಾರತ

ಈಗ ಭಾರತ ಹೊಸ ಹೆಜ್ಜೆಗಳನ್ನು ಇಡಲಿದ್ದು, ಪಾಕಿಸ್ತಾನವನ್ನು ಜಗತ್ತಿನ ಮುಂದೆ ಬಯಲು ಮಾಡಲಿದೆ. ಏಪ್ರಿಲ್ 22ರ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆ ಲಷ್ಕರ್-ಎ-ತೊಯ್ಬಾದ ಅಂಗಸಂಸ್ಥೆ ದಿ ರೆಸಿಸ್ಟೆನ್ಸ್ ಫ್ರಂಟ್ (ಟಿಆರ್‌ಎಫ್) ಪಾತ್ರದ ಬಗ್ಗೆಯೂ ಪುರಾವೆಗಳನ್ನು ಸಂಗ್ರಹಿಸಿ, ಪಾಕಿಸ್ತಾನ ಭಯೋತ್ಪಾದನೆಯಲ್ಲಿ ಭಾಗಿಯಾಗಿರುವ ಇತ್ತೀಚಿನ ಪುರಾವೆಗಳೊಂದಿಗೆ ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ತಂಡವನ್ನು ಕಳುಹಿಸಲಿದೆ.

ಪುಲ್ವಾಮಾ: ಸತ್ಯಾಂಶ ಒಪ್ಪಿಕೊಂಡ ಪಾಕ್

ಪಾಕಿಸ್ತಾನದ ಮಿಲಿಟರಿ ಅಧಿಕಾರಿಗಳು ನಡೆಸಿದ ಸುದ್ದಿಗೋಷ್ಠಿಯಲ್ಲಿ ಏರ್ ಮಾರ್ಷಲ್ ಔರಂಗಜೇಬ್ ಅಹ್ಮದ್ ಮಾತನಾಡಿ, 'ಪುಲ್ವಾಮಾ ಭಯೋತ್ಪಾದಕ ದಾಳಿಯು ಪಾಕಿಸ್ತಾನಿ ಮಿಲಿಟರಿಯ ಭಯುದ್ಧತಂತ್ರದ ಭಾಗ' ಎಂದು ಹೇಳುವ ಮೂಲಕ 40 ಸಿಆರ್‌ಪಿಎಫ್ ಯೋಧರ ಸಾವಿಗೆ ಕಾರಣವಾದ 2019 ರ ಪುಲ್ವಾಮಾ ಭಯೋತ್ಪಾದಕ ದಾಳಿ ಕುರಿತು 6 ವರ್ಷಗಳ ಬಳಿಕ ಪಾಕಿಸ್ತಾನ ಸೇನೆ ಸತ್ಯಾಂಶ ಒಪ್ಪಿಕೊಂಡಿದೆ. ಈ ಸುದ್ದಿಗೋಷ್ಠಿಯ ವಿಡಿಯೊ ವ್ಯಾಪಕ ವೈರಲ್ ಆಗಿದ್ದು, ಪಾಕ್ ಸೇನೆ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ಅಧಿವೇಶನಕ್ಕೆ ಕಾಂಗ್ರೆಸ್ ಒತ್ತಾಯ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಂಘರ್ಷ, ಕದನ ವಿರಾಮ ಕುರಿತು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಇದರ ಬೆನ್ನಲ್ಲೇ, ಪಾಕಿಸ್ತಾನವು ಪಾಕ್ ಆಕ್ರಮಿತ ಕಾಶ್ಮೀರವನ್ನು (ಪಿಒಕೆ) ತೊರೆಯುವಂತೆ 1994ರಲ್ಲಿ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿರುವ ನಿರ್ಣಯವನ್ನು ಪುನರುಚ್ಚರಿಸಬೇಕು ಎಂದು ಕಾಂಗ್ರೆಸ್ ಪಕ್ಷ ಭಾನುವಾರ ಪ್ರತಿಪಾದಿಸಿದೆ.

ಭಾರತೀಯ ಸೇನೆ ಆಪರೇಷನ್ ಸಿಂದೂರ ಮೂಲಕ ಉಗ್ರರ ನೆಲೆಗಳ ಮೇಲೆ ದಾಳಿ ಮಾಡಿ ತಕ್ಕ ಉತ್ತರ ನೀಡಿದೆ. ಈ ಮೂಲಕ ಭಾರತೀಯ ಸೇನೆ ಧೈರ್ಯ ಮತ್ತು ಸಂಯಮವನ್ನು ಪ್ರದರ್ಶಿಸಿದೆ. ▶▶ ರಾಜನಾಥ ಸಿಂಗ್, ರಕ್ಷಣಾ ಸಚಿವ

ಸೊಂಪಾದ ಪುಟಗಳು

ದೇವೇಂದ್ರ ಫಡ್ನವೀಸ್ ಎಂಟ್ರಿ ಆಗಿದ್ದೇಕೆ? 6
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ

ಕದನ ಇಲ್ಲದೇ ಕದನವಿರಾಮ ಹೇಗೆ!? 7
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್

ದಾರಿದೀಪೋಕ್ತಿ

ಜನ ನಿಮಗೆ ಕೆಸರು ಎರಚಬಹುದು, ನಿಮ್ಮ ವ್ಯಕ್ತಿತ್ವಕ್ಕೆ ಧಕ್ಕೆಯುಂಟು ಮಾಡುವ ಕೆಲಸ ಮಾಡಬಹುದು. ಆದರೆ ನೀವು ಮಾಡುವ ಒಳ್ಳೆಯ ಕೆಲಸಗಳು ನಿಮಗೆ ರಕ್ಷಾಕವಚವಾಗಿರುತ್ತವೆ. ಅವರ ಎಲ್ಲ ಪ್ರಯತ್ನಗಳನ್ನು ಅವು ವಿಫಲಗೊಳಿಸುತ್ತವೆ.

ವಕ್ರತುಂಡೋಕ್ತಿ

ಮೂರ್ಖತನದ ಹೇಳಿಕೆಗಳನ್ನು ಕೊಡಬಾರದು. ಕಾರಣ ಹಠಾತ್ ಪ್ರಸಿದ್ಧರಾಗಿ ಬಿಡುವ ಅಪಾಯವಿರುತ್ತದೆ.

ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಶ್ರಮಿಸುವೆ

ನ್ಯೂಯಾರ್ಕ್: ಕಾಶ್ಮೀರ ಸಮಸ್ಯೆಗೆ ಸಾವಿರ ವರ್ಷಗಳ ಬಳಿಕ ಪರಿಹಾರ ದೊರೆಯಬಹುದೇ ಎಂಬುದನ್ನು ನೋಡಲು ನಿಮ್ಮಿಬ್ಬರ ಜತೆಗೆ ನಾನು ಕೆಲಸ ಮಾಡುತ್ತೇನೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಸೇನಾ ಸಂಘರ್ಷ ಶಮನಗೊಳಿಸಿ ಕದನ ವಿರಾಮಕ್ಕೆ ತಲುಪಿದ್ದಕ್ಕಾಗಿ ಭಾರತ ಮತ್ತು ಪಾಕಿಸ್ತಾನವನ್ನು ಶ್ಲಾಘಿಸುತ್ತೇನೆ ಎಂದಿರುವ ಅವರು, ಉಭಯ ದೇಶಗಳ ನಾಯಕರನ್ನು ದೇವರು ಆಶೀರ್ವದಿಸಲಿ ಎಂದು ಟ್ರೂತ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಎರಡೂ ಪ್ರಮುಖ ದೇಶಗಳ ಜತೆಗೆ ವ್ಯಾಪಾರವನ್ನು ಗಣನೀಯವಾಗಿ ಹೆಚ್ಚಿಸಲಿದ್ದೇನೆ' ಎಂದೂ ಅವರು ಹೇಳಿದ್ದಾರೆ.

ಮಧ್ಯಸ್ಥಿಕೆ ಒಪ್ಪಲ್ಲ

ಕಾಶ್ಮೀರದ ವಿಷಯದಲ್ಲಿ ಭಾರತ ಯಾರದ್ದೇ ಮಧ್ಯಸ್ಥಿಕೆ ಯನ್ನು ಒಪ್ಪುವುದಿಲ್ಲ ಮತ್ತು ಪಾಕಿಸ್ತಾನ ಕಾನೂನು ಬಾಹಿರ ವಾಗಿ ಆಕ್ರಮಿಸಿಕೊಂಡಿರುವ ಭಾಗವನ್ನು ಹಿಂದಕ್ಕೆ ಪಡೆಯುವ ಕುರಿತು ಮಾತ್ರ ಚರ್ಚೆ ನಡೆಯಬೇಕಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಕೃಷಿ ವಿಜ್ಞಾನಿ ಅಯ್ಯಪ್ಪನ್ ಸಾವು
ಸಿಬಿಐ ತನಿಖೆಗೆ ಒತ್ತಾಯಿಸಿ ಪತ್ರ

ದೆಹಲಿ: ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ನಿವೃತ್ತ ನಿರ್ದೇಶಕ ಪ್ರೊ.ಸುಬ್ಬಣ್ಣ ಅಯ್ಯಪ್ಪನ್ ಅವರ ನಿಗೂಢ ಸಾವಿನ ಬಗ್ಗೆ ಸಿಬಿಐ ತನಿಖೆ ನಡೆಸಬೇಕಿದೆ ಎಂದು ಐಸಿಎಆರ್‌ನ ಮಾಜಿ ಸದಸ್ಯ ವೇಣುಗೋಪಾಲ್ ಬಾದರವಾಡ ಒತ್ತಾಯಿಸಿ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪ್ರತ್ಯೇಕವಾಗಿ ಪತ್ರ ಬರೆದಿದ್ದಾರೆ. ಅವರ ಸಾವಿನ ದುರಂತವು ಐಸಿಎಆರ್, ಎಎಸ್‌ಆರ್‌ಬಿ ಮತ್ತು ಸಂಯೋಜಿತ ಸಂಸ್ಥೆಗಳಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರ, ಅಕ್ರಮ ನೇಮಕಾತಿ ಮತ್ತು ಅಧಿಕಾರ ದುರುಪಯೋಗಕ್ಕೆ ಕನ್ನಡಿ ಹಿಡಿಯುತ್ತದೆ ಎಂದು ಆರೋಪಿಸಿದ್ದಾರೆ.

ವಿಶ್ವಕಪ್ ಆರ್ಚರಿ ಸ್ಟೇಜ್ 2

ಭಾರತಕ್ಕೆ 7 ಪದಕ

ಶಾಂಘೈ: ಭಾನುವಾರ ಮುಕ್ತಾಯಗೊಂಡ ಆರ್ಚರಿ ವಿಶ್ವಕಪ್ ಸ್ಟೇಜ್ 2 ಕೂಟದಲ್ಲಿ ಭಾರತದ ಸ್ಪರ್ಧಿಗಳು ಒಟ್ಟು 7 ಪದಕಗಳನ್ನು ಗೆದ್ದು ಅಭಿಯಾನ ಮುಗಿಸಿದರು. ಶನಿವಾರ ಭಾರತದ ಕಾಂಪೌಂಡ್ ವಿಭಾಗದ ಬಿಲ್‌ಗಾರರು ಒಟ್ಟು 5 ಪದಕಗಳನ್ನು ಗೆದ್ದು ಪ್ರಾಬಲ್ಯ ಮೆರೆದಿದ್ದರು. ಕೊನೆಯ ದಿನ ಭಾರತದ ಅನುಭವಿ ಬಿಲ್‌ಗಾರ್ತಿ ದೀಪಿಕಾ ಕುಮಾರಿ ಮಹಿಳೆಯರ ರಿಕರ್ವ್ ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಪುರುಷರ ವಿಭಾಗದಲ್ಲಿ ಪಾರ್ಥ್ ಸಾಲುಂಖೆ ಅವರೂ ಮೊದಲ ಬಾರಿ ವಿಶ್ವಕಪ್ ರಿಕರ್ವ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗಳಿಸಿದರು.

17ರಿಂದ ಮತ್ತೆ ಐಪಿಎಲ್?

ದೆಹಲಿ: ಭಾರತ-ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ ಸ್ಥಗಿತಗೊಂಡಿದ್ದ ಐಪಿಎಲ್ ಟೂರ್ನಿಯು ಇದೇ 17ರಂದು ಪುನರಾರಂಭಗೊಳ್ಳುವ ಸಾಧ್ಯತೆಯಿದೆ.

TATA IPL ಸೋಮವಾರ ವೇಳಾಪಟ್ಟಿ ಬಿಡುಗಡೆ ನಿರೀಕ್ಷೆ

ಮೇ 9ರಂದು ಒಂದು ವಾರದ ಮಟ್ಟಿಗೆ ಈ ಪಂದ್ಯಾವಳಿಯನ್ನು ಸ್ಥಗಿತಗೊಳಿಸ ಲಾಗಿತ್ತು. ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅಧಿಕಾರಿ ಗಳು ಲೀಗ್ ಪುನರಾರಂಭಕ್ಕೆ ಸಂಬಂಧಿಸಿದಂತೆ ಯೋಜನೆ ಯೊಂದನ್ನು ರೂಪಿಸಲು ಭಾನುವಾರ ಸಭೆ ಸೇರಿದ್ದರು.

'ಸೂಕ್ತ ವೇಳಾಪಟ್ಟಿ ರೂಪಿಸಲು ಮಂಡಳಿಯು ಕಾರ್ಯಪ್ರವೃತ್ತವಾಗಿದೆ' ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ ಶುಕ್ಲಾ ತಿಳಿಸಿದ್ದಾರೆ. 'ಐಪಿಎಲ್‌ಗೆ ಸಂಬಂಧಿಸಿದ ವೇಳಾಪಟ್ಟಿಯು ಸೋಮವಾರ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಐಎಂಎಫ್ ನೀಡಿದ ಸಾಲದ ಹಣದಲ್ಲಿ ಉಗ್ರರ ಪೋಷಣೆ

ಪಾಕ್‌ನಿಂದ ಸಾಲ ಮರುಪಾವತಿ ಅಸಾಧ್ಯವೆಂದ ಭಾರತ

ಭಾರತದ ಶೇವಣೆ, ಪಾಕ್‌ಗೆ ಸಾಲ

ವಿಶ್ವವಾಣಿ ಸುದ್ದಿಮನೆ ದೆಹಲಿ

ಭಾರತ-ಪಾಕಿಸ್ತಾನ ನಡುವಿನ ಯುದ್ಧದ ನಡುವೆ ಭಾರಿ ಚರ್ಚೆಗೆ ಗ್ರಾಸವಾಗಿದ್ದು ಐಎಂಎಫ್‌ನಿಂದ ಪಾಕಿಸ್ತಾನಕ್ಕೆ ಸಾಲ ನೀಡಿ ರುವ ವಿಷಯ. ಪಾಕಿಸ್ತಾನಕ್ಕೆ ಸಾಲ ನೀಡದಂತೆ ಐಎಂಎಫ್ ಮೇಲೆ ಭಾರತ ತೀವ್ರ ಒತ್ತಡ ಹೇರಿದರೂ ಐಎಂಎಫ್ ಮತ್ತೆ 1.4 ಬಿಲಿ ಯನ್ ಡಾಲರ್‌ನಷ್ಟು ಸಾಲ ನೀಡಿದೆ. ಆ ಮೂಲಕ ಪಾಕಿಸ್ತಾನ ಅಂತಾರಾಷ್ಟ್ರೀಯ ಹಣ ಕಾಸು ನಿಧಿಯೊಂದರಲ್ಲಿಯೇ ಬರೋಬ್ಬರಿ 44.57 ಬಿಲಿಯನ್ ಡಾಲರ್‌ನಷ್ಟು ಸಾಲ ಪಡೆದಿದೆ.

ದಿವಾಳಿಯ ಅಂಚಿನಲ್ಲಿರುವ ಪಾಕಿಸ್ತಾನ 2024ರ ವೇಳೆಗೆ 37 ತಿಂಗಳ ಅವಧಿಯ ಇಎಫ್‌ಎಫ್ ಯೋಜನೆಯಲ್ಲಿ ಏಳು ಬಿಲಿಯನ್ ಡಾಲರ್ ಸಾಲ ಪಡೆದಿತ್ತು. ಇದರ ಭಾಗವಾಗಿ ಇದೀಗ 1.4 ಮಿಲಿಯನ್ ಹಣ ಬಿಡುಗಡೆಗೆ ಒಪ್ಪಿಗೆ ನೀಡಿದೆ. ಆದರೆ ಈ ರೀತಿ ನಿರಂತರವಾಗಿ ಸಾಲ ಪಡೆಯುತ್ತಿರುವ ಪಾಕಿ ಸ್ತಾನ ಈ ಸಾಲವನ್ನು ಯಾವಾಗ ಮರುಪಾವತಿಸಲಿದೆ ಎನ್ನುವುದು ಈಗಿರುವ ಪ್ರಶ್ನೆಯಾಗಿದೆ. ಪಾಕಿಸ್ತಾನಕ್ಕೆ ಈ ಪ್ರಮಾಣದಲ್ಲಿ ಸಾಲ ನೀಡುವುದಕ್ಕೆ ಭಾರತ ಸೇರಿದಂತೆ ಹಲವು ರಾಷ್ಟ್ರಗಳು ವಿರೋಧಿಸುತ್ತಿವೆ. → 4

ಭಾರತ ವಿರೋಧ ಏಕೆ?

1958ರಿಂದ ಇಲ್ಲಿಯವರೆಗೆ ಪಾಕಿಸ್ತಾನ ಐಎಂಎಫ್‌ನಿಂದ 25 ವಿವಿಧ ರೀತಿಯ ಸಾಲವನ್ನು ಪಡೆದುಕೊಂಡಿದೆ. ಈ ಎಲ್ಲ ಸಾಲಗಳ ಒಟ್ಟು ಮೊತ್ತ ಸುಮಾರು 44.57 ಬಿಲಿಯನ್ ಡಾಲರ್ ನಷ್ಟಾಗಿದೆ. ಆದರೆ ನಿರಂತರವಾಗಿ ಆರ್ಥಿಕ ದುಸ್ಥಿತಿಯಲ್ಲಿರುವ ಪಾಕಿಸ್ತಾನದಿಂದ ಈ ಸಾಲದ ಮರುಪಾವತಿ ಸಾಧ್ಯವಿಲ್ಲ. ಇದರೊಂದಿಗೆ ಐಎಂಎಫ್‌ನಿಂದ ನಿರ್ದಿಷ್ಟ ಕಾರಣಕ್ಕೆ ಸಾಲ ಪಡೆಯುವ ಪಾಕಿಸ್ತಾನ, ಈ ಹಣದಲ್ಲಿ ಉಗ್ರಗಾಮಿಗಳನ್ನು ಪೋಷಿಸುತ್ತಿದೆ. ಆದ್ದರಿಂದ ಪಾಕಿಸ್ತಾನಕ್ಕೆ ಸಾಲ ನೀಡುವುದರಿಂದ ಕೇವಲ ಆರ್ಥಿಕವಾಗಿ ಮಾತ್ರವಲ್ಲದೇ, ದೇಶಗಳ ರಕ್ಷಣೆಯ ವಿಷಯ ದಲ್ಲಿಯೂ ಭಾರಿ ಸಮಸ್ಯೆಯಾಗುತ್ತದೆ. ಆದ್ದರಿಂದ ಹಣ ನೀಡಬಾರದು ಎನ್ನುವ ವಾದ ಭಾರತದ್ದಾಗಿದೆ.

ಸಾಲ ಬಾಕಿ ಉಳಿಸಿಕೊಂಡ ದೇಶಗಳು

	ಸಾಲ ಪಾವತಿಸಬೇಕಿರುವ ಮೊತ್ತ
ಅರ್ಜೆಂಟೀನಾ	40.26 ಬಿಲಿಯನ್ ಡಾಲರ್
ಉಕ್ರೇನ್	10.80 ಬಿಲಿಯನ್ ಡಾಲರ್
ಈಜಿಪ್ಟ್	8.46 ಬಿಲಿಯನ್ ಡಾಲರ್
ಈಕ್ವೆಡಾರ್	6.38 ಮಿಲಿಯನ್ ಡಾಲರ್
ಪಾಕಿಸ್ತಾನ	6.10 ಮಿಲಿಯನ್ ಡಾಲರ್
ಕೀನ್ಯಾ	3.02 ಮಿಲಿಯನ್ ಡಾಲರ್
ಅಂಗೋಲ	2.84 ಮಿಲಿಯನ್ ಡಾಲರ್
ಐವೋರಿ ಕೋಸ್ಟ್	2.63 ಮಿಲಿಯನ್ ಡಾಲರ್
ಘಾನ	2.46 ಮಿಲಿಯನ್ ಡಾಲರ್
ಬಾಂಗ್ಲಾದೇಶ	1.98 ಮಿಲಿಯನ್ ಡಾಲರ್

ಪುಟ ತೆರೆದಂತೆ

- ಅಣ್ವಸ್ತ್ರಗಳಿದ್ದ ಸ್ಥಳಕ್ಕೇ ಭಾರತ ದಾಳಿ: ನಡುಗಿದ ಪಾಕ್ 2
- ಕಾಶ್ಮೀರ, ಪಂಜಾಬ್ ಶಾಂತ, ಅಮೃತಸರದಲ್ಲಿ ಬಿಗಿಭದ್ರತೆ 2
- ಯೋಧನ ಕುಟುಂಬಕ್ಕೆ 50 ಲಕ್ಷ ರು. ಪರಿಹಾರ 2
- ದೆಹಲಿ: 100ಕ್ಕೂ ಹೆಚ್ಚು ವಿಮಾನ ರದ್ದು 2

ಫನ್‌ತರಂಗ
- ರಘುಪತಿ ಶೃಂಗೇರಿ -



ಕಾಶ್ಮೀರ ಮಧ್ಯಸ್ಥಿಕೆಗೆ ಸಿದ್ಧ: ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್: ಭಾರತ ಮತ್ತು ಪಾಕಿಸ್ತಾನ ದೇಶಗಳು ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಕ್ಕೆ ಶ್ಲಾಘನೆ ವ್ಯಕ್ತಪಡಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕಾಶ್ಮೀರ ವಿವಾದದಲ್ಲಿ ಮಧ್ಯಸ್ಥಿಕೆ ವಹಿಸಿ ಸಹಾಯ ಮಾಡಲು ಸಿದ್ಧರಾಗಿ ಇರುವುದಾಗಿಯೂ ಹೇಳಿದ್ದಾರೆ. ಪರಸ್ಪರ ಆಕ್ರಮಣ ನಿಲ್ಲಿಸುವ ಸಮಯವಿದು ಎಂದು ಅರ್ಥಮಾಡಿಕೊಂಡಿದ್ದಕ್ಕಾಗಿ ಭಾರತ ಮತ್ತು ಪಾಕಿಸ್ತಾನ ನಾಯಕರಿಗೆ ಧನ್ಯವಾದ. ನಾಗರಿಕರು, ಯೋಧರ ಸಾವು ಮತ್ತು ವಿನಾಶಕ್ಕೆ ಕಾರಣವಾಗುವ ಆಕ್ರಮಣವನ್ನು ನಿಲ್ಲಿಸುವ ಸಮಯ ಎಂದು ಅರ್ಥಮಾಡಿಕೊಂಡ ಭಾರತ ಮತ್ತು ಪಾಕಿಸ್ತಾನ ನಡೆ ಪ್ರಶಂಸೆಗೆ ಅರ್ಹ. ನಿಮ್ಮ ಧೈರ್ಯಶಾಲಿ ಕ್ರಮಗಳಿಂದ ಲಕ್ಷಾಂತರ ಮುಗ್ಧ ಜನರ ಸಾವು ತಪ್ಪಿದೆ ಎಂದು ಟ್ರಂಪ್ ಹೇಳಿದ್ದಾರೆ. ಎರಡೂ ದೇಶಗಳೊಂದಿಗೆ ವ್ಯಾಪಾರವನ್ನು ಗಣನೀಯವಾಗಿ ಹೆಚ್ಚಿಸುವುದಾಗಿಯು ಇದೇ ವೇಳೆ ಹೇಳಿದ್ದಾರೆ.

ದಾಳಿ ಮುಂದುವರಿಸಿದ ಬಲೂಚಿ: ಪಾಕ್ ತತ್ತರ

ಬಲೂಚ್: ಪಾಕಿಸ್ತಾನದಿಂದ ಪ್ರತ್ಯೇಕವಾಗಿ ಸ್ವತಂತ್ರ ದೇಶವಾಗಲು ಹೋರಾಡುತ್ತಿರುವ ಬಲೂಚಿಸ್ತಾನ ಲಿಬರೇಶನ್ ಆರ್ಮಿ (ಬಿಎಲ್ಎ) ಪಾಕಿಸ್ತಾನ ಸರಕಾರ ಮತ್ತು ಸೇನೆಯ ವಿರುದ್ಧ ಹೋರಾಟ ತೀವ್ರಗೊಳಿಸಿದೆ. ಶುಕ್ರವಾರ ದಿಂದ ಭಾನುವಾರವರೆಗಿನ 48 ಗಂಟೆಗಳಲ್ಲಿ ಬಲೂಚಿಸ್ತಾನದಲ್ಲಿ ಪಾಕ್ ಸೇನೆ, ಪೊಲೀಸ್ ಠಾಣೆಗಳ ಮೇಲೆ ಬಿಎಲ್ಎ ದಾಳಿಗಳಲ್ಲಿ ಹೆಚ್ಚಳ ಕಂಡುಬಂದಿದೆ. ಕ್ವೆಟ್ಟಾ, ಕೆಚ್, ಪಂಜ್‌ಗುರ್, ನುಷ್ಕಿ, ಖುಜ್ದಾರ್ ಮತ್ತು ಇತರ ಜಿಲ್ಲೆಗಳಲ್ಲಿ 56ಕ್ಕೂ ಹೆಚ್ಚು ಕಡೆ ಬಿಎಲ್ಎ ದಾಳಿ ನಡೆಸಿರುವುದು ವರದಿಯಾಗಿದೆ. ಕಳೆದ ಕೆಲವು ತಿಂಗಳುಗಳಲ್ಲಿ ಬಿಎಲ್ಎ ತನ್ನ ಕಾರ್ಯಾಚರಣೆ ತೀವ್ರಗೊಳಿಸಿದೆ. ಭಾರತ ಮತ್ತು ಪಾಕಿಸ್ತಾನದ ನಡುವೆ ನಡೆಯುತ್ತಿರುವ ದಾಳಿ ಕದನ ವಿರಾಮ ಕಾರಣ ನಿಂತುಹೋಗಿರಬಹುದು. ಆದರೆ ಹಲವಾರು ಕಾರ್ಯತಂತ್ರ ಸಾಧಿಸುವ ಗುರಿಯನ್ನು ಬಿಎಲ್ಎ ಹೊಂದಿದ್ದು, ಕಾರ್ಯಾಚರಣೆ ಇನ್ನೂ ಮುಂದುವರೆಯಲಿದೆ ಎಂದು ಸಂಘಟನೆಯ ನಾಯಕರು ಪತ್ರಿಕಾ ಹೇಳಿಕೆಯಲ್ಲಿ ಭಾನುವಾರ ತಿಳಿಸಿದ್ದಾರೆ.

ಕಾಶ್ಮೀರದ 20 ಕಡೆ ಎಸ್ಐಎ ಶೋಧ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಾಜ್ಯ ತನಿಖಾ ಸಂಸ್ಥೆಯು (ಎಸ್ಐಎ) ದಕ್ಷಿಣ ಕಾಶ್ಮೀರದ ವಿವಿಧೆಡೆ ಶೋಧ ನಡೆಸಿದೆ. ಭದ್ರತಾ ಪಡೆಗಳು ಮತ್ತು ಸೇನಾ ನೆಲೆಗಳ ಕುರಿತ ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಂಡ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕಾರ್ಯಾಚರಣೆ ನಡೆಸಿದೆ. ಅನಂತನಾಗ್, ಕುಲ್ಗಾಮ್, ಪುಲ್ವಾಮಾ ಮತ್ತು ಶೋಪಿಯಾನ್ ಜಿಲ್ಲೆಗಳ 20 ಕಡೆಗಳಲ್ಲಿ ಎಸ್ಐಎ ಶೋಧ ನಡೆಸಿದೆ. ಈ ಸಂದರ್ಭದಲ್ಲಿ ಕೆಲವರನ್ನು ಬಂಧಿಸಲಾಗಿದೆ ಮತ್ತು ಆರೋಪಕ್ಕೆ ಸಂಬಂಧಿಸಿದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ರಾಷ್ಟ್ರೀಯ ತನಿಖಾ ದಳಕ್ಕೆ ಸಮಾನವಾಗಿ ಎಸ್ಐಎ ಕೇಂದ್ರಾಡಳಿತ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತದೆ.

ಉಗ್ರರ ಪ್ರಧಾನ ಕಚೇರಿ ಧ್ವಂಸ

ದೆಹಲಿ: ಆಪರೇಷನ್ ಸಿಂಧೂರ್ ಹೆಸರಿನಲ್ಲಿ ಭಾರತೀಯ ಸೇನಾಪಡೆಗಳು ನಡೆಸಿದ ನಿಖರ ದಾಳಿಯಲ್ಲಿ ಪಾಕಿಸ್ತಾನದ ಬಹಾವಲ್ಪುರದಲ್ಲಿರುವ ಜೈಶ್-ಎ-ಮೊಹಮ್ಮದ್ (ಜೆಇಎಂ) ಪ್ರಧಾನ ಕಚೇರಿ ಧ್ವಂಸವಾಗಿದೆ ಎನ್ನುವುದು ದೃಢವಾಗಿದೆ. ಭಾರತದ ಪ್ರತಿಕಾರದ ದಾಳಿಗೆ ಅತಿ ಹೆಚ್ಚು ನಷ್ಟ ಅನುಭವಿಸಿದ್ದು, ಪುಲ್ವಾಮಾ ದಾಳಿಯ ರೂವಾರಿ ಜೈಶ್-ಎ-ಮೊಹಮದ್ ಉಗ್ರ ಸಂಘಟನೆ. ಅದರ ಸಂಸ್ಥಾಪಕ ಪ್ರಮುಖ ಉಗ್ರ ಮಸೂದ್ ಅಜರ್ ಕುಟುಂಬದ 10 ಸದಸ್ಯರು ಸೇರಿ ಹಲವು ಉಗ್ರರು ಹತರಾಗಿದ್ದಾಗಿ ವರದಿಯಾಗಿದೆ. ಪಾಕಿಸ್ತಾನದ ಗುಪ್ತಚರ ದಳವಾದ ಐಎಸ್ಐನ ನೆರವಿನಿಂದ ಸ್ಥಾಪಿತವಾಗಿರುವ ಜೆಇಎಂ ಉಗ್ರ ಸಂಘಟನೆಯ ಕೇಂದ್ರ ಕಚೇರಿಯ ಮೇಲಿನ ದಾಳಿಯಲ್ಲಿ ಅತಿ ಪ್ರಬಲವಾದ ಶಸ್ತ್ರಾಸ್ತ್ರಗಳನ್ನು ಬಳಸಲಾಗಿದೆ. ಇದರಿಂದ ಇಡೀ ಕಟ್ಟಡವೇ ಧ್ವಂಸವಾಗಿದೆ. ಇದು ಭಾರತಕ್ಕೆ ಸಿಕ್ಕ ದೊಡ್ಡ ಯಶಸ್ಸು ಎಂದು ಮೂಲಗಳು ಹೇಳಿವೆ.

ಬ್ರಹ್ಮೋಸ್ ಬಗ್ಗೆ ಪಾಕಿಸ್ತಾನವನ್ನೇ ಕೇಳಿ

ಲಖನೌ: ಬ್ರಹ್ಮೋಸ್ ಶಕ್ತಿಯ ಬಗ್ಗೆ ಪಾಕ್‌ನವರನ್ನೇ ಕೇಳಬೇಕು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ (ಸಿಎಂ) ಯೋಗಿ ಆದಿತ್ಯನಾಥ್ ಹೇಳಿದ್ದಾರೆ. ಬ್ರಹ್ಮೋಸ್

ಕ್ಷಿಪಣಿ ತಯಾರಿಕೆ ಮತ್ತು ಪರೀಕ್ಷೆಗಾಗಿ ಲಖನೌನಲ್ಲಿ ನಿರ್ಮಿಸಿರುವ 'ಬ್ರಹ್ಮೋಸ್ ಏರೋಸ್ಪೇಸ್ ಇಂಟಿಗ್ರೇಷನ್ ಮತ್ತು ಪರೀಕ್ಷಾ ಸೌಲಭ್ಯ' ಘಟಕವನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಉದ್ಘಾಟಿಸಿದ್ದು, ಆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಿಎಂ ಯೋಗಿ ಆದಿತ್ಯನಾಥ್ ಮಾತನಾಡಿದರು. ಆಪರೇಷನ್ ಸಿಂದೂರ್‌ನಲ್ಲಿ ಬ್ರಹ್ಮೋಸ್ ಕ್ಷಿಪಣಿ ಶಕ್ತಿಯನ್ನು ಎಲ್ಲರೂ ನೋಡಿದ್ದೇವೆ. ಆದರೆ, ಅದರ ನೈಜ ಶಕ್ತಿ ಏನು ಎಂಬುದನ್ನು ತಿಳಿಯಲು ಪಾಕಿಸ್ತಾನದವರನ್ನೇ ಕೇಳಬೇಕು. ಏಕೆಂದರೆ ಈಗಷ್ಟೇ ಅವರಿಗೆ ಬ್ರಹ್ಮೋಸ್ ಪರಮಾಕ್ರಮ, ಶಕ್ತಿಯ ಅರಿವಾಗಿದೆ ಎಂದು ಮಾತಿನಲ್ಲೇ ಕುಟುಕಿದರು. ಭಯೋತ್ಪಾದನೆ ನಾಯಿಯ ಬಾಲದಂತೆ, ಅದು ಎಂದಿಗೂ ನೇರವಾಗುವುದಿಲ್ಲ. ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ನಾವು ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿದ್ದೇವೆ. ಪೂರ್ಣವಾಗಿ ಭಯೋತ್ಪಾದನೆ ಹತ್ತಿಕ್ಕುವವರೆಗೂ ಸಮಸ್ಯೆಗೆ ಪರಿಹಾರವಿಲ್ಲ ಎಂದರು. ಆಪರೇಷನ್ ಸಿಂದೂರ್ ಯಶಸ್ಸಿಗೆ ಪ್ರಧಾನಿ ಮೋದಿ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಭಾರತೀಯ ಸೇನೆಯನ್ನು ಅಭಿನಂದಿಸುವೆ. ಸೇನೆಗೆ ನಮಿಸುವೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು.

'ಫೈರ್ ಆ್ಯಂಡ್ ಫರ್ಗೆಟ್' ಎಂಬ ಅಭಿದಾನದ ಸಮರಾಸ್ತ್ರ

ಭಾರತದ ಬ್ರಹ್ಮಾಸ್ತ್ರ ಬ್ರಹ್ಮೋಸ್

'ಬ್ರಹ್ಮೋಸ್' ಭಾರತದ ಬತ್ತಳಿಕೆಯಲ್ಲಿನ ಬ್ರಹ್ಮಾಸ್ತ್ರ. ಇದೊಂದು ಬ್ಯಾಲಿಸ್ಟಿಕ್ ಮಿಸೈಲ್. ಅಂದರೆ ಒಂದು ಖಂಡದಿಂದ ಇನ್ನೊಂದು ಖಂಡದವರೆಗೂ ಅಡೆತಡೆ ಇಲ್ಲದೇ ಸಾಗಬಲ್ಲ ಖಂಡಾತರ ಕ್ಷಿಪಣಿ.

ವೈರಿಗಳ ಯಾವುದೇ ಕ್ಷಿಪಣಿ ದಾಳಿಯನ್ನೂ ಆಕಾಶದಲ್ಲೇ ನಾಶಪಡಿಸುವ ಸಾಮರ್ಥ್ಯ ಹೊಂದಿವೆ. ದೊಡ್ಡ ಗಾತ್ರದ ಡ್ರೋನ್‌ಗಳನ್ನೂ ಹೊಡೆದುರುಳಿಸಲ್ಲದಾಗಿದೆ. 4 ದಿನ ನಡೆದ ಪಾಕಿಸ್ತಾನ ವಿರುದ್ಧದ ಯುದ್ಧದಲ್ಲಿ ಬ್ರಹ್ಮೋಸ್ ಕ್ಷಿಪಣಿ ಬಳಸಲಾಗಿದೆ. ಆ ಮೂಲಕ ಪಾಕಿಸ್ತಾನದ ವಾಯುನೆಲೆಗಳನ್ನು ಧ್ವಂಸ ಮಾಡಲಾಗಿದೆ. ಆ ಬಳಿಕವೇ ಪಾಕಿಸ್ತಾನ ಹೆದರಿ ಭಾರತದ 'ಡೈರೆಕ್ಟರ್ ಜನರಲ್ ಆಫ್ ಮಿಲಿಟರಿ ಆಪರೇಷನ್ಸ್'(ಡಿಜಿಎಂಒ)ಗೆ ಕರೆ ಮಾಡಿದೆ. 'ಕದನ ವಿರಾಮ'ಕ್ಕಾಗಿ ಗೋಗರೆದಿದೆ.



ಬ್ರಹ್ಮೋಸ್ ಬಹುಮುಖಿ ಕ್ಷಿಪಣಿಯಾಗಿದೆ. ಭೂಮಿ, ಸಮುದ್ರದ ಮೇಲ್ಮೈ ಮತ್ತು ಆಳದಿಂದ ಹಾಗೂ ಆಕಾಶದಿಂದಲೂ ಉಡಾಯಿಸಬಹುದಾದ ಕ್ಷಿಪಣಿಯಾಗಿದೆ. ಭೂಮಿ ಮೇಲ್ಮೈಯಿಂದ 'ಟ್ರಾನ್ಸ್‌ಪೋರ್ಟರ್ ಎರೆಕ್ಟರ್ ಲಾಂಚರ್'(ಟಿಇಎಲ್), ಯುದ್ಧ ನೌಕೆಗಳಿಂದ(ಲಂಬ-ಇಳಿಜಾರು ಲಾಂಚರ್), ಜಲಾಂತರ್ಗಾಮಿ ನೌಕೆ ಮತ್ತು ಯುದ್ಧ ವಿಮಾನಗಳಿಂದ ಬ್ರಹ್ಮೋಸ್ ಕ್ಷಿಪಣಿ ಉಡಾಯಿಸಬಹುದಾಗಿದೆ. ಒಮ್ಮೆ ಗುರಿ ನಿಗದಿಪಡಿಸಿ ಉಡಾಯಿಸಿದರೆ ಆಯಿತು. ಬ್ರಹ್ಮೋಸ್ ಎಂದಿಗೂ ಗುರಿ ತಪ್ಪುವುದೇ ಇಲ್ಲ. ಹಾಗಾಗಿ ಈ ಕ್ಷಿಪಣಿಗೆ 'ಫೈರ್ ಅಂಡ್ ಫರ್ಗೆಟ್' ಎಂಬ ಅಭಿದಾನವೂ ಇದೆ.

ಬ್ರಹ್ಮೋಸ್ ಕ್ಷಿಪಣಿ ದಾಳಿ ವ್ಯಾಪ್ತಿ

ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯಾಗಿದೆ. ಬ್ರಹ್ಮೋಸ್ ಕ್ಷಿಪಣಿ ವ್ಯಾಪ್ತಿ ಮೊದಲಿಗೆ 290 ಕಿ.ಮೀ.ಗಳಷ್ಟಿತ್ತು. 2016ರಲ್ಲಿ ಭೂಮಿಯ ಮೇಲಿಂದ ಮತ್ತು ಯುದ್ಧ ನೌಕೆಗಳಿಂದ ಹಾರಿಸಬಹುದಾದ ಹೊಸ ಆವೃತ್ತಿಯ ಬ್ರಹ್ಮೋಸ್ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಭೂಮಿ ಮತ್ತು ಸಾಗರದಿಂದ ಶತ್ರುವಿನ ಗುರಿಯತ್ತ ಚಿಮ್ಮಿ ಗರಿಷ್ಠ 800-900 ಕಿ.ಮೀ ದೂರದವರೆಗೂ ವೇಗವಾಗಿ ಸಾಗಿ ಶತ್ರು ನೆಲೆಯನ್ನು ಸಂಪೂರ್ಣ ನಾಶಪಡಿಸಬಲ್ಲದಾಗಿದೆ.

ಆಗಸದಿಂದಲೂ(ಯುದ್ಧ ವಿಮಾನದಿಂದ) ಬ್ರಹ್ಮೋಸ್ ಕ್ಷಿಪಣಿಗಳನ್ನು ಶತ್ರುಗಳ ನೆಲೆಯ ಮೇಲೆ ಉಡಾಯಿಸಬಹುದಾಗಿದೆ. ಈ ಮಾದರಿ ಕ್ಷಿಪಣಿ 450-500 ಕಿ.ಮೀ.ವರೆಗೆ ಚಲಿಸಬಲ್ಲದು. ಇವು ಕೂಡಾ ಖಂಡಾಂತರ ಕ್ಷಿಪಣಿಗಳಾಗಿವೆ.

ಮೊದಲ ಬಾರಿ ಪ್ರಯೋಗ

ಮೇ 9-10ರ ರಾತ್ರಿ ದೆಹಲಿ ಮಹಾನಗರವನ್ನೇ ಗುರಿಯಾಗಿಟ್ಟು ಪಾಕಿಸ್ತಾನದ ಸೇನಾಪಡೆ 'ಫತಾಹ್-2' ಖಂಡಾಂತರ ಕ್ಷಿಪಣಿಯನ್ನು ಉಡಾಯಿಸಿತ್ತು. ಪಾಕ್‌ನ ಈ ಖಂಡಾಂತರ ಕ್ಷಿಪಣಿಯನ್ನು ಹರಿಯಾಣದ ಸಿರ್ಸಾ ನಗರದ ಆಕಾಶದಲ್ಲಿದ್ದಾಗಲೇ ಭಾರತದ ಪ್ರತ್ಯಸ್ತ್ರಗಳು ಹೊಡೆದುರುಳಿಸಿದವು. ಅಲ್ಲಿಯವರೆಗೂ ಬ್ರಹ್ಮೋಸ್ ಬತ್ತಳಿಕೆಗೆ ಕೈ ಹಾಕದೇ ಸಂಯಮ ಕಾಯ್ದುಕೊಂಡಿದ್ದ ಭಾರತೀಯ ಸೇನಾಪಡೆಗಳು, ಮೇ 10ರ ಮುಂಜಾನೆ ಮೊದಲ ಬಾರಿಗೆ ಬ್ರಹ್ಮೋಸ್ ಕ್ರೂಸ್ ಕ್ಷಿಪಣಿಯನ್ನು ಪಾಕಿಸ್ತಾನದ ಮೇಲೆ ಪ್ರಯೋಗಿಸಿದವು. ನೆರೆಯ ದೇಶದ ಮೇಲೆ ಭಾರತ 'ಬ್ರಹ್ಮೋಸ್' ಖಂಡಾಂತರ ಕ್ಷಿಪಣಿ ಪ್ರಯೋಗಿಸಿದ್ದು ಇದೇ ಮೊದಲು.

- ಬ್ರಹ್ಮೋಸ್ ಕ್ಷಿಪಣಿ ಮೊದಲ ಘಟಕ ಭಾರತ-ರಷ್ಯಾ ಜಂಟಿ ಪ್ರಯತ್ನ
- ಬ್ರಹ್ಮೋಸ್ ಕ್ಷಿಪಣಿ ಘಟಕ ಭಾರತ ಶೇ.50.5, ರಷ್ಯಾ ಶೇ.49.5 ಪಾಲು
- 1998ರ ಫೆ.12ಕ್ಕೆ 'ಬ್ರಹ್ಮೋಸ್ ಏರೋಸ್ಪೇಸ್' ಘಟಕ ಕಾರ್ಯಾರಂಭ
- 300 ಕೋಟಿ ರು. ವೆಚ್ಚದಲ್ಲಿ ಲಖನೌನಲ್ಲಿ ಬ್ರಹ್ಮೋಸ್ 2ನೇ ಘಟಕ ಶುರು
- ನೆಲದಿಂದ, ಯುದ್ಧನೌಕೆಯಿಂದ 800-900 ಕಿ.ಮೀ ಸಾಗುವ ಸಾಮರ್ಥ್ಯ
- ಯುದ್ಧ ವಿಮಾನದಿಂದ 450-500 ಕಿ.ಮೀವರೆಗೆ ಸಾಗಬಲ್ಲ ಬ್ರಹ್ಮೋಸ್

ಲಖನೌನಲ್ಲಿ ಮತ್ತೊಂದು ಬ್ರಹ್ಮೋಸ್ ಘಟಕ: ಭಾರತ ಸೇನೆಗೆ ಆನೆಬಲ

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಲಖನೌನಲ್ಲಿ ಬ್ರಹ್ಮೋಸ್ ಕ್ಷಿಪಣಿ ತಯಾರಿಕಾ ಕಾರ್ಖಾನೆ ಮತ್ತು ಪರೀಕ್ಷಾ ಘಟಕವನ್ನು ಭಾನುವಾರ ಲೋಕಾರ್ಪಣೆ ಮಾಡಿದ್ದಾರೆ.

ಭಾರತ-ಪಾಕಿಸ್ತಾನ ನಡುವಿನ ಐದು ದಿನಗಳ ಸೇನಾ ಸಂಘರ್ಷದಲ್ಲಿ ಭಾರತದ ಸೇನಾಪಡೆಗಳಲ್ಲಿನ ಬಾಹುಬಲಿ ಎಂದೇ ಹೆಸರಾಗಿದೆ. ಬ್ರಹ್ಮೋಸ್ ಕ್ಷಿಪಣಿ ಭಾರತದ

ಸೇನೆಗೆ ಆನೆಬಲ ತಂದಿದೆ. ಬ್ರಹ್ಮೋಸ್ ಶಕ್ತಿ-ಸಾಮರ್ಥ್ಯದ ಪರಿಚಯ ಇಲ್ಲಿದೆ...

- **ಲಖನೌನಲ್ಲಿ ಬ್ರಹ್ಮೋಸ್ ಘಟಕ:**

ದೇಶದಲ್ಲಿಯೇ ಕ್ಷಿಪಣಿ ಮತ್ತು ಯುದ್ಧಾಸ್ತ್ರಗಳನ್ನು ತಯಾರಿಸುವ ಮಹತ್ವಾಕಾಂಕ್ಷೆಯನ್ನು ಪ್ರಧಾನಿ ನರೇಂದ್ರ ಮೋದಿ ಹೊಂದಿದ್ದಾರೆ. ಅದೇ ದಿಸೆಯಲ್ಲಿ 2018ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಣೆ ಮಾಡಿದ್ದ 'ಡಿಫೆನ್ಸ್ ಇಂಡಸ್ಟ್ರಿಯಲ್ ಕಾರಿಡಾರ್' ಯೋಜನೆಯಡಿಯೇ ಬ್ರಹ್ಮೋಸ್ ತಯಾರಿಕಾ-ಪರೀಕ್ಷಾ ಘಟಕವೂ ಬರುತ್ತದೆ. ಲಖನೌನ ಕ್ಷಿಪಣಿ ತಯಾರಿಕಾ ಘಟಕ ನಿರ್ಮಾಣಕ್ಕೆ 2021ರಲ್ಲಿ ಚಾಲನೆ ನೀಡಲಾಗಿತ್ತು. ಉತ್ತರ ಪ್ರದೇಶದ ಲಖನೌನಲ್ಲಿ ಹೊಸದಾಗಿ ಬ್ರಹ್ಮೋಸ್ ಕ್ಷಿಪಣಿ ತಯಾರಿಕಾ ಕಾರ್ಖಾನೆ-ಪರೀಕ್ಷಾ ಘಟಕ ಭಾನುವಾರ ಕಾರ್ಯಾರಂಭ ಮಾಡಿದೆ. ಇದರೊಂದಿಗೆ ಇದು ಭಾರತದ ಸೇನೆಗೆ ಆನೆಬಲ ತಂದಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

- **300 ಕೋಟಿ ರು. ವೆಚ್ಚದ ಕಾರ್ಖಾನೆ**

ಲಖನೌನಲ್ಲಿನ ಬ್ರಹ್ಮೋಸ್ ಕ್ಷಿಪಣಿ ಘಟಕವನ್ನು 300 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದೆ. ಮೊದಲ ಹಂತದಲ್ಲಿ 1,600 ಹೆಕ್ಟೇರ್ ಭೂಮಿ ಸ್ವಾಧೀನಪಡಿಸಿಕೊಂಡ ಕೇಂದ್ರ ಸರಕಾರ, ಅದನ್ನು ರಕ್ಷಣಾ ಕಾರಿಡಾರ್‌ಗೆ ಹಂಚಿಕೆ ಮಾಡಿದೆ. ಈ ಕಾರಿಡಾರ್‌ನಲ್ಲೇ 'ಬ್ರಹ್ಮೋಸ್ ಕ್ಷಿಪಣಿ ತಯಾರಿಕಾ ಘಟಕ' ಇದೆ. ಈ ಘಟಕದಲ್ಲಿ ವಾರ್ಷಿಕ ಕನಿಷ್ಠ 80ರಿಂದ ಗರಿಷ್ಠ 100 ಬ್ರಹ್ಮೋಸ್ ಕ್ಷಿಪಣಿಗಳನ್ನು ತಯಾರಿಸುವ ಗುರಿ ಇಟ್ಟುಕೊಳ್ಳಲಾಗಿದೆ.

ಪಾಕ್ ವಿರುದ್ಧ ಆಕ್ರೋಶ: ಕರಾಚಿ ಬೇಕರಿ ಧ್ವಂಸ

ಹೈದರಾಬಾದ್: ಭಾರತ - ಪಾಕಿಸ್ತಾನ ಕದನ ಜನರಲ್ಲಿ ರಾಷ್ಟ್ರ ಪ್ರೇಮ ಹೆಚ್ಚುವಂತೆ ಮಾಡಿದೆ. ಭಾರತೀಯ ಜನತಾ ಪಕ್ಷದ (ಬಿಜೆಪಿ) ಸ್ಥಳೀಯ ಬೆಂಬಲಿಗರ ಗುಂಪು ಹೈದರಾಬಾದ್‌ನಲ್ಲಿರುವ ಕರಾಚಿ ಬೇಕರಿಯ ಮೇಲೆ ಭಾನುವಾರ ದಾಳಿ ಮಾಡಿ, ಭಾರತ್ ಮಾತಾ ಕಿ ಜೈ' ಘೋಷಣೆಗಳನ್ನು ಕೂಗುತ್ತಾ ಬೇಕರಿಯನ್ನು ಧ್ವಂಸಗೊಳಿಸಿದೆ. ಕೇಸರಿ ಸ್ಕಾರ್ಫ್ ಧರಿಸಿ ಭಾರತದ ಧ್ವಜ ಹಿಡಿದಿದ್ದ ಗುಂಪು 'ಕರಾಚಿ' ಹೆಸರಿನ ಸೈನ್ ಬೋರ್ಡ್ಗೆ ಕೋಲುಗಳಿಂದ ಹೊಡೆದಿದೆ. ದೇಶ ವಿಭಜನೆಯ ಬಳಿಕ 1953ರಲ್ಲಿ ಪಾಕ್ ನಿಂದ ಭಾರತಕ್ಕೆ ವಲಸೆ ಬಂದ ಖಾಂಚಂದ್ ರಾಮನಾನಿ ಎಂಬ ಸಿಂಧಿ(ಹಿಂದೂ) ವ್ಯಕ್ತಿ ಕರಾಚಿ ಬೇಕರಿ ಸ್ಥಾಪಿಸಿದ್ದಾರೆ.

'ಪಾಕಿಸ್ತಾನ್ ಮುರ್ದಾಬಾದ್' ಮತ್ತು 'ಜೈ ಜವಾನ್' ಘೋಷಣೆಗಳನ್ನು ಕೂಗಿದರು. ರಾಜೀವ್ ಗಾಂಧಿ ಅಂತಾರಾಷ್ಟ್ರೀಯ (ಆರ್‌ಜಿಐ) ವಿಮಾನ ನಿಲ್ದಾಣದ ಪೊಲೀಸ್ ಇನ್ಸ್‌ಪೆಕ್ಟರ್ ಕೆ. ಬಾಲರಾಜು, ಘಟನೆಯಲ್ಲಿ ಯಾರೂ ಗಾಯಗೊಂಡಿಲ್ಲ ಎಂದು ಹೇಳಿದರು. ಗುಂಪಿನ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 126 ಮತ್ತು ಆಸ್ತಿಗೆ ಹಾನಿಗೆ ಸಂಬಂಧಿಸಿದ ಇತರ ವಿಭಾಗಗಳಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅವರು ಹೇಳಿದರು. ಕರಾಚಿ ಬೇಕರಿ ಮಾಲೀಕ ರಾಜೇಶ್ ಮತ್ತು ಹರೀಶ್ ರಾಮನಾನಿ ಅವರು ಭದ್ರತೆಗಾಗಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮತ್ತು ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಡಾ. ಜಿತೇಂದರ್ ಅವರಿಗೆ ಮನವಿ ಮಾಡಿದ ಕೆಲವೇ ದಿನಗಳ ನಂತರ ಈ ಘಟನೆ ನಡೆದಿದೆ.

ವಿಶೇಷ ಅಧಿವೇಶನ ಕರೆಯಿರಿ: ಪೈಲಟ್

ದೆಹಲಿ: ಪಾಕ್ ಆಕ್ರಮಿತ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದ್ದು, ಅದನ್ನು ಮರಳಿ

ಪಡೆಯುತ್ತೇವೆ ಎಂಬುದಾಗಿ 1994ರಲ್ಲಿ ಅಂಗೀಕರಿಸಲಾದ ನಿರ್ಣಯವನ್ನು ಮತ್ತೆ ಪುನರುಚ್ಚರಿಸಬೇಕಾದ ಸಮಯ ಇದಾಗಿದೆ. ಈ ನಿಟ್ಟಿನಲ್ಲಿ ಸಂಸತ್ ವಿಶೇಷ ಅಧಿವೇಶನ ಕರೆಯಬೇಕು ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಭಾನುವಾರ ಒತ್ತಾಯಿಸಿದರು. ಭಾರತ ಮತ್ತು ಪಾಕಿಸ್ತಾನ ನಡುವಿನ ಕದನ ವಿರಾಮ ಒಪ್ಪಂದ ಕುರಿತಂತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿನ್ ಪೈಲಟ್, 1994ರಲ್ಲಿ ಪಾಕ್ ಆಕ್ರಮಿತ ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿದ್ದು, ಇದನ್ನು ಪಾಕಿಸ್ತಾನ ತೊರೆಯುವಂತೆ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಲಾಗಿತ್ತು, ಅದನ್ನು ಈಗ ಪುನರುಚ್ಚರಿಸಬೇಕಾಗಿದೆ ಎಂದರು.



ಭಾರತ ವಿರೋಧಿಸಲು ಪಾಕಿಸ್ತಾನವನ್ನು ಪೋಷಿಸುತ್ತಿರುವ ಚೀನಾ!

ಸೇನಾ ಯೋಜನೆಗಳು

- ಜೆ.ಎಫ್ 17 ಥಂಡ್ ಫ್ಲೈಟರ್ ಜೆಟ್
- ಹಾಂಗೋರ್ ಕ್ಲಾಸ್ ಸಬ್‌ಮರೇನ್
- ಪಾಕಿಸ್ತಾನ ನೌಕಾದಳದಲ್ಲಿ ಫ್ರೇಗೆಟ್‌ಗಳ ಅಭಿವೃದ್ಧಿ
- ಪಾಕಿಸ್ತಾನದಲ್ಲಿ ಎಚ್‌ಕ್ಯು 16 ಏರ್ ಡಿಫೆನ್ಸ್ ಸಿಸ್ಟಂಗಳ ಅಳವಡಿಕೆ

- **ಚೀನಾದಿಂದ 29 ಬಿಲಿಯನ್ ಡಾಲರ್ ಸಾಲ**
- **ಭಾರತದ ವಿರುದ್ಧ ಎತ್ತಿಕೊಟ್ಟುವುದಕ್ಕೆ ಸಾಲ ನೀಡಿರುವ ಚೀನಿಯರು**
- **ಚೀನಾದ ರಕ್ಷಣಾ ಸಾಮಗ್ರಿಗಳೆಲ್ಲ ಪಾಕಿಗೆ ಮಾರಾಟ**

'ಶತ್ರುವಿನ ಶತ್ರು, ಮಿತ್ರ' ಎನ್ನುವ ರೀತಿಯಲ್ಲಿ ಭಾರತದ ನೆರೆ ರಾಷ್ಟ್ರಗಳಾದ ಚೀನಾ-ಪಾಕಿಸ್ತಾನ ಭಾಯ್-ಭಾಯ್ ಎನ್ನಲು ಇರುವ ಏಕೈಕ ಕಾರಣ ಭಾರತ. ಭಾರತದ ವಿರುದ್ಧ ನೇರವಾಗಿ ಯುದ್ಧ ಸಾರುವ ಬದಲು ಆಗ್ಗಾಗ್ಗೆ ಪಾಕಿಸ್ತಾನದ ಮೂಲಕ ಭಾರತವನ್ನು ಕೆಣಕಲು ಪ್ರಯತ್ನಿಸುವ ಚೀನಾದ ಬಲವೊಂದು ಹೋದರೆ ಪಾಕಿಸ್ತಾನ ಇಡೀ ವಿಶ್ವದ ಮುಂದೆ ಏಕಾಂಗಿಯಾಗುವುದು ಸ್ಪಷ್ಟ.

ಆರ್ಥಿಕ ದಿವಾಳಿತನದಲ್ಲಿ ಸಿಲುಕಿ ಖಜಾನೆ ಬರಿದು ಮಾಡಿಕೊಂಡಿರುವ ಪಾಕಿಸ್ತಾನಕ್ಕೆ ಅತಿಹೆಚ್ಚು ಸಾಲವನ್ನು ನೀಡುವ ಮೂಲಕ ತಾನು ಹೇಳಿದಂತೆ ಕೇಳುವಂತೆ ಮಾಡಿಕೊಂಡಿರುವ ಚೀನಾದ, ತಮ್ಮ ರಕ್ಷಣಾ ಸಾಮಗ್ರಿಗಳ 'ಟೆಸ್ಟಿಂಗ್ ಲ್ಯಾಬ್' ರೀತಿ ಪಾಕಿಸ್ತಾನವನ್ನು ಬಳಸಿಕೊಳ್ಳುತ್ತಿದೆ ಎಂದರೆ ಸುಳ್ಳಲ್ಲ.

ಹೌದು, ಚೀನಾ ವಿಶ್ವಾದ್ಯಂತ ಮಾರಾಟ ಮಾಡುವ ರಕ್ಷಣಾ ಸಾಮಗ್ರಿಯ ಶೇ. 63ರಷ್ಟು ಸಾಮಗ್ರಿಗಳನ್ನು ಪಾಕಿಸ್ತಾನವೊಂದೇ ಖರೀದಿಸುತ್ತದೆ. ಕಳೆದ ಐದು ವರ್ಷದಲ್ಲಿ ಪಾಕಿಸ್ತಾನವೊಂದೇ ಚೀನಾದಿಂದ ಬರೋಬ್ಬರಿ 5.28 ಬಿಲಿಯಲ್ ಡಾಲರ್ ಮೊತ್ತದ ಶಸ್ತ್ರಾಸ್ತ್ರಗಳನ್ನು ಖರೀದಿ ಮಾಡಿದೆ. ಆದರೆ ಗುಣಮಟ್ಟದ ವಿಷಯದಲ್ಲಿ ಚೀನಾ ವಸ್ತುಗಳನ್ನು ನಂಬುವಂತಿಲ್ಲ ಎನ್ನುವುದು ಕಳೆದ ಎರಡು ದಿನದಲ್ಲಿ ಬಹಿರಂಗವಾಗಿದೆ.

ಆಪರೇಷನ್ ಸಿಂದೂರದ ಬಳಿಕ ಶುರುವಾದ ಭಾರತೀಯ ವಾಯುಸೇನೆ ಪಾಕಿಸ್ತಾನದ ವಾಯುಸೇನೆಯ ಮೇಲೆ ಎರಗಿದಾಗ ಪಾಕಿಸ್ತಾನದಲ್ಲಿದ್ದ ಚೀನಾ ನಿರ್ಮಿತ ಆ್ಯಂಟಿ ಮಿಸೈಲ್ ಸಿಸ್ಟಂಗಳು ಪತ್ತೆ ಹಚ್ಚುವಲ್ಲಿ ಹಾಗೂ ಪ್ರತಿದಾಳಿ ನಡೆಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಭಾರತೀಯ ವಾಯು ಸೇನೆಯ ಒಂದೇ ಒಂದು ಡ್ರೋನ್ ಹಾಗೂ ಕ್ಷಿಪಣಿಗಳಲ್ಲಿ ತಡೆಯುವಲ್ಲಿ ಚೀನಾ ನಿರ್ಮಿತ ಸಿಸ್ಟಂಗಳು ವಿಫಲವಾಗುವ ಮೂಲಕ ಇಡೀ ಚೀನಾ ನಿರ್ಮಿತ ಸಿಸ್ಟಂಗಳ ವೈಫಲ್ಯವನ್ನು ಇಡೀ ಜಗತ್ತಿಗೆ ತೋರಿಸಿದೆ.

ಪಾಕಿಸ್ತಾನಕ್ಕೆ ಅತಿಹೆಚ್ಚು ಶಸ್ತ್ರಾಸ್ತ್ರವನ್ನು ಚೀನಾ ನೀಡುವುದಷ್ಟೇ ಅಲ್ಲದೇ, ಬಿಕಾರಿಯಾಗಿರುವ ರಾಷ್ಟ್ರದ ಮೇಲೆ ಭಾರಿ ಪ್ರಮಾಣದ ಆರ್ಥಿಕ ಸಹಾಯ ಮಾಡಿದೆ. ಮೂಲಗಳ ಪ್ರಕಾರ, ಸುಮಾರು 59 ಮಿಲಿಯನ್ ಡಾಲರ್‌ನಷ್ಟು ಹಣವನ್ನು ಸಾಲದ ರೂಪದಲ್ಲಿ ಚೀನಾ ನೀಡಿದೆ. ಇದರೊಂದಿಗೆ ಮೂಲಸೌಕರ್ಯದ ಅಭಿವೃದ್ಧಿಗೆ ಹಾಗೂ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವನ್ನು ನೀಡಿದೆ. ಸಾಲದ ಹೊರತಾಗಿ ಸೇನಾ ಯೋಜನೆಗಳನ್ನು ಹೊರತುಪಡಿಸಿ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ನೆಪದಲ್ಲಿ ಕಳೆದ 15 ವರ್ಷದ ಅವಧಿಯಲ್ಲಿ ಸುಮಾರು 62 ಮಿಲಿಯನ್ ಡಾಲರ್ ಅನ್ನು ಪಾಕಿಸ್ತಾನದ ನೆಲದಲ್ಲಿ ಚೀನಾ ಹೂಡಿಕೆ ಮಾಡಿದೆ. ಆದ್ದರಿಂದ ಇದೀಗ ಯುದ್ಧ ಮುಂದುವರೆದರೆ, ಚೀನಾ ಹೂಡಿರುವ ಹಣವೂ ಹೋಗಲಿದೆ ಎನ್ನುವುದು ಚೀನಾ ಪಾಕಿಸ್ತಾನದ ಬೆಂಬಲಕ್ಕೆ ನಿಲ್ಲಲು ಒಂದು ಕಾರಣ.

ಚೀನಾ ಮೇಲೇಕೆ ಪಾಕಿಸ್ತಾನಕ್ಕೆ ಪ್ರೀತಿ

ಬಿಕಾರಿಯಾಗಿರುವ ಪಾಕಿಸ್ತಾನಕ್ಕೆ ಯಾವುದೇ ದೇಶ ಸಹಾಯ ಮಾಡಲು ಮುಂದೆ ಬರುತ್ತಿಲ್ಲ. ಬಡತನದೊಂದಿಗೆ ಉಗ್ರವಾದವನ್ನು ಬೆನ್ನಿಗೆ ಕಟ್ಟಿಕೊಂಡಿರುವುದರಿಂದ ಬಹುತೇಕ ಐರೋಪ್ಯ ರಾಷ್ಟ್ರಗಳು ಪಾಕಿಸ್ತಾನದಿಂದ ಅಂತರ ಕಾಯ್ದುಕೊಳ್ಳುತ್ತಿದೆ. ಆದರೆ ಈ ಸಮಯದಲ್ಲಿಯೂ ಚೀನಾ ಪಾಕಿಸ್ತಾನಕ್ಕೆ ಕೇಳಿದಾಗಲೆಲ್ಲ 'ವಿವಿಧ' ಕಾರಣಕ್ಕೆ ಸಾಲದ ರೂಪದಲ್ಲಿ ಧನಸಹಾಯ ಮಾಡುತ್ತಿದೆ. ಚೀನಾದಿಂದ ನಿರಂತರವಾಗಿ ಸಾಲ ಪಡೆದಿರುವ ಪಾಕಿಸ್ತಾನಕ್ಕೆ ಇದೀಗ ಸಾಲ ಮರುಪಾವತಿ ಮಾಡಲು ಸಾಧ್ಯವಿಲ್ಲ ಎನ್ನುವ ಅರಿವಿದ್ದು, ತಮ್ಮನ್ನು ಬಳಸಿಕೊಂಡು ಭಾರತದ ವಿರುದ್ಧ ಪಿತೂರಿ ಮಾಡುತ್ತಿದೆ ಎನ್ನುವ ಅರಿವಿದೆ. ಆದರೆ, ಈಗಾಗಲೇ ಭಾರಿ ಪ್ರಮಾಣದ ಸಾಲ ಪಡೆದಿರುವುದರಿಂದ ಚೀನಾದ ತಾಳಕ್ಕೆ ತಕ್ಕಂತೆ ಕುಣಿಯುವುದು ಪಾಕಿಸ್ತಾನಕ್ಕೆ ಅನಿವಾರ್ಯ.

ಪಾಕಿಸ್ತಾನಕ್ಕೆ ಏಕೆ ಚೀನಾದಲ್ಲಿ ಪ್ರಾಮುಖ್ಯತೆ?

- ಚೀನಾಕ್ಕೆ ಪಾಕಿಸ್ತಾನದ ಮೇಲಿನ ಪ್ರೀತಿಗಿಂತ ಭಾರತದ ಮೇಲಿನ ದ್ವೇಷವೇ ಹೂಡಿಕೆ ಮಾಡಲು ಕಾರಣ
- ಭಾರಿ ಪ್ರಮಾಣದ ಸಾಲದ ಮೂಲಕ, ತಾನು ಹೇಳಿದಂತೆ ಕೇಳುವಂತೆ ಪಾಕಿಸ್ತಾನವನ್ನು ಮಾಡಿಕೊಂಡಿರುವ ಚೀನಾ
- ಮೂಲಸೌಕರ್ಯ ಅಭಿವೃದ್ಧಿಯ ನೆಪದಲ್ಲಿ ಪಾಕಿಸ್ತಾನದಲ್ಲಿ ಚೀನಾ ಸ್ಥಾಪನೆ
- ಪಾಕಿಸ್ತಾನದಲ್ಲಿರುವ ಅಮೂಲ್ಯ ಖನಿಜ ಸಂಪತ್ತು, ತೈಲ ನಿಕ್ಷೇಪದ ಮೇಲೆ ಚೀನಿಯರ ಕಣ್ಣು
- ಭಾರತವನ್ನು ತಾನು ಕೆದಕಿ, ವಿಶ್ವದ ಮುಂದೆ ಕೆಟ್ಟವನಾಗುವ ಬದಲು ಇದಕ್ಕೆ ಪಾಕಿಸ್ತಾನವನ್ನು ಬಳಸಿಕೊಳ್ಳುವ ಚೀನಾ

ಮೂಲಸೌಕರ್ಯ ಯೋಜನೆಗಳೇನು?

- **ಮತಿಯಾರಿ-ಲಾಹೋರ್ ಟ್ರಾನ್ಸ್ಮಿಷನ್ ಲೈನ್ : ದಕ್ಷಿಣ ಪಾಕಿಸ್ತಾನದಿಂದ ಉತ್ತರ ಪಾಕಿಸ್ತಾನಕ್ಕೆ 878 ಕಿಮೀ ಉದ್ದ 660 ಕೆವಿ ವಿದ್ಯುತ್ ಲೈನ್ ಅನ್ನು ನಿರ್ಮಿಸಲಾಗುತ್ತಿದೆ.**
- **ಗ್ವಾದಾರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ : ಪಾಕಿಸ್ತಾನದ ನೆಲದಲ್ಲಿ ಚೀನಾ ಹೂಡಿಕೆ ಮಾಡಿರುವ ಬಹುದೊಡ್ಡ ವಿಮಾನ ನಿಲ್ದಾಣ ಇದಾಗಿದ್ದು, ಮೊದಲ ಹಂತದಲ್ಲಿ 248 ಮಿಲಿಯರ್ ಡಾಲರ್ ಹೂಡಿಕೆ ಮಾಡಿರುವ ಚೀನಾ, ಎರಡನೇ ಹಂತದಲ್ಲಿ 600 ಮಿಲಿಯನ್ ಡಾಲರ್ ಹೂಡಿಕೆ ಮಾಡಲಿದೆ.**
- **ಲಾಹೋರ್ ಮೆಟ್ರೋ ಯೋಜನೆ : ಪಾಕಿಸ್ತಾನದ ಮೊದಲ ಮೆಟ್ರೋ ಆರಂಭಗೊಂಡಿರುವುದು ಲಾಹೋರ್‌ನಲ್ಲಿ. ಇದರ ಕಿತ್ತಲೆ ಮಾರ್ಗಕ್ಕೆ ಚೀನಾದ ಎಕ್ಸಿಂ ಬ್ಯಾಂಕ್ 1.55 ಮಿಲಿಯನ್ ಡಾಲರ್ ಸಾಲವನ್ನು ನೀಡಿದೆ.**
- **ಛಾಸ್ಮ ಅಣುಸ್ಥಾವರ ವಿದ್ಯುತ್ ಘಟಕ : ಕೈಗಾರಿಕಾ ಪ್ರದೇಶಗಳಿಗೆ ವಿದ್ಯುತ್ ಒದಗಿಸುವ ಉದ್ದೇಶದಿಂದ ಚೀನಾದ ಸಹಕಾರದೊಂದಿಗೆ ಈ ಘಟಕವನ್ನು ಸ್ಥಾಪಿಸುವ ಕಾರ್ಯದಲ್ಲಿ ಪಾಕಿಸ್ತಾನವಿದೆ.**

ಯಾವೆಲ್ಲ ಯೋಜನೆ ಮೇಲೆ ಚೀನಾ ಹೂಡಿಕೆ?

- **ಶಾಹಿವಾಲ್ ಕಲ್ಲಿದ್ದಲ್ಲು ವಿದ್ಯುತ್ ಘಟಕ : ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಭಾಗವಾಗಿ ಆರಂಭವಾಗಿರುವ ಈ ವಿದ್ಯುತ್ ಘಟಕವನ್ನು ಚೀನಾದ ಹ್ಯುನೆಂಗ್ ಹಾಗೂ ಶಾಂಡಾಂಗ್ ಸಂಸ್ಥೆಗಳು ನಿಭಾಯಿಸುತ್ತಿದ್ದು, ಇದಕ್ಕೆ ಅಗತ್ಯ ಆರ್ಥಿಕ ನೆರವನ್ನು ಚೀನಾ ನೀಡಿದೆ. 30 ವರ್ಷಗಳ ಕಾಲ ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಪಾಕಿಸ್ತಾನ ಖರೀದಿಸಲಿದ್ದು, ಬಳಿಕ ಇಡೀ ಘಟಕವನ್ನು ಚೀನಾ ಪಾಕಿಸ್ತಾನಕ್ಕೆ ಹಸ್ತಾಂತರಿಸಲಿದೆ. ಇಲ್ಲಿ ಸುಮಾರು 1320 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ.**
- **ಪೋರ್ಟ್ ಖಾಸಿಂ ಕಲ್ಲಿದ್ದಲು ಘಟಕ : ಈ ಯೋಜನೆಗೂ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್‌ನ ಭಾಗವಾಗಿದ್ದು ಸುಮಾರು 2.09 ಬಿಲಿಯನ್ ಡಾಲರ್ ಮೊತ್ತದ ಈ ಯೋಜನೆಗೆ ಚೀನಾ ಹಾಗೂ ಪಾಕಿಸ್ತಾನ ಸರಕಾರ ಹಣ ಹೂಡಿಕೆ ಮಾಡಿವೆ.**
- **ಕಾರೋಟ್ ಜಲವಿದ್ಯುತ್ ಘಟಕ : ಚೀನಾದ ಚೀನಾ ಥ್ರಿ ಜಾರ್ಜ್ ಕಾರ್ಪೋರೇಷನ್ ಸಂಸ್ಥೆಗಳು ಆರಂಭಿಸಿರುವ ಈ ಘಟಕದಲ್ಲಿ ಸುಮಾರು 720 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯಾಗಲಿದೆ.**
- **ಕೊಹಾಲ ಜಲವಿದ್ಯುತ್ ಘಟಕ : ಈ ಯೋಜನೆಯನ್ನು ಚೀನಾ ಥ್ರಿ ಜಾರ್ಜ್ ಕಾರ್ಪೋರೇಷನ್ ಆರಂಭಿಸಲಿದ್ದು, ಇದಕ್ಕಾಗಿ ಭಾರಿ ಮೊತ್ತದ ಹೂಡಿಕೆ ಮಾಡಲಾಗಿದೆ. ಇದು ಪಾಕಿಸ್ತಾನದಲ್ಲಿ ಈ ಸಂಸ್ಥೆ ಹೂಡಿಕೆ ಮಾಡುತ್ತಿರುವ ಬಹುದೊಡ್ಡ ಯೋಜನೆ ಎಂದು ಹೇಳಲಾಗಿದೆ.**
- **ಥಾರ್ ಕಲ್ಲಿದ್ದಲ್ಲು ವಿದ್ಯುತ್ ಘಟಕ : ಮೊದಲ ಹಂತದಲ್ಲಿ 660 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯಿರುವ ಈ ಘಟಕವನ್ನು ಸಿಂಧ್ ಪ್ರಾಂತ್ಯದ ಸರಕಾರ ಹಾಗೂ ಚೀನಾದ ಎನ್‌ಗ್ರೋ ಕಾರ್ಪೋರೇಷನ್ ಹಾಗೂ ಚೀನಾ ಮೆಷಿನರಿ ಎಂಜಿನಿಯರಿಂಗ್ ಸಂಸ್ಥೆ ಜಂಟಿಯಾಗಿ ಆರಂಭಿಸಿವೆ.**



ಪಾಕ್‌ಗೆ ಬೇಹುಗಾರಿಕೆ ಇಬ್ಬರ ಬಂಧನ

ಚಂಡೀಗಢ: ದೆಹಲಿಯ ಹೈಕಮಿಷನ್‌ನಲ್ಲಿನ ಪಾಕಿಸ್ತಾನದ ಅಧಿಕಾರಿ ಜತೆ ಸಂಪರ್ಕ ಹೊಂದಿ ಬೇಹುಗಾರಿಕೆ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಆರೋಪದಡಿ ಇಬ್ಬರನ್ನು ಮಲೇರ್‌ಕೋಟ್ಲಾ ಪೊಲೀಸರು ಬಂಧಿಸಿ, ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕರು (ಡಿಜಿಪಿ) ಸುದ್ದಿಸಂಸ್ಥೆಗೆ ಭಾನುವಾರ ತಿಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸುತ್ತಾ, ಭಾರತೀಯ ಸೇನೆಯ ಚಲನವಲನಗಳ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ಪಾಕಿಸ್ತಾನದ ನಿರ್ವಾಹಕರಿಗೆ ಸೋರಿಕೆ ಮಾಡಿದ್ದ ಒಬ್ಬನನ್ನು ಮೊದಲು ಬಂಧಿಸಲಾಯಿತು. ವಿಚಾರಣೆ ವೇಳೆ ಆತ ನೀಡಿದ ಹೆಚ್ಚಿನ ಮಾಹಿತಿ ಆಧರಿಸಿ 2ನೇ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳು ರಹಸ್ಯ ಮಾಹಿತಿಗಳನ್ನು ಪಾಕ್ ಅಧಿಕಾರಿಗೆ ರವಾನಿಸಿ ಆನ್‌ಲೈನ್ ಮೂಲಕ ಹಣ ಪಡೆಯುತ್ತಿದ್ದರು. ಹ್ಯಾಂಡ್ಲರ್ ಜತೆಗೂ ಸಂಪರ್ಕದಲ್ಲಿದ್ದರು. ಸ್ಥಳೀಯವಾಗಿ ಬೇಹುಗಾರಿಕೆ ನಡೆಸಿದವರಿಗೂ ಹಣ ಹಂಚುತ್ತಿದ್ದರು. ಬಂಧಿತರಿಂದ ಎರಡು ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.

ದೆಹಲಿ: 100ಕ್ಕೂ ಹೆಚ್ಚು ವಿಮಾನ ರದ್ದು

ದೆಹಲಿ: ಕದನ ವಿರಾಮ ಘೋಷಣೆಯಾಗಿದ್ದರೂ, ಭಾರತ-ಪಾಕಿಸ್ತಾನ ನಡುವಿನ ಸೇನಾ ಕಾರ್ಯಾಚರಣೆಗಳು ತಾತ್ಕಾಲಿಕವಾಗಿ ಸ್ಥಗಿತವಾಗಿದ್ದರೂ ದೆಹಲಿ ವಿಮಾನ ನಿಲ್ದಾಣದಲ್ಲಿ ಭಾನುವಾರ 100ಕ್ಕೂ ಅಧಿಕ ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿತ್ತು. ದೆಹಲಿ ವಿಮಾನ ನಿಲ್ದಾಣದಲ್ಲಿನ ಕಾರ್ಯಾಚರಣೆಗೆ ಸದ್ಯ ಯಾವುದೇ ಅಡ್ಡಿ ಇರಲಿಲ್ಲ. ಹಾಗಿದ್ದರೂ ಭದ್ರತೆ ಮತ್ತು ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ 100ಕ್ಕೂ ಅಧಿಕ ವಿಮಾನಗಳ ಸಂಚಾರವನ್ನು ಭಾನುವಾರ ರದ್ದುಗೊಳಿಸಲಾಯಿತು ಎಂದು ದೆಹಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ 'ಎಕ್ಸ್' ಸಂದೇಶದಲ್ಲಿ ಹೇಳಿದೆ.

ಮಾತುಕತೆಗೆ ಸಿದ್ಧ: ಆಸಿಮ್ ಮುನೀರ್

ಇಸ್ಲಾಮಾಬಾದ್: ಭಾರತದ ಜತೆಗೆ ಎಲ್ಲಾ ವಿಷಯಗಳಿಗೂ ಸಂಬಂಧಿಸಿ ಮಾತುಕತೆಗೆ ಸಿದ್ಧ ಎಂದು ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್

ಮುನೀರ್ ಹೇಳಿದ್ದಾರೆ. ಅಮೆರಿಕದ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ ಕರೆ ಮಾತನಾಡಿದ ಬಳಿಕ ಮುನೀರ್ ಈ ಹೇಳಿಕೆ ನೀಡಿದ್ದಾರೆ. ಆದರೆ, ಈ ಮನವಿಗೆ ಒಪ್ಪದ ಭಾರತ, ಮೊದಲೇ ನಿರ್ಧಾರ ವಾಗಿರುವಂತೆ ಎರಡೂ ದೇಶಗಳ 'ಡೈರೆಕ್ಟರ್ ಜನರಲ್ ಆಫ್ ಮಿಲಿಟರಿ ಆಪರೇಷನ್ಸ್' (ಡಿಜಿಎಂಒ-ಸೇನಾ ಕಾರ್ಯಾಚರಣೆಗಳ ಮಹಾ ನಿರ್ದೇಶಕರು) ಮಾತ್ರವೇ ಸದ್ಯಕ್ಕೆ ಮಾತುಕತೆ ನಡೆಸಬೇಕು. ಆ ಬಳಿಕವಷ್ಟೇ ಉಳಿದ ವಿಚಾರ ಬರುತ್ತವೆ ಎಂದು ಕಡ್ಡಿಮುರಿದಂತೆ ಹೇಳಿದೆ.

ಯೋಧನ ಕುಟುಂಬಕ್ಕೆ 50 ಲಕ್ಷ ರು. ಪರಿಹಾರ

ಕಲ್ಲಿತಾಂಡ: ಪಾಕಿಸ್ತಾನ ವಿರುದ್ಧ ಭಾರತ ಸೇನಾಪಡೆಗಳು ನಡೆಸಿದ ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಯೋಧ ಮುದಾವತ್ ಮುರಳಿ ನಾಯಕ್ ಅವರ ಕುಟುಂ ಬಕ್ಕೆ ಆಂಧ್ರ

ಪ್ರದೇಶ ಸರಕಾರ 50 ಲಕ್ಷ ರು. ಪರಿಹಾರ ಘೋಷಿಸಿದೆ. ಯೋಧ ಮುರಳಿ ನಾಯಕ್ ಅವರ ಮೃತ ದೇಹವನ್ನು ಸೇನೆಯ ಯೋಧರು ವಾಹನದಲ್ಲಿ ತಂದು ಕಲ್ಲಿತಾಂಡದಲ್ಲಿನ ಪೋಷಕರಿಗೆ ತಲುಪಿಸಿದ್ದಾರೆ. ಭಾನುವಾರ ಯೋಧನ ಮನೆಗೆ ತೆರಳಿ ಅಂತಿಮ ದರ್ಶನ ಪಡೆದು ಗೌರವ ಸಮರ್ಪಣೆ ಮಾಡಿದ ಆಂಧ್ರ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ವೈಯಕ್ತಿಕವಾಗಿ 25 ಲಕ್ಷ ರು. ಪರಿಹಾರ ಘೋಷಿಸಿ ದರು. ಮುರಳಿ ನಾಯಕ್ ಕುಟುಂಬಕ್ಕೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು 50 ಲಕ್ಷ ರು. ಪರಿಹಾರ, 5 ಎಕರೆ ಕೃಷಿ ಭೂಮಿ, ವಸತಿಗಾಗಿ 300 ಚದರ ಗಜ ನಿವೇಶನ ನೀಡುವು ದಾಗಿ ಘೋಷಿಸಿದ್ದಾರೆ. ಈ ವಿಷಯವನ್ನೂ ಡಿಸಿಎಂ ಪವನ್ ಕಲ್ಯಾಣ್ ಅವರು ಮುರಳಿ ನಾಯಕ್ ಪೋಷಕರಿಗೆ ತಿಳಿಸಿದರು.

{ **ಕಪಿಲ್ ಸಿಬಲ್** } ಸಂಸದ

ಕದನ ವಿರಾಮ ಘೋಷಣೆ ನಂತರ ಸರಕಾರ ಸಂಸತ್ ವಿಶೇಷ ಅಧಿವೇಶನ ಮತ್ತು ಸರ್ವಪಕ್ಷ ಸಭೆ ಕರೆಯಬೇಕು. ಪ್ರಧಾನಿ ಮೋದಿ ಭಾಗವಹಿಸುವುದಾದರೆ ಮಾತ್ರ ಸರ್ವಪಕ್ಷ ಸಭೆ ಕರೆಯಲಿ. ಆ ಬಗ್ಗೆ ಸರಕಾರ ಭರವಸೆ ನೀಡುವವರೆಗೂ ಇತರೆ ಪಕ್ಷಗಳು ಸಭೆಗೆ ಹಾಜರಾಗಬಾರದು. ನಾವು ಸರಕಾರದ ವಿರುದ್ಧ ಯಾವುದೇ ಟೀಕೆ ಮಾಡುವುದಿಲ್ಲ. ಇದು ಟೀಕೆಗೆ ಸಮಯವಲ್ಲ.



ಕದನ ವಿರಾಮಕ್ಕೆ ಮನವಿ ಮಾಡಲು ಇದೇ ಕಾರಣ | ಅಮೆರಿಕಕ್ಕೆ ಒತ್ತಡ ಹೇರಿ ಕದನ ವಿರಾಮ ಒಪ್ಪಂದ

ಅಣ್ವಸ್ತ್ರಗಳಿದ್ದ ಸ್ಥಳಕ್ಕೇ ಭಾರತ ದಾಳಿ: ನಡುಗಿದ ಪಾಕ್

ದೆಹಲಿ: ಪಾಕಿಸ್ತಾನದ ಅಣ್ವಸ್ತ್ರಗಳ ಸಂಗ್ರಹಸಿರುವ ಸ್ಥಳದ ಮೇಲೆಯೇ ಭಾರತ ಕ್ಷಿಪಣಿ ದಾಳಿ ನಡೆಸಿದ್ದರಿಂದ ಪಾಕ್ ಸರಕಾರ ಥರಗುಟ್ಟಿದೆ. ಆ ಬಳಿಕ ಅಮೆರಿಕಕ್ಕೆ ಕರೆ ಮಾಡಿದ ಪಾಕ್ ಸರಕಾರ, ಭಾರತದ ದಾಳಿ ತಡೆಯುವಂತೆ ಮನವಿ ಮಾಡಿದೆ. ಬಳಿಕ ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಸಲಹೆ ಮೇರೆಗೆ ಪಾಕ್‌ನ ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕ(ಡಿಜಿಎಂಒ) ಭಾರತದ 'ಡಿಜಿಎಂಒ'ಗೆ ಮಧ್ಯಾಹ್ನ 3.35ರ ವೇಳೆ ಕರೆ ಮಾಡಿ ಕದನ ವಿರಾಮದ ಪ್ರಸ್ತಾವನೆ ಮಂಡಿಸಿದ್ದಾರೆ ಎಂಬುದು ತಿಳಿದುಬಂದಿದೆ.

ಭಾರತ ಮೇ 9-10ರ ರಾತ್ರಿ ಪಾಕ್‌ನ 8 ವಾಯುನೆಲೆಗಳು ಸೇರಿದಂತೆ ಹಲವು ಭಾಗಗಳ ಮೇಲೆ ಪ್ರಬಲವಾದ ದಾಳಿ ಸಂಘಟಿಸಿತ್ತು. ಮುಖ್ಯವಾಗಿ ಪಾಕ್‌ನ ವಾಯುಪಡೆ ವಿಮಾನಗಳ ಹಾರಾಟಕ್ಕೆ ಅಡಚಣೆ ಆಗುವಂತೆ ಮಾಡಲು ಅದರ ವಾಯುಪಡೆ ನೆಲೆಗಳ ಮೇಲೆಯೇ ಬ್ರಹ್ಮೋಸ್ ಖಂಡಾಂತರ ಕ್ಷಿಪಣಿ ಬಳಸಿ ದಾಳಿ ನಡೆಸಿತ್ತು.

ಇದೇ ವೇಳೆ, ಪಾಕ್‌ನ ಅಣ್ವಸ್ತ್ರಗಳಿರುವ ಬೆಟ್ಟ ಪ್ರದೇಶದ ಮಗ್ಗಲಲ್ಲಿಯೇ ಕ್ಷಿಪಣಿ ದಾಳಿ ನಡೆಸಿತ್ತು. ಪಾಕಿಸ್ತಾನದ ಅಣ್ವಸ್ತ್ರ ಸಂಗ್ರಹ ಮತ್ತು ಮಿಲಿಟರಿ ಶಸ್ತ್ರಾಸ್ತ್ರ ಸಂಗ್ರಹಗಳಿರುವ ಮುಷಫ್ ವಾಯುನೆಲೆ (ಸರ್ಗೋಧಾ) ಬಳಿಯ ಕಿರಣ ಬೆಟ್ಟದ ಮೇಲೆಯೇ ಭಾರತದ ವಾಯುಪಡೆ ದಾಳಿ ನಡೆಸಿದೆ. ಈ ಬೆಟ್ಟಗಳ ಸಾಲಿನಲ್ಲೇ ಪಾಕ್ ಭೂಗತ ಪರಮಾಣು ಶಸ್ತ್ರಾಸ್ತ್ರಗಳ ಸಂಗ್ರಹವಿದೆ ಎನ್ನಲಾಗಿದೆ. ಹಾಗಾಗಿಯೇ ಇದರ ಬಳಿ ಭಾರತ ನಡೆಸಿದ ದಾಳಿಗೆ ಪಾಕ್ ಪತರುಗುಟ್ಟಿ ಹೋಗಿದೆ ಎನ್ನಲಾಗಿದೆ.

ಪಾಕ್‌ನ ನೂರ್‌ಖಾನ್ ವಾಯುನೆಲೆಯಲ್ಲಿ ಅಣ್ವಸ್ತ್ರಗಳ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಇದೆ. ಭಾರತ ಈ ವಾಯುನೆಲೆಯನ್ನೂ ಗುರಿಯಾಗಿಸಿ ಕ್ಷಿಪಣಿ ದಾಳಿ ನಡೆಸಿದ್ದರಿಂದ ಪಾಕ್ ಬಹಳವಾಗಿ ಆತಂಕಗೊಂಡಿತು. ಹಾಗಾಗಿ ಭಯಕ್ಕೆ ಬಿದ್ದ ಪಾಕಿಸ್ತಾನ ಅಮೆರಿಕವನ್ನು ಸಂಪರ್ಕಿಸಿ ತಕ್ಷಣವೇ ಮಧ್ಯಪ್ರವೇಶ ಮಾಡುವಂತೆ ಕೇಳಿಕೊಂಡಿತು ಎಂದು ವರದಿಯಾಗಿದೆ.





ಅಣ್ವಸ್ತ್ರಗಳಿವೆ ಎಂದ ಹೇಳಲಾಗಿರುವ ಪಾಕ್ ಬೆಟ್ಟ ಪ್ರದೇಶ

ಅಮೆರಿಕಕ್ಕೂ ಆಘಾತ

ಪಾಕಿಸ್ತಾನದ ಕೋರಿಕೆಗೆ ಅಮೆರಿಕ ತಕ್ಷಣವೇ ಸ್ಪಂದಿಸಿ ಭಾರತಕ್ಕೆ ಕರೆ ಮಾಡಿ ಕದನ ವಿರಾಮಕ್ಕೆ ಒತ್ತಾಯಿಸುವುದರ ಹಿಂದೆಯೂ ಬಲವಾದ ಕಾರಣವಿದೆ. ಪಾಕಿಸ್ತಾನ ಪರಮಾಣು ಶಸ್ತ್ರಾಸ್ತ್ರಗಳನ್ನು ಕಾಪಾಡಿಕೊಳ್ಳುವ ಅತ್ಯಂತ ರಹಸ್ಯ ಕಾರ್ಯಕ್ರಮಕ್ಕಾಗಿ 10 ಕೋಟಿ ಡಾಲರ್‌ಗಳನ್ನು ಅಮೆರಿಕ ಖರ್ಚು ಮಾಡಿದೆ ಎಂದು 2008ರಲಿ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಪಾಕ್‌ಗೆ ಎಫ್ 16 ಯುದ್ಧ ವಿಮಾನಗಳನ್ನು ನೀಡಿರುವ ಅಮೆರಿಕ, ಉಗ್ರರ ವಿರುದ್ಧದ ಕಾರ್ಯಾಚರಣೆಗೆಗಷ್ಟೇ ಎಫ್16 ವಿಮಾನ ಬಳಸಬೇಕು ಎಂದು ಷರತ್ತು ವಿಧಿಸಿತ್ತು. ಹಾಗಿದ್ದರೂ ಪಾಕ್ ವಾಯುಪಡೆ ಈ ವಿಮಾನಗಳನ್ನು ಭಾರತದ ವಿರುದ್ಧದ ಕಾರ್ಯಾಚರಣೆಗೆ ಬಳಸುತ್ತಿತ್ತು. ಭಾರತದ ಮೇಲೆ ದಾಳಿಗೆ ಎಫ್-16 ವಿಮಾನಗಳು ಸರ್ಗೋದಾದಿಂದಲೇ ಹಾರಾಟ ಆರಂಭಿಸುತ್ತಿವೆ ಎಂಬ ವಿಚಾರ ತಿಳಿದ ಬಳಿಕ ಭಾರತ ಈ ವಾಯುನೆಲೆಯ ಮೇಲೆ ಕ್ಷಿಪಣಿ ದಾಳಿ ನಡೆಸಿತ್ತು. ಭಾರತ ಮತ್ತಷ್ಟು ತೀವ್ರ ದಾಳಿ ನಡೆಸಿದರೆ ಪಾಕ್ ವಾಯುನೆಲೆಯ ಲ್ಲಿನ ಉಳಿದೆಲ್ಲಾ ಎಫ್-16 ವಿಮಾನಗಳು ಧ್ವಂಸವಾಗುವ ಸಾಧ್ಯತೆ ಇತ್ತು.

ಪಾಕ್ ಸೇನೆಯ 40 ಯೋಧರ ಸಾವು

ಆಪರೇಷನ್ ಸಿಂದೂರ ಕಾಯಾಚರಣೆಯಲ್ಲಿ ಮೇ 9 ಮತ್ತು 10ರಂದು ಪಾಕ್‌ನ ವಾಯುನೆಲೆಗಳ ಮೇಲೆ ಭಾರತದ ವಾಯುಪಡೆಗಳು ನಡೆಸಿದ ತೀವ್ರ ಸ್ವರೂಪದ ದಾಳಿಯಲ್ಲಿ ಪಾಕ್‌ನ ಸೇನೆಯ 40 ಯೋಧರು ಹತರಾದರು ಎಂಬ ಮಾಹಿತಿ ಲಭ್ಯವಾಗಿದೆ. ಡೈರೆಕ್ಟರ್ ಜನರಲ್ ಆಫ್ ಮಿಲಿಟರಿ ಆಪರೇಷನ್ಸ್(ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಾಯ್ ಸುದ್ದಿಗೋಷ್ಠಿ ನಡೆಸಿ ಈ ಮಾಹಿತಿ ನೀಡಿದ್ದಾರೆ. ಭಾರತದ ವೈಮಾನಿಕ ದಾಳಿಗೆ ಪಾಕ್‌ನ 8 ವಾಯು ನೆಲೆಗಳು ನಾಶವಾಗಿದ್ದು, ಅಲ್ಲಿದ್ದ 40 ಯೋಧರು ಹತರಾದರು ಎಂದು ವಿವರಿಸಿದ್ದಾರೆ.

ಪರಮಾಣು ಇಂಧನ ಘಟಕ ಭಯ

ಮೇ 10ರಂದು ಭಾರತದ ವೈಮಾನಿಕ ತೀವ್ರವಾದ ಬಳಿಕ ಬೆಚ್ಚಿದ ಪಾಕಿಸ್ತಾನಕ್ಕೆ, ಭಾರತ ನಂತರದ ದಿನಗಳಲ್ಲಿ ತನ್ನ ಪರಮಾಣ ಇಂಧನ ಮತ್ತು ಮೂಲಸೌಕರ್ಯಗಳ ಮೇಲೆಯೂ ದಾಳಿ ಮಾಡಲಿದೆ ಎಂಬ ಭಯ ಮೂಡಿದೆ. ಈ ಅಂಶವೂ ಕೂಡಾ ಆದಷ್ಟು ಬೇಗ ಕದನ ವಿರಾಮ ಘೋಷಣೆ ಆಗುವಂತೆ ಮಾಡಬೇಕೆಂಬ ತರಾತುರಿಗೆ ಪಾಕ್ ಬರಲು ಕಾರಣವಾಗಿದೆ. ಏಕೆಂದರೆ ರಷ್ಯಾ-ಉಕ್ರೇನ್ ನಡುವಿನ ಯುದ್ಧದ ಲ್ಲಿಯೂ ಇದೇ ಕ್ರಮ ಅನುಸರಿಸಲಾಗಿದೆ. ಇದರ ಅರಿವು ಪಾಕಿಸ್ತಾನಕ್ಕೂ ಇದೆ ಎಂದು ರಕ್ಷಣಾ ಕ್ಷೇತ್ರದ ತಜ್ಞರು ವಿಶ್ಲೇಷಣೆ ಮಾಡಿದ್ದಾರೆ.

ಪಾಕ್ ನಾಗರಿಕರನ್ನು ಗುರಿಯಾಗಿಸಿಲ್ಲ

ದೆಹಲಿ: ಪಾಕಿಸ್ತಾನದ ನಾಗರಿಕರನ್ನು ಎಂದೂ ಗುರಿಯಾಗಿಸಿ ದಾಳಿ ನಡೆಸಿಲ್ಲ. ಭಾರತೀಯ ಸೇನೆ ಅಸಾಧಾರಣ ಧೈರ್ಯ-ಗರಿಷ್ಠ ಸಂಯಮ ಪ್ರದರ್ಶಿಸಿದೆ. ಪಾಕಿಸ್ತಾನದ ಸೇನಾ ನೆಲೆಗಳ ಮೇಲಷ್ಟೇ ದಾಳಿ ಮಾಡಿ ತಕ್ಕ ಉತ್ತರ ನೀಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್



ಭಾನುವಾರ ಹೇಳಿದ್ದಾರೆ. ಉತ್ತರ ಪ್ರದೇಶದ ಲಖನೌನಲ್ಲಿನ ಬ್ರಹ್ಮೋಸ್ ಉತ್ಪಾದನಾ-ಪರೀಕ್ಷಾ ಘಟಕವನ್ನು ವರ್ಚುವಲ್ ಆಗಿ ಉದ್ಘಾಟಿಸಿ ಮಾತನಾಡಿ, ಆಪರೇಷನ್ ಸಿಂದೂರ ಕೇವಲ ಸೇನಾ ಕಾರ್ಯಾಚರಣೆ ಅಲ್ಲ. ಭಯೋತ್ಪಾದನೆ ವಿರುದ್ಧ ಹೋರಾಡುವ ಭಾರತದ ರಾಜ ಕೀಯ, ಸಾಮಾಜಿಕ ಮತ್ತು ಕಾರ್ಯತಂತ್ರದ ಇಚ್ಛಾಶಕ್ತಿಯ ಸಂಕೇತ ಎಂದು ಹೇಳಿದರು. ದೇಶದ ಗಡಿಯ ಎರಡೂ ಬದಿಗಳಲ್ಲಿನ ಭಯೋತ್ಪಾದನೆ ಚಟುವಟಿಕೆಗಳ ವಿರುದ್ಧ ನವ ಭಾರತ ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತದೆ. ಇದನ್ನು ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರೇ ಸ್ಪಷ್ಟಪಡಿಸಿದ್ದಾರೆ. ಅನೇಕ ಕುಟುಂಬ ಗಳ ಸಿಂದೂರ ಅಳಿಸಿದ ಆಪರೇಷನ್ ಸಿಂದೂರ ಮೂಲಕ ಭಾರತೀಯ ಸೇನೆ ಶಿಕ್ಷಿಸಿದೆ ಎಂದು ಸಿಂಗ್ ಹೇಳಿದರು. ಆದರೆ, ಪಾಕಿಸ್ತಾನ ಸೇನೆ ಯು ಭಾರತದ ವಸತಿ ಪ್ರದೇಶಗಳು ಮತ್ತು ಪೂಜಾ ಸ್ಥಳಗಳನ್ನೇ ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ ಎಂದು ಸಿಂಗ್ ಕಿಡಿಕಾರಿದರು.

ಆಪರೇಷನ್ ಸಿಂದೂರ: ಪಾಕ್ 140 ಉಗ್ರರು ಹತ

ದೆಹಲಿ: ಭಾರತೀಯ ಸೇನಾಪಡೆಗಳು ಮೇ 7ರ ನಸುಕಿನ 1.05ರಿಂದ 1.30ವರೆಗೆ ನಡೆಸಿದ 'ಆಪರೇಷನ್ ಸಿಂದೂರ' ವಾಯುದಾಳಿಯಲ್ಲಿ 9 ಉಗ್ರ ತಾಣಗಳು ನಾಶವಾಗಿ ನೂರಾರು ಉಗ್ರರು ಹತರಾಗಿದ್ದಾರೆ ಎಂದು ಈವರೆಗೂ ಹೇಳಲಾಗುತ್ತಿತ್ತು. ಈಗ ಆಪರೇಷನ್ ಸಿಂದೂರ ದಾಳಿಗೆ ಒಟ್ಟು 140 ಉಗ್ರರು ನಾಶವಾಗಿರುವುದು ದೃಢಪಟ್ಟಿದೆ. ಪಾಕಿಸ್ತಾನದ 4 ಮತ್ತು ಪಾಕ್ ಆಕ್ರಮಿತ ಜಮ್ಮು-ಕಾಶ್ಮೀರದ 5 ಉಗ್ರರ ನೆಲೆಗಳ ಮೇಲೆ ಆಪರೇಷನ್ ಸಿಂದೂರ ದಾಳಿಯಾದಾಗ ಪ್ರಮುಖ ಭಯೋತ್ಪಾದಕ ನಾಯಕರು ಸೇರಿದಂತೆ ಒಟ್ಟು 140 ಉಗ್ರರು ಹತರಾದರು. ಮುರಿದಿಕೆಯಲ್ಲಿನ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಪ್ರಧಾನ ಕಚೇರಿಯಲ್ಲಿದ್ದ ಅತ್ಯಧಿಕ ಸಂಖ್ಯೆಯ ಉಗ್ರರ ಸಾವಿಗೀಡಾದರು ಎಂಬ ಖಚಿತ ಮಾಹಿತಿ ಭಾನುವಾರ ಲಭ್ಯವಾಗಿದೆ.

ಅಧಿವೇಶನ, ಸರ್ವಪಕ್ಷ ಸಭೆಗೆ ರಾಹುಲ್ ಗಾಂಧಿ, ಖರ್ಗೆ ಪತ್ರ

ದೆಹಲಿ: ಭಾರತ-ಪಾಕಿಸ್ತಾನ ನಡುವಿನ ಕದನ ವಿರಾಮ ಘೋಷಣೆ ಮತ್ತು ಬೆನ್ನಲ್ಲೇ ಪಾಕ್‌ನಿಂದ ಕದನ ವಿರಾಮ ಒಪ್ಪಂದ ಉಲ್ಲಂಘನೆ ವಿಚಾರಗಳನ್ನು ಚರ್ಚೆ ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ಕರೆಯಬೇಕು. ಅಲ್ಲದೇ, ವಿಶೇಷ

ಸಂಸತ್ ಅಧಿವೇಶನವನ್ನೂ ಆಯೋಜಿಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಈ ಸಂಬಂಧ ರಾಜ್ಯಸಭೆಯಲ್ಲಿನ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಭಾರತದ ಪ್ರಧಾನಿಗಿಂತಲೂ ಮುಂಚಿತವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೇ ಭಾರತ-ಪಾಕ್ ನಡುವೆ ಕದನ ವಿರಾಮ ಏರ್ಪಟಿರುವುದನ್ನು ಘೋಷಿಸಿರುವುದಕ್ಕೆ ರಾಹುಲ್ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಯಾವ ಪರಿಸ್ಥಿತಿಯಲ್ಲಿ ಕದನ ವಿರಾಮ ಒಪ್ಪಂದಕ್ಕೆ ಬರಲಾಯಿತು? ಅದರ ಬೆನ್ನಲ್ಲೇ ಪಾಕ್ ಕದನ ವಿರಾಮ ಉಲ್ಲಂಘನೆ ಏಕೆ ಮಾಡಿತು? ಪಾಕ್ ಮುಂದೆಯೂ ಹೀಗೆ ಒಪ್ಪಂದ ಉಲ್ಲಂಘನೆ ಮಾಡು ವುದಿಲ್ಲ ಎಂಬ ಖಚಿತತೆ ಇದೆಯೇ? ಈ ಎಲ್ಲಾ ವಿಷಯಗಳನ್ನು ಸಮಗ್ರ ವಾಗಿ ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕೆಂದು ಖರ್ಗೆ ಮತ್ತು ರಾಹುಲ್ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಜೈರಾಮ್ ರಮೇಶ್ ಪ್ರಶ್ನೆ: ಈ ಮಧ್ಯೆ, ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಭಾರತ-ಪಾಕ್ ಸಂಘರ್ಷ ಕೊನೆಗೊಳಿಸಲು ಮೂರನೇ ವ್ಯಕ್ತಿಗೆ(ದೇಶಕ್ಕೆ) ಮಧ್ಯಸ್ಥಿಕೆ ವಹಿಸಲು ಅವಕಾಶ ನೀಡಲಾಗುವುದೇ? ಶಿಮ್ಲಾ ಒಪ್ಪಂದ ಮುರಿಯ ಲಾಗಿದೆಯೆ? ಭಾರತ-ಪಾಕ್ ರಾಜತಾಂತ್ರಿಕ ಮಾರ್ಗಗಳು ತೆರೆದುಕೊಂಡಿವೆಯೇ? ಎಂಬ ಸರಣಿ ಪ್ರಶ್ನೆಗಳನ್ನು ಕೇಂದ್ರ ಸರಕಾರಕ್ಕೆ ಕೇಳಿದ್ದಾರೆ.

2019ರಲ್ಲಿ ಸಿಆರ್‌ಪಿಎಫ್‌ನ 40 ಯೋಧರ ಬಲಿ

ಪುಲ್ವಾಮಾ ದಾಳಿ: 6 ವರ್ಷ ಬಳಿಕ ತಪ್ಪೊಪ್ಪಿಕೊಂಡ ಪಾಕ್

ಇಸ್ಲಾಮಾಬಾದ್: 2019ರ ಪುಲ್ವಾಮಾ ದಾಳಿಗೆ ತಾನೇ ಹೊಣೆ ಎಂದು ಪಾಕಿಸ್ತಾನ 6 ವರ್ಷಗಳ ಬಳಿಕ ಒಪ್ಪಿಕೊಂಡಿದೆ.

ಭಾರತದ ಭದ್ರತಾ ಪಡೆ 'ಸಿಆರ್‌ಪಿಎಫ್'ನ 40 ಯೋಧರನ್ನು ಬಲಿ ತೆಗೆದುಕೊಂಡ ಪುಲ್ವಾಮಾ ದಾಳಿಯಲ್ಲಿ ಪಾಕ್ ಪಾತ್ರ ಇರುವು ದನ್ನು ಪಾಕಿಸ್ತಾನದ ಸೇನಾಧಿಕಾರಿಯೊಬ್ಬರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಒಪ್ಪಿಕೊಂಡಿದ್ದಾರೆ. ಸೇನಾಪಡೆ ಅಧಿಕಾರಿಗಳ ಜಂಟಿ ಸುದ್ದಿ ಗೋಷ್ಠಿಯಲ್ಲಿದ್ದ ಏರ್ ಮಾರ್ಷಲ್ ಔರಂಗ ಜೇಬ್ ಅಹ್ಮದ್, ಭಾರತದ ಜಮ್ಮು- ಕಾಶ್ಮೀರದಲ್ಲಿನ ಪುಲ್ವಾಮಾದಲ್ಲಿ ನಡೆದ ದಾಳಿಯು ಪಾಕ್‌ನ ಮಿಲಿಟರಿ ಯುದ್ಧ ತಂತ್ರದ ಭಾಗವಾಗಿತ್ತು ಎಂದು ಹೇಳಿದ್ದಾರೆ. ಈ ಮೂಲಕ ಪುಲ್ವಾಮಾ ದಾಳಿಯಲ್ಲಿ ತನ್ನ ಪಾತ್ರವನ್ನು ಪಾಕ್ ಬಹಿರಂಗವಾಗಿ ಮೊದಲ ಬಾರಿಗೆ ಒಪ್ಪಿಕೊಂಡಿದೆ.

ಪಾಕ್‌ನ ವಾಯುಪ್ರದೇಶ, ಭೂಮಿ, ಜಲಪ್ರದೇಶ, ಪಾಕ್ ಜನತೆಗೆ ಬೆದರಿಕೆ ಒಡ್ಡಿದರೆ ಸೇನೆ ಸುಮ್ಮನಿರುವುದಿಲ್ಲ. ದೇಶ-ದೇಶವಾಸಿಗಳ ವಿಷಯದಲ್ಲಿ ಯಾವುದೇ ರಾಜಿ ಸಾಧ್ಯವಿಲ್ಲ. ನಾವು ನಮ್ಮ ರಾಷ್ಟ್ರಕ್ಕೆ ಋಣಿ. ಪಾಕ್ ಜನತೆ ತಮ್ಮ ಸಶಸ್ತ್ರ ಪಡೆಗಳ ಬಗ್ಗೆ ಹೊಂದಿರುವ ಹೆಮ್ಮೆ ಮತ್ತು ನಂಬಿಕೆಯನ್ನ ನಾವು ಯಾವಾಗಲೂ ಎತ್ತಿಹಿಡಿಯುತ್ತೇವೆ. ಪುಲ್ವಾಮಾದಲ್ಲಿ ನಮ್ಮ ಯುದ್ಧ ತಂತ್ರದ ಪ್ರತಿಭೆಯನ್ನು ತೋರಿಸಿಕೊಡಲು ಯತ್ನಿಸಿದ್ದೇವೆ.

ಈಗಲೂ ನಮ್ಮ ಕಾರ್ಯಾಚರಣೆ ಮತ್ತು ಕಾರ್ಯತಂತ್ರವನ್ನು ಭಿನ್ನ ರೀತಿಯಲ್ಲಿ ಪ್ರದರ್ಶಿಸಿದ್ದೇವೆ. ಇದನ್ನೆಲ್ಲಾ ಅವರು (ಭಾರತ) ಕೂಡ ಗಮನಿಸುತ್ತಾರೆ ಎಂದು ಭಾವಿಸುವೆ ಎಂದಿದ್ದಾರೆ.

ಪುಲ್ವಾಮಾ ದಾಳಿ

2019ರ ಫೆ.14 ರಂದು ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಯೋಧರಿದ್ದ ಬಸ್‌ಗೆ ಜೈಷ್ ಎ ಮೊಹಮ್ಮದ್ ಉಗ್ರ ಅದಿಲ್ ಅಹ್ಮದ್ ದರ್ ಸ್ಫೋಟಕ ತುಂಬಿಸಿದ್ದ ಇಕೋ ಕಾರನ್ನು ಗುದ್ದಿಸಿ ಬಸ್ ಸ್ಫೋಟಗೊಳ್ಳುವಂತೆ ಮಾಡಿದ್ದ. ಪರಿಣಾಮ 40 ಯೋಧರ ದೇಹ ಛಿದ್ರವಾಗಿದ್ದವು.

1971 ಮತ್ತು 2025 ಒಂದೇ ಅಲ್ಲ: ಶಶಿತರೂರ್ ವಿಶ್ಲೇಷಣೆ

ದೆಹಲಿ: '1971 ಮತ್ತು 2025 ಒಂದೇ ಅಲ್ಲ' ಎಂದು ಕಾಂಗ್ರೆಸ್ ನಾಯಕ ಶಶಿತರೂರ್ ಭಿನ್ನವಾಗಿ ವಿಶ್ಲೇಷಣೆ ಮಾಡಿದ್ದಾರೆ.

ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮದ ಅಗತ್ಯ ಕುರಿತು ಮಾತನಾಡಿದ

ಅವರು, 'ದೇಶದಲ್ಲಿ ಶಾಂತಿ ಬಹಳ ಮುಖ್ಯ. ಅಂತಹ ಪರಿಸ್ಥಿತಿ ಯಲ್ಲಿ ಕದನ ವಿರಾಮವೂ ಅಗತ್ಯವಾಗಿತ್ತು. ಕದನ ವಿರಾಮ ಘೋಷಣೆಯಿಂದ ನನಗೆ ತುಂಬಾ ಸಂತಸವಾಗಿದೆ' ಎಂದು ತರೂರ್ ಹೇಳಿದ್ದಾರೆ.

ಪ್ರಸ್ತುತ ಪರಿಸ್ಥಿತಿಯನ್ನು 1971ರ ಯುದ್ಧದ ಜತೆ ಹೋಲಿಸಲಾಗದು. ಏಕೆಂದರೆ ಎರಡೂ ಸಂದರ್ಭಗಳಲ್ಲಿನ ಪರಿಸ್ಥಿತಿ ಭಿನ್ನವಾಗಿವೆ. ಎರಡೂ ಯುದ್ಧಕ್ಕೆ ಕಾರಣಗಳು ವಿಭಿನ್ನವಾಗಿವೆ. ಭಾರತ ಎಂದೂ ದೀರ್ಘ ಯುದ್ಧ ಬಯಸಲ್ಲ, ಆದರೆ ಭಾರತ ಭಯೋತ್ಪಾದಕರಿಗೆ ಪಾಠ ಕಲಿಸಲು ಬಯಸಿತ್ತು. ಈಗ ಪಾಠ ಕಲಿಸಿದೆ ಎಂದು ನಂಬುವೆ ಶಶಿ ತರೂರ್ 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ. ತನ್ನ ಮಾತಿನಿಂದ ಹಿಂದೆ ಸರಿಯುವುದು ಪಾಕಿಸ್ತಾನದ ಸ್ವಭಾವ. ಆ ದೇಶ ನೀಡುವ ಭರವಸೆಯನ್ನು ಹೇಗೆ ನಂಬಲು ಸಾಧ್ಯ? ಎಂದು ಪ್ರಶ್ನಿಸಿದರು.

ಎರಡೂ ದೇಶಗಳ ನಡುವೆ ಉದ್ವಿಗ್ನತೆ ಹೆಚ್ಚಿ ನಿಯಂತ್ರಣ ತಪ್ಪುವ ಸ್ಥಿತಿಗೆ ತಲುಪಿದ್ದೇವೆ. 1971ರ ಸಂದರ್ಭಕ್ಕೂ, 2025ರ ಸಂದರ್ಭಕ್ಕೂ ಬಹಳ ವ್ಯತ್ಯಾಸಗಳಿವೆ. ಭಯೋತ್ಪಾದಕರಿಗೆ ಪಾಠ ಕಲಿಸಬೇಕಿತ್ತು. ಆ ಪಾಠವನ್ನು ಕಲಿಸಲಾಗಿದೆ. ಪಹಲ್ಗಾಮ್ ದಾಳಿ ನಡೆಸಿದ ಭಯೋತ್ಪಾದಕರಿಗೆ ಸರಕಾರ ಅತ್ಯಂತ ಕಠಿಣ ಶಿಕ್ಷೆ ನೀಡುತ್ತದೆ ಮತ್ತು ಅವರನ್ನು ಶೀಘ್ರದಲ್ಲೇ ಗುರುತಿಸಿ ಸೆರೆ ಹಿಡಿಯುತ್ತದೆ ಎಂಬುದು ಖಚಿತವಾಗಿದೆ ಎಂದು ಶಶಿತರೂರ್ ಹೇಳಿದ್ದಾರೆ.

ಹೊಸ ನಕ್ಷೆಗೆ ಕಾರಣ

ಭಾರತದ ಮಟ್ಟಿಗೆ 1971ರದ್ದೂ ದೊಡ್ಡ ಸಾಧನೆಯೇ ಆಗಿದೆ. ಇಂದಿರಾ ಗಾಂಧಿ ಆಗಲೇ ಹೊಸ ನಕ್ಷೆ ರಚನೆಗೆ ಕಾರಣವಾದರು. ಅಂದು ಬಾಂಗ್ಲಾದೇಶ ನೈತಿಕ ಕಾರಣದಿಂದ ಹೋರಾಟ ನಡೆಸಿತ್ತು. ಬಾಂಗ್ಲಾದೇಶವನ್ನು ವಿಮೋಚನೆಗೊಳಿಸುವುದರ ಹಿಂದೆ ಬೇರೆಯದೇ ಉದ್ದೇಶವಿತ್ತು. ಪಾಕಿಸ್ತಾನದ ಮೇಲೆ ಕೇವಲ ಶೆಲ್ಗಳನ್ನು ಹಾರಿಸುವುದಲ್ಲ. ಆ ಸಮಯದಲ್ಲಿ ಯಾವುದೇ ನಿರ್ಧಾರಗಳನ್ನು ತೆಗೆದುಕೊಂಡರೂ ಆ ಸಂದರ್ಭಗಳನ್ನು ನೋಡಿಯೇ ತೆಗೆದುಕೊಳ್ಳಲಾಗುತ್ತಿತ್ತು. ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ಶಾಂತಿ ಬಹಳ ಮುಖ್ಯ ಎಂದು ಶಶಿತರೂರ್ ಹೇಳಿದರು.

ಕಾಶ್ಮೀರ, ಪಂಜಾಬ್ ಶಾಂತ, ಅಮೃತಸರದಲ್ಲಿ ಬಿಗಿಭದ್ರತೆ

ಜಮ್ಮು-ಕಾಶ್ಮೀರದ ಶ್ರೀನಗದಲ್ಲಿ ಭಾನುವಾರ ಬೆಳಗ್ಗೆ ಜನಜೀವನ ಸಾಮಾನ್ಯ ಸ್ಥಿತಿಗೆ ಮರಳಿದೆ.

ಶ್ರೀನಗರ/ಅಮೃತಸರ: 4 ದಿನಗಳ ತೀವ್ರ ಕದನದ ನಂತರ ಜಮ್ಮು-ಕಾಶ್ಮೀರ ಶನಿವಾರ ರಾತ್ರಿ 11ರ ನಂತರ ಸಹಜ ಸ್ಥಿತಿಗೆ ಮರಳಿದೆ. ಯುದ್ಧ ವಿಮಾನಗಳು, ಕ್ಷಿಪಣಿಗಳು ಮತ್ತು ಡ್ರೋನ್‌ಗಳ ಹಾರಾಟ, ದಾಳಿ-ಸ್ಫೋಟದ ಸದ್ದಿನಿಂದ ನಡುಗಿದ್ದ ಜಮ್ಮು-ಕಾಶ್ಮೀರ ರಾಜ್ಯದ ನಿವಾಸಿಗಳು ಶನಿವಾರ ರಾತ್ರಿಯನ್ನು ಶಾಂತವಾಗಿ ಕಳೆದರು.

ಶನಿವಾರ ಸಂಜೆ 5 ಗಂಟೆಗೆ ಕದನ ವಿರಾಮ ಘೋಷಣೆಯಾದರೂ ರಾತ್ರಿ 8 ಗಂಟೆಯಲ್ಲಿ ಜಮ್ಮು-ಕಾಶ್ಮೀರದ ಮೇಲೆ ಗಡಿಯಾಚೆಯಿಂದ ಹಾರಿ ಬಂದ ಪಾಕಿಸ್ತಾನದ ಡ್ರೋನ್‌ಗಳು ದಾಳಿ ಮಾಡಿದ್ದವು. ಇದಕ್ಕೆ ಭಾರತದ ಸೇನಾಪಡೆ ತಕ್ಕ ಎದಿರೇಟು ನೀಡಿದ ನಂತರ ಪಾಕ್‌ನ ಕೀಟಲೆ ರಾತ್ರಿ 11ರ ವೇಳೆಗೆ ಕೊನೆಗೊಂಡಿತು.

ಶನಿವಾರ ರಾತ್ರಿ 11ರ ನಂತರ ಕಾಶ್ಮೀರದ ನಿಯಂತ್ರಣ ರೇಖೆಯ (ಎಲ್‌ಒಸಿ) ಯಾವುದೇ ವಲಯದಿಂದ ಕದನ ವಿರಾಮ ಉಲ್ಲಂಘನೆ ವರದಿಯಾಗಿಲ್ಲ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

ಯುದ್ಧದಿಂದ ಹೆಚ್ಚು ಹಾನಿಗೊಂಡಿದ್ದ ಗಡಿ ಜಿಲ್ಲೆಗಳಾದ ಪೂಂಚ್ ಮತ್ತು ರಾಜೌರಿ, ಅಲ್ಲದೇ ಜಮ್ಮು ಭಾಗದಲ್ಲಿಯೂ ರಾತ್ರಿ ಯಾವುದೇ ಅಹಿತ ಕರ ಘಟನೆಗಳು ನಡೆದಿಲ್ಲ. ಭಾನುವಾರ ಬೆಳಗ್ಗೆ ಜನರು ಎಂದಿನ ಚಟುವಟಿಕೆಗಳಲ್ಲಿ ತೊಡಗಿದ್ದರು. ಪಾಕ್ ಜತೆ 553 ಕಿಮೀ ಗಡಿ ಹಂಚಿಕೊಂಡಿರುವ ಪಂಜಾಬ್ ರಾಜ್ಯದ ಗಡಿ ಪ್ರದೇಶವೂ ಶನಿವಾರ ಬೆಳಗ್ಗೆ ಶಾಂತವಾಗಿತ್ತು. ಅಮೃತಸರ, ಪಠಾಣ್‌ಕೋಟ್, ಫಿರೋಜ್‌ಪುರದಂತಹ ಗಡಿ ಜಿಲ್ಲೆಗಳಲ್ಲಿ ಜನರು ದೈನಂದಿನ ಚಟುವಟಿಕೆಗಳಲ್ಲಿ ನಿರತರಾಗಿದ್ದರು.

ಈವರೆಗೆ...

- ಏ.22 ಜಮ್ಮು-ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿಗೆ ಭಾರತದ 24 ಮತ್ತು ನೇಪಾಳದ ಒಬ್ಬ ಪ್ರವಾಸಿಗರು ಹಾಗೂ ದಾಳಿ ತಡೆಯುವ ಯತ್ನದಲ್ಲಿ ಕಾಶ್ಮೀರದ ವ್ಯಕ್ತಿ ಹತ್ಯೆ
- ಏ.23 ಪ್ರಧಾನಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ. ಪಾಕ್ ಜತೆಗಿನ 1960ರ ಸಿಂಧೂ ನದಿ ಒಪ್ಪಂದ ಅಮಾನತು. ವಾಘಾ ಗಡಿ ಬಂದ್. ವ್ಯಾಪಾರ ವಹಿವಾಟು ಸ್ಥಗಿತ. ಪಾಕ್ ಪ್ರಜೆಗಳ ವೀಸಾ ರದ್ದು. ಭಾರತದಲ್ಲಿ ಅಲ್ಪಾವಧಿ ವೀಸಾದಲ್ಲಿದ್ದವರ ಗಡಿಪಾರು. ರಾಯಭಾರ ಕಚೇರಿ ಸಿಬ್ಬಂದಿ ಕಡಿತ.
- ಏ.25ರಿಂದ ಪಾಕ್ ಕಡೆಯಿಂದ ಜಮ್ಮು-ಕಾಶ್ಮೀರ ಗಡಿಯಲ್ಲಿ ಅಪ್ರಚೋದಿತವಾಗಿ ಸತತವಾಗಿ ಷೆಲ್ ಮತ್ತು ಗುಂಡಿನ ದಾಳಿ.
- ಮೇ 7ರ ನಸುಕಿನಲ್ಲಿ ಭಾರತದಿಂದ ಆಪರೇಷನ್ ಸಿಂದೂರ್ ಕಾರ್ಯಾಚರಣೆ. ಪಾಕ್‌ನ 4 ಮತ್ತು ಪಾಕ್ ಆಕ್ರಮಿಕ ಕಾಶ್ಮೀರದ 5 ಉಗ್ರ ನೆಲೆಗಳ ಧ್ವಂಸ. ನೂರಾರು ಉಗ್ರರ ಸಾವು.
- ಮೇ 8-10 ಪಾಕ್ ಕಡೆಯಿಂದ ತೀವ್ರ ಷೆಲ್, ಡ್ರೋನ್ ದಾಳಿ. ಭಾರತದ ಐವರು ಭದ್ರತಾಪಡೆ ಯೋಧರು, ಐಎಎಫ್ ಸಾರ್ಜೆಂಟ್ ಹುತಾತ್ಮ. 21 ನಾಗರಿಕರ ಸಾವು. ಅನೇಕರಿಗೆ ಗಾಯ.
- ಮೇ 8-10 ಭಾರತದ ವೈಮಾನಿಕ ದಾಳಿಗೆ ಪಾಕ್ 8 ವಾಯುನೆಲೆಗಳು ಧ್ವಂಸ. ವಿಮಾನ ನಿಲ್ದಾಣಗಳಿಗೆ ಹಾನಿ.

ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮನವಿ

ಸಮಸ್ಯೆಗಳ ಪರಿಹಾರಕ್ಕೆ 'ಶಾಂತಿಯುತ ಮಾರ್ಗ'

ಇಸ್ಲಾಮಾಬಾದ್: ಜಲ ಸಂಪನ್ಮೂಲ ಹಂಚಿಕೆ ಮತ್ತು ಕಾಶ್ಮೀರ ಸಮಸ್ಯೆ ಸೇರಿದಂತೆ ಭಾರತ-ಪಾಕಿಸ್ತಾನ ನಡುವಿನ ದೀರ್ಘ ಕಾಲದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು 'ಶಾಂತಿಯುತ ಮಾತುಕತೆ' ಮಾರ್ಗವನ್ನು

ಅಳವಡಿಸಿಕೊಳ್ಳಬೇಕು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.

ರಾಷ್ಟ್ರವನ್ನುದ್ದೇಶಿಸಿ ಶನಿವಾರ ತಡರಾತ್ರಿ, ವರ್ಚುವಲ್ ಭಾಷಣ ಮಾಡಿದ ಷರೀಫ್, ಪ್ರಾದೇಶಿಕ ಶಾಂತಿಗಾಗಿ ಭಾರತದ ಜತೆ ಮಾಡಿಕೊಂಡ ಕದನ ವಿರಾಮ ಒಪ್ಪಂದಕ್ಕೆ ಪಾಕಿಸ್ತಾನ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದೆ. ಅಂತಾರಾಷ್ಟ್ರೀಯ ರಾಜತಾಂತ್ರಿಕ ಪ್ರಯತ್ನಗಳಿಗೆ ಪಾಕಿಸ್ತಾನ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದೆ ಎಂದು ಹೇಳಿದರು.

ಭಾರತ-ಪಾಕ್ ನಡುವಿನ ಉದ್ವಿಗ್ನತೆ ಶಮನಕ್ಕೆ ಅಮೆರಿಕ, ಬ್ರಿಟನ್, ಟರ್ಕಿ, ಸೌದಿ ಅರೇಬಿಯ, ಕತಾರ್, ಯುಎಇ ಮತ್ತು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಬಹಳವಾಗಿ ಶ್ರಮಿಸಿದ್ದಾರೆ. ಅವರೆಲ್ಲರಿಗೂ ಪಾಕ್ ಪರವಾಗಿ ಕೃತಜ್ಞತೆ ಸಲ್ಲಿಸುವೆ ಎಂದರು.

ಪಾಕ್ ಸೇನಾ ಕಾರ್ಯಾಚರಣೆ ಯಶಸ್ವಿ: ಷರೀಫ್

ಪಾಕ್ ಸೇನೆಯು ಭಾರತದ ವಿರುದ್ಧ ಕೈಗೊಂಡ 'ಆಪರೇಷನ್ ಬನ್ಯನ್-ಆನ್-ಮರ್ಸೂಸ್' ಕಾರ್ಯಾಚರಣೆ ಯಶಸ್ವಿಯಾಗಿದೆ. ಭಾರತದ ಸೇನಾ ಕಾರ್ಯಾಚರಣೆಗೆ ವೃತ್ತಿಪರ ರೀತಿಯಲ್ಲಿಯೇ ತಕ್ಕ ಪ್ರತಿಕ್ರಿಯೆ ನೀಡಲಾಗಿದೆ. ದೇಶ ಮತ್ತು ನಮ್ಮ ಸಶಸ್ತ್ರ ಪಡೆಗಳು ಪಾಕಿಸ್ತಾನಿಗಳು, ನಮ್ಮದು ಧೈರ್ಯಶಾಲಿಯಾದ ಸ್ವಾವಲಂಬಿ ಮತ್ತು ವಿವೇಕಯುತ ರಾಷ್ಟ್ರ ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ಪ್ರಧಾನಿ ಷರೀಫ್ ಹೇಳಿರುವುದಾಗಿ ರೇಡಿಯೋ ಪಾಕಿಸ್ತಾನ ವರದಿ ಬಿತ್ತರಿಸಿದೆ.

ಸಮಾಚಾರ ಸಣ್ಣದಲ್ಲ

ಸಿಲಿಂಡರ್ ಸ್ಫೋಟ: ತಾಯಿ-ಮಕ್ಕಳಿಗೆ ಗಾಯ

ಚಿಕ್ಕಬಳ್ಳಾಪುರ: ಗ್ಯಾಸ್ ಸಿಲಿಂಡರ್ ಸ್ಫೋಟವಾಗಿ ತಾಯಿ ಮತ್ತು ಮೂರು ಮಕ್ಕಳು ಗಂಭೀರ ಗಾಯಗೊಂಡ ಘಟನೆ ಚಿಂತಾಮಣಿಯಲ್ಲಿ ನಡೆದಿದೆ. ತಾಯಿ ಲಕ್ಷ್ಮೀದೇವಿ (32), ಮಗ ಹರ್ಷವರ್ಧನ್ ಸ್ಥಿತಿ ಚಿಂತಾಜನಕವಾಗಿದೆ. ಹರ್ಷವರ್ದನ್ (12), ಸಂಜಯ್ (13), ಹರಿಪ್ರಿಯ (11) ಗಾಯಗೊಂಡ ಮಕ್ಕಳು. ಚಿಂತಾಮಣಿ ನಗರದ ಕರಿಯಪ್ಪಲ್ಲಿ ಬಡಾವಣೆಯಲ್ಲಿ ಘಟನೆ ನಡೆದಿದೆ. ಹೆಚ್ಚಿನ ಚಿಕಿತ್ಸೆಗೆ ತಾಯಿ ಲಕ್ಷ್ಮೀದೇವಮ್ಮ, ಮಗ ಹರ್ಷವರ್ದನ್ ವಿಕ್ಟೋರಿಯಾ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಗ್ಯಾಸ್ ಸಿಲೀಂಡರ್ ಸ್ಫೋಟದ ರಭಸಕ್ಕೆ ಗೃಹಬಳಕೆ ವಸ್ತುಗಳು ಸುಟ್ಟುಕರುಕಲಾಗಿದೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತುರ್ತು ಕರೆ: ಕರ್ತವ್ಯಕ್ಕೆ ಮರಳಿದ ಯೋಧ

ಬೀದರ್: ಭಾರತ-ಪಾಕ್‌ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆ ತಂಗಿಯ ಮದುವೆಗೆಂದು ಬಂದಿದ್ದ ಯೋಧನಿಗೆ ಕರ್ತವ್ಯಕ್ಕೆ ಹಾಜರಾಗುವಂತೆ ಸೇನೆಯಿಂದ

ತುರ್ತು ಕರೆ ಬಂದಿದ್ದು, ಕುಟುಂಬಸ್ಥರು ಹಣೆಗೆ ತಿಲಕವಿಟ್ಟು ದೇಶ ಸೇವೆಗಾಗಿ ಕಳುಹಿಸಿಕೊಟ್ಟಿದ್ದಾರೆ. ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಚಂದಾಪುರ ಗ್ರಾಮದ ಯೋಧ ಬಸವಕಿರಣ ಬಿರಾದಾರ ಅವರು ಪಂಜಾಬ್‌ನ ಅಮೃತಸರದಲ್ಲಿ ಸೇವೆ ಸಲ್ಲಿಸುತ್ತಿದ್ದು, ಏ.27ರಂದು ತಂಗಿಯ ಮದುವೆಗಾಗಿ ರಜೆ ಪಡೆದು ಊರಿಗೆ ಬಂದಿದ್ದರು. ಸದ್ಯ ಭಾರತ-ಪಾಕಿಸ್ತಾನದ ಗಡಿ ಪಂಜಾಬ್‌ನಲ್ಲಿ ಯುದ್ಧದ ಕಾರ್ಮೋಡ ಹೆಚ್ಚಾಗುತ್ತಿರುವ ಹಿನ್ನೆಲೆ ಕರ್ತವ್ಯಕ್ಕೆ ಹಾಜರಾಗುವಂತೆ ಸೇನೆಯಿಂದ ತುರ್ತು ಕರೆ ಬಂದಿದೆ. ಯೋಧನ ಹಣೆಗೆ ತಿಲಕವಿಟ್ಟು, ಆರತಿ ಬೆಳಗಿ ಕುಟುಂಬಸ್ಥರು ಶುಭ ಹಾರೈಸಿ ಸೇವೆಗೆ ಕಳುಹಿಸಿ ಕೊಟ್ಟಿದ್ದಾರೆ.

ಬೀದಿ ನಾಯಿಗಳ ದಾಳಿಗೆ ಮಹಿಳೆ ಸಾವು

ಗದಗ: ಪಟ್ಟಣದಲ್ಲಿ ಬೀದಿ ನಾಯಿಗಳ ದಾಳಿಯಿಂದ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಭಾನುವಾರ ನಡೆದಿದೆ. ಪಟ್ಟಣದ ಚೋಳಿನವರ ಓಣಿಯ ನಿವಾಸಿ

ಪ್ರೇಮಾ ಶರಣಪ್ಪ ಚೋಳಿನ (53) ಮೃತರು. ಪ್ರೇಮಾ ಚೋಳಿನ ಭಾನುವಾರ ಬೆಳಗಿನ ಜಾವ ಮನೆ ಹತ್ತಿರ ಹೂ ಕೀಳುತ್ತಿದ್ದಾಗ ಬೀದಿ ನಾಯಿಗಳು ಸಾಮೂಹಿಕವಾಗಿ ದಾಳಿ ಮಾಡಿ, ನೆಲಕ್ಕೆ ಬೀಳಿಸಿ ಕಚ್ಚಿವೆ. ಬೀದಿ ನಾಯಿಗಳ ದಾಳಿಯಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಪ್ರೇಮಾ ಚೋಳಿನ ಅವರನ್ನು ಸ್ಥಳೀಯ ಸರಕಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆತರಲಾಯಿತು. ಆದರೆ, ಚಿಕಿತ್ಸೆ ಫಲಿಸದೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಬೀದಿ ನಾಯಿಗಳ ದಾಳಿಯಿಂದ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಪ್ರೇಮಾ ಚೋಳಿನ ಚಿಕಿತ್ಸೆ ಫಲಿಸದೆ ಮೃತಪಟ್ಟ ಹಿನ್ನೆಲೆಯಲ್ಲಿ ಕುಟುಂಬಸ್ಥರ ಜತೆಗೆ ಸ್ಥಳೀಯರು ಆಸ್ಪತ್ರೆ ಮುಂದಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಮೃತದೇಹವನ್ನು ಇಟ್ಟು ರಸ್ತೆ ತಡೆದು ಪ್ರತಿಭಟನೆ ನಡೆಸಿ, ಸ್ಥಳೀಯ ಪುರಸಭೆ ವಿರುದ್ಧ ಆಕ್ರೋಶ ಹೊರ ಹಾಕಿದರು. ಈ ಕುರಿತು ಗಜೇಂದ್ರಗಡ ಪೊಲೀಸ್ ಠಾಣೆಯಲ್ಲಿ (ಯು.ಡಿ) ಪ್ರಕರಣ ದಾಖಲಾಗಿದೆ.

ಸಿಡಿಲು ಬಡಿದು ಇಬ್ಬರು ಸಾವು

ಸವದತ್ತಿ: ತಾಲೂಕಿನ ಹಿಟ್ಟಣಗಿ ಗ್ರಾಮದಲ್ಲಿ ಸಿಡಿಲು ಬಡಿದು ಇಬ್ಬರು ಮಹಿಳೆಯರು ಮೃತಪಟ್ಟಿರುವ ಘಟನೆ ಭಾನುವಾರ ನಡೆದಿದೆ. ಗಂಗವ್ವಾ ಜೀರಗವಾಡ (55) ಮತ್ತು ಕಲಾವತಿ ಜೀರಗವಾಡ (42) ಮೃತ ಮಹಿಳೆಯರು. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಗಂಗವ್ವ ಮತ್ತು ಕಲಾವತಿ ಸಂಜೆ ಮಳೆ ಆರಂಭವಾಗುತ್ತಿದ್ದಂತೆ ಜಮೀನಿನಲ್ಲಿ ಮೇವು ತೆಗೆದುಕೊಂಡು ಮನೆಗೆ ವಾಪಸ್ಸು ಬರುತ್ತಿದ್ದ ವೇಳೆ ಸಿಡಿಲು ಬಡಿದು ಸ್ಥಳದಲ್ಲೇ ಸಾವನಪ್ಪಿದ್ದಾರೆಂದು ತಿಳಿದು ಬಂದಿದೆ. ಈ ಕುರಿತು ಸವದತ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆರೆಗೆ ಬಿದ್ದು ಬಾಲಕಿ ಸಾವು

ತಿಪಟೂರು: ತಾಲೂಕಿನ ಹೊನ್ನವಳ್ಳಿ ಹೋಬಳಿಯ ಸಾರ್ಥವಳ್ಳಿ ಗ್ರಾಮದಲ್ಲಿರುವ ಕೆರೆಗೆ ಭಾನುವಾರ ಬಾಲಕಿ ಬಿದ್ದು ಸಾವನ್ನಪ್ಪಿದ್ದಾಳೆ. ಮೃತ ಬಾಲಕಿಯನ್ನು ಹೇಮಾಶ್ರೀ (11) ಎಂದು ಗುರುತಿಸಲಾಗಿದೆ. ಮೂಲತಃ ಅರಸಿಕೆರೆ ತಾಲೂಕಿನ ಸೊಪ್ಪಿನ ಹಳ್ಳಿ ಗ್ರಾಮದ ಬಾಲಕಿ ಹೇಮಶ್ರೀ ಬೇಸಿಗೆ ರಜಾ ದಿನಗಳನ್ನು ಕಳೆಯಲು ತನ್ನ ಅಜ್ಜಿಯ ಮನೆ ಸಾರ್ಥವಳ್ಳಿ ಗ್ರಾಮಕ್ಕೆ ಬಂದಿದ್ದಳು. ಸ್ಥಳಕ್ಕೆ ವೃತ್ತ ನಿರೀಕ್ಷಕ ಚಂದ್ರಶೇಖರ್.ಟಿ.ಕೆ, ಸಬ್ ಇನ್‌ಸ್ಪೆಕ್ಟರ್ ರಾಜೇಶ್ ಭೇಟಿ ನೀಡಿದ್ದರು. ಹೊನ್ನವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ ಯು.ಟಿ.ಖಾದರ್ } ಸ್ಪೀಕರ್

ಸುಹಾಸ್ ಶೆಟ್ಟಿ ಕೊಲೆ ನಡೆದಾಗ ಉದ್ವಿಗ್ನ ಪರಿಸ್ಥಿತಿ ಇತ್ತು. ಆ ಸಮಯದಲ್ಲಿ ನನ್ನ ಆದ್ಯತೆಯೆಂದರೆ ನನ್ನ ಜಿಲ್ಲೆಯಲ್ಲಿ ಕೋಮು ಸಾಮರಸ್ಯವನ್ನು ಕಾಪಾಡುವುದು. ಆದ್ದರಿಂದ, ನನಗೆ ಯಾವುದೇ ಮಾಹಿತಿ ಬಂದರೂ, ನಾನು ಅದನ್ನು ಸಾರ್ವಜನಿಕವಾಗಿ ಹಂಚಿಕೊಂಡಿದ್ದೇನೆ .ಈ ಪ್ರಕರಣದಲ್ಲಿ ಪೊಲೀಸರು ಕೆಲವರನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಕಿವಿಮಾತು

ಬೆಳವಣಿಗೆಗೆ ತಳಮಟ್ಟದಿಂದ ಕೆಲಸ ಮಾಡಿ

ರಾಮನಗರ: ಕಾಂಗ್ರೆಸ್ ಸರಕಾರಕ್ಕೆ ಎರಡು ವರ್ಷ ತುಂಬಿದ ಹಿನ್ನೆಲೆಯಲ್ಲಿ ಮೇ.20 ರಂದು ವಿಜಯನಗರದಲ್ಲಿ ನಡೆಯುವ ಸಮಾವೇಶದಲ್ಲಿ ತಾಂಡಾ, ಹಟ್ಟಿ ಸೇರಿದಂತೆ ಕಂದಾಯ ಭೂಮಿಯಲ್ಲಿ ವಾಸವಿರುವ 1 ಲಕ್ಷ ಜನರಿಗೆ ಪಟ್ಟಾ ಖಾತೆ ನೀಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ರಾಮನಗರದಲ್ಲಿ ಭಾನುವಾರ ನಡೆದ ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭ 'ಯುವ ಪರ್ವ' ಸಮಾವೇಶದಲ್ಲಿ ಮಾತನಾಡಿ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ನಂತರ ಕೊಟ್ಟ ಮಾತನ್ನು ಉಳಿಸಿಕೊಂಡಿದೆ. ಯುವಕರಿಗೆ ಯುವನಿಧಿ ಮೂಲಕ ನೆರವಿಗೆ ನಿಂತಿದೆ. ಮಹಿಳೆಯರ ಪರವಾಗಿ ಐತಿಹಾಸಿಕ ಯೋಜನೆಗಳನ್ನು ತಂದು ಇತಿಹಾಸ ನಿರ್ಮಾಣ ಮಾಡಿರುವುದು ಕಾಂಗ್ರೆಸ್ ಪಕ್ಷ. ಉಚಿತ ಬಸ್, ಗೃಹಲಕ್ಷ್ಮಿ ಸೇರಿದಂತೆ ಅನೇಕ ಯೋಜನೆಗಳನ್ನು ದಳ, ಬಿಜೆಪಿಯವರು ನೀಡಿದ್ದಾರೆಯೇ ಎಂದು ಪ್ರಶ್ನಿದರು.

ಕೊಟ್ಟ ಜವಾಬ್ದಾರಿಯನ್ನು ನಿಭಾಯಿಸಿ: ಯುವ ಕಾಂಗ್ರೆಸ್ ಪಕ್ಷ ,ನಾಯಕತ್ವ ಬೆಳೆಸುವ ಪ್ರಯೋಗ ಶಾಲೆ. ನೀವು ನಾಯಕರಾಗಿ ಬೆಳೆಯಬೇಕು ಎಂದರೆ ತಳಮಟ್ಟದಿಂದ ಕೆಲಸ ಮಾಡಬೇಕು. ಕೊಟ್ಟ ಜವಾಬ್ದಾರಿಯನ್ನು ನಿಭಾಯಿಸಬೇಕು. ಯುವಕರಿಗೆ ನಿಮ್ಮ ಶಕ್ತಿಯ ಅರಿವಿಲ್ಲ. ಯಾರೋ ಮಾಡುವ ಟೀಕೆಗಳಿಗೆ ಹೆದರಬಾರದು. ನಿಮ್ಮ ಏರಿಯಾ, ಬೂತ್ ಮಟ್ಟದಲ್ಲಿ ನೀವು ಪ್ರಬಲವಾಗಿ ಬೆಳೆಯಬೇಕು. ನೀವು ಮಾಡುವ ಕೆಲಸಗಳು ಶಾಶ್ವತವಾಗಿ ಉಳಿಯಬೇಕು. ಜನರ ಮನಸ್ಸನ್ನು ಗೆಲ್ಲಬೇಕು. ನಿಮ್ಮನ್ನು ನಾಯಕರನ್ನಾಗಿ ರೂಪಿಸಬೇಕು ಎನ್ನುವುದು ನನ್ನ ಗುರಿ, ಹಿಂಬಾಲಕರನ್ನಾಗಿ ಮಾಡುವುದಲ್ಲ. ನೀವು ನನ್ನ ಸಹಪಾಠಿಗಳು ಎಂದರು.

ತಳಮಟ್ಟದಿಂದ ಬೆಳೆದು ನಾಯಕರಾಗಿ: ನಾನು ಶಾಸಕ, ಮಂತ್ರಿ ಆಗಿದ್ದಾಗಲೂ ಸಹ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷನಾಗಿದ್ದೆ. ಆನಂತರ ರಾಜಿನಾಮೆ ನೀಡಿ ಕೆ.ಆರ್.ಪುರಂ ನಾರಾಯಣಸ್ವಾಮಿ ಅವರು, ಆನೇಕಲ್ ಶಿವಣ್ಣ ಅವರಿಗೆ ಅಧ್ಯಕ್ಷ ಸ್ಥಾನ ವಹಿಸಿಕೊಂಡರು. ದೇಶದ ಮೊದಲ ಪ್ರಧಾನಿಗಳಾದ ನೆಹರು ಅವರು ಅಲಹಾಬಾದ್ ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದರು. ಕೆಂಗಲ್ ಹನುಮಂತಯ್ಯ ಅವರು ಬೆಂಗಳೂರು ಮುನಿಸಿಪಾಲಿಟಿಯ ಸದಸ್ಯರು, ಅಧ್ಯಕ್ಷರಾಗಿದ್ದರು. ರಾಜಗೋಪಾಲಚಾರಿ, ಬಿ.ಡಿ.ಜತ್ತಿ ಹೀಗೆ ಅನೇಕರು ತಳಮಟ್ಟದಿಂದ ಬೆಳೆದು ನಾಯಕರಾಗಿ ಹೊರಹೊಮ್ಮಿದವರು ಎಂದು ಹೇಳಿದರು.

ಗ್ಯಾರಂಟಿ ಯೋಜನೆಗಳ ಮೂಲಕ ದಾಖಲೆ: ಒಮ್ಮೆ ರಾಜೀವ್ ಗಾಂಧಿ ಅವರ ಬಳಿ ಸ್ಥಳೀಯ ಸಂಸ್ಥೆ ವ್ಯವಸ್ಥೆ ನಮ್ಮಲ್ಲಿ ಇದೆಯಲ್ಲಾ ಎಂದು ಕೇಳಿದ್ದೆ. ಆಗ ಅವರು ಇಡೀ ದೇಶದಲ್ಲಿ ಈ ವ್ಯವಸ್ಥೆ ಬರಬೇಕು.

ರಾಮನಗರದಲ್ಲಿ ಭಾನುವಾರ ನಡೆದ ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭ 'ಯುವ ಪರ್ವ' ಸಮಾವೇಶ ನಡೆಯಿತು.

ರಾಜ್ಯಾದ್ಯಂತ 100 ಕಾಂಗ್ರೆಸ್ ಕಚೇರಿಗಳ ನಿರ್ಮಾಣ

ನೂತನ ಕಾಂಗ್ರೆಸ್ ಕಚೇರಿ ನಿರ್ಮಾಣದ ಬಗ್ಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ ಅವರು, ಈ ಹಿಂದೆ ಇದ್ದ ಜಾಗದ ವಿರುದ್ಧ ಪ್ರಕರಣ ದಾಖಲಿಸಿದ ಪರಿಣಾಮ ಅದನ್ನು ಕೈ ಬಿಡಲಾಯಿತು. ಈಗ ಇರುವ ಕಚೇರಿ ಪಕ್ಕದ ಜಾಗವನ್ನು ನಾನೇ ಖರೀದಿ ಮಾಡಿ ಪಕ್ಷಕ್ಕೆ ನೀಡಿದ್ದೇನೆ. ಜನರ ಕಚೇರಿಯಾಗಬೇಕು ಎಂದು ಎಲ್ಲರಿಂದ ದೇಣಿಗೆ ಸಂಗ್ರಹ ಮಾಡಲಾಗುತ್ತಿದೆ. ರಾಜ್ಯಾದ್ಯಂತ 100 ಕಾಂಗ್ರೆಸ್ ಕಚೇರಿಗಳನ್ನು ಕಟ್ಟಲಾಗುತ್ತಿದೆ. ಬೆಂಗಳೂರಿನಲ್ಲಿ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿಯೇ ಇಲ್ಲಿಯೂ ನೆರವೇರಿಸಲಾಗುತ್ತದೆ. ಚನ್ನಪಟ್ಟಣ ತಾಲೂಕಿನ ಅಧ್ಯಕ್ಷರು ಎಲ್ಲರೂ ಸೇರಿ 50 ಲಕ್ಷ ದೇಣಿಗೆ ಸಂಗ್ರಹ ಮಾಡಲಾಗುವುದು ಎಂದು ಹೇಳಿದ್ದಾರೆ. ಕನಕಪುರದಲ್ಲಿ ಇರುವ ಜಾಗವನ್ನು ಹರಾಜಿನಲ್ಲಿ ಮಾರಾಟ ಮಾಡಿ ಆ ಹಣವನ್ನು ಸಹ ರಾಮನಗರ ಕಚೇರಿಗೆ ನೀಡಲಾಗುವುದು. ಹೆಸರು ಶಾಶ್ವತವಾಗಿ ಉಳಿಯಬೇಕು ಎಂದು ದಾನಿಗಳ ಹೆಸರಿರುವ ಫಲಕಗಳನ್ನು ಅಳವಡಿಸಲಾಗುವುದು. ಒಂದು ವರ್ಷದೊಳಗೆ ಜಿಲ್ಲಾ ಕಾಂಗ್ರೆಸ್ ಕಟ್ಟಡ ನಿರ್ಮಾಣವಾಗುವಂತೆ ನೋಡಿಕೊಳ್ಳಲಾಗುವುದು. ಕಟ್ಟಡಕ್ಕೆ ದೇಣಿಗೆ ನೀಡುವವರು ಚೆಕ್ ಮುಖಾಂತರ ನೀಡಬೇಕು ಎಂದು ಮನವಿ. 5 ರಿಂದ 2 ಲಕ್ಷದ ಒಳಗೆ ಹಣ ನೀಡಿದರು ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಪಂಚಾಯತಿಯಿಂದ ಪಾರ್ಲಿಮೆಂಟ್ ವರೆಗೆ ನಾಯಕರ ಉಗಮವಾಗಬೇಕು ಎಂದು ಹೇಳಿದರು. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ. 50 ಮತ್ತು ಹಿಂದುಳಿದ ವರ್ಗಕ್ಕೆ ಶೇ.50 ರಷ್ಟು ಮೀಸಲಾತಿ ನೀಡಲಾಗಿದೆ. ಈ ದೇಶದ ಜನರಿಗೆ ಶಾಲೆ, ಆಸ್ಪತ್ರೆ, ಭೂಮಿ ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ನೀಡಿದವರು ನಾವು. ಗ್ಯಾರಂಟಿ ಯೋಜನೆಗಳ ಮೂಲಕ ದಾಖಲೆ ಬರೆದಿದ್ದೇವೆ. ಹೊರಗಡೆಯಿಂದ ಬಂದವರಂತೆ ಪ್ರಚಾರಕ್ಕೆ ಏನೋ ಒಂದು ಹೇಳುವವರಲ್ಲ ನಾವು ಎಂದರು.

ನಮ್ಮ ಹೆಸರನ್ನು ಬಿಟ್ಟು ಕೊಡುವುದಿಲ್ಲ: ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಕರೆಯಲು ಮುಂದಾಗಿದ್ದೇವೆ. ಏಕೆಂದರೆ ಇಲ್ಲಿನ ಭೂಮಿ ಮೌಲ್ಯ ಹೆಚ್ಚಾಗಲಿದೆ, ಜನರ ಬದುಕು ಬದಲಾ ಗಲಿದೆ. ಇದು ನಮ್ಮ ಜಿಲ್ಲೆ, ನಮ್ಮ ಸ್ವಾಭಿಮಾನ. ಬೆಂಗಳೂರಿಗೆ ನಾವು ಹೋಗುವುದು ತಪ್ಪಿ ನಮ್ಮನ್ನೇ ಬಳಸಿಕೊಳ್ಳುವ ಕಾಲ ಮುಂದಕ್ಕೆ ಬರಬೇಕು. ಸುರೇಶ್ ಅವರು ಸ್ಪರ್ಧಿಸುವ ಕ್ಷೇತ್ರವನ್ನು ಬೆಂಗ ಳೂರು ಗ್ರಾಮಾಂತರ ಕ್ಷೇತ್ರ ಎಂದು ಏಕೆ ಕರೆಯ ಲಾಗುತ್ತದೆ. ನಮ್ಮ ಹೆಸರನ್ನು ಬಿಟ್ಟು ಕೊಡುವುದಿಲ್ಲ ಎಂದು ಹೇಳಿದರು.

ರೈತರಿಗೆ ನಾಲ್ಕು ಪಟ್ಟು ಪರಿಹಾರ ದೊರೆಯುವಂತೆ ಮಾಡುತ್ತೇನೆ: ಗ್ರೇಟರ್ ಬೆಂಗಳೂರು ಎಂದು ಮಾಡಲು ಹೊರಟಿದ್ದೇವೆ. ಇದನ್ನು ಕೈ ಬಿಡಿ ಎಂದು ದೇವೆಗೌಡರು, ಸಂಸದ ಮಂಜುನಾಥ್ ಅವರು ಪತ್ರ ಬರೆದಿದ್ದರು. ಈ ಹಿಂದೆ ಇದಕ್ಕೆ ಸಹಿ ಹಾಕಿದವರು ಕುಮಾರಸ್ವಾಮಿ. ಆದರೆ ಅವರಿಗೆ ಇದನ್ನು ಮುಂದುವರಿಸಲು ಆಗುವುದಿಲ್ಲ. ಈಗ ನಾನೇಕೆ ಅದನ್ನು ಡಿನೋಟಿಫಿಕೇಷನ್ ಮಾಡಲಿ. ಕೇಸನ್ನು ಹಾಕಿಸಿಕೊಳ್ಳಲು ನಾನು ತಯಾರಿಲ್ಲ. ರೈತರಿಗೆ ನಾಲ್ಕು ಪಟ್ಟು ಪರಿಹಾರ ದೊರೆಯುವಂತೆ ಮಾಡುತ್ತೇನೆ. ಯೋಗೇಶ್ವರ್, ಇಕ್ಬಾಲ್ ಅವರೆಲ್ಲಾ ಸೇರಿ ನಿಮ್ಮ ಬದುಕನ್ನು ಭದ್ರ ಮಾಡುತ್ತೇವೆ ಎಂದರು.

ಸರಕಾರಕ್ಕೆ ಎರಡು ವರ್ಷ ಸಂಭ್ರಮದ ಬಗ್ಗೆ ಕೇಳಿದಾಗ, ಮೇ.20 ಕ್ಕೆ ಸಂಭ್ರಮಾಚರಣೆ ಮಾಡುವ ಆಲೋಚನೆಯಿದೆ. ಆದರೆ ಯುದ್ಧದ ಭೀತಿ ಇರುವ ಕಾರಣಕ್ಕೆ ಆಲೋಚನೆ ಮಾಡಲಾಗುತ್ತಿದೆ ಎಂದರು.

ರಾಮನಗರ ಯುವ ಕಾಂಗ್ರೆಸ್ ಅಧ್ಯಕ್ಷನಾಗಿ ಅಧಿಕಾರವಹಿಸಿಕೊಂಡಿರುವ ಚಂದ್ರ ಸಾಗರ್ ಮತ್ತು ತಂಡಕ್ಕೆ ಅಭಿನಂದನೆಗಳನ್ನು ತಿಳಿಸಿದರು.

ರಾಜಕೀಯದಲ್ಲಿ ಯಾವುದೂ ಶಾಶ್ವತವಲ್ಲ

ಅಧಿಕಾರ ಎಂದಿಗೂ ಶಾಶ್ವತವಲ್ಲ. ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ನಂತರ ಪ್ರಧಾನಿಯಾದರು ಅವರಿಂದ ತೆರವಾದ ಸ್ಥಾನಕ್ಕೆ ಚಿತ್ರನಟ ಅಂಬರೀಶ್ ಅವರನ್ನು ನಿಲ್ಲಿಸಿದ್ದರು. ನಾವು ಅಂದು ಹೋರಾಟ ಮಾಡಿ ಸಿ.ಎಂ.ಲಿಂಗಪ್ಪ ಅವರನ್ನು ನಿಲ್ಲಿಸಿ ಗೆಲ್ಲಿಸಿದೆವು. ಬಿಜೆಪಿ, ದಳ, ಕಾಂಗ್ರೆಸ್ ಹೀಗೆ ರಾಜಕೀಯದಲ್ಲಿ ಯಾವುದು ಶಾಶ್ವತವಲ್ಲ. 8 ಬಾರಿ ಶಾಸಕನಾಗಿರುವ ನಾನು, ದೇಶದ ಪ್ರಧಾನಿಗಳಾಗಿ ಮೂರು ಬಾರಿ ಆಯ್ಕೆಯಾಗಿದ್ದಾರೆ ಎನ್ನುವುದೆಲ್ಲಾ ರಾಜಕೀಯದಲ್ಲಿ ಕ್ಷಣಿಕ. ರಾಮನಗರ, ಮೈಸೂರು, ಮಂಡ್ಯದಲ್ಲಿ ನಾವು ಗೆದ್ದಿಲ್ಲವೇ. ಮೈಸೂರು ಭಾಗದಲ್ಲಿ 40 ಕ್ಕೂ ಹೆಚ್ಚು ಸ್ಥಾನ ಗೆದ್ದಿದ್ದೇವೆ. ಸೋತಿರುವ ಕ್ಷೇತ್ರದಲ್ಲಿ ಮುಂದೆ ಗೆಲ್ಲಲು ಪ್ರಯೋಗ ಪ್ರಾರಂಭ ಮಾಡಿದ್ದೇವೆ ಎಂದು ಡಿ.ಕೆ ಶಿವಕುಮಾರ ಹೇಳಿದರು.

ಯುವ ಹಾಗೂ ವಿದ್ಯಾರ್ಥಿ ಕಾಂಗ್ರೆಸ್ ಮೂಲಕ ಬೆಳೆದವರು ಪಕ್ಷವನ್ನು ಎಂದಿಗೂ ಬಿಟ್ಟು ಹೋಗುವುದಿಲ್ಲ. ಬೂತ್, ಪಂಚಾಯತಿ, ವಾರ್ಡ್ ಮಟ್ಟದಲ್ಲಿ ನಿಮಗೆ ನೀಡಿದ ಜವಾಬ್ದಾರಿ ನಿಭಾಯಿಸಿದಾಗ, ಪಕ್ಷಕ್ಕೆ ಹೆಚ್ಚಿನ ಮತಗಳನ್ನು ತಂದುಕೊಟ್ಟಾಗ ಮಾತ್ರ ನೀವು ನಾಯಕರಾಗಿ ಹೊರಹೊಮ್ಮಬಹುದು. ಆಗ ಶಾಸಕರು ನಿಮ್ಮನ್ನು ಹುಡುಕಿಕೊಂಡು ಬಂದು ಅಧಿಕಾರ ನೀಡುವ ಕೆಲಸ ಮಾಡುತ್ತಾರೆ.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಪಾಕಿಸ್ತಾನ ಕಪಟ ನಾಟಕವಾಡಿದೆ: ಸಿದ್ದಲಿಂಗ ಸ್ವಾಮೀಜಿ

ಸೈನಿಕರ ಶ್ರೇಯಸ್ಸಿಗೆ ವಿಶೇಷ ಗಣಹೋಮ

ತುಮಕೂರು: ಯುದ್ಧ ವಿರಾಮ ಎಂದು ಘೋಷಣೆ ಮಾಡಿದ ನಂತರವೂ ಪಾಕಿಸ್ತಾನ ಕಪಟ ನಾಟಕವಾಡಿದೆ ಎಂದು ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತುಮಕೂರಿನ ಸೋಮೇಶ್ವರ ದೇಗುಲದಲ್ಲಿ ಶನಿವಾರ ಸೈನಿಕರ ಪರವಾಗಿ ನಡೆದ ಗಣ ಹೋಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯುದ್ಧ ವಿರಾಮದ ನಂತರ ಪಾಕಿಸ್ತಾನ ಅನೇಕ ಕ್ಷಿಪಣಿ ಹಾಗೂ ಡ್ರೋನ್‌ಗಳನ್ನು ಹಾರಿಸಿ ಭಾರತದ ಭಾಗವನ್ನು ಧ್ವಂಸ ಮಾಡಲು ಪ್ರಯತ್ನಿಸಿದೆ. ಇದಕ್ಕೆ ಪ್ರತ್ಯುತ್ತರವಾಗಿ ಭಾರತೀಯ ಸೇನೆ ಅವೆಲ್ಲವನ್ನೂ ನಾಶ ಮಾಡಿದೆ. ಪಾಕಿಸ್ತಾನ ಒಂದು ರೀತಿ ಹೆವನ್ ಫಾರ್ ಟೆರರಿಸ್ಟ್ ಎಂದು ಗುರುತಿಸಲಾಗಿದೆ. ಮುಂದೊಂದು ದಿನ ಅದು ಪಾಕಿಸ್ತಾನವನ್ನೇ ತಿಂದು ಹಾಕಲಿದೆ ಎಂದರು.

ಆಪರೇಷನ್ ಸಿಂಧೂರ ಬೆಂಬಲಿಸಿ ಪೂಜೆ: ಜಮ್ಮು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಹಿಂದೂಗಳ ಹತ್ಯೆಗೆ ಪ್ರತ್ಯುತ್ತರವಾಗಿ ಭಾರತ ಸೇನೆ ಪಾಕಿಸ್ತಾನದ ಮೇಲೆ ಆರಂಭಿಸಿರುವ 'ಆಪರೇಷನ್ ಸಿಂದೂರ'ಕ್ಕೆ ಜಯ ಸಿಗಲೆಂದು ತುಮಕೂರು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಸಿದ್ದಲಿಂಗ ಸ್ವಾಮೀಜಿ ನೇತೃತ್ವದಲ್ಲಿ ಶ್ರೀ ಸೋಮೇಶ್ವರ ದೇಗುಲದಲ್ಲಿ ವಿಶೇಷ ಗಣಹೋಮ ನಡೆಸಲಾಯಿತು.

ಸೋಮೇಶ್ವರ ದೇಗುಲದಲ್ಲಿ ಭಾರತೀಯ ಸೈನಿಕರ ಶ್ರೇಯಸ್ಸಿಗೆ ವಿಶೇಷ ಗಣ ಹೋಮ ನಡೆಯಿತು.

ಪಾಕಿಸ್ತಾನದ ಬಾಲ ಕತ್ತರಿಸುವುದು ನಿಶ್ಚಿತ

ವಿಜಯಪುರ: ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ 26 ಜನ ಭಾರತೀಯರನ್ನು ಹತ್ಯೆ ಮಾಡಿದಾಗಲೇ ಪಾಕಿಸ್ತಾನವು ತನ್ನ ಶವ ಪೆಟ್ಟಿಗೆಗೆ ಮೊದಲ ಮೊಳೆ ಹೊಡೆದುಕೊಂಡಿದೆ. ಹೀಗೆ ಮುಂದುವರಿದರೆ ಪಾಕಿಸ್ತಾನ ಪ್ರಪಂಚದ ಭೂಪಟದಿಂದ ಮಾಯವಾಗಲಿದೆ' ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಾಕಿಸ್ತಾನ ತನ್ನ ಬಾಲ ಮುದುಡಿಸಿಕೊಂಡು ಸುಮ್ಮನಿದ್ದರೇ ಸರಿ ಇಲ್ಲದಿದ್ದರೇ, ದೇಶದ ಸೈನಿಕರು ಪಾಕಿಸ್ತಾನದ ಬಾಲ ಕತ್ತರಿಸುವುದು ನಿಶ್ಚಿತ' ಎಂದರು. ಭಾರತೀಯ ಸೈನಿಕರು ಆಪರೇಷನ್ ಸಿಂದೂರ' ಮೂಲಕ ದೇಶದ ಶಕ್ತಿ, ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿದ್ದಾರೆ ಎಂದರು.

ಅಪಘಾತ: ತಂದೆ-ಮಗ ಸಾವು

ಪುತ್ತೂರು: ಕೆಎಸ್‌ಆರ್‌ಟಿಸಿ ಬಸ್ ಮತ್ತು ಬೈಕ್ ನಡುವೆ ಭಾನುವಾರ ನಡೆದ ಅಪಘಾತದಲ್ಲಿ ಸವಾರ ತಂದೆ, ಸಹಸವಾರ ಪುತ್ರ ಮೃತಪಟ್ಟಿದ್ದಾರೆ. ಪುತ್ತೂರು ನಗರದ ಹೊರವಲಯದ ಕಬಕ ಸಮೀಪದ ಕೂವೆತ್ತಿಲ ಎಂಬಲ್ಲಿ ಮಾಣಿ-ಮೈಸೂರು ರಾಷ್ಟ್ರೀಯ ಹೆದ್ದಾರಿಯ ತಿರುವಿನಲ್ಲಿ ಅವಘಡ ನಡೆದಿದೆ.

ಬಂಟ್ವಾಳ ತಾಲೂಕಿನ ನರಿಕೊಂಬು ಸಮೀಪದ ನಾಯಿಲ ಬೋರುಗುಡ್ಡೆ ನಿವಾಸಿ, ನರಿಕೊಂಬು ಗ್ರಾಪಂ ಸದಸ್ಯ, ಸಮಾಜ ಸೇವಾ ಬ್ಯಾಂಕ್ ನಿರ್ದೇಶಕ ಅರುಣ್ ಕುಲಾಲ್ (45), ಅವರ ಪುತ್ರ, ಪ್ರಥಮ ಪಿಯುಸಿಗೆ ದಾಖಲಾಗಿದ್ದ ಧ್ಯಾನ್ (15) ಮೃತಪಟ್ಟವರು.

ಸುಳ್ಯದಲ್ಲಿ ನಡೆಯಲಿದ್ದ ಸಂಬಂಧಿಕರೊಬ್ಬರ ವಿವಾಹ ಸಮಾರಂಭಕ್ಕೆ ತೆರಳುವಾಗ ಅವಘಡ ನಡೆದಿದೆ. ಅರುಣ್ ಕುಲಾಲ್ ಅವರು ಮಾಣಿ ಕಡೆಯಿಂದ ಸುಳ್ಯ ಕಡೆಗೆ ಚಲಾಯಿಸುತ್ತಿದ್ದ ಬೈಕ್ಗೆ ಪುತ್ತೂರಿನಿಂದ ಮಂಗಳೂರು ಕಡೆಗೆ ತೆರಳುತ್ತಿದ್ದ ಕೆಎಸ್‌ಆರ್ ಟಿಸಿ ಬಸ್ ಡಿಕ್ಕಿಯಾಗಿದೆ. ಅರುಣ್ ಅವರು ಸ್ಥಳದಲ್ಲೇ ಮೃತಪಟ್ಟಿದ್ದು, ಧ್ಯಾನ್ ಮಂಗಳೂರಿನ ಆಸ್ಪತ್ರೆಯೊಂದರಲ್ಲಿ ಮೃತಪಟ್ಟರು. ಪುತ್ತೂರು ಸಂಚಾರ ಠಾಣೆಯಲ್ಲಿ ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಾಗಿದೆ. ಸಂಸದ ಕ್ಯಾ.ಬ್ರಿಜೇಶ್ ಚೌಟ, ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಅವರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಭಾರತದ ಠೇವಣಿ, ಪಾಕ್‌ಗೆ ಸಾಲ

← ಮೊದಲಪುಟದಿಂದ

ಆದರೂ ಚೀನಾ, ಅಮೆರಿಕದ ಬೆಂಬಲವಿರುವುದರಿಂದ ಈ ಪ್ರಮಾಣದಲ್ಲಿ ಸಾಲ ಸಿಗುತ್ತಿದೆ ಎನ್ನಲಾ ಗಿದೆ. ಆದರೆ ಈಗಲೂ ಅತಿಹೆಚ್ಚು ಸಾಲ ಪಡೆದ ದೇಶದ ಪಟ್ಟಿನಲ್ಲಿ ಮೊದಲ ಸ್ಥಾನದಲ್ಲಿ ಅರ್ಜೆಂಟಿನಾ ಇದ್ದರೆ, ಪಾಕಿಸ್ತಾನ ಐದನೇ ಸ್ಥಾನದಲ್ಲಿದೆ. ಆದರೆ ಭಾರತ ಮಾತ್ರ ಐಎಂಎಫ್‌ನಿಂದ ಪಡೆದ ಸಾಲವನ್ನು ಮರು ಪಾವತಿಸಿ, ಹೊಸ ಸಾಲವನ್ನು ಪಡೆಯದೇ, ರಿಸರ್ವ್ ಫಂಡ್ ಇಟ್ಟಿದೆ ಎನ್ನುವುದು ಗಮನಾರ್ಹ ಸಂಗತಿ.

ಭಾರತದ ಸಾಲವಿಲ್ಲ, ಠೇವಣಿ ರೂಪದ ಎಸ್‌ಡಿಆರ್ ಇದೆ: ವಿಶ್ವದ ಹಲವು ರಾಷ್ಟ್ರಗಳು ಐಎಂಎಫ್‌ನಿಂದ ಸಾಲ ಪಡೆದಿದ್ದರೂ, ಭಾರತ ಮಾತ್ರ ಯಾವುದೇ ಸಾಲವನ್ನು ಪಡೆದಿಲ್ಲ. 1993ರಲ್ಲಿ ಐಎಂಎಫ್‌ನಿಂದ ಪಡೆದ ಸಾಲವೇ ಕೊನೆಯ ಸಾಲವಾಗಿದ್ದು, ಇದನ್ನು 2000ರ ಹೊತ್ತಿಗೆ ಪಾವತಿಸಿದೆ. ಆದರೆ ಐಎಂಎಫ್‌ನಲ್ಲಿ ಭಾರತದ 13,114 ಮಿಲಿಯನ್‌ನಷ್ಟು ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ಹೊಂದಿದೆ. ಎಸ್‌ಡಿಆರ್ ಫಂಡ್ ಅನ್ನು 1969ರಲ್ಲಿ ಐಎಂಎಫ್ ಸ್ಥಾಪಿಸಿದ್ದು, ತುರ್ತು ಪರಿಸ್ಥಿತಿಯ ಸಮಯದಲ್ಲಿ ರಿಸರ್ವ್ ಫಂಡ್‌ನ ರೀತಿಯಲ್ಲಿ ಎಸ್‌ಡಿಆರ್ ಅನ್ನು ಚಲಾಯಿಸಬಹುದಾಗಿದೆ. ಇದೀಗ ಭಾರತ ಸುಮಾರು 13 ಸಾವಿರ ಮಿಲಿಯನ್ ಎಸ್‌ಡಿಆರ್ ಅನ್ನು ಐಎಂಎಫ್‌ನಲ್ಲಿ ಠೇವಣಿಯ ರೂಪದಲ್ಲಿರಿಸಿದೆ.

ಆಂಧ್ರ ಸರಕಾರದಿಂದ ಮುರಳಿ ಕುಟುಂಬಕ್ಕೆ 50 ಲಕ್ಷ ಹಣ, 5 ಎಕರೆ ಜಮೀನು

ವೀರ ಯೋಧನ ಅಂತಿಮ ದರ್ಶನ ಪಡೆದ ಡಿಸಿಎಂ ಪವನ್

ಬಾಗೇಪಲ್ಲಿ: ಜಮ್ಮು ಮತ್ತು ಕಾಶ್ಮೀರದ ಗಡಿಯಲ್ಲಿ ನಡೆದ ಶೆಲ್ ದಾಳಿಯಿಂದ ಭಾರತದ ಯುವ ಸೈನಿಕನೊಬ್ಬ ಪ್ರಾಣ ತ್ಯಾಗ ಮಾಡಿದ್ದಾರೆ. ಪಾಕಿಸ್ತಾನ ಗಡಿಯಲ್ಲಿ ನಡೆದ ದಾಳಿಯಲ್ಲಿ ಸತ್ಯ ಸಾಯಿ ಜಿಲ್ಲೆಯ ಗೋರಂಟ್ಲ ವ್ಯಾಪ್ತಿಗೆ ಸೇರಿದ ಕಲ್ಲಿತಾಂಡದ ಶ್ರೀ ರಾಮುಲು ನಾಯಕ್ ಹಾಗೂ ಜ್ಯೋತಿಬಾಯಿರವರ ಏಕೈಕ ಪುತ್ರ ಯೋಧ ಮುರಳಿ ನಾಯಕ್ ಹುತಾತ್ಮರಾಗಿದ್ದಾರೆ.

ಹೀಗಾಗಿ ವೀರ ಮರಣ ಹೊಂದಿದ ಸೈನಿಕ ಮುರಳಿ ನಾಯಕ್ ಅಂತಿಮ ದರ್ಶನಕ್ಕೆ ಸಾವಿರಾರು ಸಂಖ್ಯೆಯಲ್ಲಿ ಮಂದಿ ಆಗಮಿಸಿದರು. ಅಲ್ಲದೇ ಆಂಧ್ರಪ್ರದೇಶ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಹಾಗೂ ಆಂಧ್ರಪ್ರದೇಶದ ಐಟಿ ಸಚಿವ ನಾರಾ ಲೋಕೇಶ್ ಗೌರವ ಸಲ್ಲಿಸಿದರು.

ಆಂಧ್ರಪ್ರದೇಶ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಹಾಗೂ ಆಂಧ್ರಪ್ರದೇಶದ ಸಚಿವ ನಾರಾ ಲೋಕೇಶ್ ಅವರು ಹುತಾತ್ಮ ಮುರಳಿ ನಾಯಕ್ ಅಂತಿಮ ದರ್ಶನ ಪಡೆದು ಗೌರವ ಸಲ್ಲಿಸಿದರು.

ಮುರಳಿ ನಾಯಕ್‌ರ ಅಂತಿಮ ಯಾತ್ರೆಯಲ್ಲಿ ಸಾವಿರಾರು ಜನರು ಭಾಗವಹಿಸಿ, ಯೋಧನಿಗೆ ಗೌರವ ಸಲ್ಲಿಸಿದರು. ಕಲ್ಲಿಕೊಂಡ ಗ್ರಾಮದ ಜನರು ಯುವಕನ ಬಲಿದಾನವನ್ನು ಕಣ್ಣೀರಿನಿಂದ ಸ್ಮರಿಸಿದರು.

ಹುತಾತ್ಮ ಮುರಳಿ ನಾಯಕ್ ಅವರು, ಹುತಾತ್ಮ ಯೋಧನ ಕುಟುಂಬಕ್ಕೆ 50 ಲಕ್ಷ ಹಣ, 5 ಎಕರೆ ಜಮೀನು ನೀಡಲು ನಮ್ಮ ಸರಕಾರ ನಿರ್ಧರಿಸಿದೆ. ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಮಾಡಲಾಗಿದೆ. ನಾನು ವೈಯಕ್ತಿಕವಾಗಿ 25 ಲಕ್ಷ ನೆರವು ನೀಡುತ್ತಿದ್ದೇನೆ ಎಂದಿದ್ದಾರೆ. ಮುರಳಿ ನಾಯಕ್ ಅವರ ಬಲಿದಾನ ದೇಶದ ರಕ್ಷಣೆಗೆ ಆಗಿದೆ. ಈ ಯುವಕನ ತ್ಯಾಗವನ್ನು ಇಡೀ ದೇಶ ಸ್ಮರಿಸುತ್ತದೆ .

ಪವನ್ ಕಲ್ಯಾಣ್, ಆಂಧ್ರ ಡಿಸಿಎಂ

ಶ್ರೀರಾಮಚಂದ್ರಾಪುರ ಮಠದಲ್ಲಿ ನಡೆದ ಶ್ರೀ ನರಸಿಂಹ ಜಯಂತಿ ಉತ್ಸವದಲ್ಲಿ ರಾಘವೇಶ್ವರ ಶ್ರೀ ಪ್ರತಿಪಾದನೆ

ಶ್ರೀಮಠ ಸಮಾಜದ ಶ್ರದ್ಧಾ ಕೇಂದ್ರವಾಗಲಿ

ತೀರ್ಥಹಳ್ಳಿ: ತೀರ್ಥಹಳ್ಳಿ ಮಠ ಇಡೀ ಸಮಾಜದ ಭಕ್ತಿ ಶ್ರದ್ಧಾಕೇಂದ್ರವಾಗಿ ರೂಪುಗೊಳ್ಳಬೇಕು. ಧರ್ಮಸಂಘಟನಾ ಕಾರ್ಯ ಇಲ್ಲಿ ನಡೆಯಬೇಕು. ಇಡೀ ಸಮಾಜದ ಶಕ್ತಿಕೇಂದ್ರವಾಗಿ, ಧರ್ಮಕೇಂದ್ರವಾಗಿ ಶ್ರೀಮಠ ಬೆಳೆಯಬೇಕು ಎಂದು ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾ ಸ್ವಾಮೀಜಿ ನುಡಿದರು.

ತೀರ್ಥಹಳ್ಳಿ ಶ್ರೀರಾಮಚಂದ್ರಾಪುರ ಮಠದಲ್ಲಿ ಪ್ರಪ್ರಥಮ ಬಾರಿಗೆ ಶ್ರೀಗಳ ಸಾನ್ನಿಧ್ಯದಲ್ಲಿ ನಡೆದ ಶ್ರೀ ನರಸಿಂಹ ಜಯಂತಿ ಉತ್ಸವದಲ್ಲಿ ಅವರು ಆಶೀರ್ವಚನ ನೀಡಿದರು.

ಪ್ರತಿ ಬಾರಿಯೂ ಇಲ್ಲಿ ಧರ್ಮಚಿಂತನೆ ನಡೆಯಬೇಕು. ಸಾವಿರಾರು ಮಂದಿಗೆ ಧರ್ಮಜ್ಯೋತಿಯನ್ನು ಬೆಳಗುವಂತಾಗಬೇಕು. ಇದು ದೇಶವೇ ನರಸಿಂಹಾವತಾರ ತಾಳಿದ ಸಂದರ್ಭದಲ್ಲಿ ಶಾಂತಿ, ಸಮೃದ್ಧತೆ, ಸಾಮರಸ್ಯ ಬೆಳೆಯುವಂತಾಗಲಿ. ದೇಶದ ಬಗ್ಗೆ, ನಮ್ಮ ಉನ್ನತಿ ಬಗ್ಗೆ ಆತ್ಮಜ್ಞಾನ ಪ್ರತಿಯೊಬ್ಬರಿಗೆ ಮೂಡಿ ಬರಲಿ ಎಂದು ಆಶೀರ್ವದಿಸಿದರು.

ತೀರ್ಥಹಳ್ಳಿ ಮಠ ಸಮಸ್ತರ ಕೇಂದ್ರವಾಗಬೇಕು. ಎಲ್ಲ ಸಮಾಜಗಳು ಒಗ್ಗೂಡಿ ಸನಾತನ ಧರ್ಮ ಉಳಿಸಿ ಬೆಳೆಸುವ ಪಣ ತೊಡಬೇಕು. ಧರ್ಮಸಂಘಟನಾ ಕಾರ್ಯ ನಡೆಯಬೇಕು. ಇದು ಸಮಸ್ತರ ಮಠವಾಗಿ ವಿಕಾಸಗೊಳ್ಳಬೇಕು. ನರಸಿಂಹ ಜಯಂತಿ ವಿಶೇಷತೆ ಬಗ್ಗೆ ಬಣ್ಣಿಸಿದ ಅವರು, ಕಂಬದಿಂದ ಹಿರಣ್ಯಕಶುಪುವಿಗೆ, ಬಿಂಬದಿಂದ ಪ್ರಹ್ಲಾದನಿಗೆ ಮುಕ್ತಿಯನ್ನು ಒದಗಿಸಿದ ನೃಸಿಂಹದೇವರು ದೇವರ ಅವತಾರಗಳಲ್ಲೇ ಅದ್ಭುತ ಮತ್ತು ಉಗ್ರ ಅವತಾರ. ಧರ್ಮಸಂಸ್ಥಾಪನೆಯ ಸಲುವಾಗಿ ಮಹಾವಿಷ್ಣು ಈ ವಿಶೇಷ ಅವತಾರ ಎತ್ತಿದ. ವಿರುದ್ಧ ಧ್ರುವಗಳು ಸೇರುವಂಥ ವಿಚಿತ್ರ ಅವತಾರ ಎಂದು ಬಣ್ಣಿಸಿದರು.

ನಮ್ಮೊಳಗೇ ನರಸಿಂಹ ಅವತಾರ ಪ್ರತಿದಿನವೂ ಆಗುತ್ತದೆ. ಅದನ್ನು ಗಮನಿಸುವ ದೃಷ್ಟಿ ನಮ್ಮದಾಗಬೇಕು. ಅಂತರಂಗದ ಮೂರ್ತಿ ದರ್ಶನ ಮಾಡುವ ಕಣ್ಣು ನಮ್ಮದಾಗಬೇಕು. ಅನನ್ಯ ಹರಿಸ್ಮರಣೆಯೊಂದಿಗೆ ಇದನ್ನು ಸಾಧಿಸಬೇಕು ಎಂದು ಸೂಚಿಸಿದರು.

ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮಕರ್ತರಾದ ಭೀಮೇಶ್ವರ ಜೋಶಿ ಮಾತನಾಡಿದರು. ಶ್ರೀಮಠದ ನಿರ್ವಹಣಾ ಸಮಿತಿಯ ಅಧ್ಯಕ್ಷ ಶಶಿಧರ ಬೊಬ್ಬಿ ಸಭಾಪೂಜೆ ನೆರವೇರಿಸಿದರು. ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಆಶೀರ್ವಾದ ಪಡೆದರು. ನಾಗಭೂಷಣ್ ಪ್ರಾಸ್ತಾವಿಕವಾಗಿ ಮಾತನಾಡಿ, ಕಾರ್ಯದರ್ಶಿ ಕಾರ್ತಿಕ್ ಶರ್ಮಾ ಅವಲೋಕನ ನಡೆಸಿದರು.

ಶ್ರೀಮಠದ ಪ್ರಶಾಸನಾಧಿಕಾರಿ ಸಂತೋಷ್ ಹೆಗಡೆ, ಹವ್ಯಕ ಮಹಾಮಂಡಲ ಪ್ರಧಾನ ಕಾರ್ಯದರ್ಶಿ ಉದಯಶಂಕರ ಭಟ್, ಶ್ರೀಕಾರ್ಯದರ್ಶಿ ಜಿ.ಕೆ. ಮಧು, ಶಾಸ್ತ್ರಿಗಳಾದ ಸುಬ್ರಾಯ ಅಗ್ನಿಹೋತ್ರಿ, ಉಪಾಧ್ಯಕ್ಷರಾದ ವೆಂಕಟೇಶ ಹಾರೇಬೈಲ್, ಕಾರ್ಯದರ್ಶಿಗಳಾದ ರುಕ್ಮಾವತಿ ರಾಮಚಂದ್ರ ಉಪಸ್ಥಿತರಿದ್ದರು.



ತೀರ್ಥಹಳ್ಳಿ ಶ್ರೀರಾಮಚಂದ್ರಾಪುರ ಮಠದಲ್ಲಿ ನಡೆದ ಶ್ರೀ ನರಸಿಂಹ ಜಯಂತಿ ಉತ್ಸವದಲ್ಲಿ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾ ಸ್ವಾಮೀಜಿಯವರಿಂದ ಶಾಸಕ ಅರಗ ಜ್ಞಾನೇಂದ್ರ , ಮಾಜಿ ಸಚಿವ ಕಿಮ್ಮನೆ ರತ್ನಾಕರ್ ಆಶೀರ್ವಾದ ಪಡೆದರು.

ಹಿಂದೂ ಸಮಾಜ ಒಗ್ಗೂಡದಿದ್ದರೆ ಸನಾತನ ಧರ್ಮಕ್ಕೆ ಅಪಾಯ ಖಚಿತ. ಆದ್ದರಿಂದ ಹಿಂದೂ ಸಮಾಜವನ್ನು ಒಗ್ಗೂಡಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಾ ಬಂದಿರುವ ಶ್ರೀರಾಮಚಂದ್ರಾಪುರ ಮಠ ಸಮಸ್ತ ಹಿಂದೂ ಸಮಾಜಕ್ಕೆ ಮಾರ್ಗದರ್ಶನ ನೀಡಬೇಕು.

ಅರಗ ಜ್ಞಾನೇಂದ್ರ, ಶಾಸಕ

ಹೊಸನಗರ, ತೀರ್ಥಹಳ್ಳಿ ಮಠ ಎರಡು ಮಗ್ಗಲುಗಳಿದ್ದಂತೆ

ಹೊಸನಗರ ಮಠ ಹಾಗೂ ತೀರ್ಥಹಳ್ಳಿ ಮಠ ಭೂಮಿಯ ಎರಡು ಮಗ್ಗಲುಗಳಿದ್ದಂತೆ. ಮೂಲ ಮಠ, ಪ್ರಧಾನ ಮಠ, ಕೆಕ್ಕಾರು ಮಠವನ್ನು ಬಿಟ್ಟು, ಇಡೀ ಜೀವನವನ್ನು ತೀರ್ಥಹಳ್ಳಿಯಲ್ಲಿ ಕಳೆದರು. ಅವರ ಪೂರ್ವಗುರುಗಳ ದರ್ಶನವಾಗಿರುವುದು, ಗುರುಗಳು ಅವರಿಗೆ ಸ್ವಪ್ನದರ್ಶನ ನೀಡಿದ ತಾಣ. ದೀಕ್ಷೆ ಕೊಟ್ಟಗುರುವಿಗೆ ಮಠವನ್ನೇ ಶಿಷ್ಯ ಸಮರ್ಪಣೆ ಮಾಡಿದ ಅಪರೂಪದ ಸಂಪ್ರದಾಯ ತೀರ್ಥಹಳ್ಳಿ ಮಠದ್ದು. ನಮಗೆ ವಿಶೇಷ ಗುರುಸಂಸರ್ಗ ಉಂಟಾಗಿದ್ದು ಇದೇ ತಾಣದಲ್ಲಿ ಎಂದು ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾ ಸ್ವಾಮೀಜಿ ನೆನಪಿಸಿಕೊಂಡರು.

ಸಮಾಚಾರ ಸಣ್ಣದಲ್ಲ

ಆತಂಕ ಸೃಷ್ಟಿಸಿದ ಹುಸಿ ಬಾಂಬ್ ಕರೆ

ಕಲಬುರಗಿ: ರೈಲಿನಲ್ಲಿ ಬಾಂಬ್ ಇಟ್ಟಿರುವ ಅನುಮಾನವಿದೆ ಎಂದು ಪ್ರಯಾಣಿಕನೊಬ್ಬ ಮಾಡಿದ ಕರೆಯಿಂದಾಗಿ ದೆಹಲಿ-ಬೆಂಗಳೂರು ಕರ್ನಾಟಕ ಎಕ್ಸ್‌ಪ್ರೆಸ್‌ರೈಲನ್ನು ನಾಲ್ಕು ತಾಸು ತಪಾಸಣೆಗೊಳಪಡಿಸಲಾದ ಘಟನೆ ರವಿವಾರ ಜಿಲ್ಲೆಯ ಚಿತ್ತಾಪುರ ತಾಲೂಕಿನ ವಾಡಿ ರೈಲು ನಿಲ್ದಾಣದಲ್ಲಿ ಸಂಭವಿಸಿದೆ.

ಘಟನೆಯಿಂದ ಎಚ್ಚೆತ್ತ ರೈಲ್ವೆ ಪೊಲೀಸರು, ಕೆಕೆ ಎಕ್ಸ್‌ಪ್ರೆಸ್ ರೈಲನ್ನು ವಾಡಿ ನಿಲ್ದಾಣದಲ್ಲಿ ತಡೆದು ಸುಮಾರು ನಾಲ್ಕು ತಾಸು ತಪಾಸಣೆ ನಡೆಸಿದರು. ಬಾಂಬ್ ನಿಷ್ಕ್ರಿಯ ದಳದ ಡಾಗ್ ಸಿಬ್ಬಂದಿಗಳು ಪ್ರಯಾಣಿಕರನ್ನು ಕೆಳಗಿಳಿಸಿ ರೈಲಿನ 22 ಬೋಗಿಗಳನ್ನು ತಪಾಸಣೆ ಮಾಡಿದರು. ಯಾವುದೇ ಸ್ಥಳದಲ್ಲಿ ಬಾಂಬ್ ಪತ್ತೆಯಾಗಿಲ್ಲ. ಬಾಂಬ್ ಕುರಿತು ರೈಲ್ವೆ ಬೋರ್ಡ್ ಗೆ ಕರೆ ಮಾಡಿದ್ದ ವ್ಯಕ್ತಿಯನ್ನು ವಿಚಾರಣೆಗೊಳಪಡಿಸಿದಾಗ ಸುಳ್ಳು ಮಾಹಿತಿ ನೀಡಿದ್ದಾಗಿ ಒಪ್ಪಿಕೊಂಡಿದ್ದಾನೆ ಎಂದು ವಾಡಿ ರೈಲ್ವೆ ಪೊಲೀಸ್ ಠಾಣೆಯ ಪಿಎಸ್‌ಐ ವೀರಭದ್ರಪ್ಪ ಎಚ್.ಎಸ್ ತಿಳಿಸಿದ್ದಾರೆ. ರೈಲ್ವೆ ಕಂಟ್ರೋಲ್ ಬೋರ್ಡ್ ಗೆ ಕರೆ ಮಾಡಿ ಬಾಂಬ್ ಇರುವ ಮಾಹಿತಿ ನೀಡಿದ ಪ್ರಯಾಣಿಕ, ಉತ್ತರ ಪ್ರದೇಶ ಮೂಲದ ದೀಪಸಿಂಗ್ ರಾಥೋಡ (33) ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹೆಚ್ಚಿನ ವಿಚಾರಣೆ ನಡೆಸಿ ಆತನ ಹಿನ್ನೆಲೆ ಕಲೆ ಹಾಕುತ್ತಿದ್ದಾರೆ. ಈ ಕುರಿತು ವಾಡಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂದಕಕ್ಕೆ ಬಿದ್ದ ಬಸ್: 21 ಜನರ ಸಾವು

ಕೊಲಂಬೊ: ಶ್ರೀಲಂಕಾ ಸರಕಾರದ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ಭಾನುವಾರ 100 ಮೀಟರ್ ಆಳದ ಕಂದಕಕ್ಕೆ ಉರುಳಿದ ಪರಿಣಾಮ 21 ಜನರು ಸಾವಿಗೀಡಾಗಿ, 30 ಜನರು ಗಾಯಗೊಂಡಿದ್ದಾರೆ. ಮಧ್ಯ ಪ್ರಾಂತ್ಯದ ಕೋಟ್ಮಲೆಯ ಗುಡ್ಡಗಾಡು ಪ್ರದೇಶದಲ್ಲಿ ಎಡ ತಿರುವು ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಬಸ್ ಅಪಘಾತಕ್ಕೆ ಈಡಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ರುಸ್ತುಂ ಭಾಗ್ ರಸ್ತೆಯಲ್ಲಿ ಮಣಿಪಾಲ್ ಆಸ್ಪತ್ರೆಯವರು ವಾಹನಗಳು ನಿಲುಗಡೆ ಮಾಡುತ್ತಿದ್ದು, ಸ್ಥಳೀಯರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ.
- **ಪರಿಹಾರ:** ರುಸ್ತುಂ ಭಾಗ್ ರಸ್ತೆಯಲ್ಲಿ ಮಣಿಪಾಲ್ ಆಸ್ಪತ್ರೆಯವರು ವಾಹನಗಳು ನಿಲುಗಡೆ ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ ನೋ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡ ಮಾಡಿದ್ದ ವಾಹನಗಳ ವಿರುದ್ಧ ಐಎಂವಿ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಮತ್ತು ಪಾದಚಾರಿಗಳ ಸುರಕ್ಷಿತ ಓಡಾಟಕ್ಕೆ ಅನುವು ಮಾಡಿಕೊಡಲಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್
12.05.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ವಿಂಗ್ ಕಮಾಂಡರ್ ಸುದರ್ಶನ್
ವಿಷಯ
ಆಪರೇಷನ್ ಸಿಂದೂರ
vishwavani.news

ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ

ಭಯೋತ್ಪಾದಕ ರಾಷ್ಟ್ರ ಪಾಕಿಸ್ತಾನದ ವಿರುದ್ಧ ಭಾರತ ಜಾರಿಗೊಳಿಸಿರುವ ಆಪರೇಶನ್ ಸಿಂದೂರ ಕಾರ್ಯಾಚರಣೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಪಾಕಿಸ್ತಾನದ ವಿರುದ್ಧ ಭಾರತ ಸ್ಪಷ್ಟವಾದ ಮೇಲುಗೈ ಸಾಧಿಸುತ್ತಿದ್ದಂತೆ ದೇಶದೊಳಗಿನ ಭಯೋತ್ಪಾದಕರು ಭಾರತೀಯ ಸೈನ್ಯದ ಸ್ಥೈರ್ಯ ಕುಗ್ಗಿಸುವ ಕೆಲಸಕ್ಕೆ ಕೈ ಹಾಕಿದ್ದಾರೆ. ಕೆಲವರು ಆಪರೇಶನ್ ಸಿಂದೂರ ಕಾರ್ಯಾಚರಣೆಗೆ ಧಿಕ್ಕಾರ ಎನ್ನುತ್ತಿದ್ದರೆ ಕೆಲವರು ಪಾಕಿಸ್ತಾನಕ್ಕೆ ಜಯಕಾರ ಹಾಕುತ್ತಿದ್ದಾರೆ. ಇಂತಹ ಮನಸ್ಥಿತಿಗಳನ್ನು ರಾಷ್ಟ್ರಭಕ್ತ ಜನರು ಆರಂಭದಲ್ಲೇ ಚಿವುಟಿ ಹಾಕಬೇಕು, ಇಲ್ಲದಿದ್ದರೆ ಇವರು ಪಾಕ್ ಪ್ರೇರಿತ ಉಗ್ರರಿಗಿಂತ ಮೂರು ಪಟ್ಟು ಅಪಾಯಕಾರಿಗಳಾಗಿ ಬೆಳೆಯುತ್ತಾರೆ.

ಶಿವರಾಜ್ ಪೂಜಾರಿ

ಮೊದಲು ಪಾಕಿಸ್ತಾನ ಜಿಂದಾಬಾದ್ ಎಂದವರನ್ನು ಉಗ್ರ ಶಿಕ್ಷೆ ಕೊಡಿ. ಇನ್ನೊಮ್ಮೆ ಯಾರು ಕೂಗುವುದಿಲ್ಲ

ಸಂಘಟನೆ ಬೇರುಗಳು ಸಡಿಲ, ಸ್ವಂತಿಕೆಯ ಕೊರತೆ, ನಾಯಕತ್ವಕ್ಕಾಗಿ ಹುಡುಕಾಟ

ಕಮಲದ ನೆರಳಿನಲ್ಲಿ ಕಮರುವ ಜೆಡಿಎಸ್

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಜೆಡಿಎಸ್ ನಾಯಕತ್ವ ಕೊರತೆ ಬಿಸಿ ನಿಧಾನವಾಗಿ ತಟ್ಟಲಾರಂಭಿಸಿದ್ದು, ಪಕ್ಷದ ಶಾಸಕರು ಮತ್ತು ಮುಖಂಡರಲ್ಲಿ ಸದ್ದಿಲ್ಲದೆ ಆತಂಕ ಶುರುವಾಗಿದೆ.

ಕಳೆದೊಂದು ವರ್ಷದಿಂದ ಬಿಜೆಪಿ ನೆರಳಿನಲ್ಲಿರುವ ಜೆಡಿಎಸ್, ನಿಧಾನವಾಗಿಯೇ ತನ್ನ ಬೇರುಗಳನ್ನು ಕಳಚಿ ಕೊಳ್ಳುತ್ತಿದೆಯೇನೋ ಎಂದು ಭಾಸವಾಗುವಂತೆ ಕಾರ್ಯಕರ್ತರಲ್ಲಿ ದಿಗಿಲು ಹುಟ್ಟಿಸಿದೆ. ಇದಕ್ಕೆ ಕಾರಣ ಕಳೆದೊಂದು ವರ್ಷದಿಂದ ಪಕ್ಷದ ಸ್ವಂತಿಕೆ ಸಾರುವ ಪ್ರಯತ್ನ ಮಾಡದಿರುವುದು ಹಾಗೂ ಸಂಘಟನೆ ಮರೆತು ಬಿಜೆಪಿ ನೆರಳಲ್ಲೇ ಕಳೆದು ಹೋಗುವ ಸೂಚನೆ ನೀಡುತ್ತಿರುವುದು.

ಅಷ್ಟೇ ಏಕೆ ? ಮೂವತ್ತು ವರ್ಷಗಳ ನಂತರ ಎದುರಾಳಿ ಪಾಕಿಸ್ತಾನ ವಿರುದ್ಧ ಯುದ್ಧ ನಡೆಸುತ್ತಿದ್ದರೂ ಕೇಂದ್ರ ಸಂಪುಟದ ಪ್ರಮುಖ ಸಚಿವರಾಗಿರುವ ಕುಮಾರಸ್ವಾಮಿ ಅವರು ದೇಶದ ಬಗ್ಗೆಯಾಗಲಿ, ಪಕ್ಷದ ವಿಚಾರವಾಗಿಯಾಗಲಿ ತುಟಿ ಬಿಚ್ಚದಿರುವುದು ಕೂಡ ಪಕ್ಷದ ಮುಖಂಡರಲ್ಲಿ ಕೊಂಚ ದಿಗಿಲು ತಂದಿದೆ ಎನ್ನಲಾಗಿದೆ. ಈ ಮಧ್ಯೆ, ಲೋಕಸಭಾ ಚುನಾವಣೆ ನಂತರ ಪಕ್ಷದ ರಾಜ್ಯಾಧ್ಯಕ್ಷ ಆಯ್ಕೆಯಾಗದಿರುವುದು, ಪದಾಧಿಕಾರಿಗಳು ನೇಮಕ ನಡೆಯದಿರುವುದು ಹಾಗೂ ಪಕ್ಷ ಸಂಘಟನೆ ಪರಿಣಾ ಮಕಾರಿಯಾಗಿ ನಡೆದಿರವುದು ಕೂಡ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಲ್ಲಿ ಮುಂದೇನು ಎನ್ನುವ ಪ್ರಶ್ನೆ ಮೂಡುವಂತಾಗಿದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಪಕ್ಷದ ರಾಜ್ಯಾಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಸ್ವಕ್ಷೇತ್ರ ಮಂಡ್ಯದಲ್ಲಿ ಒಂದಷ್ಟು ಪ್ರವಾಸಗಳನ್ನು ನಡೆಸಿ ಇಲಾಖೆ ಕೆಲಸದ ಬ್ಯೂಸಿಯಿಂದಾಗಿ ಇತ್ತೀಚಿಗೆ ಮೌನವಾಗಿರುವುದು. ಹಾಗೆಯೇ ರಾಜ್ಯ ಪ್ರವಾಸಕ್ಕೆ ಕುಮಾರಸ್ವಾಮಿಯಾಗಲಿ. ಸಹೋದರ ಎಚ್.ಡಿ.ರೇವಣ್ಣ ಅವರಾಗಲಿ ಹೆಚ್ಚು ಆಸಕ್ತಿ ತೋರಿಸದಿರುವುದು ಕಾರ್ಯಕರ್ತರಲ್ಲಿ ಅನೇಕ ರಾಜಕೀಯ ಪ್ರಶ್ನೆಗಳಿಗೆ ದಾರಿ ಮಾಡಿಕೊಟ್ಟಿದೆ.

ಒಟ್ಟಾರೆ ಕುಮಾರಸ್ವಾಮಿ ಅವರ ನಂತರ ಪಕ್ಷ ಮುನ್ನಡೆಸುವವ ಹಿರಿಯ ನಾಯಕರು ಯಾರು ಎನ್ನುವ ಪ್ರಶ್ನೆಗೆ ಯಾರಿಂದಲೂ ಉತ್ತರ ಸಿಗದೆ ಮುಖಂಡರು ದಿಗಿಲುಗೊಂಡಿದ್ದಾರೆ. ಇಂಥ ಸನ್ನಿವೇಶನದಲ್ಲಿ ಕೆಲವು ಶಾಸಕರು ಇತ್ತ ಬಿಜೆಪಿ ಜತೆಗೆ ಹೋಗಲಾರದ ಅತ್ತ ಕಾಂಗ್ರೆಸ್ ಗೂ ಸೇರಲಾಗದೆ ಜೆಡಿಎಸ್ ನಲ್ಲೇ ದಿನ ಎಣಿಸುವಂತಾಗಿದೆ ಎಂದು ಆಪ್ತರೊಂದಿಗೆ ಹೇಳಿಕೊಂಡಿದ್ದಾರೆ. ಸದ್ಯ ಜೆಡಿಎಸ್ ರಾಜ್ಯದಲ್ಲಿ ಎರಡನೇ ಹಂತದ ನಾಯಕರ ಕೊರತೆಯಿಂದ ಹಾಗೂ ವಿವಿಧ ಜಾತಿ, ಧರ್ಮಗಳ ಪ್ರತಿನಿಧಿಸುವ (ಲಿಂಗಾಯತರು, ಹಿಂದುಳಿದ ವರ್ಗ, ಪರಿಶಿಷ್ಟರ ಜಾತಿ, ಪಂಗಡ ಹಾಗೂ ಅಲ್ಪಸಂಖ್ಯಾತರು) ನಾಯಕರಿಲ್ಲದೆ ಬಿಜೆಪಿಯ ನೆರಳಿನಲ್ಲೇ ಕಳೆದು ಹೋಗುತ್ತಿದೆಯೇ ಎನ್ನುವ ಆತಂಕ ಮೂಡಿಸಿದೆ ಎಂದು ಪಕ್ಷದ ಹುದ್ದೆಗಳ ಮೇಲೆ ಕಣ್ಣಿಟ್ಟಿರುವ ಮುಖಂಡರು ಹೇಳುತ್ತಿದ್ದಾರೆ.

ಹಳೇ ಮೈಸೂರು ಭಾಗದ ಬೇರು ಸಡಿಲ

ರಾಜ್ಯದಲ್ಲಿ 18 ಶಾಸಕ ಬಲ ಹಾಗೂ ಎರಡು ಸಂಸದರನ್ನು ಹೊಂದಿರುವ ಜೆಡಿಎಸ್, ಕಳೆದ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳ ನಂತರ ಪಕ್ಷ ಬಲವರ್ಧನೆಗೆ ಹೊಸ ಮಾರ್ಗ ಹುಡಕಲಿದೆ. ಆ ಮೂಲಕ ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಬಿಸಿ ಮುಟ್ಟಿಸುತ್ತದೆ ಎನ್ನುವ ನಿರೀಕ್ಷೆ ಕಾರ್ಯಕರ್ತರದ್ದಾಗಿತ್ತು. ಆದರೆ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಜತೆ ಕೈಜೋಡಿಸುವ ಮೂಲಕ ಆ ಪಕ್ಷ ಹೆಚ್ಚು ಸ್ಥಾನ ಗಳಿಸುವಂತೆ ಮಾಡಿದೆ. ಅಷ್ಟೇ ಅಲ್ಲ. ಆ ಮೂಲಕ ತನ್ನ ಪ್ರಾಬಲ್ಯದ ನೆಲೆಗಳಾದ ಹಳೇ ಮೈಸೂರು ಭಾಗದಲ್ಲಿ ಬಿಜೆಪಿ ಪ್ರಬಲವಾಗುವುದಕ್ಕೆ ದಾರಿ ಮಾಡಿಕೊಟ್ಟಿತ್ತು. ಆಗಲೆ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪಕ್ಷದ ಹಿರಿಯ ನಾಯಕರ ನಡೆಯನ್ನು ಬಹಿರಂಗವಾಗಿಯೇ ವಿರೋಧಿಸಿದ್ದರು. ಇದಾದ ನಂತರ ಪಕ್ಷದ ರಾಜ್ಯಾಧ್ಯಕ್ಷರಾದ ಕುಮಾರಸ್ವಾಮಿ ಅವರೇನೋ ಕೇಂದ್ರ ಸಚಿವರಾಗಿದ್ದೇನೋ ಸರಿ. ಆದರಿಂದ ಪಕ್ಷಕ್ಕಾದ ಲಾಭ ಅಷ್ಟಕಷ್ಟೆ ಎನ್ನುತ್ತಾರೆ ಮುಖಂಡರು.

ಉಳಿದಂತೆ ಬಿಜೆಪಿ ಜತೆಗೂಡಿ ಜೆಡಿಎಸ್ ಮುಡಾ ಹಗರಣ ವಿರುದ್ಧ ಪಾದಯಾತ್ರೆ, ಬೆಲೆ ಏರಿಕೆ ವಿರುದ್ಧದ ಪ್ರತಿಭಟನೆಗಳು ಹಾಗೂ ಸರಕಾರದ ಆಡಳಿತ ವೈಖರಿ ವಿರುದ್ಧ ಟೀಕೆ, ಟಿಪ್ಪಣಿಗಳನ್ನು ಮಾಡಿತ್ತಾದರೂ ಅದು ಅಷ್ಟರ ಮಟ್ಟಿಗೆ ಪಕ್ಷದ ಪ್ರತ್ಯೇಕ ಹೋರಾಟ ಎನಿಸಿಕೊಳ್ಳಲಿಲ್ಲ. ಇದರ ಮಧ್ಯೆ, ಪಕ್ಷದ ರಾಜ್ಯಾಧ್ಯಕ್ಷರಾಗಿ ಮಾಡಲು ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಅವರನ್ನು ಮುನ್ನೆಲೆಗೆ ತಂದರೂ ಅದಕ್ಕೆ ಆರಂಭಿಕ ವಿರೋಧ ಎದುರಾಗಿದ್ದರಿಂದ ಸದ್ಯಕ್ಕೆ ಅದನ್ನೂ ಮುಂದೂಡಲಾಗಿದೆ ಎಂದು ತಿಳಿದುಬಂದಿದೆ. ಇದರ ಮಧ್ಯೆ ಆತಂಕದ ವಿಚಾರವೆಂದರೆ ಜೆಡಿಎಸ್ ಗೆಲ್ಲಿಸಿಕೊಟ್ಟ ಒಂದು ಲೋಕಸಭಾ ಸ್ಥಾನ(ಡಾ.ಸಿ.ಎನ್. ಮಂಜುನಾಥ್) ವನ್ನು ಬಿಜೆಪಿಗೆ ಬಿಟ್ಟುಕೊಟ್ಟ ಪರಿಣಾಮ ಈಗ ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಜೆಡಿಎಸ್ ಬೇರು ಸಡಿಲವಾಗುತ್ತಿದ್ದು, ಕಾಂಗ್ರೆಸ್ ಬುಡ ಭದ್ರ ಮಾಡಿಕೊಳ್ಳುತ್ತಿದೆ. ಇದಕ್ಕೆ ಉಪ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ ಮತ್ತು ಸಹೋದರ ಸುರೇಶ್ ಮುನ್ನುಗ್ಗುತ್ತಿರುವ ರೀತಿಯೂ ಕಾರಣ ಇರಬಹುದು ಎನ್ನುತ್ತಾರೆ ಕಾರ್ಯಕರ್ತರು. ಹೀಗಾಗಿ ಜೆಡಿಎಸ್ ಮುಂಬರುವ ಪಂಚಾಯಿತಿ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ನಾವಿಕನನ್ನು ಹುಡುಕಿಕೊಳ್ಳದಿದ್ದರೆ ಪಕ್ಷದ ಭವಿಷ್ಯ ಕಷ್ಟವಿದೆ ಎನ್ನುತ್ತಾರೆ ಪಕ್ಷದ ಹಿರಿಯ ನಾಯಕರು.

ಸಾರಥಿ ಸಾಲಿನಲ್ಲಿ ಯಾರಿದ್ದಾರೆ?



ಪಕ್ಷದಲ್ಲಿ 18 ಶಾಸಕರಿದ್ದರೂ ಯಾರಿಗೂ ನಾಯಕತ್ವ ವಹಿಸಲಾಗದ ಸ್ಥಿತಿಯಲ್ಲಿ ಜೆಡಿಎಸ್ ವರಿಷ್ಠರಿದ್ದಾರೆ ಎನ್ನಲಾಗಿದೆ. ಹಿರಿಯರಾದ ಬಂಡೆಪ್ಪ ಕಾಶಂಪೂರ್, ಎಚ್.ಕೆ.ಕುಮಾರಸ್ವಾಮಿ, ಸುರೇಶ್ ಬಾಬು ಮತ್ತು ಸಾ.ರ. ಮಹೇಶ್ ಅವರು ಮಾಜಿಗಳಾದ್ದಾರೆ. ಶಾಸಕರೂ ಹಿರಿಯರೂ ಆಗಿರುವ ಜಿ.ಟಿ.ದೇವೇಗೌಡರಿಗೆ ರಾಜ್ಯಾಧ್ಯಕ್ಷ ಸ್ಥಾನ ನೀಡಲು ಚಿಂತಿಸಿದರೆ, ಅವರು ಆಗಾಗ ಕಾಂಗ್ರೆಸ್ ಪರ ಬ್ಯಾಟ್ ಬೀಸುತ್ತಾ, ಜೆಡಿಎಸ್ ನಾಯಕತ್ವ ಟೀಕಿಸುವುದುಂಟು. ಇನ್ನು ಹಿಂದುಳಿದ ವರ್ಗದ ಹೊಣೆಯನ್ನು ಹನೂರು ಶಾಸಕ ಮಂಜುನಾಥ್ ಅವರಿಗೆ ವಹಿಸೋಣ ಎಂದರೆ ಅವರು ಕ್ಷೇತ್ರಕ್ಕಿಂತ ಬೆಂಗಳೂರಿನ ಕೆ.ಆರ್.ಪುರಕ್ಕೆ (ಕಾಂಗ್ರೆಸ್ ಗೆ) ಹತ್ತಿರವಾಗುತ್ತಿದ್ದು, ಕಾಂಗ್ರೆಸ್ ವಿರುದ್ಧವಾಗಲಿ, ಸರಕಾರದ ವಿರುದ್ಧವಾಗಲಿ ತುಟಿ ಬಿಚ್ಚುತ್ತಿಲ್ಲ. ಇಂಥ ಸನ್ನಿವೇಶದಲ್ಲಿ ಯಾರಿಗೆ ನಾಯಕತ್ವ ನೀಡುವುದು ಎನ್ನುವ ಪ್ರಶ್ನೆ ವರಿಷ್ಠರದಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆಕ್ರೋಶ

ಪಾಕ್ ದ್ವಂದ್ವ ನಿಲುವು ಅನುಸರಿಸುವಲ್ಲಿ ನಿಪುಣ

ಹುಬ್ಬಳ್ಳಿ: ಕದನ ವಿರಾಮ ಘೋಷಣೆಯಾದ ಮೇಲೂ ಪಾಕಿಸ್ತಾನ ದಾಳಿ ಮುಂದುವರಿಸಿ ಇಬ್ಬಗೆ ನೀತಿ ಪ್ರದರ್ಶಿಸಿದ್ದು, ಭಾರತೀಯ ಸೇನೆ ಇದಕ್ಕೆ ಪ್ರತ್ಯುತ್ತರ ಕೊಡುತ್ತದೆ. ಪಾಕ್ ವಿರುದ್ಧದ ದಾಳಿಗೆ ಕೇಂದ್ರ ಸರಕಾರ ಸೇನೆಗೆ ಮುಕ್ತ ಅಧಿಕಾರ, ಸ್ವಾತಂತ್ರ್ಯ ನೀಡಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪಾಕಿಸ್ತಾನ ಯಾವತ್ತೂ ದ್ವಂದ್ವ ನಿಲುವು ಮತ್ತು ಇಬ್ಬಗೆ ನೀತಿ ಅನುಸರಿಸುವಲ್ಲಿ ಎತ್ತಿದ ಕೈ ಎಂಬುದು ಗೊತ್ತೇ ಇದೆ. ಅಲ್ಲದೇ, ಅಲ್ಲಿನ ಮಿಲಿಟರಿ ಪಡೆ ಚುನಾಯಿತ ಸರಕಾರದ ಮಾತು ಕೇಳುವುದಿಲ್ಲ ಎಂಬುದು ಈಗ ಮತ್ತೊಮ್ಮೆ ಸಾಬೀತಾಗಿದೆ ಎಂದು ಪ್ರತಿಕ್ರಿಯಿಸಿದರು.

ಪಹಲ್ಗಾಮ್ ಭಯೋತ್ಪಾದನಾ ದಾಳಿಯ ನಂತರ ಗುಳ್ಳೇನರಿ ಬುದ್ಧಿಯ ಪಾಕಿಸ್ತಾನಕ್ಕೆ ಪಾಠ ಕಲಿಸಲು ನಮ್ಮ ಸರಕಾರ ಭಾರತೀಯ ಸೇನೆಗೆ ಮುಕ್ತ ಅವಕಾಶ ನೀಡಿದೆ. ಅದರಂತೆ ಭಾರತೀಯ ಸೇನೆ ಪಾಕಿಸ್ತಾನಕ್ಕೆ ತೀಕ್ಷ್ಣ ಪ್ರತಿಕ್ರಿಯೆ, ಪ್ರತಿಕಾರದಲ್ಲಿ ತೊಡಗಿದೆ. ಬಹು ದೊಡ್ಡ ಸಂಖ್ಯೆಯಲ್ಲಿ ಭಯೋತ್ಪಾದಕರ ನೆಲೆಗಳನ್ನು ಧ್ವಂಸಗೊಳಿಸಿದೆ ಎಂದು ಹೇಳಿದರು.

> ಪಾಕಿಸ್ತಾನದ ಡಿಜಿಎಂಒ ಭಾರತದ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರಿಗೆ ಫೋನ್ ಮಾಡಿ ಕದನ ವಿರಾಮಕ್ಕೆ ವಿನಂತಿ ಮಾಡಿದ್ದರು. ಆದರೀಗ ಅದನ್ನು ಉಲ್ಲಂಘಿಸಿದ್ದಾರೆ. ಯಾವತ್ತೂ ಭಯೋತ್ಪಾದಕರು ಮತ್ತು ಭಯೋತ್ಪಾದಕ ಸಂಘಟನೆಗಳನ್ನು ಪೋಷಿಸಿಕೊಂಡು ಬಂದ ಪಾಕ್‌ಗೆ ಭಾರತೀಯ ಸೇನೆ ಪ್ರತ್ಯುತ್ತರ ಕೊಡುತ್ತದೆ.
>
> **ಪ್ರಲ್ಹಾದ್ ಜೋಶಿ,** ಕೇಂದ್ರ ಸಚಿವ

ಯುದ್ಧವಾಗಿ ಪರಿಗಣಿಸುವ ಕಠಿಣ ನಿಲುವು: ದೇಶದಲ್ಲಿ ಭಯೋತ್ಪಾದನೆ ಸಂಪೂರ್ಣ ನಿರ್ಮೂಲನೆಗೆ ಪಣ ತೊಟ್ಟ ಕೇಂದ್ರ ಸರಕಾರ ಇದೇ ಮೊದಲ ಬಾರಿಗೆ ಅತ್ಯಂತ ಕಠೋರ ನಿಲುವು ತೆಗೆದುಕೊಂಡಿದೆ. ಪಾಕ್ ಕದನ ವಿರಾಮಕ್ಕೂ ಮೊದಲೇ ಭಯೋತ್ಪಾದನೆಯನ್ನು ಯುದ್ಧವಾಗಿ ಪರಿಗಣಿಸುವಂತಹ ಅಭೂತಪೂರ್ವ ನಿರ್ಣಯ ಕೈಗೊಂಡಿದೆ ಎಂದು ಹೇಳಿದರು.

ಇಡೀ ದೇಶ ಒಂದಾಗಿ ಹೋರಾಡುತ್ತಿದೆ

ಪಹಲ್ಗಾಮ್ ದಾಳಿಯ ನಂತರ ಇದೇ ಮೊದಲ ಬಾರಿ ಭಯೋತ್ಪಾದನೆ ವಿರುದ್ಧ ಇಡೀ ದೇಶವೇ ಒಂದಾಗಿ ಹೋರಾಡುತ್ತಿದೆ. ಭಾರತೀಯ ಸೇನೆ ಅತ್ಯಂತ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಪ್ರತೀಕಾರದ ದಾಳಿಯಲ್ಲಿ ನಮ್ಮ ಕಂದಹಾರ ಪ್ರಕರಣದಲ್ಲಿದ್ದವರು ಮತ್ತು ಪ್ರಮುಖ ಉಗ್ರರನ್ನು, ಅವರ ಕುಟುಂಬಗಳು ಹತರಾಗಿದ್ದಾರೆ. ಭಾರತ ಶಾಂತಿಪ್ರಿಯ ರಾಷ್ಟ್ರ. ಭಾರತೀಯರು ಯಾವತ್ತೂ ಶಾಂತಿಪ್ರಿಯರೇ, ನಾವಾಗಿಯೇ ಯಾವತ್ತೂ ಯಾರ ಮೇಲೂ ದಂಡೆತ್ತಿ ಹೋಗುವುದಿಲ್ಲ. ಆದರೆ, ನಮ್ಮ ಮೇಲೆ ಯಾರಾದರೂ ಬಂದರೆ ಸುಮ್ಮನೆ ಬಿಡುವ ಮಾತೇ ಇಲ್ಲ. ಭಾರತ-ಭಾರತೀಯರಿಗೆ ಅಂತದ್ದೊಂದು ಶಕ್ತಿಯಿದೆ ಎಂದು ಸಚಿವ ಜೋಶಿ ಎಚ್ಚರಿಕೆಯ ಸಂದೇಶ ರವಾನಿಸಿದರು.

ವಿಜ್ಞಾನಿ ಪ್ರೊ.ಅಯ್ಯಪ್ಪನ್ ಅಂತ್ಯಕ್ರಿಯೆ



ಮೈಸೂರು: ಕೃಷಿ ವಿಜ್ಞಾನಿ, ಭಾರತೀಯ ಕೃಷಿ ಸಂಶೋಧನಾ ಮಂಡಳಿಯ (ಐಸಿಎಆರ್‌) ನಿವೃತ್ತ ನಿರ್ದೇಶಕ, ಪದ್ಮಶ್ರೀ' ಪುರಸ್ಕೃತ ಪ್ರೊ.ಸುಬ್ಬಣ್ಣ ಅಯ್ಯಪ್ಪನ್ (70) ಅವರ ಅಂತ್ಯಕ್ರಿಯೆ ಇಲ್ಲಿನ ಬಂಬೂಬರ್ಜಾ ಬಳಿಯ ಜೋಡಿ ತೆಂಗಿನಮರ ಮುಕ್ತಿಧಾಮದಲ್ಲಿ ಭಾನುವಾರ ಸಂಜೆ ನಡೆಯಿತು.

ಕೆ.ಆರ್.ಆಸ್ಪತ್ರೆಯಲ್ಲಿ ಮುಂಜಾನೆ 9ರ ಸುಮಾರಿಗೆ ಮರಣೋತ್ತರ ಪರೀಕ್ಷೆ ಮುಗಿಸಿ, ವಿಶ್ವೇಶ್ವರ ನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಸಂಕಲ್ಪ ಬಸಂತ್ ಅಪಾರ್ಟ್‌ಮೆಂಟ್‌ಗೆ ಪಾರ್ಥಿವ ಶರೀರ ತರಲಾಯಿತು. ನಂತರ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಮಧ್ಯಾಹ್ನ 1.15ಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು ನೇತೃತ್ವದಲ್ಲಿ ಸಕಲ ಸರಕಾರಿ ಗೌರವ ಸಲ್ಲಿಸಲಾಯಿತು. ತ್ರಿವರ್ಣಧ್ವಜವನ್ನು ಹೊದಿಸಿ, ರಾಷ್ಟ್ರಗೀತೆ ನುಡಿಸಿ, ಗಾಳಿಯಲ್ಲಿ 3 ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಲಾಯಿತು. ವಿವಿಧ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳು, ನಿವೃತ್ತ ಕುಲಪತಿಗಳು, ಮೀನುಗಾರಿಕೆ ವಿಜ್ಞಾನ ಸಂಸ್ಥೆಗಳ ನಿರ್ದೇಶಕರು, ಕೃಷಿ, ಪಶುಸಂಗೋಪನೆ ಸಂಸ್ಥೆಗಳ ಪ್ರಮುಖರು, ವಿಜ್ಞಾನಿಗಳು ಅಂತಿಮ ದರ್ಶನ ಪಡೆದರು. ಪತ್ನಿ, ಪುತ್ರಿಯರು, ಅಳಿಯಂದಿರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಬಳಿ ಕಾವೇರಿ ನದಿಯಲ್ಲಿ ಶನಿವಾರ ಮಧ್ಯಾಹ್ನ ಮೃತದೇಹ ಪತ್ತೆಯಾಗಿತ್ತು. ಮೇ 7ರಂದು ಮನೆಯಿಂದ ತೆರಳಿದ್ದ ಅವರು ಕಾಣೆಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು. ಅವರ ನಿಗೂಢ ಸಾವು ಕುಟುಂಬದವರು ಹಾಗೂ ಪರಿಚಯದವರಿಗೆ ಅಚ್ಚರಿ-ಆಘಾತ ತಂದಿದೆ.

ಬಸ್ ಟೈರ್ ಸ್ಫೋಟ: ಪ್ರಯಾಣಿಕರು ಪಾರು

ದೊಡ್ಡಬಳ್ಳಾಪುರ: ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಟೈರ್ ಸ್ಫೋಟಗೊಂಡು, ನಿಯಂತ್ರಣ ತಪ್ಪಿ ರಸ್ತೆಯ ತಡೆಗೋಡೆಗೆ ಗುದ್ದಿದ ಘಟನೆ ಮೆಣಸಿಗೇಟ್ ಬಳಿ ನಡೆದಿದೆ. ಅದೃಷ್ಟವಶಾತ್ ಚಾಲಕನ ಸಮಯಪ್ರಜ್ಞೆಯಿಂದಾಗಿ 30ಕ್ಕೂ ಹೆಚ್ಚು ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ದೊಡ್ಡಬಳ್ಳಾಪುರ ತಾಲೂಕಿನ ಮೆಣಸಿಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿ 648ರಲ್ಲಿ ಘಟನೆ ನಡೆದಿದೆ. ಸೂಲಿಕುಂಟೆ-ದೊಡ್ಡಬಳ್ಳಾಪುರ ಮಾರ್ಗದ ಬಸ್ ದೊಡ್ಡಬಳ್ಳಾಪುರ ನಗರಕ್ಕೆ ಬರುವ ವೇಳೆ ಬಸ್‌ನ ಟೈರ್ ಸ್ಫೋಟಗೊಂಡಿದೆ.

ಈ ವೇಳೆ ಚಾಲಕ ಮುನಿಶ್ಯಾಮಪ್ಪ ಸಮಯಪ್ರಜ್ಞೆಯಿಂದ ತಕ್ಷಣವೇ ಬಸ್ಸನ್ನು ತಡೆಗೋಡೆಯ ಕಡೆಗೆ ಚಲಾಯಿಸಿದ್ದಾರೆ. ತಡೆಗೋಡೆಯಿಂದಾಗಿ ಬಸ್ ನಿಯಂತ್ರಣಕ್ಕೆ ಬಂದಿದೆ.

ತಡೆಗೋಡೆ ಇಲ್ಲದಿದ್ದಲ್ಲಿ ಹೆಚ್ಚಿನ ಅನಾಹುತವಾಗುವ ಸಾಧ್ಯತೆ ಇತ್ತು. ಚಾಲಕನ ಸಮಯಪ್ರಜ್ಞೆಗೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಸಿಂಧೂ ಒಪ್ಪಂದವೇ ಭಾರತದ ಬ್ರಹ್ಮಾಸ್ತ್ರ!

ಬೆಂಗಳೂರು: ಭಾರತ ಪಾಕಿಸ್ತಾನ ನಡುವಿನ ಯುದ್ಧಕ್ಕೆ 'ಕದನ ವಿರಾಮ' ಘೋಷಣೆಯಾಗಿದ್ದರೂ, ಪಾಕಿಸ್ತಾನಿಗರ ಜಲಮೂಲ ಎನಿಸಿರುವ ಸಿಂಧೂ ಒಪ್ಪಂದದ ವಿಷಯದಲ್ಲಿ ಭಾರತದ ನಿಲುವು ಅಚಲ ಎಂದಿರುವುದು ಇದೀಗ ಪಾಕಿಸ್ತಾನಕ್ಕೆ ನುಂಗಲಾರದ ತುತ್ತಾಗಿದೆ.

ಅಮೆರಿಕದ ಬೆನ್ನು ಬಿದ್ದ ಆಪರೇಷನ್ ಸಿಂದೂರಕ್ಕೆ ತಾತ್ಕಲಿಕ ಬ್ರೇಕ್ ಹಾಕುವಲ್ಲಿ ಪಾಕಿಸ್ತಾನ ಯಶಸ್ವಿಯಾಗಿದೆ. ಆದರೆ, ಇದರ ಬೆನ್ನಲ್ಲೇ, ಕದನ ವಿರಾಮಕ್ಕೆ ಒಪ್ಪಿದರೂ ಸಿಂಧೂ ಒಪ್ಪಂದವನ್ನು ತಾತ್ಕಲಿಕವಾಗಿ ರದ್ದುಗೊಳಿಸಿದ್ದ ಭಾರತ, ಉಗ್ರರ ವಿಷಯದಲ್ಲಿ ಪಾಕಿಸ್ತಾನ ನಿಲುವು ಬದಲಾಯಿಸದಿದ್ದರೆ 'ಶಾಶ್ವತ'ವಾಗಿ ಒಪ್ಪಂದವನ್ನು ರದ್ದುಗೊಳಿಸುವ ಎಚ್ಚರಿಕೆ ಯನ್ನು ರವಾನಿಸಿರುವುದು ಇದೀಗ ಪಾಕಿಸ್ತಾನಕ್ಕೆ ಭಾರಿ ಆತಂಕವನ್ನು ತಂದೊಡ್ಡಿದೆ.

ಈಗಾಗಲೇ ಚೆನಾಬ್ ನದಿಗೆ ನೀರನ್ನು ಏಕಾಏಕಿ ಬಿಡುವ ಹಾಗೂ ನಿಲ್ಲುವ ಕಾರ್ಯವನ್ನು ಕಳೆದೊಂದು ವಾರದಿಂದ ಕೇಂದ್ರ ಸರಕಾರ ಮಾಡಿಕೊಂಡು ಬಂದಿದೆ. ಮುಂದಿನ ದಿನದಲ್ಲಿಯೂ ಯಾವುದೇ ರೀತಿಯ ಎಚ್ಚರಿಕೆ ನೀಡದೇ, ನೀರು ಹರಿಸಿದರೆ ಭಾರಿ ಸಮಸ್ಯೆಯಾಗುವ ಸಾಧ್ಯತೆಯಿದೆ. ಆದ್ದರಿಂದ ಕದನ ವಿರಾಮದ ಜತೆಜತೆಗೆ ತಾತ್ಕಲಿಕವಾಗಿ ರದ್ದುಗೊಳಿಸಿರುವ ಸಿಂಧೂ ಒಪ್ಪಂದವನ್ನು ಪುನರ್ ಸ್ಥಾಪಿಸುವಂತೆ ಬೇಡಿಕೆಯಿಟ್ಟಿದೆ. ಪಾಕಿಸ್ತಾನದ ಈ ಬೇಡಿಕೆಯನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ಉಗ್ರವಾದವನ್ನು ಪೋಷಿಸುವುದನ್ನು ನಿಲ್ಲಿಸುವ ತನಕ ಸಿಂಧೂ ಒಪ್ಪಂದ ಮರುಸ್ಥಾಪನೆಯಿಲ್ಲ. ಭವಿಷ್ಯದಲ್ಲಿ ತಾತ್ಕಲಿಕವಾಗಿ ರದ್ದುಗೊಳಿಸುವ ಬದಲು ಒಪ್ಪಂದದಿಂದಲೇ ಹೊರಬರುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ ಎನ್ನುವ ಮಾತುಗಳು ಹೇಳಿದೆ ಎನ್ನಲಾಗಿದೆ.

ಭಯೋತ್ಪಾದಕರನ್ನು ದಮನ ಮಾಡಿ

ಸಿಂಧೂ ಒಪ್ಪಂದವನ್ನು ತಾತ್ಕಲಿಕವಾಗಿ ತಡೆಹಿಡಿದಿರುವ ಭಾರತ, ಇದೀಗ ಈ ಒಪ್ಪಂದವನ್ನು ಮುಂದುವರೆಸಬೇಕು ಎಂದರೆ ಪಾಕಿಸ್ತಾನದಲ್ಲಿರುವ ಉಗ್ರವಾದವನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಹಾಗೂ ಅದರ ವಿರುದ್ಧದ ಹೋರಾಟದಲ್ಲಿ ಕೈಜೋಡಿಸಬೇಕು ಎನ್ನುವ ಷರತ್ತು ವಿಧಿಸುವ ಸಾಧ್ಯತೆಯಿದೆ. ಉಗ್ರವಾದವನ್ನು ಬಿಟ್ಟು ದೇಶ ನಡೆಸುವುದು ಪಾಕಿಸ್ತಾನಕ್ಕೆ ಸಾಧ್ಯವಿಲ್ಲ ಎನ್ನುವ ಮಟ್ಟಿಗೆ ಇರುವುದರಿಂದ ಭಾರತದ ಈ ಷರತ್ತನ್ನು ಪಾಲಿಸಲು ಸಾಧ್ಯವಿಲ್ಲ ಎನ್ನುವ ಸ್ಪಷ್ಟ ಅರಿವಿದೆ. ಆದರೆ ಸಿಂಧೂ ಒಪ್ಪಂದವನ್ನು ರದ್ದುಗೊಳಿಸಿ ತಿಂಗಳು ಕಳೆಯುವ ಹೊತ್ತಿಗೆ ಸಿಂಧ್ ಪ್ರಾಂತ್ಯದಲ್ಲಿ ಅತಿವೃಷ್ಟಿಹಾಗೂ ಅನಾವೃಷ್ಟಿಯನ್ನು ಪಾಕಿಸ್ತಾನ ಕಂಡಿರುವುದರಿಂದ ಇದೀಗ ಶಾಶ್ವತವಾಗಿ ಒಪ್ಪಂದ ಮುರಿದುಕೊಂಡರೆ ಮುಂದೇನು ಎನ್ನುವ ಆತಂಕದಲ್ಲಿದೆ. ಆರಂಭದಲ್ಲಿ ವಿಶ್ವಬ್ಯಾಂಕ್ ಮಧ್ಯಸ್ಥಿಕೆಯಲ್ಲಿ ಸರಿಪಡಿಸಿಕೊಳ್ಳುವ ಲೆಕ್ಕಾಚಾರದಲ್ಲಿ ಪಾಕಿಸ್ತಾನವಿತ್ತು. ಆದರೀಗ ವಿಶ್ವಸಂಸ್ಥೆ ಇದಕ್ಕೂ ತಮಗೂ ಸಂಬಂಧವಿಲ್ಲ ಎನ್ನುವ ರೀತಿ ಮಾತನಾಡಿರುವುದು ಭಾರಿ ಹಿನ್ನಡೆಯಾಗಿದೆ ಎನ್ನುವುದು ಸ್ಪಷ್ಟ.

ಪ್ರಧಾನಿ ಮೋದಿ ವಿರುದ್ಧ ಸಭಾಪತಿ ಬಸವರಾಜ್ ಹೊರಟ್ಟಿ ಅಸಮಾಧಾನ

ಪಾಕಿಸ್ತಾನದ ವಿರುದ್ಧ ಸಂಘರ್ಷ ನಿಲ್ಲಿಸಬಾರದಿತ್ತು

ಚಿಕ್ಕೋಡಿ: ಯಾರದ್ದೋ ಮಾತು ಕೇಳಿ ಪಾಕ್ ವಿರುದ್ಧ ಭಾರತ ಸಂಘರ್ಷ ನಿಲ್ಲಿಸಬಾರದಿತ್ತು ಎಂದು ಪ್ರಧಾನಿ ಮೋದಿ ವಿರುದ್ಧ ಸಭಾಪತಿ ಬಸವರಾಜ್ ಹೊರಟ್ಟಿ ಅಸಮಾಧಾನ ಹೊರಹಾಕಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸಂಘರ್ಷದಲ್ಲಿ ಪಾಕಿಸ್ತಾನವನ್ನು ನಾಶ ಮಾಡಬೇಕಿತ್ತು. ಕದನ ವಿರಾಮದ ನಂತರ ಮತ್ತೆ ದಾಳಿ ಮಾಡಿದ್ದಾರೆ. ಬೇರೆಯವರ ಮಾತು ಕೇಳಿ ಪಾಕಿಸ್ತಾನದ ಜೊತೆ ನಡೆಸುತ್ತಿದ್ದ ಸಂಘರ್ಷ ಕೈ ಬಿಟ್ಟಿದ್ದು ತಪ್ಪು. ಪಾಕಿಸ್ತಾನದವರು ಸಾಯುವವರೆಗೂ ವೈರಿಗಳೇ. ಅವರು ಎಂದಿಗೂ ನಮಗೆ ಒಳ್ಳೆಯದು ಮಾಡಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪಾಕ್ ಹಾಗೂ ಭಾರತದ ನಡುವೆ ಸಂಧಾನದಲ್ಲಿ ಟ್ರಂಪ್ ಮಧ್ಯಸ್ಥಿಕೆ ವಹಿಸಲು ಅವರು ಯಾರು? ಅಮೆರಿಕದ ವಿಚಾರದಲ್ಲಿ ನಾವು ಏನಾದರೂ ಹೇಳಿದರೆ ಅವರು ಕೇಳುತ್ತಾರಾ? ಮೋದಿಯವರು ಕಠಿಣ ಹಾಗೂ ಗಟ್ಟಿ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಈ ವಿಚಾರದಲ್ಲಿ ಟ್ರಂಪ್ ಮಾತು ಕೇಳಿದ್ದು ತಪ್ಪು. ಭಯೋತ್ಪಾದಕರ ವಿಚಾರದಲ್ಲಿ ಎಲ್ಲಾ ದೇಶಗಳು ಶೃಂಗಸಭೆಯನ್ನ ನಡೆಸಿ ಭಯೋತ್ಪಾದಕರನ್ನು ಸ್ವಚ್ಛಗೊಳಿಸಿ ನಾಶ ಮಾಡಬೇಕು ಎಂದು ಒತ್ತಾಯಿಸಿದರು.

ಪಾಕಿಸ್ತಾನವನ್ನು ನಂಬಲು ಸಾಧ್ಯವಿಲ್ಲ

ಮೈಸೂರು: ಪಾಕಿಸ್ತಾನವನ್ನು ನಂಬಲು ಸಾಧ್ಯವಿಲ್ಲ. ಪ್ರತೀ ಬಾರಿ ಪ್ರಚೋದನೆ ಪಾಕಿಸ್ತಾನದಿಂದಲೇ ಬಂದಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಾಕಿಸ್ತಾನವನ್ನು ನಂಬಲು ಸಾಧ್ಯವಿಲ್ಲ. ಅವರು ಹಲವಾರು ಬಾರಿ ಕದನ ವಿರಾಮ ಉಲ್ಲಂಘಿಸಿದ್ದಾರೆ. ನಾವು ನಾಲ್ಕು ಬಾರಿ ಅವರ ವಿರುದ್ಧ ಹೋಗಿದ್ದೇವೆ. ನಾವು ಪ್ರಚೋದನೆ ಕೊಟ್ಟು ಹೋಗಿಲ್ಲ, ಪ್ರತೀ ಬಾರಿ ಪ್ರಚೋದನೆ ಅಲ್ಲಿಂದಲೇ (ಪಾಕಿಸ್ತಾನ) ಬಂದಿದೆ ಎಂದರು. ಮೊನ್ನೆ ಕೇಂದ್ರ ಸರಕಾರದವರು ಭವಿಷ್ಯದಲ್ಲಿ ನಡೆಯುವ ಯಾವುದೇ ಭಯೋತ್ಪಾದಕ ಚಟುವಟಿಕೆಗಳನ್ನು 'ಯುದ್ಧ ಕೃತ್ಯ' ಎಂದೇ ಪರಿಗಣಿಸಲಾಗುತ್ತದೆ ಎಂದು ಹೇಳಿದ್ದಾರೆ. ಏನು ಮಾಡುತ್ತಾರೆ ನೋಡೋಣ. ನಾವಂತೂ ಇದರಲ್ಲಿ ರಾಜಕೀಯ ಮಾಡುತ್ತಿಲ್ಲ. ಬಿಜೆಪಿಯವರು ಏನು ಮಾಡಿಕೊಳ್ಳುತ್ತಾರೋ ಮಾಡಿಕೊಳ್ಳಲಿ. ರಾಷ್ಟ್ರದಲ್ಲಿ ಬಿಜೆಪಿ ಸರಕಾರವಿದೆ. ಅವರ ಜವಾಬ್ದಾರಿ ಹೆಚ್ಚಾಗಿದೆ ಎಂದರು.

ಕೃಷಿ ವಿವಿಯಲ್ಲಿ ವ್ಯಾಸಂಗ ಮಾಡುತ್ತಿದ್ದ 13 ವಿದ್ಯಾರ್ಥಿಗಳು । ಪ್ರಧಾನಿ ನರೇಂದ್ರ ಮೋದಿ ಸೂಚನೆ ಮೇರೆಗೆ ವಿದ್ಯಾರ್ಥಿಗಳ ಸುರಕ್ಷಿತ ವಾಪಸ್ಸಿಗೆ ಎಚ್‌ಡಿಕೆ ಕ್ರಮ । ಇಂದು ಬೆಂಗಳೂರಿಗೆ ವಾಪಸಾಗಲಿರುವ ವಿದ್ಯಾರ್ಥಿಗಳು

ಶ್ರೀನಗರದಲ್ಲಿ ಸಿಲುಕಿದ್ದ ರಾಜ್ಯದ ವಿದ್ಯಾರ್ಥಿಗಳು ವಾಪಸು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತ-ಪಾಕಿಸ್ತಾನ ಯುದ್ಧ ಸಂಕಷ್ಟಕ್ಕೆ ಸಿಲುಕಿದ್ದ ಶ್ರೀನಗರದಲ್ಲಿ ವ್ಯಾಸಂಗ ಮಾಡುತ್ತಿರುವ ರಾಜ್ಯದ 13 ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ವಾಪಸು ಕರೆತರಲಾಗಿದೆ.

ಶ್ರೀನಗರದ ಶೇರ್-ಇ-ಕಾಶ್ಮೀರ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಈ ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದರು. ಪಾಕಿಸ್ತಾನದ ದಾಳಿ ನಡುವೆ ಉದ್ರಿಕ್ತ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದ ವಿದ್ಯಾರ್ಥಿಗಳನ್ನು ವಾಪಸು ರಾಜ್ಯಕ್ಕೆ ಕರೆತರಲು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚನೆ ಮೇರೆಗೆ ಜಮ್ಮುವಿನಿಂದ ರಾಜ್ಯದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆ ತರುವಲ್ಲಿ ಯಶಸ್ವಿ ಆಗಿದ್ದಾರೆ.

ಪಾಕಿಸ್ತಾನ ಅಧರ್ಮ ಮಾರ್ಗದಲ್ಲಿ ಭಾರತದ ಮೇಲೆ ದಾಳಿ ನಡೆಸುತ್ತಿದ್ದು, ಅದಕ್ಕೆ ಪ್ರತ್ಯುತ್ತರ ನೀಡಲಾಗುತ್ತಿದೆ. ಅಲ್ಲದೆ, ಕಣಿವೆ ರಾಜ್ಯದಲ್ಲಿನ ಎಲ್ಲರ ಜೀವ ರಕ್ಷಣೆ ಮಾಡುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸೂಚನೆಯಂತೆ ವಿದ್ಯಾರ್ಥಿಗಳ ತೆರವಿಗೆ ಸರ್ವ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಈ ಕಾರ್ಯಾಚರಣೆಗೆ ನೆರವಾದ ಎಲ್ಲವರಿಗೂ ಧನ್ಯವಾದ ಸಲ್ಲಿಸುತ್ತೇನೆ. ಎಲ್ಲಾ ವಿದ್ಯಾರ್ಥಿಗಳು ಈಗಾಗಲೇ ದೆಹಲಿ ತಲುಪಿದ್ದು, ಅವರನ್ನು ಸುರಕ್ಷಿತವಾಗಿ ಬೆಂಗಳೂರಿಗೆ ಕಳಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ಚನ್ನಪಟ್ಟಣ ತಾಲೂಕಿನ ತಗಚಗೆರೆ ಗ್ರಾಮದ ವಿದ್ಯಾರ್ಥಿ ಹರ್ಷಿತ್ ಅವರ ಪೋಷಕರು ಜಮ್ಮುವಿನಲ್ಲಿ ಸಿಲುಕಿರುವ ತಮ್ಮ ಪುತ್ರನನ್ನು ರಕ್ಷಣೆ ಮಾಡಬೇಕು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದರು. ಕೂಡಲೇ ಈ ವಿಷಯವನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಗಮನಕ್ಕೆ ತಂದು ವಿದ್ಯಾರ್ಥಿಗಳ ಸುರಕ್ಷಿತ ಸ್ಥಳಾಂತರಕ್ಕೆ ಮನವಿ ಮಾಡಿದ್ದರು.

ಶನಿವಾರ ಶ್ರೀನಗರದಿಂದ ಭದ್ರತೆಯ ನಡುವೆ ಬಸ್‌ನಲ್ಲಿ ಜಮ್ಮುವಿಗೆ ಪ್ರಯಾಣಿಸಿದ್ದ ವಿದ್ಯಾರ್ಥಿಗಳು ಭಾನುವಾರ ಮಧ್ಯಾಹ್ನದ ಹೊತ್ತಿಗೆ ರೈಲಿನಲ್ಲಿ ದೆಹಲಿ ತಲುಪಿದರು. ವಿದ್ಯಾರ್ಥಿಗಳ ಸ್ಥಳಾಂತರ ಮತ್ತು ಪ್ರಯಾಣದ ಎಲ್ಲಾ ಪ್ರಕ್ರಿಯೆಗಳನ್ನು ಕೇಂದ್ರ ಸಚಿವರು ಖುದ್ದು ಉಸ್ತುವಾರಿ ವಹಿಸಿ ಅಧಿಕಾರಿಗಳು ಮತ್ತು ವಿದ್ಯಾರ್ಥಿಗಳ ಜತೆ ನಿರಂತರ ಸಂಪರ್ಕದಲ್ಲಿದ್ದರು. ವಿದ್ಯಾರ್ಥಿಗಳು ನವ ದೆಹಲಿಗೆ ತಲುಪಿದ ನಂತರ ಅವರ ಉಸ್ತುವಾರಿಯನ್ನು ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವಾಲಯದ ಅಧಿಕಾರಿಗಳೇ ಸಂಪೂರ್ಣವಾಗಿ ನೋಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಸುರಕ್ಷಿತವಾಗಿ ಅವರ ಮನೆಗಳನ್ನು ತಲುಪುವವರೆಗೂ ನಾವು ಎಚ್ಚರಿಕೆ ವಹಿಸುತ್ತೇವೆ ಎಂದು ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.

ಇಡೀ ದೇಶವು ಸವಾಲಿನ ಪರಿಸ್ಥಿತಿಯಲ್ಲಿ ಇರುವಾಗ ಪ್ರಧಾನಿ ನರೇಂದ್ರ ಮೋದಿಯವರ ಸ್ಪಷ್ಟ ಮಾರ್ಗದರ್ಶನದಿಂದ ಮಾತ್ರ ಇದೆಲ್ಲಾ ಸಾಧ್ಯವಾಗಿದೆ. ಜಮ್ಮು ಮತ್ತು ಕಾಶ್ಮೀರದಿಂದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಲು ಇಡೀ ಕೇಂದ್ರ ಸರಕಾರದ ಅಧಿಕಾರಿಗಳು ಸಹಕಾರ ನೀಡಿದ್ದಾರೆ. ಮುಖ್ಯವಾಗಿ ಭದ್ರತಾ ಸಂಸ್ಥೆಗಳು, ರೈಲ್ವೆ ಸಿಬ್ಬಂದಿ ಮತ್ತು ಸಚಿವಾಲಯದ ಅಧಿಕಾರಿಗಳನ್ನು ನಾನು ಶ್ಲಾಘಿಸುತ್ತೇನೆ. ನಮ್ಮ ಜನರ, ವಿಶೇಷವಾಗಿ ದೂರದ ಪ್ರದೇಶಗಳ ವಿದ್ಯಾರ್ಥಿಗಳ ಸುರಕ್ಷತೆಯು ನಮ್ಮ ಪ್ರಮುಖ ಆದ್ಯತೆಯಾಗಿದೆ ಎಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ. ಶ್ರೀನಗರದಿಂದ ದೆಹಲಿಗೆ ಸುರಕ್ಷಿತವಾಗಿ ವಾಪಸ್ ಬಂದ ಬಗ್ಗೆ ಎಲ್ಲಾ ಹದಿಮೂರು ವಿದ್ಯಾರ್ಥಿಗಳು ಅತೀವ ಸಂತಸ ವ್ಯಕ್ತಪಡಿಸಿದ್ದಾರೆ.

ಭಾರತ-ಪಾಕಿಸ್ತಾನ ಯುದ್ಧ ಸಂಕಷ್ಟಕ್ಕೆ ಸಿಲುಕಿದ್ದ ಶ್ರೀನಗರದಲ್ಲಿ ವ್ಯಾಸಂಗ ಮಾಡುತ್ತಿರುವ ರಾಜ್ಯದ 13 ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ವಾಪಸು ಕರೆತರಲಾಗಿದೆ.

> ಕಷ್ಟದ ಸಮಯದಲ್ಲಿ ನಮ್ಮೊಂದಿಗೆ ನಿಂತಿದ್ದಕ್ಕಾಗಿ ನಮ್ಮ ಪ್ರಧಾನಮಂತ್ರಿಗಳಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ವಿದ್ಯಾರ್ಥಿಗಳ ಸುರಕ್ಷತೆಯನ್ನು ಅವರು ತುಂಬಾ ಗಂಭೀರವಾಗಿ ಪರಿಗಣಿಸಿದ್ದು ನನಗೆ ಬಹಳ ಸಂತೋಷ ಉಂಟು ಮಾಡಿದೆ. ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರ ವೈಯಕ್ತಿಕ ಕಾಳಜಿ, ನೆರವು ಹಾಗೂ ನಿಖಿಲ್ ಕುಮಾರಸ್ವಾಮಿ ಅವರಿಂದ ದೊರೆತ ಸಹಾಯದಿಂದ ನಾವು ಸುರಕ್ಷಿತವಾಗಿ ನಮ್ಮ ನಮ್ಮ ಮನೆಗಳಿಗೆ ತಲುಪುತ್ತಿದ್ದೇವೆ.
>
> -**ಭಾಗ್ಯಶ್ರೀ ಪ್ರಸಾದ್,** ವಿದ್ಯಾರ್ಥಿನಿ.

> ಶ್ರೀನಗರದಲ್ಲಿದ್ದ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚಾದಾಗ ತೀವ್ರ ಅನಿಶ್ಚಿತ ಮತ್ತು ಆತಂಕಕ್ಕೊಳಗಾಗಿದ್ದೆವು. ಆದರೆ ಕೇಂದ್ರ ಸರಕಾರದ ನೆರವಿನಿಂದ ನಾವು ಅಪಾಯದಿಂದ ಪಾರಾದೆವು. ಪ್ರಧಾನಿ ಮೋದಿಯವರ ಅವರ ಸ್ಪಷ್ಟ ಆದೇಶಗಳು ನಾವು ಸುರಕ್ಷಿತವಾಗಿ ವಾಪಸ್ ಆಗಿದ್ದೇವೆ. ನಮ್ಮನ್ನು ಯೋಗಕ್ಷೇಮ, ಸುರಕ್ಷತೆಯ ಬಗ್ಗೆ ನಿರಂತರವಾಗಿ ನಿಗಾ ವಹಿಸಿದ್ದ ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ನಿಖಿಲ್ ಕುಮಾರಸ್ವಾಮಿ ಅವರು ಕೂಡ ನಮ್ಮ ಸುರಕ್ಷಿತ ಪ್ರಯಾಣವನ್ನು ನಿಕಟವಾಗಿ ಗಮನಿಸುತ್ತಿದ್ದರು ಮತ್ತು ಅದು ನಮಗೆಲ್ಲರಿಗೂ ಬಹಳಷ್ಟು ಅನುಕೂಲವಾಯಿತು.
>
> -**ಹರ್ಷಿತ್,** ಶೇರ್ - ಇ -ಕಾಶ್ಮೀರ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ವಿದ್ಯಾರ್ಥಿ

ವಿಶ್ವವಾಣಿ

ಸಂಪಾದಕೀಯ

ಹೀನಸುಳಿ ಬೋಳಿಸಿದರೆ ಹೋದೀತೇ?!

ವಿಶ್ವಾಸಘಾತುಕತೆ, ನಯವಂಚಕತೆ, ಅವಕಾಶವಾದಿತ್ವ, ಬೆನ್ನಿಗಿರಿಯುವಿಕೆ, ವಿಧ್ವಂಸಕ ಚಿತ್ತಸ್ಥಿತಿ ಮುಂತಾದ ಪರಿಭಾಷೆಗಳಿಗೆ ಪರ್ಯಾಯವಾಗಿರುವ ಶಬ್ದವೆಂದರೆ- 'ಪಾಕಿಸ್ತಾನ'. ಈ ಮಾತನ್ನು ಇಷ್ಟುದಿನ ಭಾರತ ಸೇರಿದಂತೆ ಒಂದಷ್ಟು ರಾಷ್ಟ್ರಗಳು ಹೇಳುತ್ತಿದ್ದುದುಂಟು. ಮೊನ್ನಿನ ಬೆಳವಣಿಗೆಯಲ್ಲಿ ಅದಕ್ಕೆ ಆಸ್ಪದವನ್ನೇ ನೀಡದಂತೆ ನಮ್ಮ ಈ ನೆರೆರಾಷ್ಟ್ರವು ಮೇಲಿನ ಅಷ್ಟೂ ನಕಾರಾತ್ಮಕ ಪರಿಭಾಷೆಗಳಿಗೆ ತಾನೇ ಏಕಮಾತ್ರ ಪರ್ಯಾಯ ಶಬ್ದ ಎಂಬುದನ್ನು ಜಗತ್ತಿನೆದುರು ತೋರಿಸಿಕೊಂಡುಬಿಟ್ಟಿತು. ಹೌದು, ಪಹಲ್ಗಾಮ್ ಪೈಶಾಚಿಕ ಕೃತ್ಯಕ್ಕೆ ಪ್ರತೀಕಾರವಾಗಿ ಭಾರತವು ಉಗ್ರರ ಮೇಲೆ ಸಾರಿದ್ದ 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯ ವೇಳೆ ತತ್ತರಿಸಿದ ಪಾಕಿಸ್ತಾನ, ಯಾವ್ಯಾವ ದೇಶಗಳನ್ನೋ ಮಧ್ಯವರ್ತಿಗಳನ್ನಾಗಿಸಿ 'ಅನ್ಯಥಾ ಶರಣಂ ನಾಸ್ತಿ' ಎಂದು ಹೇಳಿಕೊಂಡು ಭಾರತದ ಮುಂದೆ ಮಂಡಿಯೂರಿ ಕೂರುವಂಥ ದುಸ್ಥಿತಿಯನ್ನು ತಾನೇ ತಂದುಕೊಂಡುಬಿಟ್ಟಿತು. ಈ ಅಘೋಷಿತ ಯುದ್ಧಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಮಧ್ಯಸ್ಥಿಕೆಯಲ್ಲಿ ಕದನವಿರಾಮದ ಘೋಷಣೆಯೂ ಆಗಿತ್ತು. ಆಗ ಭಾರತವು ಮೆರೆದ ರಾಜತಾಂತ್ರಿಕ ಪ್ರಬುದ್ಧತೆಯನ್ನು 'ದೌರ್ಬಲ್ಯ' ಎಂದೇ ಪರಿಗಣಿಸಿದ ಪಾಕಿಸ್ತಾನ ಮತ್ತೆ ಕಿತಾಪತಿಗೆ ಮುಂದಾಗಿ 'ಹುಟ್ಟುಗುಣ ಸುಟ್ಟರೂ ಹೋಗದು' ಎಂಬ ಮಾತಿಗೆ ಪುರಾವೆಯೆಂಬಂತೆ ತನ್ನ ಹಳೇಚಾಳಿಗೆ ಮತ್ತೆ ಮೊರೆಹೋಯಿತು. ಕದನ ವಿರಾಮ ಘೋಷಣೆಯಾಗಿ ಮೂರು ಗಂಟೆ ಕಳೆಯುವ ಮೊದಲೇ ಅದನ್ನು ಉಲ್ಲಂಘಿಸಿ ಭಾರತದ ಗಡಿಗುಂಟ ಡ್ರೋನ್ ದಾಳಿ ನಡೆಸುವಂಥ ಧಾರ್ಷ್ಟ್ಯವನ್ನೂ ತೋರಿಬಿಟ್ಟಿತು. ಇದನ್ನು ಕಂಡ ಭಾರತೀಯರನೇಕರು, 'ಅಪಾತ್ರರಿಗೆ ಅಯ್ಯೋ ಎಂದು ಮರುಗಬಾರದು' ಎಂದು ಗೊಣಗಿಕೊಂಡಿದ್ದುಂಟು. ಹಾಗೆ ನೋಡಿದರೆ, ಆರ್ಥಿಕ, ಸಾಮಾಜಿಕ, ರಾಜಕೀಯ ನೆಲೆಗಳಲ್ಲಿ ಅದಾಗಲೇ ಕುಸಿದಿದ್ದ ಪಾಕಿಸ್ತಾನ, ಭಾರತದ 'ಸಿಂದೂರ' ಕಾರ್ಯಾಚರಣೆಗೂ ಮೊದಲು, ತನ್ನಲ್ಲಿಲ್ಲದ ಸೇನಾಸಾಮರ್ಥ್ಯದ ಕುರಿತು ಬೊಗಳೆ ಬಿಟ್ಟು ಭಾರತೀಯರನ್ನು ಬೆದರಿಸುವ 'ಮೈಂಡ್ ಗೇಮ್' ಆಡಿದ್ದುಂಟು. ಆದರೆ, ಭಾರತವು ಒಂದೊಂದೇ ಉಗ್ರರ ನೆಲೆಗಳ ಮೇಲೆ ಬರೆ ಹಾಕಲು ಶುರುಮಾಡುತ್ತಿದ್ದಂತೆ, ಪಾಕ್ ಕೈ ಕೈ ಹಿಸುಕಿಕೊಳ್ಳಬೇಕಾಯಿತು ಎಂಬುದನ್ನು ಮರೆಯಲಾಗದು. ಇಂಥ ಇಬ್ಬಂದಿತನ ಮೆರೆದ ಪಾಕ್, ಈಗ ಕದನ ವಿರಾಮವನ್ನು ಉಲ್ಲಂಘಿಸಿದೆ. 'ಹೀನಸುಳಿ ಬೋಳಿಸಿದರೆ ಹೋದೀತೇ?!' ಅಂತ ನಮ್ಮ ಪೂರ್ವಜರು ಅಷ್ಟಿಲ್ಲದೇ ಹೇಳಿದ್ದಾರಾ...

ಸೊಂಪಾದಕೀಯ

ಮಂಗಗಳ ಮಂಗಳಕಾರ್ಯ

ಕಥಾನಾಯಕನು ಕಷ್ಟದಲ್ಲಿರುವವರ ರಕ್ಷಣೆ ಮಾಡುವ ದೃಶ್ಯಗಳನ್ನು ನಾವು ಅನೇಕ ಸಿನಿಮಾಗಳಲ್ಲಿ ನೋಡಿದ್ದೇವೆ. 'ಅಯ್ಯೋ, ಈ ಅನ್ಯಾಯನಾ ತಡೆಯೋಕೆ ಯಾರೂ ಇಲ್ವಾ..?' ಅಂತ ಚಿತ್ರದ ಪಾತ್ರವೊಂದು ಕೂಗಿ ಹೇಳಿದಾಗ ನಾಯಕ ನಟನ ಎಂಟ್ರಿ ಆಗೋದು, ಅವನು ಬಂದು ಅನ್ಯಾಯನ ನಿಲ್ಲಿಸೋದು ಎಲ್ಲವನ್ನೂ ನೋಡಿದ್ದೇವೆ. ಇದು ಮುಂದುವರಿದು, ಅನೇಕ ಪ್ರಾಣಿಪ್ರಧಾನ ಚಿತ್ರಗಳಲ್ಲಿ ನಾಯಿ, ಕೋತಿ, ಹಸು ಮುಂತಾದ ಪ್ರಾಣಿಗಳು ಸಂಕಷ್ಟದಲ್ಲಿರುವವರನ್ನು ಪಾರುಮಾಡಿದ ಉದಾಹರಣೆಗಳನ್ನೂ ನಾವು ನೋಡಿದ್ದೇವೆ. ಇದು ಅಂಥದ್ದೇ ಒಂದು ಪ್ರಸಂಗ. ಸೆಕ್ಸ್ ಅನ್ನೋ ವಿಷಯಕ್ಕೆ ಬಂದ್ರೆ ಮನುಷ್ಯ ಕ್ರೂರಮೃಗ ಆಗ್ತಾನೆ ಅನ್ನೋದಕ್ಕೆ ಅನೇಕ ಉದಾಹರಣೆಗಳಿವೆ. ಇತ್ತೀಚೆಗಂತೂ ಮನುಷ್ಯನನ್ನು ಕೊಂದು, ದೇಹವನ್ನು ಕತ್ತರಿಸಿ, ಅದರ ತುಂಡುಗಳನ್ನು ಫ್ರಿಜ್‌ನಲ್ಲಿ ಶೇಖರಿಸಿಡುವವರೆಗೆ ಈ ಕ್ರೂರತನ ಮುಂದುವರಿದಿರೋದ್ರಿಂದ ಇದು ಶೀತಲ ಸಮರವಾಗಿ ಉಳಿದಿಲ್ಲ. ಮನುಷ್ಯನೊಳಗಿನ ಮೃಗ ಒಂದು ಕಡೆ ಆದರೆ, ಮೃಗಗಳಲ್ಲಿರೋ ಮನುಷ್ಯತ್ವ ಇನ್ನೊಂದು ಕಡೆ. ಅಂಥ ಮೃಗಗಳ ಮಾನವೀಯತೆ ಸಾರುವಂಥ ವಿಷಯ ಇದು. ಕೆಲ ತಿಂಗಳ ಹಿಂದೆ ಉತ್ತರಪ್ರದೇಶದಲ್ಲಿ ಮಂಗಗಳು, ಅತ್ಯಾಚಾರಕ್ಕೆ ಒಳಗಾಗುತ್ತಿದ್ದ ಬಾಲಕಿಯನ್ನು ರಕ್ಷಣೆ ಮಾಡಿ, ಮನುಷ್ಯ ಮೇಲೋ, ಪ್ರಾಣಿ ಮೇಲೋ ಎಂಬ ಪ್ರಶ್ನೆಗೆ ಉತ್ತರ ನೀಡಿದ ಕಥೆಯಿದು. 6 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗುವ ಪ್ಲ್ಯಾನ್ ಮಾಡಿ, ಆಕೆಯ ಜತೆ ನಯವಾಗಿ ಮಾತಾಡಿ ಪಾಳುಬಿದ್ದ ಮನೆಯೊಂದಕ್ಕೆ ಕರೆದೊಯ್ದಿದ್ದ ಕಾಮುಕ, ಇನ್ನೇನು ಆಕೆಯ ಮೇಲೆ ಅತ್ಯಾಚಾರಕ್ಕೆ ಸಿದ್ಧವಾಗಿದ್ದಾಗ ಅವನ ಮೇಲೆ ಅಟ್ಯಾಕ್ ಮಾಡಿದ ಮಂಗಗಳು ಆತನನ್ನು ಅಲ್ಲಿಂದ ಓಡಿಸಿ ಮಂಗಗಳಿಗೂ ಮಾನವೀಯತೆ ಇದೆ ಅಂತ ಪ್ರೂವ್ ಮಾಡಿದವು.

ಸಂಪಾದಕರ ಸದ್ಯಶೋಧನೆ

ಸಾಮಾನ್ಯ ತಪ್ಪು ತಿಳಿವಳಿಕೆಗಳು

ಕೆಲವೊಮ್ಮೆ ನಾವು ವಿದೇಶಗಳಲ್ಲಿ ಪ್ರಯಾಣಿಸುವಾಗ, ನಮ್ಮ ದೇಶದಲ್ಲಿ ಸರಿಯಾಗಿರುವುದು, ನಾವು ಭೇಟಿ ನೀಡುವ ದೇಶದಲ್ಲಿ ಸರಿಯಲ್ಲವೇನೋ ಎಂಬ ಸಂದೇಹ ಕಾಡುತ್ತಿರುತ್ತದೆ. ನಮ್ಮ ಹಾವ-ಭಾವ, ನಡೆ, ವರ್ತನೆ ಸರಿಯಾಗಿದೆಯಾ ಎಂದು ನಮ್ಮನ್ನೇ ಕೇಳಿಕೊಳ್ಳುತ್ತಿರುತ್ತೇವೆ. ಎಷ್ಟೆಂದರೂ ನಾವು ಅಲ್ಲಿನ ಸಂಸ್ಕೃತಿಗೆ ಹೊಸಬರು. ಅಲ್ಲಿನ ಸಂಪ್ರದಾಯ, ಆಚರಣೆ ನಮಗೆ ಸರಿಯಾಗಿ ಗೊತ್ತಿರುವುದಿಲ್ಲ. ಉದಾಹರಣೆಗೆ, ನೀವು ಜಪಾನಿಗೆ ಮೊದಲ ಬಾರಿಗೆ ಹೋಗಿದ್ದೀರಿ, ಅಲ್ಲಿನ ಸ್ಥಳೀಯರೊಬ್ಬರು ನಿಮ್ಮನ್ನು ಅವರ ಮನೆಗೆ ಆಹ್ವಾನಿಸಿದ್ದಾರೆ, ಆಗ ನೀವು ಅಭ್ಯಾಸಬಲದಿಂದ ಬೂಟು ಅಥವಾ ಚಪ್ಪಲಿ ಧರಿಸಿಯೇ ಮನೆಯೊಳಗೆ ಪ್ರವೇಶಿಸಿದಿರಿ ಎನ್ನಿ. ಅದನ್ನು ಅವರು ಯಾವ ಕಾರಣಕ್ಕೂ ಸಹಿಸುವುದಿಲ್ಲ. ನಿಮ್ಮ ಬೂಟನ್ನು ಹೊರಗೆ ಬಿಟ್ಟು, ಅಲ್ಲಿಯೇ ಇಟ್ಟಿರುವ ಚಪ್ಪಲಿ ಧರಿಸಿ ಒಳಬರಬೇಕು. ಇದು ಮನೆಗೆ ಮಾತ್ರ ಸೀಮಿತವಲ್ಲ. ಕೆಲವು ಆಫೀಸುಗಳಲ್ಲೂ ಕಡ್ಡಾಯ. ಮನೆ ಅಥವಾ ಆಫೀಸಿನ ಹೊರಗೆ ಅತಿಥಿಗಳಿಗೆ ಚಪ್ಪಲಿ ಇಟ್ಟಿದ್ದಾರೆಂದರೆ, ನಮ್ಮದನ್ನು ಹೊರಗೆ ಕಳಚಿಡಬೇಕು ಎಂದರ್ಥ. ನಿಮ್ಮ ಬೂಟುಗಳನ್ನು ತೆಗೆಯಬೇಕಾದ ಪರಿಸ್ಥಿತಿಯಲ್ಲಿ, ತಮ್ಮ ಅತಿಥಿಗಳು ಬರಿಗಾಲಿನಲ್ಲಿ ನಡೆಯುವುದನ್ನು ಅವರು ಬಯಸುವುದಿಲ್ಲ. ನೀವು ಬೂಟುಗಳನ್ನು ತೆಗೆದ ನಂತರ ಯಾವಾಗಲೂ ನಿಮಗಾಗಿ ಒಂದು ಜೋಡಿ ಚಪ್ಪಲಿಗಳು ಕಾಯುತ್ತಿರುತ್ತವೆ. ಅತಿಥಿಗಳಿಗೆ ಮನೆಯೊಳಗೇ ಧರಿಸುವ ಚಪ್ಪಲಿಗಳನ್ನು ಒದಗಿಸುವುದು ಅಲ್ಲಿ ಸಾಮಾನ್ಯ. ನೀವು ಅಂಗಡಿ, ಮಾಲ್, ಹೋಟೆಲ್‌ಗೆ ಹೋದಾಗ, ಕ್ಯಾಷಿಯರ್ ಕೈಯಲ್ಲಿ ಹಣವನ್ನು ಇಡುವುದನ್ನು ಅವರು ಇಷ್ಟಪಡುವುದಿಲ್ಲ. ನೀವು ಜಪಾನ್‌ನಲ್ಲಿ ಹಣ ಪಾವತಿಸಲು ಕೌಂಟರ್‌ನಲ್ಲಿ ಒಂದು ಟ್ರೇ ಇಟ್ಟಿರುವುದನ್ನು ಗಮನಿಸುತ್ತೀರಿ. ನೀವು ಹಣವನ್ನು ಇಡುವ ಸ್ಥಳ ಅದು. ನೀವು ಟ್ರೇ ಅನ್ನು ನಿರ್ಲಕ್ಷಿಸಿ ನಿಮ್ಮ ಹಣವನ್ನು ಕೌಂಟರ್‌ನಲ್ಲಿ ಇಡಲು ನಿರ್ಧರಿಸಿದರೆ ಅದನ್ನು ತುಸು ಅಸಭ್ಯವೆಂದು ಪರಿಗಣಿಸಲಾಗುತ್ತದೆ ಅಥವಾ ನೀವು ಕ್ಯಾಷಿಯರ್ ಕೈಯಲ್ಲಿ ಹಣವನ್ನು ಇಡಲು ಪ್ರಯತ್ನಿಸಿದರೆ ಅದನ್ನು ವಿಚಿತ್ರವೆಂದು ಪರಿಗಣಿಸಲಾಗುತ್ತದೆ. ನೀವು ಟ್ರೇ ಅನ್ನು ನೋಡಿದರೆ, ಹಣವನ್ನು ಅದರಲ್ಲಿಯೇ ಇಡಬೇಕೆಂದರ್ಥ. ಇದು ಒಂದು ಉತ್ತಮ ವ್ಯವಸ್ಥೆ. ಏಕೆಂದರೆ ಕ್ಯಾಷಿಯರ್ ಟ್ರೇಯಿಂದ ಹಣವನ್ನು ತೆಗೆದು ಒಳಗೆ ಹಾಕುವ ಮೊದಲು, ನಿಮಗೆ ಚಿಲ್ಲರೆ ಹಣವನ್ನು ನೀಡುತ್ತಾನೆ. ನಿಮಗೆ ನೀಡಬೇಕಾದ ಹಣದಲ್ಲಿ ವ್ಯತ್ಯಾಸ ಕಂಡುಬಂದರೆ, ಅದಕ್ಕೆ ನಿಮ್ಮ ಕಣ್ಣೆದುರೇ ಪುರಾವೆ ಸಿಗುತ್ತದೆ. ನೀವು ಹೋಟೆಲಿಗೆ ಹೋದಾಗ, ಅದರ ಬದಲು ಇದನ್ನು ಕೊಡಿ ಎಂದು ಕೇಳುವುದನ್ನು ಅಥವಾ ನಿಮ್ಮ ಊಟವನ್ನು ಕಸ್ಟಮೈಸ್ ಮಾಡುವುದನ್ನು ಅವರು ಇಷ್ಟಪಡುವುದಿಲ್ಲ. ನೀವು ಬದಲಿಗಳನ್ನು ಕೇಳಲು ಪ್ರಾರಂಭಿಸಿದಾಗ ಅವರು ಇಲ್ಲ ಎಂದು ಹೇಳಿದರೆ ಅಥವಾ ನಿಮ್ಮೆಡೆಗೆ ಖಾಲಿನೋಟ ಬೀರಿದರೆ ಆಶ್ಚರ್ಯಪಡಬೇಡಿ, ಜಪಾನಿ ರೆಸ್ಟೋರೆಂಟ್‌ಗಳು ವಿಶೇಷ ವಿನಂತಿಗಳನ್ನು ವಿರಳವಾಗಿ ಪೂರೈಸುತ್ತವೆ, ಆದರೆ ಚಿಂತಿಸಬೇಡಿ. ನಿಮ್ಮ ನೆಚ್ಚಿನ ವಸ್ತುಗಳನ್ನು ಸೇರಿಸಲು ಆಯ್ಕೆಗಳನ್ನು ನೀಡುವ ಸಾಕಷ್ಟು ಭಕ್ಷ್ಯಗಳು ಇರುತ್ತವೆ. ಜಪಾನಿನಲ್ಲಿ ಎಲ್ಲ ಕಡೆಗಳಲ್ಲಿ ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ ಎಂದು ಭಾವಿಸಿದ್ದರೆ ನಿಮ್ಮ ಊಹೆ ತಪ್ಪು. ಸುಧಾರಿತ, ಆಧುನಿಕ ತಂತ್ರಜ್ಞಾನಕ್ಕೆ ಹೆಸರಾದ ಜಪಾನಿನಲ್ಲಿ ಹೆಚ್ಚಿನ ತಾಣಗಳಲ್ಲಿ ನಗದು ಮಾತ್ರ (cash only) ಕೌಂಟರುಗಳನ್ನು ಕಾಣಬಹುದು. ಜಪಾನಿನಲ್ಲಿ ವಯಸ್ಸಾದವರು ಹೆಚ್ಚಿರುವುದರಿಂದ, ಅವರು ಇನ್ನೂ ಕ್ರೆಡಿಟ್ ಕಾರ್ಡ್ ಬದಲಿಗೆ ನಗದು ಬಳಸಲು ಬಯಸುತ್ತಾರೆ. ಸಣ್ಣ-ಪುಟ್ಟ ಅಂಗಡಿಗಳಲ್ಲಿ, ದರ್ಶಿನಿ ಥರದ ಹೋಟೇಲುಗಳಲ್ಲಿ ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸುವುದಿಲ್ಲ. ಹೀಗಾಗಿ ಜಪಾನಿನಲ್ಲಿ ಓಡಾಡುವಾಗ ಕಿಸೆಯಲ್ಲಿ ಕ್ಯಾಶ್ ಇಟ್ಟುಕೊಳ್ಳುವುದನ್ನು ಮರೆಯಬಾರದು. ಜಪಾನಿನಲ್ಲಿ ಸ್ನಾನದ ಆಚರಣೆ ಸ್ವಲ್ಪ ವಿಭಿನ್ನ. ಕೆಲವೆಡೆ ಶವರ್ ಮತ್ತು ಬಾತ್ ಟಬ್ ಎರಡೂ ಇರುವುದು ಸಾಮಾನ್ಯ. ಹಾಗಿದ್ದಾಗ ಶವರ್ ಮಾಡಿ ನಂತರ ಟಬ್‌ಗೆ ಇಳಿಯಬೇಕು ಎಂದರ್ಥ. ಜಪಾನಿನ ಸ್ನಾನಗೃಹ ಹೈಟೆಕ್. ಇದು ಶ್ರೀಮಂತರಿಗೆ ಮಾತ್ರ ಸಾಧ್ಯ ಎಂದು ಭಾವಿಸಬೇಕಿಲ್ಲ. ಅಲ್ಲಿನ ಸ್ನಾನಗೃಹಗಳು ಇರುವುದೇ ಹಾಗೆ. ಜಪಾನ್ ವಿಭಿನ್ನ ಆಹಾರ ಸಂಸ್ಕೃತಿ ಇರುವ ದೇಶ. ಉದಾಹರಣೆಗೆ, ಸುಶಿ, ರೇಮನ್, ಒಕೋನೋಮಿಯಾಕಿ, ಟಾಕೋಯಾಕಿ ಮುಂತಾದವು. ಕೆಲವರು ಪ್ರಜ್ಞಾಪೂರ್ವಕವಾಗಿ ಅಥವಾ ಅಜ್ಞಾನದಿಂದ ಸ್ಥಳೀಯ ಆಹಾರಗಳನ್ನು ತಿರಸ್ಕರಿಸುತ್ತಾರೆ. ಇದು ನೈಜ ಜಪಾನಿ ಅನುಭವದಿಂದ ದೂರವಾದಂತೆ. ಅರ್ಥವಾಗದ ಹೆಸರುಗಳೆಂದು ಬಿಡುವ ಬದಲು, ಫೋಟೋ ನೋಡಿ ಆಯ್ಕೆ ಮಾಡಬಹುದು.

ದೇವೇಂದ್ರ ಫಡ್ನವೀಸ್ ಎಂಟ್ರಿ ಆಗಿದ್ದೇಕೆ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕೆಲ ದಿನಗಳ ಹಿಂದೆ ಬಿಜೆಪಿಯಿಂದ ಉಚ್ಚಾಟಿತರಾದ ಬಸನಗೌಡ ಪಾಟೀಲ್ ಯತ್ನಾಳ್ ಅವರು ಪಕ್ಷದ ವರಿಷ್ಠರಿಗೆ ಒಂದು ಸಂದೇಶ ರವಾನಿಸಿದರು. 'ಪಕ್ಷದ ಶಿಸ್ತನ್ನು ಇನ್ನು ಉಲ್ಲಂಘನೆ ಮಾಡುವುದಿಲ್ಲ' ಎಂಬುದು ಆ ಸಂದೇಶ. ಅರ್ಥಾತ್, ಪಕ್ಷದಿಂದ ಉಚ್ಚಾಟಿತರಾದ ಯತ್ನಾಳ್ ಅವರು ಬಿಜೆಪಿ ಪಾಳಯಕ್ಕೆ ಮರಳಲು ಉತ್ಸುಕರಾಗಿದ್ದಾರೆ. ಆದರೆ ಯಡಿಯೂರಪ್ಪ ಗ್ಯಾಂಗನ್ನು ಕಂಡರೆ ಕುದಿಯುವ, ಎಗಾದಿಗಾ ಮಾತನಾಡುವ ಯತ್ನಾಳ್ ಹೀಗೆ ಇದ್ದಕ್ಕಿದ್ದಂತೆ ಧ್ವನಿ ಬದಲಿಸಿದ್ದೇಕೆ?

ಹಾಗೆ ನೋಡಿದರೆ, ಬಿಜೆಪಿಯಿಂದ ಉಚ್ಚಾಟಿತರಾದ ಯತ್ನಾಳ್ ಹೊಸ ಪಕ್ಷ ಕಟ್ಟುತ್ತಾರೆ, ಕಟ್ಟಿ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ವಿರುದ್ಧ ಎರಗುತ್ತಾರೆ ಅಂತ ಕೆಲವರು ನಿರೀಕ್ಷಿಸಿದ್ದರು. ಎಷ್ಟೇ ಆದರೂ ಲಿಂಗಾಯತ ಒಳಪಂಗಡಗಳಲ್ಲಿ ತುಂಬಾ ಬಲಿಷ್ಠರಾದ ಪಂಚಮಸಾಲಿ ಸಮುದಾಯದವರು, ಯತ್ನಾಳ್ ಅವರಿಗಾದ ಈ ಅವಮಾನವನ್ನು ಸಹಿಸುವುದಿಲ್ಲ ಮತ್ತು ಅದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲಿರುವ ಯತ್ನಾಳ್ ತಮ್ಮ ಪವರ್ ಅನ್ನು ತೋರಿಸುತ್ತಾರೆ ಎಂಬುದು ಇಂಥವರ ಲೆಕ್ಕಾಚಾರ ಆಗಿತ್ತು.

ಆದರೆ ಇಂಥ ಲೆಕ್ಕಾಚಾರಗಳನ್ನು ಹುಸಿಗೊಳಿಸಿದ ಯತ್ನಾಳ್, ಮರಳಿ ಬಿಜೆಪಿ ಪಾಳಯ ಸೇರಲು ಉತ್ಸುಕರಾಗಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಅದು ಕಷ್ಟ ಎಂಬುದು ನಿಜವಾದರೂ ಭವಿಷ್ಯದಲ್ಲಿ ಅದನ್ನು ನಿಜ ಮಾಡಲು ಒಬ್ಬ ನಾಯಕರು ಅಣಿಯಾಗಿದ್ದಾರೆ. ಅವರೇ- ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್.

ಹೀಗೆ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಮರಳಿ ಬಿಜೆಪಿ ಪಾಳಯಕ್ಕೆ ಸೇರಿಸಲು ದೇವೇಂದ್ರ ಫಡ್ನವೀಸ್ ಯಾಕೆ ಉತ್ಸುಕರಾಗಿದ್ದಾರೆ? ಎಂಬ ಪ್ರಶ್ನೆಯನ್ನು ಮುಂದಿಟ್ಟುಕೊಂಡರೆ ಕಣ್ಣಿಗೆ ಕಾಣುವ ಮತ್ತೊಬ್ಬ ನಾಯಕ, ಮಾಜಿ ಸಚಿವ ರಮೇಶ್ ಜಾರಕಿಹೊಳಿ. ಅಂದ ಹಾಗೆ, ಯಡಿಯೂರಪ್ಪ-ವಿಜಯೇಂದ್ರ ಅವರ ವಿರುದ್ಧದ ಹೋರಾಟದಲ್ಲಿ ಬಸನಗೌಡ ಪಾಟೀಲ್ ಯತ್ನಾಳರಂತೆ ಮುಂಚೂಣಿಯಲ್ಲಿದ್ದವರು ರಮೇಶ್ ಜಾರಕಿಹೊಳಿ. ಆದರೆ 'ಜಿಹ್ವಾಸ್ತ್ರ' ಪ್ರಯೋಗದಲ್ಲಿ ಜಾರಕಿಹೊಳಿ ಅವರು ಯತ್ನಾಳರಷ್ಟು ನಿಷ್ಣಾತರಲ್ಲ. ಕೆಲವು ಸಂದರ್ಭಗಳಲ್ಲಿ ಯತ್ನಾಳ್ ಮೌನವಾಗಿರುವ ಪರಿಸ್ಥಿತಿ ಸೃಷ್ಟಿಯಾಗುತ್ತಿತ್ತಲ್ಲ? ಆಗೆಲ್ಲ ಜಾರಕಿಹೊಳಿ ರಣೋತ್ಸಾಹ ತೋರಿಸುತ್ತಿದ್ದರು. 'ಇನ್ನು ಮುಂದೆ ವಿಜಯೇಂದ್ರ ವಿರೋಧಿ ಹೋರಾಟದ ಮುಂಚೂಣಿಯಲ್ಲಿ ನಾನೇ ಇರುತ್ತೇನೆ' ಎನ್ನುತ್ತಿದ್ದರು. ಆದರೆ ಅದೇನೇ ಮಾಡಿದರೂ ಯತ್ನಾಳ್ ಅವರಷ್ಟು ಪರಿಣಾಮಕಾರಿಯಾಗಿ ಜಿಹ್ವಾಸ್ತ್ರ ಪ್ರಯೋಗಿಸಲು ಅವರಿಗೆ ಆಗುತ್ತಿರಲಿಲ್ಲ. ಹೀಗಾಗಿ ಯತ್ನಾಳ್ ಅವರು ಬಿಜೆಪಿಯಿಂದ ಉಚ್ಚಾಟಿತರಾದ ನಂತರದ ದಿನಗಳಲ್ಲಿ ರಮೇಶ್ ಜಾರಕಿಹೊಳಿ ಮೌನಕ್ಕೆ ಜಾರಿದ್ದಾರೆ.

ಹಾಗಂತ ಪರ್ಮನೆಂಟಾಗಿ ಮೌನ ಧರಿಸಲು ಸಾಧ್ಯವಿಲ್ಲವಲ್ಲ? ಹೀಗಾಗಿ ಕೆಲ ದಿನಗಳ ಹಿಂದೆ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರನ್ನು ಭೇಟಿ ಮಾಡಿದ್ದಾರೆ. ಈ ಭೇಟಿಯ ಸಂದರ್ಭದಲ್ಲಿ ರಾಜ್ಯ ಬಿಜೆಪಿಯ ವಿದ್ಯಮಾನಗಳ ಬಗ್ಗೆ ಚರ್ಚಿಸಿದ ಅವರು, 'ಪಕ್ಷನಿಷ್ಠರಾದ ಯತ್ನಾಳ್ ಪ್ರಾಮಾಣಿಕವಾಗಿ ಮಾತನಾಡಿದ್ದೇ ಅವರಿಗೆ ಮುಳುವಾಗಿದೆ. ಹೀಗಾಗಿ ಉಚ್ಚಾಟಿತರಾಗಿರುವ ಅವರನ್ನು ಮರಳಿ ಪಕ್ಷಕ್ಕೆ ಸೇರಿಸಿಕೊಳ್ಳಬೇಕು ಅಂತ ವರಿಷ್ಠರಿಗೆ ಹೇಳಿ' ಎಂದು ಮನವಿ ಮಾಡಿಕೊಂಡಿದ್ದಾರೆ.

ಹಾಗೆ ನೋಡಿದರೆ, ಮೋದಿ-ಅಮಿತ್ ಶಾ ಮಾತ್ರವಲ್ಲದೆ ಸಂಘ ಪರಿವಾರದ ನಾಯಕರಿಗೂ ಫಡ್ನವೀಸ್ ಅತ್ಯಾಪ್ತರು. ಇಂಥ ಫಡ್ನವೀಸ್ ಅವರಿಗೆ ಕರ್ನಾಟಕದ ಗಡಿಭಾಗದ ಜಿಲ್ಲೆಗಳ ರಾಜಕೀಯದಲ್ಲಿ ಆಸಕ್ತಿ ಹೆಚ್ಚು. ಅದರಲ್ಲೂ ಮುಂಬಯಿ-ಕರ್ನಾಟಕ ಭಾಗದ ರಾಜಕೀಯದಲ್ಲಿ ತುಸು ಹೆಚ್ಚೇ ಅನ್ನಿಸುವಷ್ಟು ಆಸಕ್ತಿ ಹೊಂದಿರುವ ಫಡ್ನವೀಸ್ ಅವರು ಸಹಜವಾಗಿಯೇ ಆ ಭಾಗದ ಬಿಜೆಪಿ ನಾಯಕರ ಜತೆ ಆತ್ಮೀಯತೆ ಹೊಂದಿದ್ದಾರೆ. ಇದೇ ಕಾರಣಕ್ಕಾಗಿ ರಮೇಶ್ ಜಾರಕಿಹೊಳಿ ತಮ್ಮನ್ನು ಭೇಟಿಯಾಗಿ ಯತ್ನಾಳ್ ಪರವಾಗಿ ವಾದಿಸಿದ ನಂತರ ಫಡ್ನವೀಸ್ ಒಂದು ಉಪಾಯ ಹೇಳಿದ್ದಾರೆ. ಇನ್ನು ಮುಂದೆ ಪಕ್ಷದ ಶಿಸ್ತು ಉಲ್ಲಂಘನೆ ಮಾಡುವುದಿಲ್ಲ ಅಂತ ಯತ್ನಾಳ್ ವರಿಷ್ಠರಿಗೆ ಸಂದೇಶ ಕಳಿಸಲಿ. ಮುಂದೆ ಅವರನ್ನು ಮರಳಿ ಬಿಜೆಪಿಗೆ ಸೇರಿಸುವ ಜವಾಬ್ದಾರಿ ನನಗಿರಲಿ ಎಂಬುದು ಅವರು ಹೇಳಿದ ಉಪಾಯ. ಈಗ ಅವರು ಹೇಳಿದ ಉಪಾಯದಂತೆ ಪಾನು ಉರುಳಿದೆ. ಭಾರತ-ಪಾಕಿಸ್ತಾನದ ನಡುವಣ ಸಂಘರ್ಷಕ್ಕೆ ಬ್ರೇಕ್ ಬಿದ್ದ ನಂತರ ಯತ್ನಾಳ್ ಎಪಿಸೋಡಿಗೆ ಪುನಃ ಚಾಲನೆ ಸಿಗಲಿದೆ.

ಬಿಜೆಪಿಯಲ್ಲಿ ಅಸಹಕಾರ ಚಳವಳಿ

ಈ ಮಧ್ಯೆ ರಾಜ್ಯ ಬಿಜೆಪಿಯಲ್ಲಿ ಅಸಹಕಾರ ಚಳವಳಿ ಆರಂಭವಾಗಿದೆ. ಇಂಥ ಚಳವಳಿಗೆ ಗ್ರೇಟರ್ ಬೆಂಗಳೂರು ವಿಷಯವೇ ಕಾರಣ. ಬಿಬಿಎಂಪಿಯನ್ನು ಐದು ಹೋಳುಗಳನ್ನಾಗಿ ಮಾಡುವ ರಾಜ್ಯ ಸರಕಾರದ ನಿರ್ಧಾರವನ್ನು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಪ್ರತಿಪಕ್ಷ ನಾಯಕ ಆರ್.ಅಶೋಕ್ ಪರಿಣಾಮಕಾರಿಯಾಗಿ ವಿರೋಧಿಸುತ್ತಿಲ್ಲ. ಇದಕ್ಕೆ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಜತೆ ಅವರಿಗಿರುವ ಆತ್ಮೀಯತೆಯೇ ಕಾರಣ ಎಂಬುದು ಬಹುತೇಕ ಬಿಜೆಪಿ ಕಾರ್ಯಕರ್ತರ ಸಿಟ್ಟು. ಇವತ್ತು ಇವರಿಗಿರುವ ಆಪ್ತತೆಯ ಕಾರಣಕ್ಕಾಗಿ ಬಿಬಿಎಂಪಿಯನ್ನು ಹೋಳು ಮಾಡಲು ಬಿಟ್ಟರೆ, ಅದು ಪುರಸಭೆ, ನಗರಸಭೆಗಳ ಲೆವೆಲ್ಲಿಗೆ ಇಳಿಯುತ್ತದೆ. ಹಾಗಾದ ಮೇಲೆ ಅದನ್ನು ಬಿಬಿಎಂಪಿ ಅಂತ ಕರೆಯುವುದಾದರೂ ಏಕೆ? ಎಂಬುದು ಈ ಕಾರ್ಯಕರ್ತರ ಪ್ರಶ್ನೆ.

ಹಾಗಂತಲೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ ನಡ್ಡಾ ಅವರಿಗೆ ಸಾವಿರಕ್ಕೂ ಅಧಿಕ ಕಾರ್ಯಕರ್ತರು ಪತ್ರ ಬರೆದಿದ್ದಾರಲ್ಲದೆ, ನಾಯಕತ್ವದ ಈ ವೈಫಲ್ಯವನ್ನು ಸರಿಪಡಿಸದಿದ್ದರೆ ಪಕ್ಷ ರೂಪಿಸುವ ಹೋರಾಟಗಳಲ್ಲಿ ನಾವು ಪಾಲ್ಗೊಳ್ಳುವುದಿಲ್ಲ ಅಂತ ನೇರವಾಗಿಯೇ ಎಚ್ಚರಿಸಿದ್ದಾರೆ. ಅವರ ಈ ಎಚ್ಚರಿಕೆಯನ್ನು ಪಕ್ಷದ ರಾಷ್ಟ್ರೀಯ ನಾಯಕರು ತಕ್ಷಣ ಪರಿಗಣಿಸುವುದು ಕಷ್ಟವಾಗಬಹುದು. ಯಾಕೆಂದರೆ ಕೇಂದ್ರ ಸರಕಾರವು ಪಾಕಿಸ್ತಾನದ ಜತೆಗಿನ ಸಂಘರ್ಷದಲ್ಲಿ ಮುಳುಗಿರುವಾಗ ಕರ್ನಾಟಕದ ಬಿಜೆಪಿ ಕಾರ್ಯಕರ್ತರ ಎಚ್ಚರಿಕೆಯನ್ನು ಅದ್ಯತೆಯ ಮೇಲೆ ಎತ್ತಿಕೊಳ್ಳುವುದು ಕಷ್ಟವಾಗಬಹುದು. ಆದರೆ ಅದನ್ನು ದೀರ್ಘಕಾಲ ನಿರ್ಲಕ್ಷಿಸಲು ಮಾತ್ರ ಸಾಧ್ಯವಿಲ್ಲ.

ಕರ್ನಾಟಕದ ಮೇಲೆ ವಾರ್ ಎಫೆಕ್ಟ್

ಇನ್ನು ಭಾರತ-ಪಾಕಿಸ್ತಾನದ ಮಧ್ಯೆ ಶುರುವಾಗಿರುವ ಸಂಘರ್ಷವು ಕರ್ನಾಟಕದ ಮೇಲೆ ಬೀರುವ ಪರಿಣಾಮವೇನು? ಇಂಥದೊಂದು ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡುವುದು ಅಸಾಧ್ಯವಾದರೂ, ಯುದ್ಧದಂಥ ವಿಷಯ ಆಳವಾದ ಪರಿಣಾಮ ಬೀರುವುದು ಮಾತ್ರ ಗ್ಯಾರಂಟಿ. 1971ರಲ್ಲಿ ಪಾಕಿಸ್ತಾನದ ವಿರುದ್ಧ ಮುಗಿಬಿದ್ದ ಭಾರತ ಅದನ್ನು ಹೀನಾಯವಾಗಿ ಸದೆಬಡಿದಿದ್ದಷ್ಟೇ ಅಲ್ಲ, ಅದನ್ನು ವಿಭಜಿಸಿ ಬಾಂಗ್ಲಾದೇಶ ಸೃಷ್ಟಿಯಾಗಲು ಕಾರಣವಾಗಿತ್ತು. ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಪ್ರಧಾನಿ ಇಂದಿರಾ ಗಾಂಧಿಯವರನ್ನು 'ದುರ್ಗೆ' ಎಂದು ಹೊಗಳಿದ್ದು ಒಂದು ಕಡೆಗಾದರೆ, ಮತ್ತೊಂದು ಕಡೆ ಇಂದಿರಾ ವರ್ಚಸ್ಸು ಮುಗಿಲೆತ್ತರಕ್ಕೆ ಏರಿತು. ಹೀಗಾಗಿ ಆ ಸಂದರ್ಭದಲ್ಲಿ ನಡೆದ ಚುನಾವಣೆಗಳಲ್ಲಿ ಇಂದಿರಾ ನೇತೃತ್ವದ ಕಾಂಗ್ರೆಸ್ ಜಯಭೇರಿ ಬಾರಿಸುತ್ತಾ ಹೋಯಿತು.

1972ರಲ್ಲಿ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲೂ ಇಂದಿರಾ ನೇತೃತ್ವದ ಕಾಂಗ್ರೆಸ್ ಅದ್ದೂರಿ ಜಯ ಗಳಿಸಿತ್ತಲ್ಲದೆ ದೇವರಾಜ ಅರಸು ಮುಖ್ಯಮಂತ್ರಿಯಾಗಿ ಪ್ರತಿಷ್ಠಾಪಿತರಾಗಿದ್ದರು. ಹಾಗೆ ನೋಡಿದರೆ, ಲಾಲ್ ಬಹಾದುರ್ ಶಾಸ್ತ್ರಿಯವರ ನಿಧನದ ನಂತರ ಪ್ರಧಾನಿಯಾದ ಇಂದಿರಾ ವಿರುದ್ಧ ಪಕ್ಷದ ಅತಿರಥ-ಮಹಾರಥರೆಲ್ಲ ತಿರುಗಿ ಬಿದ್ದಿದ್ದರಲ್ಲದೆ, ಪಕ್ಷವನ್ನು ಹೋಳುಮಾಡಿ ನಿಂತಿದ್ದರು. ಇಂಥ ಸಂದರ್ಭದಲ್ಲಿ ಇಂದಿರಾ ಜತೆಗಿದ್ದವರು ಎರಡನೇ ಪಂಕ್ತಿಯ ನಾಯಕರು. ಇಂಥವರನ್ನು ಜತೆಗಿಟ್ಟುಕೊಂಡು ಅವರು ಚುನಾವಣಾ ರಣರಂಗಕ್ಕಿಳಿದಿದ್ದರೆ ಯಶಸ್ಸು ಸಿಗುವುದು ಸುಲಭವಿರಲಿಲ್ಲ. ಆದರೆ ಚಾಣಾಕ್ಷಮತಿ ಇಂದಿರಾ ಹಲವು ಜನಪ್ರಿಯ ಕಾರ್ಯಕ್ರಮಗಳನ್ನು ಘೋಷಿಸಿದ್ದಲ್ಲದೆ, ಬಾಂಗ್ಲಾ ಪ್ರತ್ಯೇಕತೆಯ ಹೋರಾಟಗಾರರು ನೆರವು ಕೋರಿದ ಕೂಡಲೇ ಆ ಅವಕಾಶವನ್ನು ಬಳಸಿಕೊಂಡು ಪಾಕಿಸ್ತಾನದ ವಿರುದ್ಧ ಯುದ್ಧ ಘೋಷಿಸಿದರು. ಹೀಗೆ ಯುದ್ಧ ಘೋಷಿಸಿ ಪಾಕಿಸ್ತಾನವನ್ನು ಭಾರತ ಸದೆಬಡಿದಿದ್ದರಿಂದ, ಇಂದಿರಾ ವಿರೋಧಿ ನಾಯಕರು ಸುಸ್ತಾಗಿ ಹೋದರು. ಪರಿಣಾಮ? ಇಂದಿರಾ ಗಾಂಧಿ ತಕ್ಷಣದ ಆಪತ್ತಿನಿಂದ ಪಾರಾಗಿದ್ದಲ್ಲದೆ, ತಮ್ಮ ನೇತೃತ್ವದ ಪಕ್ಷ ಬಲಿಷ್ಠವಾಗುವಂತೆ ನೋಡಿಕೊಂಡರು.

ಮುಂದೆ ಇಂದಿರಾ ಗಾಂಧಿಯವರ ಈ ಬಲವು ದೇವರಾಜ ಅರಸರಂಥ ನಾಯಕ ನೆಲೆ ನಿಲ್ಲಲು, ಸಾಮಾಜಿಕ ಕ್ರಾಂತಿಯ ಹರಿಕಾರ ಎನ್ನಿಸಿಕೊಳ್ಳಲು ಮೂಲವಾಯಿತು. ಇವತ್ತು ಪಾಕಿಸ್ತಾನದ ವಿರುದ್ಧ ಭಾರತ ಮುಗಿಬಿದ್ದಿರುವ ಕಾಲದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸ್ಥಿತಿಯೂ ಸ್ವಲ್ಪ ಹಾಗೇ ಇದೆ. ಅವರೀಗ ಎಪ್ಪತ್ತೈದರ ಗಡಿಯಲ್ಲಿರುವುದರಿಂದ ಅವರನ್ನು ಪ್ರಧಾನಿ ಪಟ್ಟದಿಂದ ಕೆಳಗಿಳಿಸಿ ಯೋಗಿ ಆದಿತ್ಯನಾಥ್ ಅವರನ್ನು ತಂದು ಕೂರಿಸುವ ಲೆಕ್ಕಾಚಾರ ಸಂಘ ಪರಿವಾರದಲ್ಲಿದೆ. ಇದೇ ಕಾರಣಕ್ಕಾಗಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಮೋದಿ-ಅಮಿತ್ ಶಾ ಹೇಳಿದವರನ್ನು ತಂದು ಕೂರಿಸಲೂ ಪರಿವಾರ ತಯಾರಿಲ್ಲ. ಇಂಥ 'ಐನ್ ಟೈಮ್'ನಲ್ಲೇ ಪಹಲ್ಗಾಮ್ ಎಪಿಸೋಡಿನ ನಂತರ ಮೋದಿ ಪಾಕಿಸ್ತಾನದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಈ ಸಂಘರ್ಷದಲ್ಲಿ ಭಾರತದ ಸೈನ್ಯ ಪಾಕಿಸ್ತಾನವನ್ನು ಬಗ್ಗು ಬಡಿದಿದ್ದರೆ, ನೋ ಡೌಟ್, ಮೋದಿಯವರ ಗ್ರಾಫು ಮೇಲೇರುತ್ತಿತ್ತು ಮತ್ತು ಅವರನ್ನು ಕೆಳಗಿಳಿಸುವ ಪ್ರಯತ್ನಗಳಿಗೆ ಹಿನ್ನಡೆಯಾಗುತ್ತಿತ್ತು.

ಆದರೆ ಈಗ ಕದನವಿರಾಮದ ಮಾತು ಕೇಳಿಬಂದಿರುವುದರಿಂದ ಬಿಗ್ ಇಂಪ್ಯಾಕ್ಟ್ ಆಗದೇ ಹೋಗಬಹುದು. ಇಷ್ಟಾದರೂ ಭಾರತದ ಸೈನ್ಯವು ಪಾಕಿಸ್ತಾನವನ್ನು ಬೆದರಿಸುವಲ್ಲಿ ಸಫಲವಾಗಿರುವುದರಿಂದ ಮೋದಿ ಪವರ್ ಮುಂಚೆಗಿಂತ ಹೆಚ್ಚಾಗಿರುವುದು ನಿಜ ಮತ್ತು ಇದನ್ನು ಎನ್‌ಕ್ಯಾಶ್ ಮಾಡಿಕೊಂಡರೆ ಅವರು ಬಲಿಷ್ಠರಾಗುವುದೂ ನಿಜ. ಹೀಗೆ ಮೋದಿ ಬಲಿಷ್ಠ ನೆಲೆಯ ಮೇಲೆ ನಿಂತರೆ ಕರ್ನಾಟಕದ ರಾಜಕಾರಣದ ಮೇಲೆ ಯಾವ ಪರಿಣಾಮವಾಗುತ್ತದೆ ಅಂತ ಈಗಲೇ ಹೇಳುವುದು ಕಷ್ಟ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಬಂದ ನಂತರ ಅದನ್ನು ಅಲುಗಾಡಿಸುವ ಯತ್ನ ನಡೆದಿತ್ತಲ್ಲ? ಅಂಥ ಯತ್ನಕ್ಕೆ ಮರುಚಾಲನೆ ದೊರೆಯುವುದು ಅಸಂಭವವಲ್ಲ.

ಲಾಸ್ಟ್ ಸಿಪ್: ಇನ್ನು ಭಾರತ-ಪಾಕಿಸ್ತಾನದ ನಡುವಣ ಸಂಘರ್ಷ ಪ್ರಧಾನಿ ಮೋದಿಯವರ ಬಲವನ್ನು ಹೆಚ್ಚಿಸಿದರೆ, ಕರ್ನಾಟಕದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಅದು ಗಟ್ಟಿಗೊಳಿಸಲಿದೆ ಎಂಬುದು ರಾಜಕೀಯ ವಲಯಗಳ ಮಾತು. ಕಾರಣ? ದಿಲ್ಲಿಯಲ್ಲಿ ಮೋದಿ ಪವರ್ ಹೆಚ್ಚಿದರೆ ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರಕಾರಕ್ಕೆ ಕಿರಿಕಿರಿ ಗ್ಯಾರಂಟಿ. ಇಂಥ ಪರಿಸ್ಥಿತಿ ಯಲ್ಲಿ ಸರಕಾರ ಅಲುಗಾಡದಂತೆ ನೋಡಿಕೊಳ್ಳುವುದು ಕಾಂಗ್ರೆಸ್ ವರಿಷ್ಠರಿಗೆ ಸವಾಲು. ಇಂಥ ಸವಾಲಿನ ಸಂದರ್ಭ ದಲ್ಲಿ ಅವರು ಸಿಎಂ ಸಿದ್ದರಾಮಯ್ಯ ಅವರ ಜತೆ ಗಟ್ಟಿಯಾಗಿ ನಿಲ್ಲುವುದಷ್ಟೇ ಅಲ್ಲ, ನಾಯಕತ್ವ ಬದಲಾವಣೆಯಂಥ ಕೂಗಿಗೆ ತಪ್ಪಿಯೂ ಕಿವಿ ಕೊಡುವುದಿಲ್ಲ. ಆ ದೃಷ್ಟಿಯಿಂದ, ಸದ್ಯದ ಭಾರತ-ಪಾಕಿಸ್ತಾನದ ನಡುವಣ ಸಂಘರ್ಷ ಕೂಡಾ ಸಿದ್ದುಗೆ ಟಾನಿಕ್ ಎಂಬುದು ರಾಜಕೀಯ ವಲಯಗಳ ಮಾತು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಏಕಿಂಥ ಬೇಜವಾಬ್ದಾರಿ?

ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾದಾಗ ಕನ್ನಡ ವಿಷಯದಲ್ಲಿ 13 ಅಂಕ ಪಡೆದಿದ್ದ ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ ವಿದ್ಯಾರ್ಥಿನಿಯೊಬ್ಬಳಿಗೆ ಮರುಎಣಿಕೆಯಲ್ಲಿ 73 ಅಂಕ ಲಭಿಸಿದೆ ಎಂದು ವರದಿಯಾಗಿದೆ. ಇದು ಮೌಲ್ಯಮಾಪಕರ ಬೇಜವಾಬ್ದಾರಿ ಎಂದು ತಿಳಿದುಬರುತ್ತದೆ. ಶಿಕ್ಷಕರಾದವರು ಈ ರೀತಿ ಮಾಡುವುದು ಸರಿಯೇ? ಮೌಲ್ಯಮಾಪಕರ ಬೇಜವಾಬ್ದಾರಿಯಿಂದಾಗಿ ಪರೀಕ್ಷಾ ಫಲಿತಾಂಶದಲ್ಲಿ ಹೀಗೆ 'ಅನುತ್ತೀರ್ಣ' ಎಂದು ಪ್ರಕಟಿಸಲ್ಪಟ್ಟವರು ಮನಸ್ಸಿಗೆ ಬೇಸರ ಮಾಡಿಕೊಂಡು ಆತ್ಮಹತ್ಯೆಗೆ ಮುಂದಾದರೆ ಅದಕ್ಕೆ ಯಾರು ಹೊಣೆ? ಹೋದ ಜೀವ ಮರಳಿ ಬರುತ್ತದೆಯೇ? ಇಂದಿನ ಮಕ್ಕಳೇ ಭವಿಷ್ಯದ ಪ್ರಜೆಗಳು ಎಂಬುದನ್ನು ನಾವು ಮರೆಯಬಾರದಲ್ಲವೇ?

ಮೌಲ್ಯಮಾಪನ ಮಾಡಲು ಮನಸ್ಸಿಲ್ಲದಿದ್ದರೆ, ಆರೋಗ್ಯ ಸರಿಯಿಲ್ಲದಿದ್ದರೆ ಅಥವಾ ಅನಿವಾರ್ಯ ಕೆಲಸಗಳಿದ್ದರೆ, ಅಂಥವರು 'ಮೌಲ್ಯಮಾಪನದಲ್ಲಿ ಪಾಲ್ಗೊಳ್ಳಲಾಗುವುದಿಲ್ಲ' ಎಂದು ಲಿಖಿತ ರೂಪದಲ್ಲಿ ಮನವಿ ಸಲ್ಲಿಸಲಿ, ಅದನ್ನು ಸರಕಾರ ಪುರಸ್ಕರಿಸಲಿ. ಜತೆಗೆ ಸರಕಾರವೂ ಅಂಥವರ ಮೇಲೆ ಒತ್ತಡ ಹಾಕದಿರಲಿ. ನಿಯೋಜಿತ ಮೌಲ್ಯಮಾಪನ ಕಾರ್ಯದಲ್ಲಿ ಹೊಣೆಗಾರಿಕೆಯನ್ನು ಮರೆತವರಿಗೆ ಶಿಕ್ಷೆಯನ್ನು ವಿಧಿಸಲಿ.

- ಪತ್ತಂಗಿ ಎಸ್.ಮುರಳಿ, ಬೆಂಗಳೂರು

ಕಠಿಣ ಶಿಕ್ಷೆ ನೀಡಬೇಕು

ಹುಸಿಬಾಂಬ್ ಬೆದರಿಕೆ ಕರೆ ಮಾಡುವುದು ಕೆಲವೊಂದು ಸೋಮಾರಿಗಳಿಗೆ, ಅಡ್ಡಕಸುಬಿಗಳಿಗೆ ಆಟವಾಗಿಬಿಟ್ಟಿದೆ. 'ಬಾಂಬ್ ಇಡಲಾಗಿದೆ' ಎಂಬುದಾಗಿ ರೈಲು-ಬಸ್ಸು-ವಿಮಾನ ನಿಲ್ದಾಣಗಳಿಗೆ, ಶಾಲಾ-ಕಾಲೇಜುಗಳಿಗೆ, ಕಚೇರಿಗಳಿಗೆ ಸಂದೇಶ ಕಳಿಸುವುದು ಈಗ ಅತ್ಯಂತ ಸುಲಭದ ಮತ್ತು ಒಂದು ನಿಮಿಷದ ಕೆಲಸವಾಗಿಬಿಟ್ಟಿದೆ. ಈ ಬೆದರಿಕೆ ನಿಜವೋ ಸುಳ್ಳೋ ಎಂಬುದು ನಿರ್ಧಾರವಾಗಲು ಏನೆಲ್ಲಾ ತಪಾಸಣೆಗೆ ಮುಂದಾಗಬೇಕಾಗುತ್ತದೆ, ಅದರಿಂದಾಗಿ ಸಮಯ ಹಾಳು, ಅವ್ಯವಸ್ಥೆ, ಆರ್ಥಿಕ ನಷ್ಟ ಹೀಗೆ ಏನೆಲ್ಲಾ ಸಮಸ್ಯೆಗಳಿವೆ.

ಹುಸಿಬಾಂಬ್ ಬೆದರಿಕೆಯ ಕರೆಮಾಡಿದವರನ್ನು ಪತ್ತೆ ಮಾಡಿದ ಸುದ್ದಿಯೇನೋ ಕೆಲವೊಮ್ಮೆ ತಿಳಿಯುತ್ತದೆ, ಆದರೆ ಅಂಥವರಿಗೆ ಏನು ಶಿಕ್ಷೆಯಾಯಿತು ಎಂಬುದು ಜನರಿಗೆ ಗೊತ್ತಾಗುವುದಿಲ್ಲ. ಆದ್ದರಿಂದ, ಇಂಥ ದುರ್ಮಾರ್ಗಿಗಳಿಗೆ ಕಠಿಣ ಶಿಕ್ಷೆಯೇ ಆಗುವಂಥ ಭಯವನ್ನು ಮೂಡಿಸಬೇಕು. ಇಂಥದೊಂದು ಶಿಕ್ಷೆಯ ಭಯವಿಲ್ಲದಿದ್ದರೆ, ಬಾಂಬ್ ಬೆದರಿಕೆ ಕರೆ ಮಾಡುವವರ ಸಂಖ್ಯೆ ಹೆಚ್ಚುತ್ತಲೇ ಹೋಗುತ್ತದೆ. ಶಿಕ್ಷೆಯ ಭಯವನ್ನು ಒಡ್ಡುವುದು ಬಿಟ್ಟು, ಆರೋಪಿಯನ್ನು ವಶಕ್ಕೆ ತೆಗೆದುಕೊಳ್ಳುವುದು, ಕೋರ್ಟ್ ವಿಚಾರಣೆ ಎಂದೆಲ್ಲಾ ಓಬಿರಾಯನ ಕಾಲದ ಕ್ರಮದಲ್ಲಿ ವರ್ಷಾನುಗಟ್ಟಲೆ ಪ್ರಕರಣ ಎಳೆಸಿಕೊಂಡು ಹೋದರೆ ಏನು ಪ್ರಯೋಜನ?

- ಸತ್ಯಬೋಧ, ಬೆಂಗಳೂರು

ಮಾಹಿತಿಪೂರ್ಣ ಬರಹ

ಡಾ. ಸಾಧನಶ್ರೀ ಅವರ 'ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ' ಅಂಕಣವು ತುಂಬಾ ಚೆನ್ನಾಗಿ, ಮಾಹಿತಿಪೂರ್ಣವಾಗಿ ಮೂಡಿಬರುತ್ತಿದೆ. 'ಇದು ಹೀಗೆಯೇ, ನಾವು ಮಾಡುತ್ತಿರುವುದೇ ಸರಿ' ಎಂಬುದಾಗಿ ಒಂದಷ್ಟು ಗ್ರಹಿಕೆಗಳನ್ನು ಇಟ್ಟುಕೊಂಡಿದ್ದ ನಾನು, ಸದರಿ ಅಂಕಣವನ್ನು ಓದಿದ ನಂತರ ಆ ಗ್ರಹಿಕೆಗಳನ್ನು ಬದಲಿಸಿಕೊಂಡ ನಿದರ್ಶನಗಳಿವೆ. ಇಂಥ ಕಣ್ಣು ತೆರೆಸುವ ಬರಹಗಳು ವಿಶ್ವವಾಣಿಯಲ್ಲಿ ಹೆಚ್ಚೆಚ್ಚು ಮೂಡಿಬರಲಿ.

- ರಮೇಶ್ ಚಂದ್ರ, ಚಿಕ್ಕಮಗಳೂರು

ಓದುಗರ ಓಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಜನಗಣತಿ ಹಾಗೂ ಜಾತಿಗಣತಿಯ ಗಣಿತ ಮತ್ತು ಮೀಸಲಾತಿಯ ತಿಗಣೆ

ಕಾನೂನ್‌ಸೆನ್ಸ್

ತಿಮ್ಮಣ್ಣ ಭಾಗ್ವತ್

vveditoped@gmail.com

"ಏಕ್ ಸೌ ಚಾಲೀಸ್ ಕರೋಡ್ ದೇಶವಾಸಿಯೋಂ''- ನಮ್ಮ ಪ್ರಧಾನ ಮಂತ್ರಿಗಳು ಹೆಮ್ಮೆಯಿಂದ ಹೇಳುವ ಶಬ್ದಗಳಿವು. 2011ರ ಜನಗಣತಿಯ ಪ್ರಕಾರ ದೇಶದ ಜನಸಂಖ್ಯೆ ಅಧಿಕೃತವಾಗಿ 126 ಕೋಟಿ. ಆದರೆ ಈ 140 ಕೋಟಿಗೆ ಅಂದಾಜಿನ ಗಣಿತವೇ ಆಧಾರ. WORLDOMETER ಎಂಬ ಅಂತರ್ಜಾಲ ತಾಣದ ಪ್ರಕಾರ ಜಗತ್ತಿನ ಈ ಕ್ಷಣದ ಜನಸಂಖ್ಯೆ ಅಂದಾಜು 822.05 ಕೋಟಿ. ಆ ಪೈಕಿ ನಮ್ಮದು 146.17 ಕೋಟಿ, ಅಂದರೆ ಜಗತ್ತಿನ ಜನಸಂಖ್ಯೆಯ 17.78 ಪ್ರತಿಶತ. ಜನಸಂಖ್ಯೆಯಲ್ಲಿ ಭಾರತ ವಿಶ್ವದಲ್ಲೇ ನಂ 1. ಪ್ರತಿ ಹತ್ತು ವರ್ಷಕ್ಕೊಮ್ಮೆ ನಡೆಯುವ ಜನಗಣತಿಯನ್ನು ಕೋವಿಡ್ ಪಿಡುಗಿನ ಕಾರಣದಿಂದ 2021ರಲ್ಲಿ ನಡೆಸಲಾಗಲಿಲ್ಲ. ಈಗ 2031ರ ಜನಗಣತಿಗೆ ಕ್ಷಣಗಣನೆ ಶುರುವಾಗಿದೆ. ಆದರೆ ಜನಗಣತಿಗಿಂತ ಈಗ ಜಾತಿಗಣತಿಯದ್ದೇ ಹವಾ!

ಜನಗಣತಿಗೆ ಸುದೀರ್ಘ ಇತಿಹಾಸವಿದೆ. ಚಾಣಕ್ಯನ 'ಅರ್ಥಶಾಸ್ತ್ರ'ದಲ್ಲಿ ಕರಾಕರಣೆಯ ಸಲುವಾಗಿ ರಾಜನು ಜನಸಂಖ್ಯೆಯ ಅಂಕಿ-ಅಂಶಗಳನ್ನು ಸಂಗ್ರಹಿಸಬೇಕೆಂದು ಹೇಳಲಾಗಿದೆ. ಬ್ರಿಟಿಷ್ ಭಾರತದಲ್ಲಿ ಅನೇಕ ಜನಗಣತಿಗಳು ನಡೆದಿದ್ದರೂ ಅವೆಲ್ಲ ಆಡಳಿತಾತ್ಮಕ ಅವಶ್ಯಕತೆಗಳಿಗಾಗಿ ನಡೆದಿದ್ದವು. ದೇಶ ಸ್ವತಂತ್ರವಾದ ಬಳಿಕ 'ಭಾರತದ ಜನಗಣತಿ ಕಾಯಿದೆ 1948'ನ್ನು ಜಾರಿಗೆ ತರಲಾಯಿತು. 1990ರಲ್ಲಿ ಜನಗಣತಿ ನಿಯಮಗಳನ್ನೂ ಜಾರಿಗೆ ತರಲಾಯಿತು. ಈ ಕಾಯಿದೆಯ 3ನೇ ಕಲಮಿನ ಪ್ರಕಾರ ಕೇಂದ್ರ ಸರಕಾರಕ್ಕೆ ಮಾತ್ರ ಜನಗಣತಿ ಕೈಗೊಳ್ಳುವ ಅಧಿಕಾರವಿದೆ. ಭಾರತದ ರೆಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಆಯುಕ್ತರು ಹಾಗೂ ರಾಜ್ಯಗಳ ಜನಗಣತಿ ನಿರ್ದೇಶಕರುಗಳನ್ನು ನೇಮಿಸುವ ಅಧಿಕಾರ ಕೂಡಾ ಕೇಂದ್ರ ಸರಕಾರಕ್ಕೇ ಇದೆ. ಗಣತಿ ಮಾಡುವ ಪ್ರಕ್ರಿಯೆಯಲ್ಲಿ ಸೆನ್ಸಸ್ ಅಧಿಕಾರಿಗಳು ಜನರಿಗೆ ಕೇಳಬೇಕಾದ ಪ್ರಶ್ನಾವಳಿಯನ್ನು ಗಣತಿ ಕಾಯಿದೆಯ 8ನೇ ಕಲಮಿನ ಪ್ರಕಾರ ಕೇಂದ್ರ ಸರಕಾರ ಗೆಝೆಟ್ ಮೂಲಕ ಅಧಿಸೂಚನೆ ಮಾಡಬೇಕು. ಈ ಕಾಯಿದೆಯ 11ನೇ ಕಲಮಿನ ಪ್ರಕಾರ ಗಣತಿ ಅಧಿಕಾರಿಗಳು ಕೇಳಿದ ಮಾಹಿತಿಯನ್ನು ನೀಡಲು ನಿರಾಕರಿಸಿದರೆ ಅಥವಾ ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ (ಇದೇ ಕಲಮಿನ ಪ್ರಕಾರ ಯಾವುದೇ ಮಹಿಳೆಗೆ ಆಕೆಯ ಗಂಡನ ಹೆಸರು ಹೇಳುವಂತೆ ಒತ್ತಾಯಪಡಿಸುವಂತಿಲ್ಲ!- ಜನಿವಾರ, ಮಂಗಲಸೂತ್ರ ತೆಗೆಸುವವರು ಇದನ್ನು ಗಮನಿಸಬೇಕು). ಭೌಗೋಳಿಕವಾಗಿ ಬಹುವಿಸ್ತಾರವಾಗಿರುವ ಹಾಗೂ ಧರ್ಮ, ಜಾತಿ, ಭಾಷೆ, ಸಂಸ್ಕೃತಿಗಳ ವೈವಿಧ್ಯವನ್ನು ಹೊಂದಿರುವ ಭಾರತದ ಅಗಾಧ ಜನಸಂಖ್ಯೆಯನ್ನು ಮನೆ ಮನೆಗೆ ಹೋಗಿ ಎಣಿಸುವುದರ ಜತೆಗೆ ಅವರ ಆರ್ಥಿಕ ಸ್ಥಿತಿ, ಉದ್ಯೋಗ, ಮನೆ, ಆಸ್ತಿ, ಭಾಷೆ ಮುಂತಾದ ಅನೇಕ ಅಂಕಿ-ಅಂಶಗಳ ಗಣನೆ ಹಾಗೂ ಅವುಗಳ ಅರ್ಥಪೂರ್ಣ ಕ್ರೋಡೀಕರಣ ಈಗಿನ ಡಿಜಿಟಲ್ ಯುಗದಲ್ಲೂ ಸವಾಲಿನ ಕೆಲಸ. ಇದೀಗ ಕೇಂದ್ರ ಸರಕಾರವು ಜನಗಣತಿಯ ಜತೆ ಜಾತಿಯ ಅಂಕಿ-ಅಂಶಗಳನ್ನೂ ಸಂಗ್ರಹಿಸುವುದಾಗಿ ಹೇಳಿರುವುದು ಗಣತಿಯ ಕಾರ್ಯವನ್ನು ಹಿಂದೆಂದಿಗಿಂತ ಸಂಕೀರ್ಣಗೊಳಿಸಲಿದೆ. ಬ್ರಿಟಿಷರ ಕಾಲದ 1931ರ ನಂತರ ಭಾರತದಲ್ಲಿ ಜಾತಿಗಣತಿ ನಡೆಯಲಿಲ್ಲ. ಹೀಗಾಗಿ ಎಲ್ಲಾ ರಾಜಕಾರಣಿಗಳಿಗೆ ಜಾತಿಗಣತಿಯ ಕುರಿತು ತೀವ್ರ ಆಸಕ್ತಿ. ಜಾತಿವಾರು ಲೆಕ್ಕಕಿಂತ ಹೆಚ್ಚಾಗಿ ಅಂಥ ಗಣತಿಯ ಆಧಾರದಲ್ಲಿ ಮೀಸಲಾತಿಯ ಪ್ರಮಾಣವನ್ನು ಪರಿಷ್ಕರಿಸುವುದು ಅವರಲ್ಲಿ ಕೆಲವರ ಅಜೆಂಡಾ ಆಗಿದೆ. ಕೆಲವರಂತೂ ''ಮೆರಿಟ್ ಎಂಬುದೇ ಅನ್ಯಾಯ, ಮೀಸಲಾತಿಗೆ ಇರುವ 50 ಪ್ರತಿಶತ ಮಿತಿಯನ್ನು ತೆಗೆಯಬೇಕು'' ಎಂದೆಲ್ಲ ಆಗ್ರಹಿಸುತ್ತಿದ್ದಾರೆ.

ಕಾಕಾ ಕಾಲೇಕರ್ ಆಯೋಗ ಮತ್ತು ಮಂಡಲ ಆಯೋಗ:

ಜಾತಿಗಣತಿ ಅಂದ ಕೂಡಲೇ ನೆನಪಿಗೆ ಬರುವುದು ಜಾತಿ ಆಧಾರಿತ ಮೀಸಲಾತಿ ಹಾಗೂ ವಿವಾದಾತ್ಮಕವೆನಿಸಿದ ಮಂಡಲ್ ಆಯೋಗದ ವರದಿ. ಆದರೆ 1955ರಲ್ಲೇ ರಚಿತವಾಗಿದ್ದ ಕಾಲೇಕರ್ ಸಮಿತಿ ಹಲವರಿಗೆ ತಿಳಿದಿರಲಿಕ್ಕಿಲ್ಲ. 2399 ಹಿಂದುಳಿದ ಜಾತಿಗಳು ಮತ್ತು ಆ ಪೈಕಿ 837 ಅತಿ ಹಿಂದುಳಿದ ಜಾತಿಗಳ ಯಾದಿಯನ್ನು ತಯಾರಿಸಿದ ಈ ಸಮಿತಿಯ ಅಧ್ಯಕ್ಷರಾದ ಕಾಲೇಕರ್‌ರವರೇ ವರದಿಯ ಜತೆಗೆ ರಾಷ್ಟ್ರಪತಿಗಳಿಗೆ ಸಲ್ಲಿಸಿದ ಪತ್ರದಲ್ಲಿ ''ಜಾತಿ ಎಂಬ ಸಿದ್ಧಾಂತವನ್ನೇ ತ್ಯಜಿಸದ ಹೊರತು ಎಲ್ಲಾ ಸಮುದಾಯಗಳಲ್ಲಿರುವ ಬಡವರು ಮತ್ತು ಅರ್ಹರಿಗೆ ಸಹಾಯ ಮಾಡಲು ಸಾಧ್ಯವಿಲ್ಲ'' ಎಂದು ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದರು. ಆ ವರದಿಯ ಕುರಿತು 1956ರಲ್ಲಿ ಭಾರತ ಸರಕಾರವು ''ಜಾತಿ ವ್ಯವಸ್ಥೆಯು ದೇಶದ ಪ್ರಗತಿಯ ಹಾದಿಯಲ್ಲಿರುವ ದೊಡ್ಡ ಬಂಡೆಯಾಗಿದ್ದು ಕೆಲವು ಜಾತಿಗಳನ್ನು ಹಿಂದುಳಿದ ಜಾತಿಗಳು ಎಂದು ಪರಿಗಣಿಸಿದರೆ ಜಾತಿ ವ್ಯವಸ್ಥೆಯನ್ನು ಪೋಷಿಸಿ ಬೆಳೆಸಿದಂತಾಗುತ್ತದೆ. ಆದ್ದರಿಂದ ಹೆಚ್ಚು ವ್ಯವಸ್ಥಿತ ಹಾಗೂ ವಿಸ್ತೃತವಾದ ತಳಹದಿಯ ಆಧಾರದಲ್ಲಿ ಹಿಂದುಳಿಯುವಿಕೆಯನ್ನು ಗುರುತಿಸುವುದು ಅಗತ್ಯ'' ಎಂದು ಲೋಕಸಭೆಗೆ ವರದಿ ಸಲ್ಲಿಸಿತು (ಆಧಾರ: ಇಂದ್ರಾ ಸಾವನಿ ಪ್ರಕರಣದ ತೀರ್ಪು).

1978ರಲ್ಲಿ ಮೊರಾರ್ಜಿ ದೇಸಾಯಿ ಸರಕಾರ ರಚಿಸಿದ ಮಂಡಲ ಆಯೋಗಕ್ಕೆ ''ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳನ್ನು ವ್ಯಾಖ್ಯಾನಿಸಲು ಮಾನದಂಡವನ್ನು ನಿಗದಿಪಡಿಸುವುದು ಮತ್ತು ಹಾಗೆ ಗುರುತಿಸಲ್ಪಟ್ಟ ಹಿಂದುಳಿದ ವರ್ಗಗಳ ಉನ್ನತಿಗಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಶಿಫಾರಸು ಮಾಡುವುದು'' ಎಂಬ ಕಾರ್ಯಸೂಚಿಯನ್ನು ನಿಗದಿಪಡಿಸಲಾಗಿತ್ತು. ಮಂಡಲ ಆಯೋಗ ತನ್ನ ವರದಿಯಲ್ಲಿ ಹಿಂದುಳಿಯುವಿಕೆಯನ್ನು ಪರಿಗಣಿಸಲು ಜಾತಿಯೇ ಆಧಾರವಾಗಬೇಕು ಎಂದು ಹೇಳಿತಲ್ಲದೆ ಸರಕಾರದ ಹುದ್ದೆಗಳಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವುದು ಅವರ ಉನ್ನತಿಗೆ ಸೂಕ್ತವೆಂಬ ಶಿಫಾರಸು ಮಾಡಿತು. ಹಿಂದುಳಿಯುವಿಕೆಯನ್ನು ಗುರುತಿಸಲು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವೆಂಬ ಮೂರು ಅಂಶಗಳನ್ನು ಪರಿಗಣಿಸಿತು. ಆಯೋಗ ನಿಗದಿಪಡಿಸಿದ ಸೂತ್ರಗಳ ಪ್ರಕಾರ, ಸಾಮಾಜಿಕವಾಗಿ ಹಿಂದುಳಿದ ಜಾತಿಯೆಂದರೆ ಆ ಜಾತಿಯ ಜನ ತಮ್ಮ ಜೀವನಕ್ಕಾಗಿ ಕೂಲಿಯನ್ನೇ ಆಧರಿಸಿರಬೇಕು; ರಾಜ್ಯ ಸರಾಸರಿಗಿಂತ ಶೇ. 25ಕ್ಕಿಂತ ಹೆಚ್ಚಿನ ಮಹಿಳೆಯರು ಕೆಲಸದಲ್ಲಿ ತೊಡಗಿರಬೇಕು ಮತ್ತು 17 ವರ್ಷಕ್ಕಿಂತ ಮೊದಲೇ ಮದುವೆಯಾದವರ ಪ್ರಮಾಣ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಲ್ಲಿ ರಾಜ್ಯದ ಸರಾಸರಿಗಿಂತ ಅನುಕ್ರಮವಾಗಿ 25 ಮತ್ತು 10 ಪ್ರತಿಶತಕ್ಕಿಂತ ಹೆಚ್ಚಿಗೆ ಇರಬೇಕು. ಶೈಕ್ಷಣಿಕವಾಗಿ ಹಿಂದುಳಿದವರೆಂದರೆ ಆ ಜಾತಿಯಲ್ಲಿ 5ರಿಂದ 15 ವರ್ಷ ವಯಸ್ಸಿನ ಮಕ್ಕಳು ಶಾಲೆಗೆ ಹೋಗದಿರುವ ಅಥವಾ ಅರ್ಧದಲ್ಲಿ ಶಾಲೆ ಬಿಡುವವರ ಪ್ರಮಾಣ ರಾಜ್ಯ ಸರಾಸರಿಗಿಂತ ಕನಿಷ್ಠಪಕ್ಷ 25 ಪ್ರತಿಶತ ಹೆಚ್ಚಿರಬೇಕು ಮತ್ತು ಮೆಟ್ರಿಕ್ಯುಲೇಶನ್ ಮುಗಿಸಿದವರ ಸಂಖ್ಯೆ ರಾಜ್ಯ ಸರಾಸರಿಗಿಂತ 25 ಪ್ರತಿಶತ ಕಡಿಮೆ ಇರಬೇಕು. ಆರ್ಥಿಕವಾಗಿ ಹಿಂದುಳಿದವರೆಂದರೆ ಆ ಜಾತಿಯ ಕುಟುಂಬಗಳ ಸರಾಸರಿ ಆಸ್ತಿ ಮೌಲ್ಯ ರಾಜ್ಯದ ಸರಾಸರಿಗಿಂತ ಕನಿಷ್ಠಪಕ್ಷ 25 ಪ್ರತಿಶತ ಕಡಿಮೆ ಇರಬೇಕು; ರಾಜ್ಯ ಸರಾಸರಿಯ 25 ಪ್ರತಿಶತಕ್ಕಿಂತ ಹೆಚ್ಚು ಜನರು ಕಚ್ಚಾ ಮನೆಗಳಲ್ಲಿ ವಾಸವಿರಬೇಕು; ಕನಿಷ್ಠಪಕ್ಷ 50 ಪ್ರತಿಶತ ಕುಟುಂಬಗಳಿಗೆ ಕುಡಿಯುವ ನೀರಿನ ಲಭ್ಯತೆ ಅರ್ಧ ಕಿ.ಮೀ.ಗಿಂತ ಹೆಚ್ಚು ದೂರದಲ್ಲಿರಬೇಕು ಮತ್ತು ಬಳಕೆ ಸಾಲ ಪಡೆದಿರುವವರ ಪ್ರಮಾಣ ರಾಜ್ಯದ ಸರಾಸರಿಗಿಂತ 25 ಪ್ರತಿಶತ ಹೆಚ್ಚಿರಬೇಕು. ಈ ಎಲ್ಲ ಮಾನದಂಡಗಳ ಆಧಾರದಲ್ಲಿ ವಿವಿಧ ಜಾತಿಗಳನ್ನು 'ಹಿಂದುಳಿದ ಜಾತಿಗಳು' ಎಂದು ಗುರುತಿಸಿತು. ಆನಂತರ ನಡೆದ ''ಇಂದ್ರಾ ಸಾವನಿ ವರ್ಸಸ್ ಭಾರತ ಸರಕಾರ'' ಪ್ರಕರಣದಲ್ಲಿ ಸುಪ್ರೀಂ ಕೋರ್ಟು ಐತಿಹಾಸಿಕ ತೀರ್ಪು ನೀಡಿ ಹಿಂದುಳಿಯುವಿಕೆಯನ್ನು ಜಾತಿಯ ಆಧಾರದಲ್ಲಿ ಪರಿಗಣಿಸುವುದನ್ನು ಎತ್ತಿಹಿಡಿಯಿತಾದರೂ ಒಟ್ಟೂ ಮೀಸಲಾತಿಯ ಮಿತಿಯನ್ನು 50 ಪ್ರತಿಶತಕ್ಕೆ ನಿರ್ಬಂಧಿಸಿ 'ಒಬಿಸಿ' ಮೀಸಲಾತಿಯಲ್ಲಿ ಆರ್ಥಿಕವಾಗಿ ಸಶಕ್ತರಾದವರನ್ನು ಹೊರಗಿಡುವ ಕೆನೆಪದರದ ನಿಯಮವನ್ನು ಆದೇಶಿಸಿತು.

ಈಗ ಕೇಂದ್ರ ಸರಕಾರ ಮಾಡಹೊರಟಿರುವ ಜಾತಿಗಣತಿಯ ಉದ್ದೇಶ ಏನೇ ಇದ್ದರೂ ಅಂತಿಮವಾಗಿ ಅದರ ಪರಿಣಾಮ ಮೀಸಲಾತಿಯ ಮೇಲೆ ಆಗುತ್ತದೆ. ಜಾತಿ ಆಧಾರಿತ ಮೀಸಲಾತಿಗೆ ಇಂದ್ರಾ ಸಾವನಿ ಪ್ರಕರಣದ ತೀರ್ಪು ಬಹುತೇಕ ಅಂತಿಮವಾಗಿದೆ. ಒಂದು ವೇಳೆ ಒಬಿಸಿ ಮೀಸಲಾತಿಯನ್ನು ಜಾತಿಗಣತಿ ಆಧಾರದಲ್ಲಿ ಪರಿಷ್ಕರಿಸುವುದಾದರೆ ಮಂಡಲ ಆಯೋಗ ಹಿಂದುಳಿದ ಜಾತಿಗಳನ್ನು ಗುರುತಿಸಲು ಪರಿಗಣಿಸಿದ ಈ ಮೇಲಿನ ಅಂಶಗಳ ಆಧಾರದಲ್ಲೇ ಜಾತಿಗಳನ್ನು ಪುನಃ ವರ್ಗೀಕರಿಸಬೇಕಾಗುತ್ತದೆ. ಆಧಾರ ಸೂತ್ರಗಳು ಬದಲಾದರೆ ಅದು ಪುನಃ ನ್ಯಾಯಾಲಯದ ವಿಮರ್ಶೆಗೆ ಒಳಪಡಬೇಕಾಗುತ್ತದೆ. ಹಾಗಾಗಿ ಜಾತಿಗಣತಿ ಮಾಡುವುದಾದಲ್ಲಿ ಮಂಡಲ ಆಯೋಗ ಅಳವಡಿಸಿಕೊಂಡಿದ್ದ ಸೂತ್ರಗಳಿಗೆ ಅಗತ್ಯವಾದ ಎಲ್ಲಾ ದತ್ತಾಂಶಗಳನ್ನು ಸಂಗ್ರಹಿಸಬೇಕು. ಹಾಗಾದಾಗ ಮಾತ್ರ ಜಾತಿಗಣತಿ ಆಧಾರಿತ ಮೀಸಲಾತಿ ಪರಿಷ್ಕರಣೆ ಕಾಯಿದೆಬದ್ಧವಾಗುತ್ತದೆ ಮತ್ತು ಜಾತಿಗಣತಿಯು ಹಿಂದುಳಿಯುವಿಕೆಯ ವೈಜ್ಞಾನಿಕ ಅಧ್ಯಯನಕ್ಕೆ ಸಹಕಾರಿಯಾಗುತ್ತದೆ.

ಶತಮಾನದ ನಂತರ ನಡೆಸಲ್ಪಡುವ ಜಾತಿಗಣತಿ ಅನೇಕ ಗೊಂದಲಗಳನ್ನು ಎದುರಿಸಬೇಕಾಗಬಹುದು. ದೇಶದ ಎಲ್ಲಾ ಕಡೆ ಇರಬಹುದಾದ ಅಕ್ರಮ ವಲಸೆಗಾರರನ್ನು ಗಣತಿಯಿಂದ ಪ್ರತ್ಯೇಕಿಸಲು ದಾಖಲೆಗಳನ್ನು ಸಂಗ್ರಹಿಸತೊಡಗಿದರೆ ''ಹಮ್ ಕಾಗಜ್ ನಹೀ ದೇಂಗೇ'' ಎನ್ನುವವರನ್ನು ನಿಭಾಯಿಸುವುದು ಸಮಸ್ಯೆಯಾಗಬಹುದು. ಆಸ್ಸಾಂ ಸರಕಾರ ಈಗಾಗಲೇ ಅಲ್ಲಿನ ಮೂಲನಿವಾಸಿ ಮುಸ್ಲಿಮ್ ಅಲ್ಪಸಂಖ್ಯಾತರು ಮತ್ತು ವಲಸಿಗರನ್ನು ಪ್ರತ್ಯೇಕಿಸುವ ಉದ್ದೇಶದಿಂದ ಜಾತಿಗಣತಿಯಂಥ ಪ್ರಕ್ರಿಯೆಗೆ ಚಾಲನೆ ನೀಡಿದೆ. ಕರ್ನಾಟಕ ಸರಕಾರದ ಜಾತಿಗಣತಿಯೆಂಬ ಪ್ರಹಸನ ಈಗ ಒಳಮೀಸಲಾತಿಯ ಕಡೆ ವಾಲಿದೆ. ಬಿಹಾರ ಸರಕಾರದ ಜಾತಿಗಣತಿಯನ್ನು ಸುಪ್ರೀಂ ಕೋರ್ಟಿನಲ್ಲಿ ಪ್ರಶ್ನಿಸಲಾಗಿದೆ. ಅಕ್ರಮ ವಲಸೆ ಕುರಿತು ಪಶ್ಚಿಮ ಬಂಗಾಳ ಸರಕಾರ ಸೌಮ್ಯ ನಿಲುವು ಹೊಂದಿದೆ ಎನ್ನಲಾಗಿದೆ. ಈ ಎಲ್ಲ ವಿಷಯಗಳ ಸಂತುಲನ ಮುಂಬರುವ ಗಣತಿಗೆ ದೊಡ್ಡ ಸವಾಲಾಗಬಹುದು.

ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಮಾಹಿತಿಗಳು ಅರ್ಥಪೂರ್ಣವಾಗಬೇಕಾದರೆ ಜನರಿಂದ ಪಡೆದ ಮಾಹಿತಿಗಳನ್ನು ಆಧಾರ ದತ್ತಾಂಶ, ಭೂಮಿ ಅಂತರ್ಜಾಲ, ಜಿಎಸ್‌ಟಿ, ಆಯಕರ ದಾಖಲೆಗಳು, ಕಂದಾಯ ಇಲಾಖೆಯ ದಾಖಲೆಗಳು ಮುಂತಾದ ಇತರ ಮೂಲಗಳ ಜತೆ ಪರಿಶೀಲಿಸುವುದು ಅಗತ್ಯ. ಇಲ್ಲವಾದಲ್ಲಿ ಗಣತಿಯು ದಾರಿತಪ್ಪಿಸುವ ಅಥವಾ ಸುಳ್ಳು ಮಾಹಿತಿಗಳಿಂದ ತುಂಬಿದ ಗೊಬ್ಬರಗುಂಡಿಯಾಗಬಹುದು. ಇನ್ನು ಜಾತಿ, ಉಪಜಾತಿಗಳ ವಿಷಯದಲ್ಲಿ ಅನೇಕ ಗೊಂದಲಗಳಿವೆ. ಉದಾಹರಣೆಗೆ: ಕರ್ನಾಟಕದಲ್ಲಿ ಲಿಂಗಾಯತ ಅಥವಾ ವೀರಶೈವ ಅಂದರೆ ಜಾತಿಯೋ ಧರ್ಮವೋ ಎಂಬುದು ಒಂದು ವಿವಾದಾತ್ಮಕ ವಿಷಯವಾದರೆ ಅವರಲ್ಲಿರುವ ಉಪಜಾತಿಗಳದ್ದೂ ವಿವಾದವಿದೆ. ಲಿಂಗಾಯತರಲ್ಲಿರುವ ಉಪಜಾತಿಗಳು ಇತರ ಹಿಂದೂಗಳಲ್ಲಿಯೂ ಇವೆ. ಅದರಂತೆ ಕುರುಬ, ಒಕ್ಕಲಿಗ ಮುಂತಾದ ಜಾತಿಗಳಲ್ಲೂ ಉಪಜಾತಿಗಳಿವೆ. ಇದಕ್ಕಿಂತ ದೊಡ್ಡ ಗೊಂದಲ ಹಿಂದೂಯೇತರರಲ್ಲಿರುವ ಜಾತಿಗಳದ್ದು. ಮುಸಲ್ಮಾನ ಮತ್ತು ಕ್ರೈಸ್ತರಲ್ಲಿ ಕೂಡಾ ಜಾತಿಗಳಿವೆ ಎಂಬುದನ್ನು ಮಂಡಲ ಆಯೋಗವೇ ವರದಿ ಮಾಡಿದೆ ಮತ್ತು ಅಂಥ ಜಾತಿಗಳಿಗೆ ಕೆಲವು ಷರತ್ತುಗಳಿಗೊಳಪಟ್ಟು ಮೀಸಲಾತಿ ನೀಡುವ ಶಿಫಾರಸು ಕೂಡಾ ಮಾಡಿದೆ. ಒಟ್ಟಾರೆ 2031ರ ಜನಗಣತಿಯ ಜತೆ ಜಾತಿಯ ಗಣನೆ ಕಣಜ ಕೀಟದ ಗೂಡಿಗೇ ಕೈಹಚ್ಚಿದಂತಾಗಬಹುದು. ತಂತ್ರಜ್ಞಾನದ ಬಳಕೆಯ ಜತೆ ಸಂಬಂಧಪಟ್ಟ ಎಲ್ಲರ ಪೂರ್ಣ ಸಹಯೋಗದಿಂದ ಮಾತ್ರ ಇದೊಂದು ಅರ್ಥಪೂರ್ಣ ಕಾರ್ಯವಾಗಬಹುದು. ಇಲ್ಲವಾದಲ್ಲಿ ಗೊಂದಲದ ಗೂಡಾಗಿ ಹೊಸ ವಿವಾದಗಳಿಗೆ, ಗದ್ದಲಕ್ಕೆ ಕಾರಣವಾಗಬಹುದು.

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಭಟ್ಟರ್ ಸ್ಕಾಚ್

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ದುಡ್ಡೇ ದೊಡ್ಡಪ್ಪ ಅಂತಾರೆ. ಚಿಕ್ಕಪ್ಪ ಯಾರು?
- ಚಿಕ್ಕಪ್ಪ ಯಾರು ಅಂತ ಹೇಳಿದರೆ, ನಾದಿನಿ, ಅತ್ತೆ ಯಾರು ಅಂತ ಕೇಳ್ತೀಯಾ?!

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಯುದ್ಧ ಸಮಯದಲ್ಲಿ ಪ್ರಜೆಗಳ ಪಾತ್ರವೇನು?
- ಸೋಷಿಯಲ್ ಮೀಡಿಯಾದಲ್ಲಿ ಯುದ್ಧ ಮಾಡೋದು!

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಹೊಸ ಚಲನಚಿತ್ರಗಳು ಶುಕ್ರವಾರದಂದೇ ಬಿಡುಗಡೆಯಾಗುವುದೇಕೆ?
- ವಾರಾಂತ್ಯವನ್ನು ಹಾಳು ಮಾಡಲು!

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ನಿಜವಾದ ಕುಡುಕ ಯಾರು?
- ಬಾರ್‌ಗೂ ಕುಡಿದೇ ಹೋಗುವವ!

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, 'ಭಟ್ಟರ್ ಸ್ಕಾಚ್'ನಲ್ಲಿ ಇತ್ತೀಚೆಗೆ ಮಹಿಳಾಮಣಿಗಳೇ ಹೆಚ್ಚು ಮಿಂಚುತ್ತಿದ್ದಾರಲ್ಲ?
- ಅವರಿನ್ನೂ ಈ ಅಂಕಣದಲ್ಲಿ ಮೀಸಲಾತಿ ಕೇಳಿಲ್ಲ, ಪುಣ್ಯ!

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, 'ಕಾಲು ಶತಮಾನದಿಂದ ಒಬ್ಬನೇ ಗಂಡನ ಜತೆ ಬದುಕುತ್ತಿದ್ದೇನೆ' ಎಂದು ನಟಿ ಮಾಳವಿಕಾ ಹೇಳಿದ್ದಾಳಲ್ಲ?
- ಇದು ಗರ್ವವೋ, ವಿಷಾದವೋ ಗೊತ್ತಾಗ್ತಾ ಇಲ್ಲವಲ್ಲ ಶಿವು!

- **ಪುಂಡಲೀಕ ಕೆ., (ಇಮೇಲ್ ಮೂಲಕ)**
ಭಟ್ರೇ, ಮೋದಿ ಅತ್ಯಂತ ದುರ್ಬಲ ಪ್ರಧಾನಿ ಎಂದು ಉಗ್ರಪ್ಪ ಹೇಳಿದ್ದಾರಲ್ಲ?
- ಡಾ.ಮನಮೋಹನ ಸಿಂಗ್ ಬಗ್ಗೆ ಅವರ ಅಭಿಪ್ರಾಯ ಕೇಳಲು ಕಾತರನಾಗಿದ್ದೇನೆ!

- **ಕೆ.ಕೆ.ಜೋಶಿ, ಹುಬ್ಬಳ್ಳಿ**
ಭಟ್ರೇ, 'ಒಂದು ಮಂತ್ರ ಹೇಳಿ, ಬಿಡ್ತೇವೆ' ಅಂತ ಹಿಂದುಗಳಿಗೆ ಉಗ್ರರು ಪಹಲ್ಗಾಮ್‌ನಲ್ಲಿ ಆಫರ್ ಕೊಟ್ಟಿದ್ದರೆ?
- ಆಗಲೂ ಒಬ್ಬ ಹಿಂದುವೂ ವಾಪಸ್ ಬರ್ತಾ ಇರಲಿಲ್ಲ!

- **ಎ.ಬಿ.ಉಮರ್ಜಿ, ಮುದ್ದೇಬಿಹಾಳ**
ಭಟ್ರೇ, ನಿಜ ಹೇಳಿ, ಯೋಗಿ ದುರ್ಲಭಜೀ ಯಾರು?
- ಅವರೊಬ್ಬ ಸರಳ, ಸಂಭಾವಿತ ವ್ಯಕ್ತಿ, ಫುಲ್ ಸ್ಟಾಪ್!

- **ಡಾ.ಆನಂದ ಕುಲಿಗೋಡ, ಧಾರವಾಡ**
ಭಟ್ರೇ, 'ನಾನು' ಯಾರು ಎಂದು ತಿಳಿದುಕೊಳ್ಳುವುದು ಹೇಗೆ?
- ಮಮತಾ ಸಾಗರ ಕವಿತೆ ಕೇಳಿಯೂ ಈ ಪ್ರಶ್ನೆಯಾ?!

ಕದನ ಇಲ್ಲದೇ ಕದನವಿರಾಮ ಹೇಗೆ!?

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

'ಆಪರೇಷನ್ ಸಿಂದೂರ!' ಪಹಲ್ಗಾಮ್ ನರಹಂತಕರ ದಾಳಿಯಲ್ಲಿ ಇಪ್ಪತ್ತಾರು ಅಮಾಯಕರು ಬಲಿಯಾದ ದುಃಖದಾಯಕ ವಿಷಯವನ್ನು ಕೇಳಿದಂದಿನಿಂದ ಪ್ರತಿಯೊಬ್ಬ ಭಾರತೀಯನ ಮನದಲ್ಲೂ ಇದಕ್ಕೆ ಪ್ರತೀಕಾರ ತೆಗೆದುಕೊಳ್ಳಲೇಬೇಕೆಂಬ ಬಯಕೆ ಇತ್ತು. ಮೊದಲ ರಾಜತಾಂತ್ರಿಕ ನಿಲುವುಗಳಾದ ನೀರು, ಆಹಾರ, ರಫ್ತು-ಆಮದು ನಿಲ್ಲಿಸಿದ್ದು, ಎಲ್ಲವೂ ಸಣ್ಣ ಸಮಾಧಾನವನ್ನು ನೀಡಿದ್ದವೇ ವಿನಾ ತೃಪ್ತಿ ನೀಡಿರಲಿಲ್ಲ. ಯಾವಾಗ ಆಪರೇಷನ್ ಸಿಂದೂರ ಹೆಸರಿನಲ್ಲಿ ಉಗ್ರರ ಒಂಬತ್ತು ನೆಲೆಗಳ ಮೇಲೆ ಭಾರತ ಬಾಂಬ್ ದಾಳಿ ನಡೆಸಿತು ಎಂಬ ಸುದ್ದಿ ಬಂತು ನೋಡಿ... ಆಗ ಸಮಾಧಾನದ ನಿಟ್ಟುಸಿರುಬಿಟ್ಟರು. ಆದರೆ ಇದನ್ನು ಇಷ್ಟಕ್ಕೇ ನಿಲ್ಲಿಸಬಾರದು ಎಂಬ ಬಯಕೆಯೂ ಬಹುತೇಕರಲ್ಲಿ ಇತ್ತು. ಅದಕ್ಕೆ ಈ ಬಾರಿ ವಿಪಕ್ಷಗಳೂ ಸಹಮತ ಸೂಚಿಸಿದ್ದವು.

ಇಂದು ಜನರ ಮನಃಸ್ಥಿತಿ ಹೇಗಾಗಿದೆಯೆಂದರೆ, ಯಾವುದೇ ಘಟನೆ ನಡೆದರೂ, ಕ್ಷಣಾರ್ಧದಲ್ಲಿ ಪ್ರತ್ಯುತ್ತರ ನೀಡಬೇಕು ಎಂಬಂತಾಗಿದೆ. ಉತ್ತರಿಸಲು ವಿಳಂಬವಾದರೆ ಸೋತಂತೆ ಎಂಬ ವಾತಾವರಣ ನಿರ್ಮಾಣವಾಗುತ್ತಿದೆ. ಸುಮಾರು ಒಂದೂವರೆ ವರ್ಷದ ಹಿಂದೆ ಹಮಾಸ್ ಉಗ್ರರು ಇಸ್ರೇಲ್‌ನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಅಮಾಯಕರನ್ನು ಹತ್ಯೆಗೈದಿದ್ದು ಎಲ್ಲರಿಗೂ ನೆನಪಿರಬಹುದು. ಪ್ರತ್ಯುತ್ತರವಾಗಿ ಇಸ್ರೇಲ್ ಗಾಜಾದಲ್ಲಿರುವ ಉಗ್ರರ ಮೇಲೆ ದಾಳಿ ಮಾಡಲು ಸುಮಾರು ಮೂರು ವಾರ ತೆಗೆದುಕೊಂಡಿತ್ತು. ಎರಡು ದಶಕದ ಹಿಂದೆ ಅಮೆರಿಕದ ಟ್ವಿನ್ ಟವರ್ ಮೇಲೆ ಅಲ್ ಖೈದಾ ದಾಳಿ ನಡೆಸಿದಾಗಲೂ ಅಷ್ಟೇ, ಸೇಡು ತೀರಿಸಿಕೊಳ್ಳಲು ಅಮೆರಿಕ ಸುಮಾರು ನಾಲ್ಕು ವಾರದ ಸಮಯ ತೆಗೆದುಕೊಂಡಿತ್ತು. ಅಮೆರಿಕ, ಇಸ್ರೇಲ್‌ನಂಥ ದೇಶಗಳೇ ಯುದ್ಧ ಸಾರಲು ಸಮಯ ತೆಗೆದುಕೊಳ್ಳುವಾಗ, ಭಾರತ ಎರಡು ವಾರ ವಿಳಂಬಿಸಿದ್ದರಲ್ಲಿ ತಪ್ಪೇನೂ ಇಲ್ಲ. ಅಸಲಿಗೆ ಯಾವ ದೇಶವೂ ಯುದ್ಧ ಮಾಡಲೆಂದು ಕಾಯುತ್ತ ಕುಳಿತಿರುವುದಿಲ್ಲ. ಯಾರಾದರೂ ನಮ್ಮ ಮೇಲೆ ದಾಳಿ ಮಾಡಲಿ, ನಮ್ಮವರನ್ನು ಕೊಲ್ಲಲಿ, ನಮ್ಮನ್ನು ಪ್ರಚೋದಿಸಲಿ ಎಂದು ಎದುರುನೋಡುತ್ತಿರುವುದಿಲ್ಲ. ಹಾಗೇನಾದರೂ ಆದರೆ, ಕೆಲವೇ ಗಂಟೆಯ ಒಳಗೆ ನಾವು ಯುದ್ಧ ಸಾರಿ ಅವರಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದು ತೀರ್ಮಾನಿಸಿ ಕುಳಿತಿರುವುದಿಲ್ಲ. ಹಿಂದಲ್ಲ, ಇಂದಲ್ಲ, ಮುಂದಿನ ಇಪ್ಪತ್ತೈದು ವರ್ಷವಾದರೂ ಅಷ್ಟೇ, ಅಮೆರಿಕ, ರಷ್ಯಾ, ಉತ್ತರ ಕೊರಿಯಾ, ಚೀನಾ ಯಾವ ದೇಶವೇ ಆದರೂ, ಎಷ್ಟೇ ಯುದ್ಧ ಸಾಮಗ್ರಿಗಳನ್ನು ಹೊಂದಿದ್ದರೂ, ಯಾವ ಪ್ರಮಾಣದ ಸೇನೆ ಹೊಂದಿದ್ದರೂ ಅಷ್ಟೇ. ಅಷ್ಟಕ್ಕೂ ದೇಶ ಮುಂದಾಗುತ್ತಿರುವುದು ಯುದ್ಧಕ್ಕೆ ವಿನಾ ಊಟಕ್ಕಲ್ಲವಲ್ಲ.

ಭಾರತ ಮೇ ಏಳನೆಯ ತಾರೀಖಿನಂದು ರಾತ್ರಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿರುವ ಉಗ್ರರ ತಾಣದ ಮೇಲೆ ಡ್ರೋನ್ ದಾಳಿ ನಡೆಸಿತು. ಅಲ್ಲಿಂದ ನಾಲ್ಕು ದಿನಗಳವರೆಗೆ ನಿಯಂತ್ರಣ ರೇಖೆಯಲ್ಲಿ ಬಳಿ ಕ್ಷಿಪಣಿ ದಾಳಿ, ಡ್ರೋನ್ ಆಕ್ರಮಣ ನಿರಂತರವಾಗಿ ನಡೆಯುತ್ತಿತ್ತು. ಫಿರಂಗಿ ಸದ್ದು ಕೇಳುತ್ತಿತ್ತು. ಎರಡೂ ದೇಶಗಳು ನಿಯಂತ್ರಣ ರೇಖೆಯನ್ನು ದಾಟಿ ಶತ್ರು ದೇಶದ ಒಳಗೆ ಬರಲು ಪ್ರಯತ್ನಿಸಿದವು. ಬಹುತೇಕ ದಾಳಿಗಳು ವಿಫಲವಾದವು. ಕೆಲವು ವರದಿಯ ಪ್ರಕಾರ, ಪಾಕಿಸ್ತಾನದಲ್ಲಿರುವ ಕೆಲವು ಡ್ರೋನ್, ಕ್ಷಿಪಣಿ ಉಡಾವಣೆ ಮತ್ತು ವಾಯುಪಡೆಯ ವಿಮಾನ ನಿಲ್ದಾಣದ ಮೇಲೆ ಭಾರತ ಮಾಡಿದ ಬಾಂಬ್ ದಾಳಿಯಲ್ಲಿ ಪಾಕಿಸ್ತಾನಕ್ಕೆ ತಕ್ಕಮಟ್ಟಿಗೆ ಹಾನಿಯೂ ಆಯಿತು.

ಭಾರತ ಸರಕಾರ 'ಇನ್ನು ಮುಂದೆ ನಡೆಯುವ ಯಾವುದೇ ರೀತಿಯ ಉಗ್ರ ದಾಳಿಯನ್ನು ಯುದ್ಧ ಎಂದು ಪರಿಗಣಿಸಲಾಗುವುದು' ಎಂಬ ಹೇಳಿಕೆಯನ್ನೂ ನೀಡಿತು.

ಎರಡೂ ಕಡೆಯ ಕಾರ್ಯಾಚರಣೆಗಳು ಹೆಚ್ಚುತ್ತವೆ ಎಂಬ ನಿರೀಕ್ಷೆಯಲ್ಲಿರುವಾಗ, ಇದ್ದಕ್ಕಿದ್ದಂತೆ ಮೊನ್ನೆ ಹತ್ತನೇ ತಾರೀಕಿನ ಸಾಯಂಕಾಲ ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ, ''ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧವಿರಾಮವನ್ನು ಘೋಷಿಸಲಾಗಿದೆ, ವಾಯು, ಭೂಮಿ ಮತ್ತು ಜಲ, ಎಲ್ಲ ರೀತಿಯ ಮಿಲಿಟರಿ ಕಾರ್ಯಾಚರಣೆಗಳನ್ನೂ ನಿಲ್ಲಿಸಲು ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ, ಹನ್ನೆರಡನೇ ತಾರೀಖಿನ ಸಾಯಂಕಾಲ ಎರಡೂ ದೇಶಗಳ ನಡುವೆ ಮಾತುಕತೆ ನಡೆಯಲಿದೆ'' ಎಂದು ಹೇಳಿಕೆ ನೀಡಿದ್ದು ಭಾರತೀಯರನ್ನು ಅಚ್ಚರಿಯ ಕೂಪಕ್ಕೆ ತಳ್ಳಿತ್ತು. ಅವರ ಹಾವ-ಭಾವ ನೋಡಿದರೆ, ಈ ವಿಷಯದಲ್ಲಿ ಅವರಿಗೂ ಸಮಾಧಾನವಿದ್ದಂತೆ ಕಾಣಲಿಲ್ಲ. ಇನ್ನು ಸಾಮಾನ್ಯ ಜನರಿಗಂತೂ ಈ ವಿಷಯವನ್ನು ಅರಗಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ. ಅದಕ್ಕೆ ಅಮೆರಿಕ ಅಧ್ಯಕ್ಷ ಟ್ರಂಪ್ ಮಾಡಿದ ಟ್ವೀಟ್ ಕೂಡ ಕಾರಣವಾಗಿತ್ತು. ನಮ್ಮ ದೇಶದ ಕೈ ಮೇಲಾಗುತ್ತಿರುವಾಗ ಟ್ರಂಪ್ ಈ ರೀತಿಯ ಟ್ವೀಟ್ ಮಾಡಲು ಕಾರಣವೇನು? ಅಷ್ಟಕ್ಕೂ ಭಾರತದ ವಿಷಯದಲ್ಲಿ ಟ್ರಂಪ್ ಯಾಕೆ ಮೂಗು ತೂರಿಸಬೇಕು? ಒಂದು ವೇಳೆ ಟಂಪ್ ಹೇಳಿದರೂ ನಮ್ಮವರು ಯಾಕೆ ಆತನ ಮಾತು ಕೇಳಬೇಕು? ಇತ್ಯಾದಿ ಚರ್ಚೆಗಳಾಗತೊಡಗಿದವು. ಈ ಕದನವಿರಾಮದ ಹಿಂದಿರುವ ಸತ್ಯಾಸತ್ಯತೆ ಮಾತ್ರ ಯಾರಿಗೂ ತಿಳಿಯಲಿಲ್ಲ. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಊಹಿಸತೊಡಗಿದರು, ತಮ್ಮ ಇಷ್ಟದಂತೆ ಮಾತನಾಡಲು ಶುರುಹಚ್ಚಿಕೊಂಡರು. ಆದರೆ ಪಾಕಿಸ್ತಾನ ಸುಮ್ಮನೆ ಕುಳಿತುಕೊಳ್ಳುವ ದೇಶ ಅಲ್ಲ. ಕೆಲವೇ ಗಂಟೆಗಳ ಒಳಗೆ ಕದನವಿರಾಮದ ಉಲ್ಲಂಘನೆಯನ್ನೂ ಮಾಡಿ, ಜನರ ಬಾಯಿಗೆ ಇನ್ನಷ್ಟು ಮಾತಿನ ಆಹಾರ ಒದಗಿಸಿತು. ಮೂರು ಗಂಟೆ ಮೊದಲಷ್ಟೇ ಕದನವಿರಾಮದ ವಿಷಯ ತಿಳಿಸಿದ್ದ ಮಿಸ್ರಿ, ''ಪಾಕಿಸ್ತಾನ ಕದನವಿರಾಮವನ್ನು ಉಲ್ಲಂಘಿಸಿದೆ, ಭಾರತ ಇದನ್ನು ಗಂಭೀರವಾಗಿ ಪರಿಗಣಿಸುತ್ತದೆ'' ಎಂದರು. ಆ ಮೂರು-ನಾಲ್ಕು ಗಂಟೆಗಳ ಕಾಲ ಭಾರತ ಪಾಕಿಸ್ತಾನದ ನಡುವೆ ಕಾರ್ಯಾಚರಣೆ ನಡೆಯುತ್ತಿದೆಯೋ, ಹಾಸ್ಯ ಕಾರ್ಯಕ್ರಮ ನಡೆಯುತ್ತಿದೆಯೋ ಯಾರಿಗೂ ಅರ್ಥವಾಗಲಿಲ್ಲ. ಎಲ್ಲರಿಗೂ ಕಾಡುತ್ತಿದ್ದ ಪ್ರಶ್ನೆ ಒಂದೇ, ಭಾರತ ಕದನವಿರಾಮಕ್ಕೆ ಏಕೆ ಒಪ್ಪಿಕೊಂಡಿತು?

ಈ ಕುರಿತು ಸಾಕಷ್ಟು ಅನುಮಾನ, ವಾದ, ತರ್ಕ ಕೇಳಿಬರುತ್ತಿವೆ. ನನಗೆ ವಾಸ್ತವಕ್ಕೆ ಹತ್ತಿರವಾಗಿ ಕಂಡದ್ದು, ಕನ್ನಡದ ಕವಿಯೂ ವಿದ್ವಾಂಸರೂ ಆಗಿದ್ದ ಪಂಜೆ ಮಂಗೇಶರಾಯರ ಮರಿಮೊಮ್ಮಗ ಶಿವ್ ಆರೂರ್ ಮಾಡಿರುವ ವರದಿ. ಚಿಕ್ಕದಾಗಿ ಹೇಳುವುದಾದರೆ, ಯುದ್ಧದ ಅತಿರೇಕದ, ಹೇಸಿಗೆಯ, ಗಲೀಜು, ಸುಳ್ಳು ಸುದ್ದಿಗಳ ನಡುವೆ ನಿಖರ ಸುದ್ದಿ ನೀಡುತ್ತಿರುವ ಕೆಲವೇ ಪತ್ರಕರ್ತರಲ್ಲಿ ಶಿವ್ ಆರೂರ್ ಒಬ್ಬರು. ಸದ್ಯ ಎನ್‌ಡಿಟಿವಿ ಸುದ್ದಿವಾಹಿನಿಗೆ ಕೆಲಸ ಮಾಡುತ್ತಿರುವ ಶಿವ್, ಉತ್ತಮ ಲೇಖಕರೂ ಹೌದು. ಎನ್‌ಡಿಟಿವಿ ವಾಹಿನಿಯೇ ತಪ್ಪು ಮಾಹಿತಿ ನೀಡುತ್ತಿದ್ದರೂ, ಸದ್ಯ ಕಾಶ್ಮೀರದಲ್ಲಿ ವಾಸ್ತವ್ಯ ಹೂಡಿರುವ ಶಿವ್ ಸ್ವತಃ ದಾರಿ ತಪ್ಪಿದಂತೆಯೂ, ಇತರರ ದಾರಿ ತಪ್ಪಿಸುತ್ತಿರುವಂತೆಯೂ ಕಾಣಲಿಲ್ಲ.

ಇರಲಿ, ಆಗಿದ್ದೇನೆಂದರೆ, ಮೇ ಹತ್ತರಂದು ಬೆಳಗಿನ ಜಾವ ಭಾರತೀಯ ವಾಯುಪಡೆಯ ವಿಮಾನಗಳು ಪಾಕಿಸ್ತಾನ ವಾಯುಪಡೆಯ ಪ್ರಮುಖ ನೆಲೆಗಳನ್ನು ಗುರಿಯಾಗಿಸಿಕೊಂಡು ಬ್ರಹ್ಮೋಸ್ ಕ್ಷಿಪಣಿಗಳನ್ನು ಹಾರಿಸಿದವು. ಮೊದಲನೆಯ ಕ್ಷಿಪಣಿ ರಾವಲ್ಪಿಂಡಿ ಬಳಿಯ ಚಕ್ಲಾಲ, ಎರಡನೆಯ ಕ್ಷಿಪಣಿ ಪಂಜಾಬ್ ಪ್ರಾಂತ್ಯದ ಸರ್ಗೋಧಾದಲ್ಲಿ ತಮ್ಮ ಆರ್ಭಟವನ್ನು ಮೆರೆದಿದ್ದವು. ಈ ಎರಡೂ ಸ್ಥಳಗಳು ಯಾಕೆ ಮಹತ್ವ ಪಡೆಯುತ್ತವೆ ಎಂದರೆ, ಪಾಕಿಸ್ತಾನ ಸೇನೆಯ ಅದರಲ್ಲೂ ಪ್ರಮುಖವಾಗಿ ವಾಯುಪಡೆಯ ಕಾರ್ಯತಂತ್ರಗಳು ಇಲ್ಲಿ ರೂಪುಗೊಳ್ಳುತ್ತವೆ. ಎರಡೂ ಪಾಕಿಸ್ತಾನದ ವಾಯುಪಡೆಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ತಾಣವಾಗಿದ್ದರಿಂದ ಇದು ಮಹತ್ವದ್ದಾಗಿದೆ. ಅದರ ಬೆನ್ನಲ್ಲೇ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಭಾಗಗಳಾದ ಜೆಕೋಬಾಬಾದ್, ಬೊಲಾರಿ, ಸ್ಕರ್ದು ಮೊದಲಾದ ಜಾಗಗಳಲ್ಲಿಯೂ ಭಾರತ ಹಾನಿ ಉಂಟುಮಾಡಿದೆ. ಇದಾಗಿ ಸ್ವಲ್ಪ ಸಮಯದಲ್ಲಿಯೇ ಪಾಕಿಸ್ತಾನದ ರಕ್ಷಣಾ ಜಾಲಗಳಲ್ಲಿ ಹೈ ಅಲರ್ಟ್ ಸಂದೇಶಗಳು ಓಡಾಡಲು ಆರಂಭಿಸಿವೆ. ಮುಂದಿನ ಕಾರ್ಯಾಚರಣೆಯಲ್ಲಿ ಭಾರತವು ಪಾಕಿಸ್ತಾನದ ಪರಮಾಣು ನಿಯಂತ್ರಣದ ಮೂಲ ಸೌಕರ್ಯವನ್ನೇ ಗುರಿಯಾಗಿಸಬಹುದು, ಪಾಕಿಸ್ತಾನದ ಕಾರ್ಯತಂತ್ರದ ವಿಭಾಗಕ್ಕೆ ಸಂಬಂಧಿಸಿದ ಕಚೇರಿಯನ್ನೂ ನಾಶಪಡಿಸಬಹುದು ಎಂದು ಪಾಕ್ ಗುಪ್ತಚರ ಇಲಾಖೆ ತಿಳಿಸಿದೆ. ಈ ಹಂತದಲ್ಲಿ ಪಾಕಿಸ್ತಾನ ತುರ್ತು ಹಸ್ತಕ್ಷೇಪ ಮಾಡುವಂತೆ ಅಮೆರಿಕವನ್ನು ಕೇಳಿಕೊಂಡಿದೆ. ಎರಡೂ ಕಡೆಯಿಂದ ಹೆಚ್ಚುತ್ತಿರುವ ಉದ್ವಿಗ್ನತೆಯ ನಿರೀಕ್ಷೆಯಲ್ಲಿದ್ದರೂ, ಉಭಯ ದೇಶಗಳೊಂದಿಗೆ ಸಂಪರ್ಕದಲ್ಲಿದ್ದರೂ ಅದುವರೆಗೂ ತಟಸ್ಥವಾಗಿದ್ದ ಅಮೆರಿಕ ಇದರ ಒಳಗೆ ಕಾಲಿಟ್ಟಿದೆ.

ಹಾಗೆ ಮಧ್ಯಸ್ಥಿಕೆ ವಹಿಸಲು ಬಂದ ಅಮೆರಿಕ ಕಡಿದು ಕೊಮಟೆ ಹಾಕಿದ್ದು ಏನೂ ಇಲ್ಲ. ಅಮೆರಿಕ ಮಾಡಿದ ಒಂದೇ ಕೆಲಸವೆಂದರೆ, 'ನಿಮ್ಮ ಅಹಂಕಾರ ಬಿಟ್ಟು, ಭಾರತಕ್ಕೆ ಕರೆ ಮಾಡಿ ಯುದ್ಧವಿರಾಮಕ್ಕೆ ಕೇಳಿಕೊಳ್ಳಿ' ಎಂದು ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕ (ಡಿಜಿಎಮ್‌ಒ) ಕಾಶಿಫ್ ಅಬ್ದುಲ್ಲಾಗೆ ತಾಕೀತುಮಾಡಿದ್ದು. ಅದಕ್ಕೆ ಮಣಿದ ಅಬ್ದುಲ್ಲಾ ಭಾರತದ ಡಿಜಿಎಮ್‌ಒ ರಾಜೀವ್ ಘೈ ಅವರಿಗೆ ಕರೆ ಮಾಡಿ ಕದನವಿರಾಮಕ್ಕೆ ಕೇಳಿಕೊಂಡಿದ್ದಾರೆ. ಭಾರತ ತಾತ್ಕಾಲಿಕ ವಿರಾಮಕ್ಕೆ ಒಪ್ಪಿಕೊಂಡಿದೆ. ಅದನ್ನೇ ತಮ್ಮ ಸಾಧನೆ ಎಂಬಂತೆ ಟ್ರಂಪ್ ಟ್ವೀಟ್ ಮಾಡಿಕೊಂಡಿದ್ದಾರೆ.

ಯುದ್ಧವಿರಾಮಕ್ಕೆ ಇದೇ ಕಾರಣ ಇರಬಹುದು, ಇಲ್ಲದೆಯೂ ಇರಬಹುದು. ಇದೇ ಕಾರಣವಾದರೂ ಒಂದಷ್ಟು ಪ್ರಶ್ನೆ ಸಹಜ. ಭಾರತವು 'ಆಪರೇಷನ್ ಸಿಂದೂರ'ವನ್ನು ಕಾರ್ಯಾಚರಣೆ ಎಂದು ಕರೆದಿತ್ತೇ ವಿನಾ ಯುದ್ಧ ಎಂದು ಘೋಷಿಸಲಿಲ್ಲ. ಭಾರತದಲ್ಲಿ ಸೇನಾ ಮುಖ್ಯಸ್ಥರಾಗಲಿ, ರಕ್ಷಣಾ ಮಂತ್ರಿಯಾಗಲಿ ಯುದ್ಧವನ್ನು ಘೋಷಿಸುವಂತಿಲ್ಲ. ಆ ಅಧಿಕಾರ ಮಾಧ್ಯಮದವರಿಗೂ ಇಲ್ಲ, ಪ್ರಧಾನಿಗೂ ಇಲ್ಲ. ಭಾರತದಲ್ಲಿ ಆ ಅಧಿಕಾರ ಇರುವುದು ರಾಷ್ಟ್ರಪತಿಗಳಿಗೆ ಮಾತ್ರ. ಅದೂ ಸಂಸತ್ತಿನ ಅಥವಾ ಮಂತ್ರಿಮಂಡಳದ ಒಪ್ಪಿಗೆಯ ಮೇರೆಗೇ ವಿನಾ, ಎಷ್ಟೇ ಪ್ರಭಾವಿ ನಾಯಕರು ಹೇಳಿದರೂ ಅದು ಅಧಿಕೃತವಲ್ಲ. ಹಾಗಿರುವಾಗ ಇನ್ನೂ ಘೋಷಣೆಯೇ ಆಗದ ಕದನದವಿರಾಮ ಹೇಗೆ ಆಗಬೇಕು? ಮೊನ್ನೆ ನಡೆದದ್ದು ಮಿಲಿಟರಿ ಕಾರ್ಯಾಚರಣೆಯ ತಾತ್ಕಾಲಿಕ ಸ್ಥಗಿತವೇ ಶಿವಾಯ್ ಕದನವಿರಾಮವಲ್ಲ. ಆದರೂ ಹೆಸರಿಗೆ 'ಕದನವಿರಾಮ' ಅಂತಲೇ ಇಟ್ಟುಕೊಳ್ಳೋಣ.

ಇನ್ನೊಂದು ಪ್ರಶ್ನೆ, ಪಾಕಿಸ್ತಾನ ವಿರಾಮ ಕೇಳಿದರೆ ಸದ್ಯ ಕೈ ಮೇಲಾಗಿರುವ ಭಾರತ ಏಕೆ ಒಪ್ಪಬೇಕು? ಈ ಪ್ರಶ್ನೆ ಎರಡೂ ಕಡೆ ಹರಿತವಾಗಿರುವ ಕತ್ತಿಯಂತೆ. ಇಂಥ ಪರಿಸ್ಥಿತಿಯಲ್ಲಿ ಹೇಗೆ ಉತ್ತರಿಸಿದರೂ ತಪ್ಪು ಹುಡುಕಬಹುದು. ವಿರಾಮಕ್ಕೆ ಅವಕಾಶ ಕೊಟ್ಟರೆ, ನಿನ್ನೆಯಿಂದ ಬರುತ್ತಿರುವ ಟೀಕೆಗಳ ಮಹಾಪೂರಗಳೇ ಉದಾಹರಣೆ. ಪಾಕಿಸ್ತಾನವನ್ನು ನಂಬಬಾರದು, ಪಾಕಿಸ್ತಾನ ಗೋಸುಂಬೆ, ಎಪ್ಪತ್ತೊಂದರ ನಂತರ ಎರಡು ದೇಶಗಳ ನಡುವೆ ನಿರ್ಣಾಯಕ ಯುದ್ಧ ಆಗಿರಲಿಲ್ಲ, ಈಗ ಒದಗಿಬಂದ ಅವಕಾಶ ತಪ್ಪಿಸಿಕೊಂಡೆವು, ಅಮೆರಿಕಕ್ಕೆ ಮಣಿದೆವು, ಚೀನಾದ ಒತ್ತಡಕ್ಕೆ ಸಿಲುಕಿದೆವು, ನೂರಾರು ಕಾರಣ ಹೇಳಬಹುದು.

ಒಂದೊಮ್ಮೆ ವಿರಾಮಕ್ಕೆ ಅವಕಾಶ ಕೊಡದಿದ್ದರೆ ಏನಾಗುತ್ತಿತ್ತು? ಅಂತಾರಾಷ್ಟ್ರೀಯ ಮಟ್ಟದಲ್ಲಿ, ಇದುವರೆಗೂ 'ಶಾಂತಿಪ್ರಿಯ ರಾಷ್ಟ್ರ' ಎಂದು ಕರೆಸಿಕೊಳ್ಳುತ್ತಿದ್ದ ಭಾರತದ ಛವಿ ಕ್ಷೀಣಿಸುತ್ತಿತ್ತು. ನಮ್ಮ ದೇಶದಲ್ಲೇ ಇರುವ ಅರೆಕಾಲಿಕ ಶಾಂತಿಪ್ರಿಯರೂ ಸೇರಿದಂತೆ, ಲೆಕ್ಕಕ್ಕುಂಟು ಆಟಕ್ಕಿಲ್ಲ ಎಂಬಂಥ ಸಣ್ಣ ಸಣ್ಣ ರಾಷ್ಟ್ರಗಳೂ 'ಭಾರತ ಪಾಕಿಸ್ತಾನಕ್ಕೆ ಒಂದು ಅವಕಾಶವನ್ನು ಕೊಡಬೇಕಾಗಿತ್ತು' ಎಂದು ಉಪದೇಶ ಮಾಡುತ್ತಿದ್ದವು. ಅಷ್ಟಕ್ಕೂ ಪಾಕಿಸ್ತಾನ ತಾನಾಗಿಯೇ ಬಂದು ಕೇಳದಿದ್ದರೆ ಭಾರತ ಒಪ್ಪುತ್ತಲೂ ಇರಲಿಲ್ಲ. ಏಕೆಂದರೆ ಈ ಮೊದಲೂ ಘರ್ಷಣೆ ಹೆಚ್ಚದಂತೆ ನೋಡಿಕೊಳ್ಳಿ ಎಂದು ಇದೇ ಟ್ರಂಪ್ ಹೇಳಿದ್ದರು. ಕಾರ್ಯಾಚರಣೆ ಆರಂಭವಾದ ನಂತರ ಸೌದಿ ಅರೇಬಿಯಾದ ಉಪರಕ್ಷಣಾ ಸಚಿವರು ಭಾರತ-ಪಾಕಿಸ್ತಾನ ಎರಡೂ ದೇಶಕ್ಕೆ ಭೇಟಿ ನೀಡಿ ಪರಿಸ್ಥಿತಿ ಬಿಗಡಾಯಿಸದಂತೆ ನೋಡಿಕೊಳ್ಳಿ ಎಂದಿದ್ದರು. ಕೆಲವು ಸಂದರ್ಭದಲ್ಲಿ ಮಧ್ಯಸ್ಥಿಕೆಗೆ ಬಂದವರನ್ನು ಕಡೆಗಣಿಸಬಹುದು, ಯಾರೊಂದಿಗೆ ಪೈಪೋಟಿಗೆ ಇಳಿದಿದ್ದೇವೆಯೋ ಅವರೇ ಸ್ವತಃ ಕೇಳಿಕೊಂಡಾಗ ತಿರಸ್ಕರಿಸುವುದು ಒಳ್ಳೆಯದಲ್ಲ. ಯುದ್ಧದಿಂದ ಸಿಗುವಂಥದ್ದು ಯುದ್ಧವಿಲ್ಲದೇ ಸಿಕ್ಕರೆ ಯಾಕಾಗಬಾರದು? ಹಾನಿಯ ನಂತರವೂ ದಕ್ಕದೇ ಇರುವುದು ಹಾನಿ ಯಾಗದೇ ದಕ್ಕಿದರೆ ಯಾರಿಗೆ ಬೇಡ? ಅಷ್ಟಕ್ಕೂ ದುರ್ಬಲರ ಕಡೆಯಿಂದಲೇ ವಿರಾಮದ ಉಲ್ಲಂಘನೆಯಾದರೆ ಸಬಲರಿಗೆ ಯಾವ ಹಾನಿಯೂ ಇಲ್ಲವಲ್ಲ?

ಯಾರು ಏನೇ ಹೇಳಿದರೂ, ಒಂದಂತೂ ಸತ್ಯ- ಇಂದಿನ ದಿನದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ, ಆಂತರಿಕವಾಗಿ ಛಿದ್ರ ಛಿದ್ರವಾಗಿರುವ ಪಾಕಿಸ್ತಾನಕ್ಕಿಂತ ಭಾರತ ಎಲ್ಲ ರೀತಿಯಿಂದಲೂ ಸಶಕ್ತವಾಗಿದೆ. ಭಾರತಕ್ಕೆ ಇರುವ ಕೊರತೆಯೆಂದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನಿಕರ ಮಾತ್ರ. ಉಳಿದಂತೆ ಪಾಕಿಸ್ತಾನಕ್ಕೆ ಹೋಲಿಸಿದರೆ ಯಾವ ಕೊರತೆಯೂ ಇಲ್ಲ.

ಇನ್ನು ಇದನ್ನು ಕದನವೆನ್ನಿ, ಕಾರ್ಯಾಚರಣೆಯೆನ್ನಿ, ಒಂದು ನಿರ್ಣಯವಂತೂ ಆಗಬೇಕು. ಎರಡೂ ದೇಶಗಳು 'ನಾವೇ ಗೆದ್ದೆವು' ಎಂದು ಮುಂದಿನ ಎರಡು ದಶಕ ಹೇಳಿಕೊಂಡು ಓಡಾಡುವಂತಾಗಬಾರದು. ಕಾದು ನೋಡೋಣ!

ತನ್ನಿಮಿತ್ತ

ಕೆ.ವಿ.ವಾಸು

ಮಹಾನ್ ಮಾನವತಾವಾದಿ ಬುದ್ಧ

ಗೌತಮ ಬುದ್ಧರ ಜನ್ಮದಿನವಾದ ಇಂದು ಅವರ ಸ್ಮರಣೆ ಮಾಡುವುದರ ಜತೆಗೆ, ಅವರು ಬೋಧಿಸಿದ ತತ್ವಗಳ ಬಗ್ಗೆ ವಿಶ್ವಾದ್ಯಂತ ಚಿಂತನ-ಮಂಥನ ನಡೆಸಲಾಗುತ್ತದೆ. ಭಾರತ, ಚೀನಾ, ಜಪಾನ್, ಶ್ರೀಲಂಕಾ, ಕೊರಿಯಾ, ಭೂತಾನ್, ನೇಪಾಳ, ಮ್ಯಾನ್ಮಾರ್, ಹಾಂಗ್‌ಕಾಂಗ್, ಮಲೇಷ್ಯಾ, ಕಾಂಬೋಡಿಯಾ ಇನ್ನೂ ಅನೇಕ ದೇಶಗಳಲ್ಲಿ ಬೌದ್ಧಧರ್ಮ ಇಂದಿಗೂ ಪ್ರಸ್ತುತವಾಗಿದೆ. ಭಾರತದ ಸಂವಿಧಾನದ ರೂವಾರಿಯೆಂದೇ ಖ್ಯಾತರಾದ ಡಾ. ಬಿ.ಆರ್. ಅಂಬೇಡ್ಕರ್ ಕೂಡ ಹಿಂದೂಧರ್ಮವನ್ನು ತ್ಯಜಿಸಿ ಬೌದ್ಧಧರ್ಮಕ್ಕೆ ಮತಾಂತರಗೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಮಹಾನ್ ಮಾನವತಾವಾದಿಯಾದ ಗೌತಮ ಬುದ್ಧನ ಮುಂಚಿನ ಹೆಸರು ಸಿದ್ಧಾರ್ಥ. ನೇಪಾಳದ ಲುಂಬಿನಿಯಲ್ಲಿ ಕ್ರಿ.ಪೂ.563ರಲ್ಲಿ ಸಿದ್ಧಾರ್ಥನ ಜನನವಾಯಿತು. ಈತನ ಜಾತಕವನ್ನು ನೋಡಿದ ಅರಮನೆಯ ಜ್ಯೋತಿಷಿಗಳು, ''ಈತ ಇಡೀ ವಿಶ್ವವೇ ಕೊಂಡಾಡುವಂಥ ಚಕ್ರವರ್ತಿ ಅಥವಾ ಜಗತ್ತನ್ನೇ ಬೆಳಗುವ ಸನ್ಯಾಸಿಯಾಗುತ್ತಾನೆ'' ಎಂದು

ಭವಿಷ್ಯ ನುಡಿದಿದ್ದರು. ಇದನ್ನು ಕೇಳಿ ತಂದೆ ಮಹಾರಾಜ ಶುದ್ಧೋದನ, ಮಗನು ಅರಮನೆಯ ಭೋಗ-ಭಾಗ್ಯಗಳನ್ನು ತೊರೆದು ಸನ್ಯಾಸಿಯಾದರೇನು ಗತಿ ಎಂಬ ಆತಂಕದಲ್ಲಿ, ಸಿದ್ಧಾರ್ಥನಿಗೆ ಹೊರ ಪ್ರಪಂಚದ ಕಷ್ಟ-ಕಾರ್ಪಣ್ಯಗಳೇ ಗೊತ್ತಾಗದ ಹಾಗೆ ಅರಮನೆಯಲ್ಲಿ ಬಂದಿಯಾಗಿರಿಸಿದ. ಅಲ್ಲಿ ಇಹಲೋಕದ ಎಲ್ಲಾ ಸುಖ-ಸಂಪತ್ತುಗಳೂ ದೊರೆಯುವಂತೆ ಮಾಡಿದ. ಕಾಲಾನಂತರದಲ್ಲಿ, ಯಶೋಧರ ಎಂಬಾಕೆಯೊಡನೆ ಸಿದ್ಧಾರ್ಥನಿಗೆ ಮದುವೆಯಾಗುತ್ತದೆ, ಮುಂದೆ ರಾಹುಲ ಎಂಬ ಮಗನೂ ಜನಿಸುತ್ತಾನೆ. ಆದರೆ ಸಿದ್ಧಾರ್ಥನಿಗೆ ಆತ್ಮಜ್ಞಾನದ ತುಡಿತ ನಿರಂತರವಾಗಿ ಕಾಡುತ್ತಲೇ ಇರುತ್ತದೆ. ಹೀಗಾಗಿ ಒಮ್ಮೆ ತಂದೆಯನ್ನು ಕಾಡಿಬೇಡಿ, ಹೊರಪ್ರಪಂಚವನ್ನು ನೋಡಲು ರಥದಲ್ಲಿ ಸೇವಕನೊಂದಿಗೆ ಹೊರಡುತ್ತಾನೆ. ಆತ ಸಾಗುವ ದಾರಿಯಲ್ಲಿ ಯಾವುದೇ ಕೆಟ್ಟ ದೃಶ್ಯಗಳು ಆತನ ಕಣ್ಣಿಗೆ ಬೀಳದಂತಿರಲು ರಾಜ ಶುದ್ಧೋದನ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರೂ, ಸಿದ್ಧಾರ್ಥನಿಗೆ ಮಾರ್ಗದಲ್ಲಿ ಮುದುಕ, ಅನಾರೋಗ್ಯಪೀಡಿತ ವ್ಯಕ್ತಿ, ಶವದ ಮೆರವಣಿಗೆ ಮುಂತಾದ ದೃಶ್ಯಗಳು ಕಾಣಿಸುತ್ತವೆ.

ಮೊದಲೇ ಅಂತರ್ಮುಖಿಯಾದ ಸಿದ್ಧಾರ್ಥನಿಗೆ ಈ ದೃಶ್ಯಗಳು ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರುತ್ತವೆ. ಇವರಂತೆ ತಾನು ಕೂಡ ಎಂದಾದರೊಂದು ದಿನ ಅನಾರೋಗ್ಯಕ್ಕೆ ತುತ್ತಾಗಬೇಕಾಗುತ್ತದೆ, ವೃದ್ಧನಾಗಬೇಕಾಗುತ್ತದೆ, ಕೊನೆಗೆ ಶವವಾಗಬೇಕಾಗುತ್ತದೆ ಎಂಬ ಘೋರಸತ್ಯದ ದರ್ಶನವಾದಾಗ, ಸಿದ್ಧಾರ್ಥ ವ್ಯಾಕುಲಿತನಾಗುತ್ತಾನೆ. ಈ ಹುಟ್ಟು-ಸಾವಿನ ಸರಪಳಿಯಿಂದ ಹೊರಬಂದು ಆತ್ಮಜ್ಞಾನ ಪಡೆಯಬೇಕೆಂಬ ಉತ್ಕಟ ಬಯಕೆ ಅವನಲ್ಲಿ ಚಿಗುರೊಡೆಯುತ್ತದೆ. ಇದು ದಿನಗಳೆದಂತೆ ತೀವ್ರವಾಗಿ ಒಂದು ಮಧ್ಯರಾತ್ರಿ ಹೆಂಡತಿ-ಮಗನನ್ನು ತೊರೆದು, ದಟ್ಟಕಾಡಿನತ್ತ ಪಯಣಿಸುತ್ತಾನೆ. ಹೀಗೆ ಸುಮಾರು 6 ವರ್ಷಗಳ ಕಾಲ ಕಾಡು-ಮೇಡು ಅಲೆದು, ಹಲವು ಸಾಧು-ಸಂತರನ್ನು ಭೇಟಿಮಾಡಿ ಮೋಕ್ಷಮಾರ್ಗದ ಕುರಿತು ಕೇಳುತ್ತಾನೆ. ಕಡೆಗೊಂದು ದಿನ, ಅಂದರೆ ಮೇ ತಿಂಗಳ ಹುಣ್ಣಿಮೆಯಂದು ಬೋಧಿವೃಕ್ಷದ ಕೆಳಗೆ ಧ್ಯಾನಮಗ್ನನಾಗಿದ್ದಾಗ ಅವನಿಗೆ ಆತ್ಮಜ್ಞಾನ ಉಂಟಾಗುತ್ತದೆ, ಅಂದಿನಿಂದ 'ಬುದ್ಧ' ಎಂದು ಕರೆಸಿಕೊಳ್ಳುತ್ತಾನೆ. ಹಾಗೆಂದರೆ 'ಎಚ್ಚರಗೊಂಡವನು' ಎಂದರ್ಥ.

ಮುಂದೆ, ಬೌದ್ಧ ಧರ್ಮದ ಸಂಸ್ಥಾಪಕರು ಎನಿಸಿಕೊಳ್ಳುವ ಗೌತಮ ಬುದ್ಧರು ಸುಮಾರು 80 ವರ್ಷಗಳಷ್ಟು ದೀರ್ಘಕಾಲ ಜೀವಿಸಿ, ಕ್ರಿ.ಪೂ. 483ರಲ್ಲಿ ಪರಿನಿರ್ವಾಣ ಹೊಂದುತ್ತಾರೆ. ಭಾರತವನ್ನಾಳಿದ ಅಶೋಕ, ಕಾನಿಷ್ಕ, ಹರ್ಷವರ್ಧನ ಮುಂತಾದ ರಾಜ-ಮಹಾರಾಜರ ಬೆಂಬಲ ಮತ್ತು ಪ್ರೋತ್ಸಾಹವು ಬೌದ್ಧಧರ್ಮಕ್ಕೆ ಸಿಕ್ಕಿತು. ಕಳಿಂಗ ಯುದ್ಧದ ನಂತರ ಹಿಂಸೆಯನ್ನು ತ್ಯಜಿಸಿದ ಸಾಮ್ರಾಟ ಅಶೋಕನು ಬೌದ್ಧಧರ್ಮವನ್ನು ಸ್ವೀಕರಿಸಿ, ಅದರ ಪ್ರಚಾರಕ್ಕೆ ತನ್ನ ಮಕ್ಕಳನ್ನೇ ಹೊರದೇಶಕ್ಕೆ ಕಳಿಸಿದ. ಜತೆಗೆ, ತನ್ನ ಸಾಮ್ರಾಜ್ಯದಲ್ಲಿ 84,000ದಷ್ಟು ಬುದ್ಧನ ಸ್ವರೂಪಗಳನ್ನು ಸ್ಥಾಪಿಸಿದ.

ಹೀಗೆ ಮನುಕುಲದ ಉದ್ಧಾರಕರಾಗಿ, ಮಹಾನ್ ಮಾನವತಾವಾದಿಯಾಗಿ, ಹುಟ್ಟು-ಸಾವಿನ ಸಂಕೋಲೆಗಳಿಂದ ಪಾರಾಗುವ ಮಾರ್ಗವನ್ನು ಜನರಿಗೆ ಬೋಧಿಸಿದ ದಿವ್ಯಚೇತನವೇ ಗೌತಮ ಬುದ್ಧರು. ಅವರ ಜಯಂತಿಯಾದ ಇಂದು ಸರ್ವರಿಗೂ ಸನ್ಮಂಗಳ ಉಂಟಾಗಲಿ.

(ಲೇಖಕರು ವಕೀಲರು ಮತ್ತು ನೋಟರಿ)

ಮೈಕಾಸುರರು ಮತ್ತವರ ಪಡೆಗಳ ವಿಶ್ಲೇಷಕ ದಾಳಿಯನ್ನು ತಪ್ಪಿಸಿಕೊಳ್ಳುವುದೆಂತು?

ಸೇನಾ ವ್ಯವಸ್ಥೆ, ಯುದ್ಧದ ಸಜ್ಜಿಕೆ ಮುಂತಾದವುಗಳ ಗಂಧ-ಗಾಳಿ ಇಲ್ಲದವರೂ ಸುದ್ದಿವಾಹಿನಿಗಳ ಸ್ಟುಡಿಯೋಗಳಲ್ಲಿ ಕೂತು ಮಾಡುವ ವಿಶ್ಲೇಷಣೆಗಳನ್ನು ಹಾಗೂ ತಂತ್ರಗಾರಿಕೆಯ ಒಳಸುಳಿಗಳ ವಿವರಣೆಗಳನ್ನು ಕೇಳಿದರಂತೂ ನಮ್ಮ ಸೇನೆಗಳ ದಂಡನಾಯಕರೇ ಹೀಗೆ ಕೂತು ಚರ್ಚಿಸುತ್ತಿದ್ದಾರೇನೋ ಅನಿಸಿಬಿಡುತ್ತದೆ. ಸ್ಟುಡಿಯೋದಿಂದ ತಮ್ಮದೇ ಮನೆ ತಲುಪಲು 'ಗೂಗಲ್ ಮ್ಯಾಪ್' ಅನ್ನು ನೆಚ್ಚುವವರು ಕೂಡ, ಗಡಿಭಾಗದ ಭೂಪಟ ಸಹಿತ ಅಲ್ಲಿನ ಪ್ರತಿಯೊಂದು ಬಂಕರ್, ಸೇನಾಪಡೆಗಳ ಶಕ್ತಿಕೇಂದ್ರಗಳ ವಿವರವನ್ನು ಹಂಚಿಕೊಳ್ಳುವುದನ್ನು ಕೇಳಿದಾಗ ನಿಜಕ್ಕೂ ಅಚ್ಚರಿಯಾಗುತ್ತದೆ.

ಸಿಂದೂರ ತಿಲಕ

ಜಿ. ಪ್ರತಾಪ್ ಕೊಡಂಚ
vveditoped@gmail.com

ಪ್ರತಿ ಬಾರಿ ಮಗುವನ್ನು ಚಿವುಟಿ, ಪೆಟ್ಟು ಬೀಳುತ್ತದೆ ಎಂದಾಕ್ಷಣ ''ನಾನು ಚಿವುಟಿದ್ದಲ್ಲ, ಚಿವುಟಿದವರು ನನ್ನವರಲ್ಲ, ನಾನೇ ಚಿವುಟಿಸಿಕೊಂಡು ರಕ್ತ ಸುರಿಸುತ್ತಿದ್ದೇನೆ'' ಎಂಬ ಸಬೂಬು ಹೇಳಿ ತಪ್ಪಿಸಿಕೊಳ್ಳುತ್ತಿದ್ದ ಭಯೋತ್ಪಾದಕ ರಾಷ್ಟ್ರ ಪಾಕಿಸ್ತಾನಕ್ಕೆ, ಭಾರತದ ಸೇನಾಪಡೆ ಈ ಬಾರಿ ಸಶಕ್ತವಾಗಿಯೇ ಉತ್ತರಿಸಿದೆ, ಉತ್ತರಿಸುತ್ತಿದೆ. ಸೇನೆಗೆ ಶಕ್ತಿ ತುಂಬಿ, ''ನಿಮ್ಮೊಂದಿಗೆ ನಾವಿದ್ದೇವೆ, ಅವಶ್ಯಕತೆಗೆ ತಕ್ಕಂತೆ ಮುನ್ನುಗ್ಗಿ'' ಎಂಬ ಅಭಯದೊಂದಿಗೆ ಬೆನ್ನೆಲುಬಾಗಿ ನಿಂತ ಮೋದಿ ನೇತೃತ್ವದ ಭಾರತ ಸರಕಾರದ ಸ್ಥೈರ್ಯ ಮತ್ತು ದಿಟ್ಟ ನಿರ್ಧಾರಗಳು, ಸಂದಿಗ್ಧ ಸಮಯದಲ್ಲೂ ಭಾರತೀಯರ ಪಾಲಿಗೆ ಹೆಮ್ಮೆ ತಂದಿವೆ.

ಸರಕಾರ ಮತ್ತು ಸೇನೆಯ ನಿರ್ಧಾರಗಳಿಗೆ ತಮ್ಮ ಬೆಂಬಲವಿದೆಯೆಂದು ಘೋಷಿಸಿರುವ ಬಹುತೇಕ ವಿಪಕ್ಷ ನಾಯಕರ ನಡೆಯೂ ಅಭಿನಂದನಾರ್ಹವೇ. ಕರ್ನಾಟಕದಂಥ, ಬಿಜೆಪಿಯೇತರ ಪಕ್ಷಗಳ ಆಡಳಿತವಿರುವ ಕೆಲವು ರಾಜ್ಯ ಸರಕಾರಗಳೂ ಭಾರತೀಯರ ಸುರಕ್ಷತೆಗಾಗಿ, ಭಾರತೀಯ ಸೇನೆಗೆ ಬಲನೀಡುವಂತೆ ಕೋರಿ ಗುಡಿ, ಮಸೀದಿ, ಚರ್ಚುಗಳಲ್ಲಿ ಪ್ರಾರ್ಥನೆಗೆ ಮುಂದಾಗಿದ್ದೂ ಪ್ರಶಂಸನೀಯವೇ. ರಾಜಕೀಯದ ನಿಲುವುಗಳೇನೇ ಇದ್ದರೂ ದೇಶದ ಹಿತರಕ್ಷಣೆಯ ವಿಷಯದಲ್ಲಿ ನಾವೆಲ್ಲರೂ ಒಂದಾಗಿದ್ದು, ವಿವಿಧತೆಯಲ್ಲಿನ ಏಕತೆಯ ಭಾವ ಬಹುತೇಕ ಎಲ್ಲೆಡೆ ಗೋಚರಿಸುತ್ತಿದೆ. ಶಾಂತಿಮಂತ್ರದ ಆರಾಧಕರು (?) ಅಲ್ಲಲ್ಲಿ ಕಂಡುಬರುತ್ತಿದ್ದರೂ, ಅವರ ಉದ್ದೇಶ, ಆಸ್ಥೆಯ ಒಳಗುಟ್ಟು ಬಯಲಾಗಿದ್ದು ಬಿಟ್ಟರೆ ಬೇರಾವ ಪ್ರಭಾವ ಬೀರಿದ ಸೂಚನೆಗಳು ಸದ್ಯಕ್ಕಂತೂ ಕಾಣುತ್ತಿಲ್ಲ.

ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಮೇಲೆರಗಿ ಭಾರತೀಯ ಗೃಹಿಣಿಯರ ಸಿಂದೂರ ಅಳಿಸಿ ವಿಕೃತಿ ಮೆರೆದ ಭಯೋತ್ಪಾದಕ ಶಕ್ತಿಗಳಿಗೆ ಭಾರತ ಸರಕಾರವು 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಮೂಲಕ ಸಮರ್ಪಕವಾಗಿಯೇ ಉತ್ತರಿಸಿದೆ. ಭಯೋತ್ಪಾದಕ ಕೇಂದ್ರಗಳನ್ನೇ ಗುರಿಯಾಗಿಸಿಕೊಂಡು ನಡೆಯುತ್ತಿರುವ ಈ ಕಾರ್ಯಾಚರಣೆಯಲ್ಲಿ ಗುರಿಗೆ ಸನಿಹದಲ್ಲೇ ಇದ್ದ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಲಾಗಿದೆ. ತನ್ಮೂಲಕ ಜಾಗತಿಕ ವಲಯದಲ್ಲಿ ಅದು ಮೆಚ್ಚುಗೆಗೆ ಪಾತ್ರವಾಗಿದೆ. ಹೀನಕೃತ್ಯಕ್ಕೆ ಕಾರಣರಾದ ಉಗ್ರರ ನೆಲೆನಾಶದ ಕ್ರಮವನ್ನಷ್ಟೇ ತಾನು ಕೈಗೊಂಡಿರುವುದು ಎಂದು ಬಹಿರಂಗವಾಗಿ ಬಿಂಬಿಸಿರುವ ಭಾರತ, ತಾನು ಯುದ್ಧದಾಹಿಯಲ್ಲ, ಆದರೆ ಬೆನ್ನತ್ತಿದರೆ ಹುಟ್ಟಡಗಿಸದೆ ಬಿಡುವುದಿಲ್ಲ ಎಂಬುದನ್ನು ಸ್ಪಷ್ಟವಾಗಿಸಿದೆ.

ಅಮೆರಿಕ, ಇಂಗ್ಲೆಂಡ್, ಸೌದಿ ಅರೇಬಿಯಾ, ಯುಎಇ ಸಹಿತ ಹಲವು ರಾಷ್ಟ್ರಗಳ ಜತೆಗೆ ತನ್ನ ಕಾರ್ಯಾಚರಣೆಯ ಸಮರ್ಪಕ ಮಾಹಿತಿಯ ಸಹಿತ ಸಂವಹಿಸಿದ ಭಾರತದ ಪರಿ ಕೂಡ ನಮ್ಮ ವಿದೇಶಾಂಗ ಸಂಬಂಧಗಳ ಕ್ಷಮತೆಯನ್ನು ಪ್ರಚುರಪಡಿಸಿದೆ. ಅಮೆರಿಕ ಸೇರಿದಂತೆ ವಿಶ್ವದ ಕೆಲ ರಾಷ್ಟ್ರಗಳೇ ಗುರುತಿಸಿದ್ದ ಉಗ್ರರ ನೆಲೆಗಳು ಇವಾಗಿದ್ದರಿಂದಲೇ, ಭಾರತದ ಕಾರ್ಯಾಚರಣೆಯನ್ನು ಖಂಡಿಸುವ, ಭಾರತವನ್ನು ಸುಮ್ಮನಾಗಿಸುವ ಪ್ರಯತ್ನ ಜಾಗತಿಕ ವಲಯದಲ್ಲಿ ನಡೆಯಲಿಲ್ಲ. ಇದು ಭಾರತದ ಮಟ್ಟಿಗೆ ಒಂದು ಹಂತದ ರಾಜತಾಂತ್ರಿಕ ಜಯವೆನಿಸುತ್ತದೆ. ''ನಾನವನಲ್ಲ, ನಾನವನಲ್ಲ'' ಎನ್ನುತ್ತಲೇ ಅಳಿದುಳಿದ ಶಕ್ತಿ ಬಳಸಿ ತನ್ನ ಇರುವಿಕೆ ತೋರಿಸಿಕೊಳ್ಳಲಿಕ್ಕಾಗಿಯೇ ಹೆಣಗುತ್ತಿರುವ ಪಾಕಿಸ್ತಾನ ಸರಕಾರಕ್ಕೆ, ಅದರ ಸೈನ್ಯಕ್ಕೆ ಮತ್ತು ಭಯೋತ್ಪಾದಕ ಶಕ್ತಿಗಳಿಗೆ ಭಾರತವು ತಪರಾಕಿ ನೀಡಬಲ್ಲದು ಎಂಬ ಭರವಸೆ ನಿಚ್ಚಳವಾಗಿದೆ. ಇಂಥ ಹಣಾಹಣಿಗಳಲ್ಲಿ ಜೀವಹಾನಿ, ಸ್ವತ್ತುನಷ್ಟಗಳು ಎರಡೂ ಕಡೆ ಸಂಭವಿಸುತ್ತವೆ; ಆದರೆ ಅವನ್ನು ಸಹಿಸಿ ಮುನ್ನುಗ್ಗುವ ಕ್ಷಮತೆಯು ಭಾರತಕ್ಕಿದ್ದಷ್ಟು ಸದ್ಯಕ್ಕೆ ಪಾಕಿಸ್ತಾನಕ್ಕಿಲ್ಲ. ಚೀನಾ, ಟರ್ಕಿಯನ್ನು ಬಿಟ್ಟರೆ ಜಗತ್ತಿನ ಬೇರಾವ ರಾಷ್ಟ್ರಗಳೂ ಪಾಕಿಸ್ತಾನದ ಬೆನ್ನಿಗೆ ನಿಲ್ಲುವ ಲಕ್ಷಣಗಳು ಕಾಣಿಸುತ್ತಿಲ್ಲ. ಇವೆರಡೂ ರಾಷ್ಟ್ರಗಳಲ್ಲಿ ಆಂತರಿಕ ಸಮಸ್ಯೆಗಳೇ ಸಾಕಷ್ಟಿವೆ, ಹೀಗಾಗಿ ಯುದ್ಧ ನಡೆದರೆ ಅವೂ ನೇರಾನೇರ ಪಾಕ್‌ನ ಪರವಹಿಸಿ ಕಾದಾಡುವ ಲಕ್ಷಣಗಳು ಗೋಚರಿಸುತ್ತಿಲ್ಲ.

ಭಾರತ ಸರಕಾರ, ಸೇನೆ, ವಿದೇಶಾಂಗ ಮತ್ತು ರಕ್ಷಣಾ ಇಲಾಖೆಗಳು ಸಮಯೋಚಿತವಾಗಿ ಜತೆಗೂಡಿ ಎದುರಾಗಬಹುದಾದ ಸವಾಲುಗಳಿಗೆ ಸನ್ನದ್ಧರಾಗುತ್ತಿರುವಂತೆಯೇ, ಸೇನೆಯಲ್ಲಿಲ್ಲದ ಅಸಂಖ್ಯಾತ 'ರಕ್ಷಣಾ ಪರಿಣತರು' ದೇಶಾದ್ಯಂತ ಹುಟ್ಟಿಕೊಂಡಿರುವುದು ಅಚ್ಚರಿಯ ಬೆಳವಣಿಗೆ! ಸಾಮಾಜಿಕ ಜಾಲತಾಣ, ಮಾಧ್ಯಮಗಳ ಮೈಕು ಮತ್ತು ಕ್ಯಾಮರಾಗಳೇ ಇಂಥವರ ಆಯುಧಗಳು! ಅದರಲ್ಲೂ 'ಇಂಚಿಂಚಿನ ವಿವರ', 'ನಮ್ಮಲ್ಲೇ ಪ್ರಥಮ', 'ಎಕ್ಸ್‌ಕ್ಲೂಸಿವ್ ಮಾಹಿತಿ', 'ಬ್ರೇಕಿಂಗ್ ನ್ಯೂಸ್' ಇತ್ಯಾದಿ ತಲೆಬರಹಗಳೊಂದಿಗೆ, ರಣಭಯಂಕರ ಶಂಖನಾದದ ಸಹಿತ ಹೊಮ್ಮುವ ವಿಶ್ಲೇಷಣೆಯನ್ನೊಮ್ಮೆ ವೀಕ್ಷಿಸಬೇಕು. ರಕ್ಷಣಾ ಪರಿಕರಗಳು, ಕಾರ್ಯಾಚರಣೆ, ಯುದ್ಧನೀತಿ, ತಂತ್ರಗಾರಿಕೆಯ ಕುರಿತಾಗಿ 'ನ್ಯೂಸ್' ಚಾನಲ್‌ಗಳ 'ವ್ಯೂಸ್' ವೀರರ ಪಡೆಯು ಕೆಲವೇ ದಿನಗಳಲ್ಲಿ ಕರಗತ ಮಾಡಿಕೊಂಡ ಅಪರಿಮಿತ ಪ್ರಾವೀಣ್ಯವನ್ನು ಕಂಡರೆ ಸೇನೆಯೇ ನಾಚಿಕೊಳ್ಳಬಹುದು! ಪಾಕಿಸ್ತಾನದ ಕೊರತೆ, ಭಾರತದ ಸಾಮರ್ಥ್ಯದ ಬಗೆಗಿನ ತಮ್ಮ ಇಂಥ ಜ್ಞಾನವನ್ನು ಅವರು ಸುದ್ದಿಪ್ರಸಾರ/ಚರ್ಚಾಗೋಷ್ಠಿಗಳಲ್ಲಿ ಹಂಚಿಕೊಳ್ಳುತ್ತಿರುವ ಪರಿ ನೋಡಿದರೆ, ಸೇನೆಯಲ್ಲಿನ ಪ್ರಮುಖ ಹುದ್ದೆಗಳಿಗೆ ನೇರ ನೇಮಕಾತಿಯ ಮೂಲಕ ಇವರನ್ನೇ ಏಕೆ ನಿಯೋಜಿಸಬಾರದು ಎನಿಸಿಬಿಡುತ್ತದೆ. ಕೆಲವರಂತೂ, ಶತ್ರುಪಡೆಯ ಯಾವ ಆಯುಧ ಎಲ್ಲಿಗೆ ಬಂದು ತಲುಪಲಿದೆ, ಅದನ್ನು ಹೊಡೆದುರುಳಿಸಲು ಯಾವ ಅಸ್ತ್ರವನ್ನು ಎಲ್ಲಿ ಬಳಸಬೇಕೆಂಬುದನ್ನು ಹೇಳಬಲ್ಲ 'ಮೈಕಾಸುರ'ರು! ಮಾಧ್ಯಮಗಳು ಇವರ ಮುಂದೆ ಹಿಡಿಯುವ ಮೈಕುಗಳೇ ಇವರ ಪಾಶುಪತಾಸ್ತ್ರ!

ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆನ್ನಲಾಗುವ ಮಾಧ್ಯಮಗಳ ಸುದ್ದಿವೀರರ ಇಂಥ ಹಪಾಹಪಿ ಹೊಸದೇನಲ್ಲ. ಉಗ್ರರ ದಾಳಿಗೆ ತುತ್ತಾದವರ ಕುಟುಂಬಿಕರು, ಆ ಅಗಲಿಕೆಯ ಮೌನ ಶೋಕಾಚರಣೆಯಲ್ಲಿರುವಾಗಲೂ ಮೂತಿಗೆ ಮೈಕು ಹಿಡಿದು, ''ಅವತ್ತೇನಾಯಿತು? ನಿಮಗೇನನ್ನಿಸಿತು? ಎಂಥ ಪ್ರತೀಕಾರವನ್ನು ಬಯಸುತ್ತಿದ್ದೀರಿ?'' ಎಂಬೆಲ್ಲ ಪ್ರಶ್ನೆಗಳಿಂದ ದಾಳಿಮಾಡುವವರಿವರು. ತಮ್ಮ ಮನೆಯಲ್ಲೇ ಹೀಗಾಗಿದ್ದರೆ ತಮ್ಮ ಉತ್ತರ ಏನಿರುತ್ತಿತ್ತು? ಎಂಬ ಆತ್ಮವಿಮರ್ಶೆಯನ್ನು ಕಿಂಚಿತ್ತೂ ಮಾಡಿಕೊಳ್ಳದೆ ಬ್ರೇಕಿಂಗ್ ನ್ಯೂಸ್‌ಗಾಗಿ ಹಪಹಪಿಸುವವರಿವರು. ಸಮಯ-ಸಂದರ್ಭಕ್ಕೆ ತಕ್ಕ ಗಾಂಭೀರ್ಯವಿಲ್ಲದ ಇಂಥವರು ತಮ್ಮ ಹೊಣೆಯನ್ನು ಅರಿಯುವುದು ಯಾವಾಗ?

ಎಲ್ಲೆಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂಬುದರಿಂದ ಹಿಡಿದು, ಯಾವ್ಯಾವ ಬಂಕರ್‌ಗಳಲ್ಲಿ ನಮ್ಮ ಸೇನೆ ಸನ್ನದ್ಧವಾಗಿದೆ, ಅವರಲ್ಲಿರುವ ಆಯುಧಗಳ ಸಾಮರ್ಥ್ಯವೇನು ಎಂಬೆಲ್ಲಾ ಗೌಪ್ಯ ಮಾಹಿತಿಗಳನ್ನು ಹಂಚಿಕೊಳ್ಳುವ ಇವರಾರಿಗೂ, ಶತ್ರುಪಡೆಗಳಿಗೆ ತಾವೇ ಸೂಕ್ಷ್ಮ ಮಾಹಿತಿಗಳನ್ನು ಒದಗಿಸುತ್ತಿದ್ದೇವೆ ಎಂಬ ಪರಿವೆ ಇದ್ದಂತಿಲ್ಲ. ಶತ್ರುಪಡೆಗಳು ನಯಾಪೈಸೆ ಖರ್ಚುಮಾಡದೆ ಇಂಥ ರಣತಂತ್ರದ ಮಾಹಿತಿಗಳನ್ನು ದಕ್ಕಿಸಿಕೊಂಡುಬಿಡುತ್ತವೆ ಎನಿಸುವುದಿಲ್ಲವೇ? 'ಆಪರೇಷನ್ ಸಿಂದೂರ್' ಮಾಹಿತಿ ಹಂಚಿಕೊಂಡ ಸೇನಾಧಿಕಾರಿಗೆ ಕರ್ನಾಟಕದ ಜತೆಗಿರುವ ಸಂಬಂಧ ಹುಡುಕಿ, ಅವರ ಸಂಬಂಧಿಕರ ಪರಿಚಯ ಮಾಡಿಸಿದ ವಾಹಿನಿಗಳಿಗೆ, ಈ ನಡೆಯಿಂದಾಗಿ ಆ ಕುಟುಂಬಕ್ಕೆ ಅಪಾಯ ಒದಗಬಹುದು ಎಂಬ ಸೂಕ್ಷ್ಮತೆಯ ಅರಿವಾಗದಿದ್ದುದು ವಿಷಾದನೀಯ. ಭಾರತ ಸರಕಾರ ಮತ್ತು ಸೇನೆ ವಿವರವಾಗಿ ಹೇಳಿಕೊಳ್ಳದಿದ್ದರೂ, ಯಾವ ಪ್ರದೇಶಗಳ ಮೇಲೆ ಯಾವ ಅಸ್ತ್ರಗಳ ದಾಳಿಯಾಗಿದೆ ಎಂಬುದನ್ನು ತೋರಿಸುವ ಭರದಲ್ಲಿ, ಶತ್ರುರಾಷ್ಟ್ರಗಳು ಬಳಸಿಕೊಳ್ಳುವಂತಾಗುವಂಥ ಸೂಕ್ಷ್ಮ ಸಾಕ್ಷ್ಯಗಳನ್ನು ತಾವು ಒದಗಿಸುತ್ತಿದ್ದೇವೆ ಎಂಬ ಅರಿವು ಅವುಗಳಲ್ಲಿ ಇಲ್ಲದಿದ್ದುದು ದುರ್ದೈವ.

ಹೇಳಿಕೇಳಿ ಇದು ತಂತ್ರಜ್ಞಾನ ಯುಗ. ಈ ಕಾಲಘಟ್ಟದ ಸೆಣಸಾಟಗಳಲ್ಲಿ ಸೂಕ್ಷ್ಮ ಮಾಹಿತಿಯ ಅನಾವರಣವೂ ಯುದ್ಧಭೂಮಿಕೆಯ ಪ್ರಮುಖ ಆಯಾಮವಾಗಿಬಿಡುತ್ತದೆ. 'ನಾವು ಬಲಾಢ್ಯರು' ಎಂದು ಕೊಚ್ಚಿಕೊಳ್ಳುವ ಭರದಲ್ಲಿ, ತಮ್ಮಲ್ಲೇ ಸಮಗ್ರ ಮಾಹಿತಿ ಇದೆಯೆಂದು ಖ್ಯಾತಿ ಗಳಿಸಿಕೊಳ್ಳುವ ಸ್ವಾರ್ಥದಲ್ಲಿ ಮಾಧ್ಯಮಗಳೇ ವಿರೋಧಿ ಪಡೆಗಳ ಕಣ್ಣು-ಕಿವಿಗಳಂತೆ ನಡೆದುಕೊಳ್ಳುತ್ತಿರುವುದು ನಿಜಕ್ಕೂ ಖಂಡನೀಯ. ''ಖಚಿತವಲ್ಲದ, ಖಾತ್ರಿಯಾಗದ ವಿದ್ಯಮಾನಗಳ ಪ್ರಕಟಣೆಯನ್ನಾಗಲೀ ವಿಶ್ಲೇಷಣೆಯನ್ನಾಗಲೀ ಮಾಡಬೇಡಿ'' ಎಂಬುದಾಗಿ ಭಾರತ ಸರಕಾರ ಮತ್ತು ರಕ್ಷಣಾ ಇಲಾಖೆ ವಿನಂತಿಸಿಕೊಂಡರೂ, 'ನಮ್ಮಲ್ಲೇ ಪ್ರಥಮ' ಧಾಟಿಯ ದೃಶ್ಯಮಾಧ್ಯಮಗಳ ಭರಾಟೆ ನಿಲ್ಲುವ ಲಕ್ಷಣ ಕಾಣುತ್ತಿಲ್ಲ. ಇದು ಸಾಲದೆಂಬಂತೆ ಕೆಲ ಪತ್ರಿಕೆಗಳೂ ನಮ್ಮ ಹಾಗೂ ಪಾಕಿಸ್ತಾನದ ಸೇನಾಬಲ, ಶಸ್ತ್ರಾಸ್ತ್ರ ಸಂಗ್ರಹದ ಮಾಹಿತಿ, ಅವುಗಳ ಸಾಮರ್ಥ್ಯದ ಕುರಿತು ಸಚಿತ್ರ ವರದಿಗಳನ್ನು ಪ್ರಕಟಿಸುತ್ತಿವೆ. ಇದರ ಸತ್ಯಾಸತ್ಯತೆ ಪ್ರಶ್ನಾರ್ಹವೆನಿಸಿದರೂ, ಯುದ್ಧದ ಸನ್ನಿವೇಶದಲ್ಲಿ ಇಂಥ ವಿಷಯಗಳಿಗಿರುವ ಗೌಪ್ಯತೆಯ ಮಹತ್ವವೇ ಇವಕ್ಕೆ ಅರಿವಿಗೆ ಬಾರದಿರುವುದು ಅಪಾಯಕಾರಿಯಾಗಿದೆ.

ಸೇನಾ ವ್ಯವಸ್ಥೆ, ಯುದ್ಧದ ಸಜ್ಜಿಕೆ ಮುಂತಾದವುಗಳ ಗಂಧ-ಗಾಳಿ ಇಲ್ಲದವರೂ ಸುದ್ದಿವಾಹಿನಿಗಳ ಸ್ಟುಡಿಯೋಗಳಲ್ಲಿ ಕೂತು ಮಾಡುವ ವಿಶ್ಲೇಷಣೆಗಳನ್ನು ಹಾಗೂ ತಂತ್ರಗಾರಿಕೆಯ ಒಳಸುಳಿಗಳ ವಿವರಣೆಗಳನ್ನು ಕೇಳಿದರಂತೂ ನಮ್ಮ ಸೇನೆಗಳ ದಂಡನಾಯಕರೇ ಹೀಗೆ ಕೂತು ಚರ್ಚಿಸುತ್ತಿದ್ದಾರೇನೋ ಅನಿಸಿಬಿಡುತ್ತದೆ. ಸ್ಟುಡಿಯೋದಿಂದ ತಮ್ಮದೇ ಮನೆ ತಲುಪಲು 'ಗೂಗಲ್ ಮ್ಯಾಪ್' ಅನ್ನು ನೆಚ್ಚುವವರು ಕೂಡ, ಗಡಿಭಾಗದ ಭೂಪಟ ಸಹಿತ ಅಲ್ಲಿನ ಪ್ರತಿಯೊಂದು ಬಂಕರ್, ಸೇನಾಪಡೆಗಳ ಶಕ್ತಿಕೇಂದ್ರಗಳ ವಿವರವನ್ನು ಹಂಚಿಕೊಳ್ಳುವುದನ್ನು ಕೇಳಿದಾಗ ನಿಜಕ್ಕೂ ಅಚ್ಚರಿಯಾಗುತ್ತದೆ. ಗುಪ್ತಚರ ವ್ಯವಸ್ಥೆಗಳು ವರ್ಷಗಳಲ್ಲಿ ಸಂಗ್ರಹಿಸಲಾಗದ ಮಾಹಿತಿಗಳನ್ನು ಕಳೆದೊಂದು ವಾರದಲ್ಲಿ ಇವರೆಲ್ಲರೂ ಕರತಲಾಮಲಕ ಮಾಡಿಕೊಂಡಿರುವ ಪರಿಯಂತೂ ವಿಸ್ಮಯಕಾರಿ! ನಮ್ಮ ಸರಕಾರದ ಮತ್ತು ಸೈನ್ಯದ ತಪ್ಪು ನಡೆಗಳೇನು? ಸೈನಿಕರು ಎಲ್ಲಿ, ಹೇಗೆ ಮುನ್ನುಗ್ಗಬೇಕು? ಯಾವಾಗ ಯಾವ ಅಸ್ತ್ರ ಬಳಸಬೇಕು? ಎಂಬ ಹಂತಹಂತದ ವಿವರಣೆಗಳನ್ನು ಇವರು ಹಂಚಿಕೊಳ್ಳುವ ಪರಿಯನ್ನು ಭಯೋತ್ಪಾದಕರು ಮುಂಚೆಯೇ ನೋಡಿದ್ದಿದ್ದರೆ, ಪಹಲ್ಗಾಮ್ ಸಹಿತ ಇನ್ನಾವುದೇ ತಾಣದಲ್ಲಿ ಭಯೋತ್ಪಾದಕ ಚಟುವಟಿಕೆಯೇ ನಡೆಯದಂತೆ ತಡೆಯುವ ಸಾಮರ್ಥ್ಯ ಇವರಿಗಿರಬೇಕು ಎಂದು ಭಾವಿಸುತ್ತಿದ್ದರೇನೋ?

ಯುದ್ಧೋನ್ಮಾದ ತರಿಸಿ ಬೇಳೆ ಬೇಯಿಸಿಕೊಳ್ಳುವುದಷ್ಟೇ ಅಲ್ಲದೆ, ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನೂ ತೋರಿಸಿಕೊಂಡು ಗಂಟೆಗಟ್ಟಲೆ ಚರ್ಚಿಸುವ ನಮ್ಮೊಳಗಿನ ದ್ರೋಹಿಗಳಿಗೆ ವೇದಿಕೆ ಕಲ್ಪಿಸುವುದನ್ನು ಜವಾಬ್ದಾರಿಯುತ ಮಾಧ್ಯಮಗಳು ಇನ್ನಾದರೂ ನಿಲ್ಲಿಸಬೇಕು. ಆಡಳಿತಾರೂಢ ಪಕ್ಷದ ಬಹುಪಾಲು ರಾಜಕೀಯ ವಿರೋಧಿಗಳೂ ಸದ್ಯ ಸರಕಾರದ ಮತ್ತು ಸೇನಾಪಡೆಗಳ ಬೆನ್ನಿಗೆ ನಿಂತಿದ್ದಾರೆ. ಇದನ್ನು ಪರಿಣಾಮಕಾರಿಯಾಗಿ ಪ್ರಚಾರ ಮಾಡುವ ಬದಲು, ಅಲ್ಲಲ್ಲಿ ಕಂಡುಬಂದ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನೇ ಪದೇಪದೆ ತೋರಿಸುವುದು ಖೇದಕಾರಿ ಬೆಳವಣಿಗೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರ 'ಶಾಂತಿಯ ಸಲಹೆ'ಯು ಪಾಕಿಸ್ತಾನದ ಮಾಧ್ಯಮಗಳಲ್ಲೂ ಚರ್ಚೆಯಾಗುವಂತೆ ಮಾಡಿದ ಕೀರ್ತಿ ಈ ಸುದ್ದಿವಾಹಿನಿಗಳಿಗೆ ಸಲ್ಲಬೇಕು. ಇನ್ನು, 'ಸರ್ವಪಕ್ಷದ ಸಭೆಯಲ್ಲಿ ಪ್ರಧಾನಿ ಇರಲಿಲ್ಲ' ಎಂಬ ಕೆಲ ರಾಜಕೀಯ ವಿರೋಧಿಗಳ ಅಸಮಾಧಾನಕ್ಕೆ ಕೆಲ ಮಾಧ್ಯಮಗಳು ಒತ್ತುಕೊಟ್ಟು ಬಿಂಬಿಸಿದವು. ಆದರೆ ವಿಪಕ್ಷ ಕಾಂಗ್ರೆಸ್‌ನ ಸಂಸದ ಶಶಿ ತರೂರ್ ಅವರು ಪಾಕ್ ಪಾಳಯದ ಭಯೋತ್ಪಾದಕ ಕೃತ್ಯಕ್ಕೆ ತಕ್ಕ ಪ್ರತ್ಯುತ್ತರ ಕೊಟ್ಟ ಭಾರತ ಸರಕಾರ ಮತ್ತು ಸೇನಾಪಡೆಗಳನ್ನು ಸಮರ್ಥಿಸಿಕೊಂಡು ನೀಡಿದ ಸ್ಪಷ್ಟ ಹೇಳಿಕೆಗಳು ವಿದೇಶಿ ಮಾಧ್ಯಮಗಳಲ್ಲಿ ಕಂಡುಬಂದಷ್ಟು ಭಾರತೀಯ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳಲಿಲ್ಲ.

ಜನಜಾಗೃತಿ, ಸಮಾಜದ ರಕ್ಷಣೆಯ ಕುರಿತಂತೆ ಅರಿವು ಮೂಡಿಸುವಲ್ಲಿ ಮಾಧ್ಯಮಗಳ ಪಾತ್ರ ಬಹಳ ದೊಡ್ಡದು; ಅವು ಭಾರತ ಸರಕಾರ, ಸೇನಾಪಡೆಗಳು ಮತ್ತು ನಾಗರಿಕ ಸಮಾಜಗಳ ನಡುವಿನ ಸಂವಹನದ ಸೇತುವೆಯಂತೆ ನಡೆದುಕೊಳ್ಳಬೇಕು. ವೈರಿಪಡೆಗಳ ನೀಚತನ, ಸುಳ್ಳು ಸಂದೇಶಗಳನ್ನು ಎಳೆಎಳೆಯಾಗಿ ಬಿಡಿಸಿಡುವ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು. ಆ ಮೂಲಕ, ಭಾರತದ ನಡೆಗಳಿಗೆ ಜಗತ್ತಿನಾದ್ಯಂತ ಮನ್ನಣೆ ದೊರಕಿಸಬಲ್ಲ, ಸತ್ವಯುತ ನಿರೂಪಣೆಯನ್ನು ಸಮರ್ಥವಾಗಿ ಕಟ್ಟಿಕೊಡಬಲ್ಲ ಜವಾಬ್ದಾರಿಯನ್ನು ನಿರ್ವಹಿಸಬೇಕು. ಇಲ್ಲವಾದಲ್ಲಿ ಇಂಥ ಮಾಧ್ಯಮಗಳಿದ್ದೂ ಪ್ರಯೋಜನವಿಲ್ಲ.

ಆದ್ದರಿಂದ, ನಮ್ಮ ಮಾಧ್ಯಮಗಳು ಇನ್ನಾದರೂ ಪ್ರಚಾರದ/ಟಿಆರ್‌ಪಿಯ ಹಪಾಹಪಿ ಬಿಟ್ಟು, ವಿದೇಶಾಂಗ ಇಲಾಖೆ ಮತ್ತು ಸೇನಾಪಡೆಗಳ ಸುದ್ದಿಗೋಷ್ಠಿಗಳಲ್ಲಿ ಹಂಚಿಕೊಂಡ ಮಾಹಿತಿಗಳನ್ನಷ್ಟೇ ಬಿತ್ತರಿಸಿ, ಅವು ಜನಮನ ತಲುಪುವಂತೆ ನೋಡಿಕೊಳ್ಳಬೇಕು.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 118

ಡಿಜಿಟಲ್-ಸ್ಕ್ಯಾನ್ ಪೇಗೆ ಆಸಕ್ತಿ ಬಸ್‌ನಲ್ಲಿ ಚಿಲ್ಲರೆ ಕಿರಿಕಿರಿಗೆ ಮುಕ್ತಿ

ಜಿಲ್ಲಾ ನೋಟ

ಕೆ.ಜೆ.ಲೋಕೇಶ್ ಬಾಬು, ಮೈಸೂರು

ರಾಜ್ಯ ಸರಕಾರದ ಉದ್ದೇಶಿತ ಯೋಜನೆಗಳ ಪೈಕಿ ಒಂದಾದ ರಾಜ್ಯ ಸಾರಿಗೆ ಬಸ್‌ಗಳಲ್ಲಿನ ಕ್ಯೂ ಆರ್ ಕೋಡ್ ಸ್ಕ್ಯಾನ್ ಮೂಲಕ ಹಣ ಪಾವತಿಸಿ ಟಿಕೆಟ್ ಪಡೆದುಕೊಳ್ಳುವ ವ್ಯವಸ್ಥೆ ಹಲವು ಸಮಸ್ಯೆಗೆ ಮುಕ್ತಿ ನೀಡಿದೆ. ಇದು ಕೇವಲ ನಾಲ್ಕು ತಿಂಗಳ ಅಂತರದಲ್ಲೇ ಮೈಸೂರು ಜಿಲ್ಲೆಯಲ್ಲಿ ಯಶಸ್ವಿಯಾಗಿದೆ.

ತಪ್ಪಿದ ಚಿಲ್ಲರೆ ರಗಳೆ

ಈ ಯೋಜನೆಯಿಂದ ನಿರ್ವಾಹಕರು ಹಾಗೂ ಪ್ರಯಾಣಿಕರ ನಡುವಿನ ಚಿಲ್ಲರೆ ರಗಳೆ ತಪ್ಪಿದ್ದು, ಇಬ್ಬರೂ ನಿಟ್ಟುಸಿರು ಬಿಡುವಂತಾಗಿದೆ. ಇದು ಕೇವಲ ಒಂದೆರಡು ಕಡೆಯ ಸಮಸ್ಯೆ ಆಗಿರದೆ ಸರ್ವವ್ಯಾಪಿ ಆಗಿದ್ದಂತೂ ನಿಜ. ಇದೀಗ ಅಂತಹ ರಗಳೆಯೊಂದಕ್ಕೆ ಡಿಜಿಟಲ್ ಸೌಲಭ್ಯದ ಸ್ಪರ್ಶ ವಿರಾಮ ಹಾಕಿದೆ.

ಲಕ್ಷಾಂತರ ವಹಿವಾಟು

ಬದಲಾದ ಕಾಲಘಟ್ಟದಲ್ಲಿ ಎಲ್ಲೆಡೆ ತಂತ್ರಜ್ಞಾನವೇ ಮುಂದಡಿ ಇಟ್ಟಿರುವ ಈ ಹೊತ್ತಿನಲ್ಲಿ ಸಾರಿಗೆ ಸಂಸ್ಥೆ ತೆಗೆದುಕೊಂಡ ಸಕಾಲಿಕ ಕ್ರಮದಿಂದಾಗಿ ಮೈಸೂರು ನಗರ ಮತ್ತು ಮೈಸೂರು ಗ್ರಾಮಾಂತರ ವಿಭಾಗದಲ್ಲಿ ದಿನಕ್ಕೆ ಲಕ್ಷಾಂತರ ರೂಪಾಯಿ ವಹಿವಾಟು ಡಿಜಿಟಲ್ ಪೇ ಮೂಲಕ ನಡೆಯುತ್ತಿದೆ. ಜಿಲ್ಲಾ ಮಟ್ಟಕ್ಕೆ ಹೋಲಿಕೆ ಮಾಡಿದಲ್ಲಿ ಈ ಪ್ರಮಾಣ ನಗರ ವಿಭಾಗದಲ್ಲಿ ದಿನೇ ದಿನೇ ಏರುಮುಖವಾಗಿ ಸಾಗುತ್ತಿದೆ.

ಬಳಕೆದಾರರ ಹೆಚ್ಚಳ

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮೊದಲಿಗೆ ಡಿಜಿಟಲ್ ಮಷಿನ್ ಮೂಲಕ ಟಿಕೆಟ್ ನೀಡುವ ಪದ್ಧತಿ ಇತ್ತಾದರೂ ನಗದು ವ್ಯವಹಾರವೇ ನಡೆದಿತ್ತು. ತದನಂತರ ಅದೇ ಮಷಿನ್‌ನಲ್ಲಿ ಕ್ಯೂಆರ್‌ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಹಣ ಪಾವತಿಸುವ ವ್ಯವಸ್ಥೆ ಜಾರಿಗೆ ತಂದ ಬಳಿಕ ಬಳಕೆದಾರರ ಪ್ರಮಾಣವೂ ಹೆಚ್ಚಾಗುತ್ತಾ ಹೋಯಿತು.

ಭರ್ಜರಿ ಯಶಸ್ವಿ

ಜಿಲ್ಲೆಯಲ್ಲಿ ಮೊದಲಿಗೆ ಮೈಸೂರು ಗ್ರಾಮಾಂತರ ವಿಭಾಗದ ಮೈಸೂರು - ಬೆಂಗಳೂರಿಗೆ ಸಂಚಾರ ಮಾಡುತ್ತಿದ್ದ ತಡೆರಹಿತ ಬಸ್‌ಗಳಿಗೆ ಟಿಕೆಟ್ ನೀಡುವ ಮೂಲಕ ಹೊಸ ತಂತ್ರಜ್ಞಾನದ ಬಳಕೆಗೆ ನಾಂದಿ ಹಾಡಲಾಯಿತು. ನಂತರ ಅಂತರ ರಾಜ್ಯಕ್ಕೆ ಸಂಚಾರ ಮಾಡುವ ಬಸ್‌ಗಳಲ್ಲಿ ಅಳವಡಿಸಲಾಯಿತು. ನವೆಂಬರ್ ನಿಂದ ಇಡೀ ಜಿಲ್ಲೆಯ ಎಲ್ಲಾ ಬಸ್‌ಗಳಲ್ಲಿ 'ಡಿಜಿಟಲ್ ಪೇ' ಸೌಲಭ್ಯವಿದೆ. ತದನಂತರ ಮೈಸೂರು ನಗರ ವಿಭಾಗದ ಬಸ್‌ಗಳಲ್ಲೂ ಈ ಸೌಲಭ್ಯ ಅಳವಡಿಸಲಾಯಿತು. ತಂತ್ರಜ್ಞಾನಕ್ಕೆ ಹೊಂದಿಕೊಂಡು ಹೋಗುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಈ ಪ್ರಮಾಣ ತಿಂಗಳಿಂದ ತಿಂಗಳಿಗೆ ಹೆಚ್ಚಾಗುತ್ತಲೇ ಇದೆ. ಇನ್ನೂ ಗ್ರಾಮಾಂತರದಲ್ಲೂ ಲಕ್ಷಾಂತರ ಹಣ ಈ ಡಿಜಿಟಲ್ ಪೇ ಮೂಲಕ ಸಂಗ್ರಹವಾಗುತ್ತಿದೆ. ಈ ಅಂಕಿ ಅಂಶ ಗಮನಿಸಿದರೇ ಪ್ರಯಾಣಿಕರು ಡಿಜಿಟಲ್ ಪೇ ಕಡೆಗೆ ಆಸಕ್ತಿ ತೋರುತ್ತಿರುವುದು ಕಂಡು ಬರುತ್ತಿದೆ.

ಸ್ಕ್ಯಾನರ್ ಸಂಪ್ರದಾಯ

ತಂತ್ರಜ್ಞಾನದ ಹಿಂದೆ ಬಿದ್ದಿರುವ ಯುವ ಸಮೂಹ ಹಾಗೂ ಡಿಜಿಟಲ್ ಸಾಕ್ಷರತೆಯತ್ತ ಒಲವು ಹೊಂದಿರುವ ಪ್ರಯಾಣಿಕರು. ನಗದು ರಹಿತ ಪ್ರಯಾಣದತ್ತ ಮುಖ ಮಾಡುತ್ತಿದ್ದು, ಸ್ಕ್ಯಾನರ್ ವ್ಯವಸ್ಥೆ ಇದೆಯಾ ಎಂದು ನಿರ್ವಾಹಕರನ್ನು ಕೇಳುವ ಸಂಪ್ರದಾಯ ಆರಂಭವಾಗಿದೆ. ಇದು ಡಿಜಿಟಲ್ ಪಾವತಿ ಬಗ್ಗೆ ಜನರಿಗೆ ಅರಿವು ಮೂಡಿರುವುದನ್ನು ಸಾಕ್ಷೀಕರಿಸಿದೆ.

> ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಡಿಜಿಟಲ್ ಪಾವತಿ ಮೂಲಕ ಟಿಕೆಟ್ ಪಡೆದುಕೊಳ್ಳುವ ವ್ಯವಸ್ಥೆ ಜಾರಿಗೆ ಬಂದ ಬಳಿಕ ಪ್ರಯಾಣಿಕರು ಹಾಗೂ ನಿರ್ವಾಹಕರ ನಡುವಿನ ಸಂಬಂಧ ಸುಧಾರಿಸಿದೆ. ಚಿಲ್ಲರೆ ಸಮಸ್ಯೆ ಕಗ್ಗಂಟಾಗಿತ್ತು. ಈಗ ಈ ಯೋಜನೆ ಬಹಳ ಖುಷಿ ಕೊಟ್ಟಿದೆ. ಇದಕ್ಕೆ ಪ್ರಯಾಣಿಕರಿಂದಲೂ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗಿದೆ.
>
> - ಎಚ್.ಟಿ.ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು

> ಡಿಜಿಟಲ್ ಪಾವತಿ ವ್ಯವಸ್ಥೆ ಬಗ್ಗೆ ಸಾರ್ವಜನಿಕವಾಗಿ ಅರಿವು ಮೂಡುತ್ತಿದೆ. ವಿಶೇಷವಾಗಿ ಯುವ ಸಮೂಹ ಈ ವ್ಯವಸ್ಥೆಗೆ ಬಹಳ ಬೇಗ ಒಗ್ಗಿಕೊಂಡಿದೆ. ನಾವೂ ಕೂಡ ಬಸ್ ಹತ್ತುವ ಸಂದರ್ಭದಲ್ಲೇ ಪ್ರಯಾಣಿಕರಿಗೆ ಡಿಜಿಟಲ್ ಪೇಮೆಂಟ್ ಬಗ್ಗೆ ಮಾಹಿತಿ ನೀಡುತ್ತೇವೆ. ಇದು ಪ್ರಯಾಣಿಕರಿಗೆ ಸಹಜವಾಗಿಯೇ ಉಪಯೋಗ ಆಗಿದೆ. ಎಲ್ಲಕ್ಕಿಂತ ಮಿಗಿಲಾಗಿ ಚಿಲ್ಲರೆ ಸಮಸ್ಯೆ ದೂರವಾಗಿ ನಾವು ನಿಟ್ಟುಸಿರು ಬಿಡುವಂ ತಾಗಿದೆ. ನಿಧಾನವಾಗಿ ಎಲ್ಲರೂ ಇದಕ್ಕೆ ಒಗ್ಗಿಕೊಳ್ಳುತ್ತಿದ್ದಾರೆ.
>
> - ಸುರೇಶ್, ನಿರ್ವಾಹಕ, ನಗರ ಸಾರಿಗೆ

ಸಿಟಿ ಡಿಜಿಟಲ್ ವಹಿವಾಟು

- » ನವೆಂಬರ್ - 4,44,341 ರು.
- » ಡಿಸೆಂಬರ್ - 24,15,780 ರು.
- » ಜನವರಿ - 38,19, 530 ರು.
- » ಫೆಬ್ರವರಿ - 42,45,568 ರು.
- » ಮಾರ್ಚ್ - 48,22,358 ರು.

ಪ್ರಯಾಣಿಕರಿಗೆ ಅರಿವು

ಡಿಜಿಟಲ್ ಪಾವತಿ ಕುರಿತು ಮೈಸೂರು ಸಿಟಿ ಬಸ್ ನಿಲ್ದಾಣದ ಪ್ಲಾಟ್‌ಫಾರ್ಮ್‌ಗಳಲ್ಲಿ ಧ್ವನಿವರ್ಧಕದ ಮೂಲಕ ಜಿಂಗಲ್ ಪ್ರಸಾರ ಮಾಡಲಾಗುತ್ತಿದೆ. ಅಲ್ಲದೆ ಎಲ್ಲ ಬಸ್‌ನಲ್ಲಿ ಕಿಟಕಿಯ ಗಾಜಿನಲ್ಲಿ ಜನರಿಗೆ ತಕ್ಷಣಕ್ಕೆ ಕಾಣುವ ರೀತಿ ಸ್ಟಿಕ್ಕರ್‌ಗಳನ್ನು ಅಂಟಿಸಲಾಗಿದೆ. ಇದಕ್ಕೆ ಪೂರಕವಾಗಿ ನಿರ್ವಾಹಕರು ಕೂಡ ಈ ಕುರಿತಾದ ಮಾಹಿತಿ ಆಸಕ್ತಿ ವಹಿಸಿ ಜನರಿಗೆ ನೀಡುತ್ತಿರುವುದು ಕೂಡ ಯೋಜನೆಯೊಂದು ನಿರೀಕ್ಷಿತ ಯಶಸ್ಸು ಕಾಣಲು ಸಾಧ್ಯ.

ಚಿಲ್ಲರೆ ಜಗಳ ಮುಕ್ತಿ

ಈ ಹಿಂದೆ ನಗದು ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆ ಇದ್ದ ವೇಳೆ ನಿತ್ಯ ಪ್ರಯಾಣಿಕರು ಹಾಗೂ ನಿರ್ವಾಹಕರ ನಡುವೆ ಜಗಳ ಸಾಮಾನ್ಯವೇ ಆಗಿತ್ತು. ಇದು ಒಮ್ಮೊಮ್ಮೆ ಅತಿರೇಕಕ್ಕೆ ಹೋಗಿ ಪೊಲೀಸ್ ಠಾಣೆ ಮೆಟ್ಟಿಲೇರಿದ್ದೂ ಉಂಟು. ಅಂತಹ ರಗಳೆಗಳಿಂದ ಬೇಸತ್ತಿದ್ದ ನಿರ್ವಾಹಕರಿಗೆ ಡಿಜಿಟಲ್ ಪಾವತಿ ವ್ಯವಸ್ಥೆ ಎಲ್ಲಾ ಸಮಸ್ಯೆಗೂ ಪರಿಹಾರ ದೊರಕಿಸುವ ಕೆಲಸ ಮಾಡಿದೆ. ಡಿಜಿಟಲ್ ಪಾವತಿಯಿಂದ ಚಿಲ್ಲರೆ ನೀಡುವ ರಗಳೆ ಇಲ್ಲವಾಗಿದೆ.

ರಾಜ್ಯದಲ್ಲೇ ದಾಖಲೆ ತೆರಿಗೆ ಸಂಗ್ರಹ ಸಿಇಒ ಕಾರ್ಯ ವೈಖರಿಗೆ ಮೆಚ್ಚುಗೆ

ಜಿಲ್ಲಾ ನೋಟ

ವಿನಾಯಕ ಮಠಪತಿ, ಬೆಳಗಾವಿ

ತೆರಿಗೆ ಸಂಗ್ರಹ ವಿಚಾರದಲ್ಲಿ ಈ ವರ್ಷ ಬೆಳಗಾವಿ ಜಿಲ್ಲಾ ಪಂಚಾಯಿತಿ ಮಹತ್ವದ ಸಾಧನೆ ಮಾಡಿದೆ. ಜಿಲ್ಲೆಯ 500 ಗ್ರಾಮ ಪಂಚಾಯಿತಿಗಳಿಂದ 2024 - 25ರಲ್ಲಿ ಒಟ್ಟು 110 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಮೂಲಕ ಮಹತ್ವದ ಮೈಲುಗಲ್ಲು ಸಾಧಿಸಲಾಗಿದೆ.

ವಿಭಿನ್ನ ಕಾರ್ಯಕ್ರಮಗಳ ಮೂಲಕ ಆಡಳಿತ ವ್ಯವಸ್ಥೆ ಜನರಿಗೆ ಹತ್ತಿರವಾಗಿಸುವಂತೆ ಕರ್ತವ್ಯ ನಿರ್ವಹಿಸುತ್ತಿರುವ ಬೆಳಗಾವಿ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಶಿಂಧೆ ಈ ಬಾರಿ ತೆರಿಗೆ ಸಂಗ್ರಹ, ನರೇಗಾ ವತಿಯಿಂದ ಕಾಮಗಾರಿ ಅನುಷ್ಠಾನ, ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸೌಕರ್ಯ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ.

110 ಕೋಟಿ ರು.ತೆರಿಗೆ

ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 110 ಕೋಟಿ ರೂ. ತೆರಿಗೆ ಸಂಗ್ರಹ ಕಾರ್ಯ ಯಶಸ್ವಿಯಾ ಗಿದೆ. ಗ್ರಾಮೀಣ ಭಾಗದ ಆಸ್ತಿಗಳನ್ನು ಗುರುತಿಸಿ ಈ ಸ್ವತ್ತು ವ್ಯಾಪ್ತಗೆ ತರುವ ಮೂಲಕ ಅಧಿಕಾರಿಗಳ ಸಮರ್ಪಕ ಕರ್ತವ್ಯ ನಿರ್ವಹಣೆ ಯಿಂದ ಈ ಸಾಧನೆ ಸಾಧ್ಯವಾಗಿದೆ. ಇದರಿಂದ ಸರಕಾರದ ಬೊಕ್ಕಸಕ್ಕೆ ಹಣ ಹರಿದುಬಂದಿದ್ದು ಒಂದು ಕಡೆಯಾದರೆ, ಇನ್ನೊಂದು ಕಡೆ ದಕ್ಷ ಆಡಳಿತ ವ್ಯವಸ್ಥೆಯಿಂದ ಸಮರ್ಪಕ ಕೆಲಸಗಳು ನಡೆದಿವೆ.

ಅತಿ ಹೆಚ್ಚು ತೆರಿಗೆ

ರಾಜ್ಯದಲ್ಲೇ ಅತ್ಯಂತ ದೊಡ್ಡ ಜಿಲ್ಲೆಯಾದ ಬೆಳಗಾವಿಯ ಜಿಲ್ಲಾ ಪಂಚಾಯಿತಿ ಕೇವಲ ಹತ್ತು ತಿಂಗಳಲ್ಲಿ ಮಹತ್ವದ ಸಾಧನೆ ಮಾಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ದಾಖಲೆಯ ರೀತಿಯಲ್ಲಿ ತೆರಿಗೆ ಸಂಗ್ರಹವಾಗಿದೆ. ಬೆಳಗಾವಿ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿ ಗಳಲ್ಲಿ ಇ ಆಸ್ತಿ ಅಭಿಯಾನ ಆರಂಭಿಸಲಾಗಿದೆ. ಇ ಆಸ್ತಿಯನ್ನು ಸರಳೀಕರಣ ಗೊಳಿಸಲಾಗಿದೆ. ಈಗ ಜಿಲ್ಲೆಯಲ್ಲಿ ಶೇ. 20 ರಷ್ಟು ಆಸ್ತಿಗೆ ಇ ಆಸ್ತಿ ಮಾಡಲಾಗಿದೆ. 1ಲಕ್ಷ 82 ಸಾವಿರ ಆಸ್ತಿಗಳು ಸೇರ್ಪಡೆಯಾಗಿದ್ದು, ಇನ್ನೂ 8 ಲಕ್ಷಕ್ಕೂ ಅಧಿಕ ಆಸ್ತಿಗಳನ್ನು ಇ ಸ್ವತ್ತು ವ್ಯಾಪ್ತಿಗೆ ತರುವ ಕಾರ್ಯ ಭರದಿಂದ ಸಾಗಿದೆ.

> ಜಿಲ್ಲೆಯ ಸಕ್ಕರೆ ಕಾರ್ಖಾನೆಗಳಿಂದ ಆಸ್ತಿ ತೆರಿಗೆ ಸಂಗ್ರಹ ಮಾಡಲಾಗಿದೆ. ಬೆಳಗಾವಿ ಸಾಂಬ್ರಾ ವಿಮಾನ ನಿಲ್ದಾಣ ಪ್ರಾಧಿಕಾರದ ವತಿಯಿಂದ ಬಾಕಿ ಉಳಿದಿದ್ದ 1 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಲಾಗಿದೆ. ಅಲ್ಲದೇ, ಪ್ರತಿ ವರ್ಷ 45 ಲಕ್ಷ ರೂ. ಆಸ್ತಿ ತೆರಿಗೆ ವಿಧಿಸಲಾಗುತ್ತಿದೆ. ಈ ಬಾರಿ ತೆರಿಗೆ ಸಂಗ್ರಹದಲ್ಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಅಧಿಕಾರಿಗಳ ಕಾರ್ಯ ಶ್ಲಾಘನೀಯ.
>
> -ರಾಹುಲ್ ಶಿಂಧೆ, ಜಿಪಂ ಸಿಇಒ, ಬೆಳಗಾವಿ

- » ಜಿಲ್ಲೆಯ 500 ಗ್ರಾಪಂ 110 ಕೋಟಿ ತೆರಿಗೆ
- » ತೆರಿಗೆ ಸಂಗ್ರಹ ಕೋಟಿ ಗಡಿ ದಾಟಿದ ಜಿಪಂ

ಬೆಳಗಾವಿ ಜಿಲ್ಲಾ ಬಾಯಿತಿ ಕಚೇರಿ ಹೊರ ನೋಟ.

ತೆರಿಗೆ ಅಭಿಯಾನ

ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಈ ಬಾರಿ ತೆರಿಗೆ ಅಭಿಯಾನವನ್ನು ವಿಭಿನ್ನ ರೀತಿ ಕೈಗೊಳ್ಳುವ ಮೂಲಕ ರಾಜ್ಯದಲ್ಲೇ ತೆರಿಗೆ ಸಂಗ್ರಹ ದಲ್ಲಿ ದಾಖಲೆ ನಿರ್ಮಿಸಿದ್ದಾರೆ. ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ತೆರಿಗೆ ಸಂಗ್ರಹ ಕುರಿತು ನೀಡಿದ ಸಲಹೆ ಹಾಗೂ ಜನರಲ್ಲಿ ಮೂಡಿಸಿದ ಜಾಗೃತಿ ಫಲವಾಗಿ ತೆರಿಗೆ ಸಂಗ್ರಹದಲ್ಲಿ ಯಶಸ್ವಿಯಾಗಿದೆ.

ಅಕ್ರಮ ವಿದ್ಯುತ್ ಕಡಿವಾಣ

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೋರ್‌ವೆಲ್, ನದಿಗೆ, ಬಾವಿಗೆ ಬಳಸಿಕೊಂಡಿದ್ದ ಅಕ್ರಮ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದೆ. ನಿಷ್ಪ್ರಯೋಜಕ ಬೋರವೆಲ್ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದು, ಬೀದಿಗಳಲ್ಲಿ ಎಲ್‌ಇಡಿ ವಿದ್ಯುತ್ ಬಲ್ಬ್‌ಗಳ ಬಳಕೆಗೆ ಕ್ರಮಗಳನ್ನು ಕೈಗೊಂಡಿದ್ದರ ಫಲವಾಗಿ ಈ ಬಾರಿ 13 ಕೋಟಿ ರು. ಮೌಲ್ಯದ ವಿದ್ಯುತ್ ಉಳಿತಾಯ ಮಾಡಲಾಗಿದೆ. ಇದರಿಂದ ಅಧಿಕೃತ ವಿದ್ಯುತ್ ಬಳಕೆದಾರ ರೈತರಿಗೂ ಸಾಕಷ್ಟು ಅನುಕೂಲಕರವಾಗಿದೆ.

ಮನೆ ಬಾಗಿಲಿಗೆ ಆಡಳಿತ

ಒಬ್ಬ ಅಧಿಕಾರಿ ಪ್ರಯತ್ನಪಟ್ಟರೆ ಆಡಳಿತ ವ್ಯವಸ್ಥೆಯಲ್ಲಿ ಎಷ್ಟೆಲ್ಲಾ ಬದಲಾವಣೆ ತರಲು ಸಾಧ್ಯ ಎನ್ನಲಿಕ್ಕೆ ಉದಾಹರಣೆ ಬೆಳಗಾವಿ ಜಿಪಂ ಸಿಇಒ ರಾಹುಲ್ ಶಿಂಧೆ. ಗ್ರಾಮೀಣ ಭಾಗದ ಜನರಿಗೆ ಸರಕಾರಿ ಅಧಿಕಾರಿಗಳು ಸುಲಭವಾಗಿ ಸಿಗಬೇಕು, ಸರಕಾರಿ ಸೌಲಭ್ಯ ಬಡವರಿಗೆ ತಲುಪಬೇಕು ಎಂಬ ಧ್ಯೇಯದೊಂದಿಗೆ ಜನ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆ ಬಂದಿದೆ ಎಂದು ಜನರೇ ಮಾತನಾಡಿಕೊಳ್ಳುತ್ತಿರುವುದು ವಿಶೇಷ.

ಕುಡಿವ ನೀರಿನ ಸೌಲಭ್ಯ

ಬೇಸಿಗೆ ಕಾಲದಲ್ಲಿ ಜಿಲ್ಲೆಯ 257 ಗ್ರಾಮಗಳನ್ನು ಕುಡಿಯುವ ನೀರಿನಿಂದ ಬಳಲುತ್ತಿರುವ ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಲಾಗಿದೆ. ಚಿಕ್ಕೋಡಿ ವಿಭಾಗದ 1610 ಗ್ರಾಮ, ಬೆಳಗಾವಿ ವಿಭಾಗದ 57 ಗ್ರಾಮಗಳು ಕುಡಿಯುವ ನೀರಿನ ಸಮಸ್ಯೆಯಿಂದ ಬಳಲುವ ಸಾಧ್ಯತೆ ಇತ್ತು. ಈ ಗ್ರಾಮದ ಜನರಿಗೆ ತೊಂದರೆಯಾಗದಂತೆ ನೀರು ಪೂರೈಕೆ ಮಾಡಲಾಗುತ್ತಿದೆ.

ಗಡಿಯಲ್ಲಿ ಧರ್ಮದ ಸಂಘರ್ಷ ಯಾದವಾಡದಲ್ಲಿ ಭಾವೈಕ್ಯ ಹರ್ಷ

ಜಿಲ್ಲಾ ನೋಟ

ವಸೀಮ ಭಾವಿಮನಿ, ಧಾರವಾಡ

ದೇಶದ ದೂರದ ಗಡಿಯಲ್ಲಿ ಎರಡು ರಾಷ್ಟ್ರಗಳ, 2 ಧರ್ಮಗಳ ನಡುವೆ ಧರ್ಮ ಸಂಘರ್ಷ ನಡೆಯುತ್ತಿದೆ. ನಿನ್ನೆಯಷ್ಟೇ ಕದನ ವಿರಾಮ ಬಿದ್ದಿದೆ. ಆದರೆ ಧಾರವಾಡ ಜಿಲ್ಲೆ ಯಾದವಾಡ ಗ್ರಾಮದ ಮಡಿಲಲ್ಲಿ ಎರಡು ಧರ್ಮಗಳ ನಡುವೆ ಭಾವೈಕ್ಯದ ಬೆಸುಗೆಗೆ ಸಾಕ್ಷಿಯಾಗಿದೆ ಒಂದು ಜಾತ್ರೆ..!

ಹಿಂದೂ- ಮುಸ್ಲಿಂ, ಬಡವ-ಬಲ್ಲಿದ, ಮೇಲು- ಕೀಳು ಎನ್ನುವ ಹಂಗಿಲ್ಲದ ಊರು ಇದು. ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ರಾಷ್ಟ್ರಪ್ರಶಸ್ತಿ ಪಡೆದ ಇಂತಹ ಗ್ರಾಮದಲ್ಲಿ ಬರೋಬ್ಬರಿ 21 ವರ್ಷದ ಬಳಿಕ ಗ್ರಾಮದೇವಿಯರ ಜಾತ್ರೆ ಅತ್ಯಂತ ವಿಶೇಷತೆಯಿಂದ 9 ದಿನಗಳ ಕಾಲ ನಡೆಯಿತು. ಇಂತಹ ವಿಶೇಷ ಜಾತ್ರೆಯಲ್ಲಿ ಮುಸ್ಲಿಂ ಸಮಾಜದವರು ಭಾಗಿಯಾಗಿ, ಜಾತ್ರೆಯ ಜವಾಬ್ದಾರಿ ಹೊತ್ತುಕೊಂಡಿದ್ದು, ಧಾರ್ಮಿಕ ಸೌಹಾರ್ದತೆ - ಭಾವೈಕ್ಯತೆಗೆ ಕನ್ನಡಿ ಹಿಡಿದಿದೆ.

ಯಾದವಾಡ ಗ್ರಾಮ ಜಾತ್ರೆ

ಧಾರವಾಡ ತಾಲೂಕಿನ ಯಾದವಾಡ ಊರಿನಲ್ಲಿ ದ್ಯಾಮವ್ವ- ದುರ್ಗವ್ವ ಜಾತ್ರೆ ಮೇ 1 ರಿಂದ ಮೇ 9 ರವರೆಗೆ ವಿಶೇಷವಾಗಿ ನಡೆಯಿತು. ಪ್ರತಿದಿನವೂ ಬೆಳ್ಳಿಗ್ಗೆ ಬ್ರಾಹ್ಮಿ ಮೂಹೂರ್ತದಲ್ಲಿ ಕಿತ್ತೂರಿನ ಚೇತನ ಸ್ವಾಮೀಜಿಗಳಿಂದ ಹೋಮಹವನ, ಸಂಜೆ ಕಲ್ಲಿನಾಥ ಶಾಸ್ತ್ರಿಗಳಿಂದ ದೇವಿಪುರಾಣ, ಮಠಾಧೀಶರಿಂದ ಆಧ್ಯಾತ್ಮಿಕ ಪ್ರವಚನ ಜರುಗಿದವು.

ಜಾತ್ರೆ ವಿಶೇಷತೆಗಳು

ಯಾದವಾಡ ಗ್ರಾಮದೇವಿಯರ ಜಾತ್ರೆಗೆ 3 ದಿನ ನಡೆದ ಭಂಡಾರದ ಹೊನ್ನಾಟದಲ್ಲಿ 150 ಕ್ವಿಂಟಾಲ್ ಭಂಡಾರ. 5 ಕ್ವಿಂಟಾಲ್ ವಿವಿಧ ಬಣ್ಣದ ಹೂವುಗಳ ಬಳಕೆ. ಜಾತ್ರೆಗಾಗಿ ಗ್ರಾಮಸ್ಥರಿಂದ 60 ಲಕ್ಷಕ್ಕೂ ಹೆಚ್ಚು ಹಣ ಸಂಗ್ರಹ. 50 ಕ್ವಿಂಟಾಲ್ ದವಸ ಧಾನ್ಯ ಸಂಗ್ರಹ. ಮಾವಿನ ಹಣ್ಣಿನ ಸಿಹಿಕರಣೆಗಾಗಿ ಬರೋಬ್ಬರಿ 10 ಕ್ವಿಂಟಾಲ್ ಮಾವಿನ ಹಣ್ಣು ಬಳಕೆ. 10 ಸಾವಿರ ಹೋಳಿಗೆ ತಯಾರಿಕೆ. ಇದಕ್ಕಾಗಿ ಎರಡೂವರೆ ಕ್ವಿಂಟಾಲ್ ಬೆಲ್ಲ ಹಾಗೂ 2 ಕ್ವಿಂಟಾಲ್ ಕಡಲೆ ಬೇಳೆ ಬಳಕೆ.15 ಕ್ವಿಂಟಾಲ್ ಬಾಳೆ ಹಣ್ಣು. ಊರಿನಲ್ಲಿ 4 ವಾರ್ಡ್‌ಗಳ ಯುವಕರಿಗೆ ತಂಡವನ್ನಾಗಿ ಮಾಡಿ ಜಾತ್ರೆಯ ಜವಾಬ್ದಾರಿ ಹಂಚಿಕೆ. 60 ವರ್ಷದ ಮೇಲ್ಪಟ್ಟವರಿಗೆ ಜಾತ್ರೆಯ ಉಸ್ತುವಾರಿ ಲೆಕ್ಕಪತ್ರದ ಜವಾಬ್ದಾರಿ ನೀಡಿಕೆ.

9 ದಿನ ಒಲೆ ಹಚ್ಚಲ್ಲ

ಇಡೀ ಊರಿನ ಮನೆಗಳಲ್ಲಿ 9 ದಿನಗಳ ಕಾಲ ಯಾರೂ ಒಲೆ ಹಚ್ಚಲಿಲ್ಲ. ಕಾಲಿನಲ್ಲಿ ಚಪ್ಪಲಿ ಹಾಕಲಿಲ್ಲ. ಯಾದವಾಡ ಗ್ರಾಮದಲ್ಲಿ ನಡೆದ 9 ದಿನಗಳ ಜಾತ್ರೆ ವೇಳೆ ಚಪ್ಪಲಿ ಹಾಕುವುದಿಲ್ಲ. ಇದು ಜಾತ್ರಾ ಸಮಿತಿಯು ವಿಧಿಸುವ ಕಟ್ಟುನಿಟ್ಟಿನ ನಿಯಮ. ಗ್ರಾಮಸ್ಥರು ಇದನ್ನು ಚಾಚು ತಪ್ಪದೇ ಪಾಲಿಸುತ್ತಾರೆ.

ಮೂರೂವರೆ ಲಕ್ಷ ಜನ

ಜಾತ್ರೆಗಾಗಿ 9 ದಿನಗಳ ಕಾಲ ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದ್ದು, ಬೆಳಿಗ್ಗೆ ಉಪಹಾರ , ಮಧ್ಯಾಹ್ನದ ಊಟ ಹಾಗು ರಾತ್ರಿ ಊಟಕ್ಕೆ ಒಟ್ಟು, ಅಂದಾಜು 30 ರಿಂದ 40 ಸಾವಿರ ಜನರಂತೆ ಒಟ್ಟು ಮೂರುವರೆ ಲಕ್ಷ ಜನರು ಜಾತ್ರೆಗೆ ಸಾಕ್ಷಿಯಾದರು. ಇದಕ್ಕಾಗಿ 8 ಕ್ವಿಂಟಾಲ್ ಕಾಯಿಪಲ್ಲೆ ಬಳಕೆ ಮಾಡಲಾಗಿದೆ. ಊಟದಲ್ಲಿ ಗೋಧಿ ಹುಗ್ಗಿ, ಶಾವಿಗೆ ಪಾಯಸಾ, ಶಿರಾ, ಬೂಂದಿ, ಹೋಳಿಗೆ, ಮಾವಿನ ಹಣ್ಣಿನ ಸಿಹಿಕರಣೆ ಮಾಡಲಾಗಿತ್ತು.

ಏಕ ವಸ್ತ್ರ ಸಂಹಿತೆ

ಜಾತ್ರೆ ಅಂಗವಾಗಿ ವಿಶೇಷವಾಗಿ ಪುರುಷರು ಶ್ವೇತವಸ್ತ್ರದ ಹಳದಿ ಹಾಗೂ ನೀಲಿ ಪೈಜಾಮ್ ಜುಬ್ಬಾ ಧರಿಸಿ ಎಲ್ಲರೂ ಗಮನ ಸೆಳೆದರು. ಮಹಿಳೆಯರು ಇಳಕಲ್ ಸೀರೆ, ಕೆಂಪು ಬಣ್ಣದ ಸೀರೆ ಸೇರಿದಂತೆ 9 ದಿನವೂ ವಿಭಿನ್ನ ಬಣ್ಣದ ಸೀರೆಯನ್ನು ಧರಿಸಿದ್ದರು. ಇಂತಹ ವಿಶೇಷ ಉಡುಗೆ ಜಾತ್ರೆಯ ವಸ್ತ್ರ ಸಂಹಿತೆ ಕೂಡ.

ಇತರೆ ಕಾರ್ಯ ರದ್ದು

ಜಾತ್ರೆಯಾದ ಬಳಿಕ ಒಟ್ಟು 48 ದಿನಗಳ ಅವಧಿಯಲ್ಲಿ ಗ್ರಾಮದಲ್ಲಿ ಮದುವೆ,ಮುಂಜಿ, ಹಬ್ಬ ಹರಿದಿನ ಉತ್ಸವ, ಇತರೆ ಯಾವುದೇ ಕಾರ್ಯಕ್ರಮ ನಡೆಸುವಂತಿಲ್ಲ. ಯಾದವಾಡ ಗ್ರಾಮದ ಈ ಒಗ್ಗಟ್ಟು ಇಡೀ ಜಿಲ್ಲೆಯಾದ್ಯಂತ ಜನಮನ್ನಣೆ ಪಡೆದಿದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂಬ ಸಂದೇಶ ರವಾನಿಸುತ್ತದೆ ಈ ಜಾತ್ರೆ.

> ನಮ್ಮೂರಿನಲ್ಲಿ ನಡೆದ ಐತಿಹಾಸಿಕ ಜಾತ್ರೆಗೆ, ಎಲ್ಲರೂ ಸರ್ವಧರ್ಮದವರು ಒಗ್ಗಟಾಗಿ ಭಾಗಿಯಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆ. ಎಲ್ಲಾ ಸಮಾಜದವರು ಜಾತ್ರೆಯಲ್ಲಿ ಭಾಗಿಯಾಗಿ, ಐತಿಹಾಸಿಕ ಜಾತ್ರೆಯನ್ನು ಯಶಸ್ವಿ ಮಾಡಿದ್ದೇವೆ.
>
> -ಮಡಿವಾಳಪ್ಪ ದಿಂಡಲಕೊಪ್ಪ, ಗ್ರಾಪಂ ಸದಸ್ಯರು

> ಯಾದವಾಡ ಗ್ರಾಮದಲ್ಲಿ ಒಂದು ಸಾವಿರ ಜನರು ಮುಸ್ಲಿಂರಿದ್ದಾರೆ. ಎಲ್ಲರೂ ಸೇರಿ ಭಂಡಾರ ಆಡಿದ್ದೇವೆ. ನಮಗೆ ನಮ್ಮೂರಿನ ಜಾತ್ರೆ ತುಂಬಾನೆ ವಿಶೇಷ. ಇದಕ್ಕಾಗಿ ಹಲವಾರು ತಿಂಗಳಿಂದ ತಯಾರಿ ಮಾಡಿದ್ದೇವೆ. ಜಾತ್ರೆ ಯಶಸ್ವಿಯಾಗಿದೆ.
>
> -ಬಸವರಾಜ ಬೆಂಡಿಗೇರಿ, ಜಾತ್ರೆ ಸಮಿತಿ ಸದಸ್ಯ

- » ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿ
- » 21 ವರ್ಷಗಳ ನಂತರ ನಡೆದ ಜಾತ್ರೆ
- » ಹೊರ ದೇಶ, ಹೊರ ರಾಜ್ಯದ ಭಕ್ತರು

ಬೂಂದಿ ದಾಸೋಹ

ಗ್ರಾಮದ ಹಿರಿಯರಾದ ಶಶಿಮೌಳಿ ಕುಲಕರ್ಣಿ ಅವರ ಮಗಳು ದೂರದ ಜರ್ಮನ್ ದೇಶದಲ್ಲಿ ಉದ್ಯೋಗ ನಿಮಿತ್ತ ನೆಲೆಸಿದ್ದಾರೆ. ಈ ಊರ ಜಾತ್ರೆಗೆ ಬರಲು ಆಗದ ಕಾರಣ ತನ್ನ ಸ್ವಂತ ಖರ್ಚಿನಲ್ಲಿ ಇಡೀ ಗ್ರಾಮಸ್ಥರಿಗೆ ಬೂಂದಿ (ಲಾಡು) ವ್ಯವಸ್ಥೆ ಮಾಡಿ ದಾಸೋಹ ಸೇವೆ ಸಲ್ಲಿಸಿ ಗ್ರಾಮಸ್ಥರಿಂದ ಪ್ರಶಂಸೆ ಗಳಿಸಿದಳು.

ಗಣ್ಯಮಾನ್ಯರ ದಂಡು

ಇಂತಹ ವಿಶೇಷ ಜಾತ್ರಾ ಮಹೋತ್ಸವಕ್ಕೆ ಬೈಲಹೊಂಗಲ ತಾಲೂಕಿನ ನಯಾನಗರ ಸುಕ್ಷೇತ್ರದ ಶ್ರೀ ಅಭಿನವ ಸಿದ್ದಲಿಂಗ ಮಹಾ ಸ್ವಾಮೀಜಿ ಚಾಲನೆ ನೀಡಿದರು. ಜಾತ್ರೆಯಲ್ಲಿ ಧಾರವಾಡ ಜಿಲ್ಲಾಧಿಕಾರಿ ದಿವ್ಯಪ್ರಭು, ಶಾಸಕ ವಿನಯ ಕುಲಕರ್ಣಿ ಅವರ ಪುತ್ರ ಹೇಮಂತ ವಿನಯ ಕುಲಕರ್ಣಿ, ಮಾಜಿ ಶಾಸಕ ಅಮೃತ ದೇಸಾಯಿ, ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಪುತ್ರ ಮೃಣಾಲ್ ಹೆಬ್ಬಾಳಕರ್ ಮತ್ತಿತ್ತರ ಗಣ್ಯರು ಭಾಗಿಯಾಗಿದ್ದರು. ಜಾತ್ರೆಂದು ದೂರದ ದುಬೈ ದೇಶದ ಕಂಪನಿಯಲ್ಲಿ ಉದ್ಯೋಗ ಮಾಡುವ ಗ್ರಾಮದ ಯುವಕರು ಬಂದಿದ್ದರು. ಮದುವೆಯಾಗಿ ಹೊರ ರಾಜ್ಯದ ಗಂಡನ ಮನೆ ಸೇರಿರುವ ಮಹಿಳೆಯರು ಕೂಡ ತವರೂರಿನ ಜಾತ್ರೆಗೆ ಆಗಮಿಸಿ ಮೆರಗು ತಂದರು.

ಹಾವು ಕಡಿತಕ್ಕೆ ಬಲಿ ಸಂಖ್ಯೆ ಹೆಚ್ಚಳ ತುರ್ತು ಚಿಕಿತ್ಸೆ ದೊರೆಯದ ಕಳವಳ

ಜಿಲ್ಲಾ ನೋಟ

ರಂಗನಾಥ ಕೆ.ಹೊನ್ನಮರಡಿ, ತುಮಕೂರು

ಜಿಲ್ಲೆಯಲ್ಲಿ ಹಾವು ಕಡಿತದಿಂದ ಸಾಯುತ್ತಿರುವ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಜಿಲ್ಲಾಸ್ಪತ್ರೆ ಹೊರತುಪಡಿಸಿ ತಾಲೂಕು ಆಸ್ಪತ್ರೆ, ಸಮುದಾಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಮರ್ಪಕವಾಗಿ ಹಾವು ಕಡಿತಕ್ಕೆ ಔಷಧ ಸಿಗುತ್ತಿಲ್ಲ. ಇದರಿಂದ ಗ್ರಾಮೀಣ ಭಾಗದಲ್ಲಿ ಮೃತರ ಪ್ರಮಾಣ ಹೆಚ್ಚಾಗುತ್ತಿದೆ.

ಕೃಷಿಕರೇ ಹೆಚ್ಚು ಬಲಿ

ಗ್ರಾಮೀಣ ಹೊಲಗದ್ದೆಗಳಲ್ಲಿ ಕೃಷಿ ಚಟುವಟಿಕೆ, ಕುರಿಗಾಹಿ, ಮತ್ತಿತರ ಕೆಲಸ ಮಾಡುವಾಗ ವಿಷಪೂರಿತ ಹಾವು ಕಡಿತಕ್ಕೊಳಗಾಗಿ ಹತ್ತಿರದ ಆಸ್ಪತ್ರೆಗೆ ಬರುವಷ್ಟರಲ್ಲಿ ಪ್ರಾಣ ಕಳೆದುಕೊಳ್ಳುವ ಪ್ರಸಂಗ ಹೆಚ್ಚು. ಇಂಥ ಆಕಸ್ಮಿಕ ಅವಘಡ ಆದಾಗ ಅಗತ್ಯ ಚಿಕಿತ್ಸೆ ವ್ಯವಸ್ಥೆ ಬೇಕು. ಇದಕ್ಕಿ ಸಂಬಂಧಿಸಿದ ಸವಲತ್ತು ಒದಗಿಸಲು ಆರೋಗ್ಯ ಇಲಾಖೆ ಕ್ರಮಕ್ಕೈಗೊಳ್ಳಬೇಕು. ಮಳೆಗಾಲದ ದಿನಗಳಲ್ಲಿ ಹಾವು ಕಡಿತಕ್ಕೆ ಒಳಗಾದವರ ಸಂಖ್ಯೆ ಅಧಿಕವಾಗುತ್ತಿದೆ.

ಎಲ್ಲ ಕಡೆ ಇಲ್ಲ ಚಿಕಿತ್ಸೆ

ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ, ತಾಲೂಕು ಆಸ್ಪತ್ರೆಗಳಲ್ಲಿ ನಿರಂತರವಾಗಿ ಹಾವು ಕಡಿತಕ್ಕೆ ಔಷಧ ದೊರೆಯುವಂತೆ ಮಾಡಿದರೆ ಮರಣ ಪ್ರಮಾಣ ಕುಗ್ಗಿಸಬಹದು. ತಾಲೂಕು ಆಸ್ಪತ್ರೆ ಸೇರಿದಂತೆ ಸಮುದಾಯ, ಪ್ರಾಥಮಿಕ, ಉಪ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತಕ್ಕೆ ಸೂಕ್ತ ಚಿಕಿತ್ಸೆ ದೊರೆಯುತ್ತಿಲ್ಲ. ಜಿಲ್ಲಾ ಕೇಂದ್ರ ಹಾಗೂ ತಾಲೂಕು ಕೇಂದ್ರದಿಂದ ದೂರವಿರುವ ಊರುಗಳಲ್ಲಿ ಹಾವು ಕಡಿತಕ್ಕೆ ಒಳಗಾದವರು ಪ್ರಾಥಮಿಕ ಚಿಕಿತ್ಸೆಗಾಗಿ ಹತ್ತಿರದ ಸರಕಾರಿ ಆರೋಗ್ಯ ಕೇಂದ್ರಕ್ಕೆ ಹೋದರೆ ಅಲ್ಲಿಂದ ತಾಲೂಕು, ಜಿಲ್ಲೆಗೆ ಶಿಫಾರಸು ಮಾಡಿ ಕೈತೊಳೆದುಕೊಳ್ಳುತ್ತಾರೆ.

ಖಾಸಗಿ ಆಸ್ಪತ್ರೆ ಕಷ್ಟ

ಖಾಸಗಿ ಆಸ್ಪತ್ರೆಗೆ ಹೋದರೆ ಬಿಲ್ ಕಟ್ಟಲು ಬಡವರಿಗೆ, ಕೂಲಿ ಕಾರ್ಮಿಕರಿಗೆ ಸಾಧ್ಯವಾಗುವುದಿಲ್ಲ. ಬೇರೆ ಸರಕಾರಿ ಆಸ್ಪತ್ರೆ ಹುಡುಕಿಕೊಂಡು ಹೋಗುವಷ್ಟರಲ್ಲಿ ಹಾವು ಕಡಿದವರು ಸಾವಿನ ಮನೆ ಕದ ತಟ್ಟುವ ಘಟನೆಗಳು ಜಿಲ್ಲೆಯಲ್ಲಿ ಹೆಚ್ಚಾ ಗುತ್ತಿವೆ. ಆದ್ದರಿಂದ ತಾಲೂಕು ಮಟ್ಟದ ಎಲ್ಲಾ ಸರಕಾರಿ ಆರೋಗ್ಯ ಕೇಂದ್ರಗಳಿಗೆ ಹಾವು ಕಡಿತಕ್ಕೆ ಔಷಧ, ವೆಂಟಿಲೇಟರ್ ಸಲವತ್ತುಗಳನ್ನು ಇಲಾಖೆ ಒದಗಿಸಬೇಕಾಗಿದೆ.

> ಜಿಲ್ಲೆಯಲ್ಲಿ ಹಾವು ಕಡಿತ ಚಿಕಿತ್ಸೆಗೆ ಔಷಧಗೆ ಕೊರತೆಯಿಲ್ಲ. ವಿಷಪೂರಿತ ಹಾವು ಕಡಿದಾಗ ಜೀವಕ್ಕೆ ತೊಂದರೆ ಹೆಚ್ಚಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ತಾಲೂಕು ಆಸ್ಪತ್ರೆಗೆ ವೆಂಟಿಲೇಟರ್ ಮತ್ತಿತರ ಸವಲತ್ತು ಬೇಕು. ಅದಕ್ಕೆ ಜಿಲ್ಲಾಸ್ಪತ್ರೆಗೆ ಶಿಫಾರಸು ಮಾಡುತ್ತಾರೆ. ವಿಷಪೂರಿತ ಅಲ್ಲದ ಹಾವು ಕಡಿದಾಗ ಜಿಲ್ಲಾಸ್ಪತ್ರೆ ಹೊರತುಪಡಿಸಿ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದೊರೆಯುತ್ತದೆ.
>
> -ಚಂದ್ರಶೇಖರ್, ಡಿಎಚ್ಒ, ತುಮಕೂರು

- » ಹಾವು ಕಚ್ಚಿದವರಿಗೆ ಔಷಧ ಕೊರತೆ
- » ಆಸ್ಪತ್ರೆಗಳಿಗೆಯೇ ಬೇಕಿದೆ ಚಿಕಿತ್ಸೆ
- » ದೊರೆಯುತ್ತಿಲ್ಲ ಸಕಾಲಿಕ ಚಿಕಿತ್ಸೆ



ಹಾವು ಹಿಡಿದು ರಕ್ಷಿಸುತ್ತಿರುವ ಮುಖ್ಯ ಶಿಕ್ಷಕ ಲಕ್ಷ್ಮಿಪ್ರಸಾದ್.

ಜಿಲ್ಲೆಯ ಹಾವು ಕಡಿತ ಪ್ರಕರಣ	
2024	2025
605	111

ಕ್ರಿಯಾ ಯೋಜನೆ

ಕೇಂದ್ರ ಆರೋಗ್ಯ ಸಚಿವಾಲಯ 2024 ಮಾರ್ಚ್ ನಲ್ಲಿ ಹಾವು ಕಡಿತದ ನಿರ್ವಹಣೆ, ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ರಾಷ್ಟ್ರೀಯ ಕ್ರಿಯಾ ಯೋಜನೆ ಬಿಡುಗಡೆ ಮಾಡಿದೆ. ಇದರಿಂದ 2030ರ ವೇಳೆಗೆ ಸಾವುಗಳನ್ನು ಅರ್ಧದಷ್ಟು ಕಡಿಮೆ ಮಾಡಬಹುದಾಗಿದೆ ಎಂದು ತಿಳಿಸಿದೆ. ಹಾವು ಕಡಿತಕ್ಕೆ ಒಳಗಾದ ವ್ಯಕ್ತಿಗೆ ಮತ್ತು ಸಮುದಾಯಗಳಿಗೆ ತಕ್ಷಣದ ನೆರವು, ಮಾರ್ಗದರ್ಶನ ಮತ್ತು ಬೆಂಬಲವನ್ನು ಇದು ನೀಡಲಿದೆ.

ಘೋಷಿತ ಕಾಯಿಲೆ

ಪ್ರಥಮ ಬಾರಿಗೆ ರಾಜ್ಯದಲ್ಲಿ ಹಾವು ಕಡಿತವನ್ನು ಘೋಷಿತ ಕಾಯಿಲೆ ಎಂದು 2024 ಫೆ. 12 ರಂದು ಘೋಷಣೆ ಮಾಡಿ ಅಧಿಸೂಚನೆ ಹೊರಡಿಸಲಾ ಗಿದೆ. ರಾಜ್ಯದ ಎಲ್ಲಾ ಖಾಸಗಿ ಮತ್ತು ಸರಕಾರಿ ಆಸ್ಪತ್ರೆಗಳು ಮತ್ತು ವೈದ್ಯಕೀಯ ಸಂಸ್ಥೆಗಳು ಹಾವು ಕಡಿತದ ಎಲ್ಲ ಪ್ರಕರಣಗಳನ್ನು ಅಂದರೆ ಒಳ ರೋಗಿಗಳು, ಹೊರ ರೋಗಿಗಳು ಮತ್ತು ಸಾವಿನ ಪ್ರಕರಣಗಳೇ ಆಗಿರಲಿ. ಸಮಗ್ರ ಆರೋಗ್ಯ ಮಾಹಿತಿ ನೋಂದಾಯಿಸಬೇಕು ಎಂದು ಆದೇಶಿಸಿದ್ದರೂ ಸಾವಿನ ಸಂಖ್ಯೆ ಕಡಿಮೆಯಾಗುತ್ತಿಲ್ಲ.

ಸ್ನೇಕ್ ವೆನಮ್ ಕೊರತೆ

ಆರೋಗ್ಯ ಇಲಾಖೆ ಹಾವು ಕಡಿತಕ್ಕೆ ತುರ್ತು ಚಿಕಿತ್ಸೆ ನೀಡಲು ಸ್ನೇಕ್ ವೆನಮ್ ಅನ್ನು ಅಗತ್ಯ ಔಷಧಿ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಆಸ್ಪತ್ರೆ ಹಾಗೂ ಜಿಲ್ಲಾಸ್ಪತ್ರೆಗಳಲ್ಲಿ ಸಕಾಲದಲ್ಲಿ ಉಚಿತವಾಗಿ ಚಿಕಿತ್ಸೆ ದೊರೆಯುವಂತೆ ಆರೋಗ್ಯ ಇಲಾಖೆ ಸೂಚಿಸಿದ್ದರೂ ಬಹುತೇಕ ಆಸ್ಪತ್ರೆಗಳಲ್ಲಿ ಹಾವು ಕಡಿತದ ಔಷಧಿ ಕೊರತೆ ಎದ್ದು ಕಾಣುತ್ತಿದೆ.

14 ಮಂದಿ ಮರಣ

ಹಾವಿನ ಕಡಿತಕ್ಕೆ ಸ್ನೇಕ್ ವೆನಮ್ ಏಕೈಕ ವಿಷ ನಿರೋಧಕ ಔಷಧವಾಗಿದೆ. ಹಾವು ಕಡಿತ ಪತ್ತೆಯಾದ ತಕ್ಷಣ ಎಎಸ್‌ವಿ ನೀಡಬೇಕು. ಉಸಿರಾಟದ ತೊಂದರೆ, ಉರಿ, ಊತ, ನರದೌರ್ಬಲ್ಯ, ರಕ್ತದೊತ್ತಡದಲ್ಲಿ ಏರುಪೇರು ಕಂಡುಬಂದಲ್ಲಿ ತುರ್ತು ನಿಗಾ ಘಟಕಕ್ಕೆ ವರ್ಗಾಯಿಸಿ ನಿಗಾವಹಿಸಲಾಗುತ್ತದೆ. ಜಿಲ್ಲೆಯಲ್ಲಿ ಹಾವು ಕಡಿತದಿಂದ ಫೆಬ್ರವರಿ 2024 ರಿಂದ ಮಾರ್ಚ್ 2025 ರವರೆಗೆ 14 ಮಂದಿ ಮರಣ ಹೊಂದಿದ್ದಾರೆ. ಹಾವು ಕಡಿತದಿಂದ ಮರಣ ಹೊಂದಿದ ಎಲ್ಲಾ ಪ್ರಕರಣಗಳು ದಾಖಲಾಗದಿರುವುದರಿಂದ ನಿಖರ ಸಾವಿನ ಸಂಖ್ಯೆ ದೊರೆಯುವುದಿಲ್ಲ

ಸಮಾಚಾರ ಸಣ್ಣದಲ್ಲ

ಕಂಬದ ನರಸಿಂಹಸ್ವಾಮಿ ಜಯಂತ್ಯುತ್ಸವ

ನಾಗಮಂಗಲ: ತಾಲೂಕಿನ ಕೋಟೆಬೆಟ್ಟ ಗ್ರಾಮದಲ್ಲಿ ಕಂಬದ ನರಸಿಂಹಸ್ವಾಮಿಯ 54 ನೇ ವರ್ಷದ ಜಯಂತಿ ಆಚರಣೆಗೆ ದೀಪ ಪ್ರಜ್ವಲನ, ಅನುಜ್ಞೆ, ಗಂಗಾಪೂಜೆ, ವಿಶ್ವಕ್ಸೇನ ಆರಾಧನೆ, ಮಹಾಗಣಪತಿ ಪೂಜೆ, ಭಗವದ್ ವಾಸುದೇವ ಪುಣ್ಯಾಹ, ರಕಾ ಬಂಧನ, ಸಂಕಲ್ಪ, ಕಳಶಸ್ಥಾಪನೆ, ಅಗ್ನಿಪ್ರತಿಷ್ಠೆ, ಮಹಾಗಣಪತಿ ಹೋಮ, ನವಗ್ರಹ ಶಾಂತಿಹೋಮ, ಮೃತ್ಯುಂಜಯ ಹೋಮ, ನರಸಿಂಹ ಸಹಸ್ರನಾಮ ಹೋಮ, ಲಕ್ಷ್ಮಿನಾರಾಯಣ ಹೋಮ, ಮಹಾಸುದರ್ಶನ ಹೋಮ, ಶಾಂತಿ ಹೋಮ ನೆರವೇರಿದವು. ಶ್ರೀ ಕಂಬದ ನರಸಿಂಹಸ್ವಾಮಿಗೆ ತಿರು ಕಲ್ಯಾಣೋತ್ಸವ, ಲಾಜಾ ಹೋಮ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ಜರುಗಿದವು. ನಂತರ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಬುದ್ಧ ಜಯಂತಿ ಇಂದು

ಚಾಮರಾಜನಗರ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಬುದ್ಧ ಪೂರ್ಣಿಮೆ ದಿನವಾದ ಮೇ 12ರಂದು ಸೋಮವಾರ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9.30 ಗಂಟೆಗೆ ನಗರದ ಸಾರನಾಥ ಬೌದ್ಧವಿಹಾರದ ಬಳಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಲುಂಬಿಣಿ ಬೌದ್ಧವಿಹಾರದ ಭಂತೆ ಸಮಣಪಾಲ ಅವರು ದಿವ್ಯಸಾನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಉದ್ಘಾಟಿಸುವರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು.

ಬಲಿಜ ಸಮಾಜದಿಂದ ತಾತಯ್ಯ ಜಯಂತಿ

ಮಡಿಕೇರಿ: ಕುಶಾಲನಗರದ ಯೋಗಿ ನಾರೇಯಣ ಬಲಿಜ ಸಂಘದ ವತಿಯಿಂದ ಭಾನುವಾರ ಬಲಿಜ ಕುಲಗುರು ಕೈವಾರ ತಾತಯ್ಯನವರ ಜಯಂತ್ಯುತ್ಸವವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಶ್ರೀ ಯೋಗಿ ನಾರೇಯಣರ ಭಾವಚಿತ್ರವನ್ನು ಅಲಂಕೃತ ವಾಹನದಲ್ಲಿ ಇಟ್ಟು ಬೈಲಕೊಪ್ಪದ ಮುಖ್ಯ ರಸ್ತೆ ಹಾಗೂ ಕುಶಾಲನಗರ ಗಣಪತಿ ದೇವಾಲಯದಿಂದ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಕುಶಾಲನಗರ, ಬೈಲಕೊಪ್ಪ ಆಸುಪಾಸುಗಳ ಗ್ರಾಮಗಳ ನೂರಾರು ಮಂದಿ ಬಲಿಜ ಬಂಧುಗಳು ಭಾಗವಹಿಸಿದ್ದರು. ತಾ.ಬಲಿಜ ಸಂಘದ ಅಧ್ಯಕ್ಷ ಆರ್.ಬಾಬಣ್ಣ ಅವರ ಅಧ್ಯಕ್ಷತೆವಹಿಸಿದ್ದರು. ಉಪನ್ಯಾಸಕ ಡಾ.ಎಸ್.ಕಿತ್ತೂರು ಕೃಷ್ಣಪ್ಪ, ಲೇಖಕ ಡಾ.ಗುಬ್ಬಿಗೂಡು ರಮೇಶ್, ಕೊಡಗು ಜಿಲ್ಲಾ ಬಲಿಜ ಸಂಘದ ಅಧ್ಯಕ್ಷರಾದ ಟಿ.ಡಿ.ಸುಬ್ರಮಣಿ, ಮಡಿಕೇರಿ ತಾ.ಅಧ್ಯಕ್ಷೆ ಮೀನಾಕ್ಷಿ ಕೇಶವ ಉಪಸ್ಥಿತರಿದ್ದರು. ಸಮಾಜದ ವಿವಿಧ ಕ್ಷೇತ್ರಗಳ ಸಾಧಕರಾದ ಶನಿವಾರಸಂತೆ ಗ್ರಾಪಂ ಅಧ್ಯಕ್ಷೆ ಗೀತಾ ಹರೀಶ್, ಬೈಲಕೊಪ್ಪ ಗ್ರಾಪಂ ಅಧ್ಯಕ್ಷ ರಘು, ಉಪಾಧ್ಯಕ್ಷೆ ಗೀತಾ ಸುಬ್ರಮಣ್ಯ, ಸದಸ್ಯ ಬಾಲಾಜಿ ರಘು, ಭುವನಹಳ್ಳಿ ಗ್ರಾಪಂ ಅಧ್ಯಕ್ಷ ಜೋಗನಹಳ್ಳಿ ದೇವರಾಜು, ಬಾಳೆಲೆಯ ಪ್ರಾಂಶುಪಾಲೆ ಗೀತಾ ನಾಯ್ಡು, ಕೊಪ್ಪ ಸಹಕಾರ ಸಂಘದ ನಿರ್ದೇಶಕ ಸುಬ್ರಮಣ್ಯ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬಲಿಜ ಸಮಾಜದ ತಾ.ಉಪಾಧ್ಯಕ್ಷ ಎಂ.ಆರ್.ಗಣೇಶ್, ಎನ್.ಸ್ವಾಮಿ, ಗೌರವಾಧ್ಯಕ್ಷ ಧರ್ಮ, ಕಿರಣ್, ಸಿ.ಕೆ.ಕಾಂತರಾಜ್ ಇದ್ದರು.

ಡಾ.ಅಂಬೇಡ್ಕರ್ ಜನ್ಮ ದಿನಾಚರಣೆ

ಚಾಮರಾಜನಗರ: ಡಾ.ಬಿ.ಆರ್.ಅಂಬೇಡ್ಕರ್ ಅವರ ಚಿಂತನೆಗಳನ್ನು ಮೈಗೂಡಿಸಿಕೊಂಡರೆ ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬಹುದು ಎಂದು ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು. ನಗರದ ಹೌಸಿಂಗ್ ಬೋರ್ಡ್ ಪಾರ್ಕಿನಲ್ಲಿ ಅಂಬೇಡ್ಕರ್ ಅವರ 134 ನೇ ಜಯಂತಿ ಹಾಗೂ ಡಾ.ಭೀಮ್ ರಾವ್ ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟಿಸಿ ಮಾತನಾಡಿದರು. ಸಂವಿಧಾನದಲ್ಲಿ ಕೆಲ ರಾಜ್ಯಗಳಲ್ಲಿ ಎಸ್ಸಿ ಮೀಸಲಾತಿಗಳಲ್ಲಿ ವ್ಯತ್ಯಾಸ ಇದೆ. ಕರ್ನಾಟಕದ ಪರಿಶಿಷ್ಟರಿಗೆ ಅನಾನುಕೂಲವಾಗಿದೆ ಎಂದು ಹೇಳಿದರು. ಕಾಲೇಜು ಪ್ರಾಂಶುಪಾಲ ಡಾ.ದೇವರಾಜು ಮಾತನಾಡಿ, ನಮ್ಮ ರಾಜ್ಯದ ಪ್ರತಿ ಗ್ರಾಮ, ಪಟ್ಟಣಗಳಲ್ಲಿ ಅಂಬೇಡ್ಕರ್ ಜಯಂತಿ ಹಬ್ಬದ ರೀತಿ ಆಚರಣೆ ಮಾಡುತ್ತಾರೆ ಎಂದು ಹೇಳಿದರು.ಶಿಕ್ಷಕರಾದ ಚೌಡಯ್ಯ ಕಟ್ನವಾಡಿ, ನಗರಸಭಾ ಸದಸ್ಯರಾದ ಕುಮುದಾ, ನೌಕರರ ಸಂಘದ ಜಿಲ್ಲಾಧ್ಯಕ್ಷೆ ಡಾ.ರೇಣುಕದೇವಿ, ನಾಗರೀಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಎಸ್.ಮಹದೇವಯ್ಯ ಇದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಡಾ.ಪ್ರಭಾ ಮಲ್ಲಿಕಾರ್ಜುನ್} ಸಂಸದೆ

ಮಹಿಳೆಯರು ಸುಶಿಕ್ಷಿತರಾದಾಗ ಕುಟುಂಬ ಪ್ರಗತಿಯಾಗುತ್ತದೆ. ಹೆಣ್ಣೊಂದು ಕಲಿತರೆ ಇಡೀ ಕುಟುಂಬವೇ ಶಿಕ್ಷಣ ಪಡೆಯಲು ಸಾಧ್ಯ. ಈಗ ನಮ್ಮ ಕಾಂಗ್ರೆಸ್ ಸರಕಾರ ಪ್ರತಿ ಕುಟುಂಬದ ಮಹಿಳೆಗೆ 2 ಸಾವಿರ ರು. ಗೃಹಲಕ್ಷ್ಮೀ ನೀಡುತ್ತಿದೆ. ಇದು ಬಹಳಷ್ಟು ಕುಟುಂಬಗಳು ಆರ್ಥಿಕ ಸಬಲತೆ ಕಾಣಲು ಸಾಧ್ಯವಾಗಿದೆ.



ಕಸಾಪ ಅಧ್ಯಕ್ಷ ಜೋಷಿ ವಿರುದ್ಧ ಹೋರಾಟ | ಮೈಸೂರಿನ ಸಾಹಿತಿಗಳು, ಕನ್ನಡ ಪರ ಚಿಂತಕರ ನಿರ್ಣಯ

ಕಸಾಪ ಉಳಿಸಿ ಜನಾಂದೋಲನ 17ರಂದು

ಮೈಸೂರು: ಕನ್ನಡ ನಾಡು-ನುಡಿ ಕುರಿತು ಮೌಲ್ಯಯುತವಾದ ಕಾರ್ಯಕ್ರಮ ಸಂಘಟಿಸದೆ, ಕನ್ನಡಕ್ಕೆ ಹಲವು ಅಪಾಯಗಳು ಎದುರಾದಾಗ ದನಿಯೆತ್ತದೆ ಭ್ರಷ್ಟಾಚಾರ, ನಿರಂಕುಶ ಆಡಳಿತ, ಅಸಾಹಿತ್ಯಿಕ ವಿಚಾರಗಳ ಮೂಲಕ ಸಾಹಿತ್ಯ ಪರಿಷತ್ತಿನ ಘನತೆ ಹಾಳು ಮಾಡುತ್ತಿರುವ ಅಧ್ಯಕ್ಷ ಮಹೇಶ್ ಜೋಷಿ ಅವರ ವಿರುದ್ಧದ ಜನಾಂದೋಲನ ಹೋರಾಟ ಬೆಂಬಲಿಸಲು ಮೈಸೂರಿನ ಸಾಹಿತಿಗಳು, ಪ್ರಾಧ್ಯಾಪಕರು, ಹೋರಾಟಗಾರರು, ಸಂಘ ಸಂಸ್ಥೆಗಳ ಮುಖಂಡರು ನಿರ್ಣಯ ಕೈಗೊಂಡರು.

ನಗರದ ಖಾಸಗಿ ಹೋಟೇಲ್ ನಲ್ಲಿ ನಡೆದ 'ಸರ್ವಾಧಿಕಾರಿ ಮಹೇಶ್ ಜೋಷಿ ಇಳಿಸಿ – ಕನ್ನಡ ಸಾಹಿತ್ಯ ಪರಿಷತ್ತನ್ನು ಉಳಿಸಿ' ಸಮಾಲೋಚನಾ ಸಭೆಯಲ್ಲಿ ಭಾಗವಹಿಸಿದ್ದ ಕಸಾಪ ಹಿತಚಿಂತಕರೆಲ್ಲ ಮಹೇಶ್ ಜೋಷಿ ಅಧ್ಯಕ್ಷರಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲ ಆಶಯಕ್ಕೆ ಧಕ್ಕೆ ಎದುರಾಗಿದೆ. ಅವರನ್ನು ಕೆಳಗಿಳಿಸಿ, ಆಡಳಿತಾಧಿಕಾರಿ ನೇಮಿಸಿ, ಅವರ ಮೇಲಿನ ಆರೋಪಗಳ ಕುರಿತು ಸಮಗ್ರವಾದ ತನಿಖೆ ನಡೆಸಲು ಸರಕಾರದ ಮೇಲೆ ಒತ್ತಡ ಹೇರಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ಮಾತನಾಡಿದ ವಿಧಾನ ಪರಿಷತ್ತಿನ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ನೂರ ಹತ್ತು ವರ್ಷಗಳ ಇತಿಹಾಸವಿರುವ ಸಾಹಿತ್ಯ ಪರಿಷತ್ತನ್ನ ಉಳಿಸಬೇಕಾಗಿದೆ. ಇದಕ್ಕಾಗಿ ಎಲ್ಲ ಸಾಹಿತಿಗಳು, ಸಾಹಿತ್ಯ ಪರಿಷತ್ತಿನ ಸದಸ್ಯರು ಒಂದಾಗಬೇಕು. ಸಾಹಿತ್ಯ ವಿರೋಧಿ ಹಾಗೂ ಮನುಷ್ಯ ವಿರೋಧಿ ವರ್ತನೆಯ ನಿರಂಕುಶ ಪ್ರಭುತ್ವ ಮನೋಭಾವದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಷಿ ಅಧಿಕಾರವಧಿಯ ಅವ್ಯವಹಾರಗಳ ಬಗ್ಗೆ ಸಮಗ್ರವಾದ ತನಿಖೆ ನಡೆಸಬೇಕು. ಅವರನ್ನು ಅಮಾನತ್ತಿನಲ್ಲಿಟ್ಟು ಆಡಳಿತಾಧಿಕಾರಿ ನೇಮಿಸಬೇಕು ಎಂದು ಮಂಡ್ಯದಿಂದ ಹೋರಾಟ ಶುರು ಮಾಡಲಾಗಿದೆ ಎಂದರು.

ಮೈಸೂರಿನ ಖಾಸಗಿ ಹೋಟೇಲ್‌ನಲ್ಲಿ ಸಾಹಿತಿಗಳು, ಪ್ರಾಧ್ಯಾಪಕರು, ಹೋರಾಟಗಾರರು ಸಭೆ ನಡೆಸಿ ಚರ್ಚಿಸಿದರು.

ಬೆಂಗಳೂರಿನಲ್ಲಿ ಎಲ್ಲ ಸಾಹಿತಿ ಮತ್ತು ಹೋರಾಟಗಾರರ ಒಡಗೂಡಿ ಜೋಷಿ ದುರಾಡಳಿತದ ವಿರುದ್ಧದ ಕ್ರಮಕ್ಕಾಗಿ ಮುಖ್ಯಮಂತ್ರಿಯವರಿಗೆ ಮನವಿ ನೀಡಲಾಗಿದೆ. ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರನ್ನು ಭೇಟಿ ಮಾಡಿ, ಸರಕಾರದ ಅನುದಾನದ ಅವ್ಯವಹಾರದ ಬಗ್ಗೆ ವಿವರಿಸಲಾಗಿದೆ. ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ನೀಡಿದ ಎರಡೂವರೆ ಕೋಟಿ ಹಣದ ಲೆಕ್ಕ ನೀಡದ ಬಗ್ಗೆ ಗಮನಕ್ಕೆ ತರಲಾಗಿದೆ ಎಂದು ಸಭೆಗೆ ತಿಳಿಸಿದರು.

ಇದೇ ತಿಂಗಳು 17 ರಂದು ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆಯಲಿರುವ 'ಕಸಾಪ ಉಳಿಸಿ ಜನಾಂದೋಲನ' ಹೋರಾಟಕ್ಕೆ ಹಳೇ ಮೈಸೂರು ಭಾಗದ ಸಾಹಿತಿಗಳು, ಕಸಾಪ ಸದಸ್ಯರು, ಕನ್ನಡಪರ ಸಂಘಟನೆಗಳು ಆಗಮಿಸಿ ಯಶಸ್ವಿಯಾಗಿಸಬೇಕೆಂದು ಮನವಿ ಮಾಡಿದರು.

ಹಿರಿಯ ಚಿಂತಕ ಎಸ್.ಎಸ್. ಗೋಪಿನಾಥ್ ಮಾತನಾಡಿ, ಮಹೇಶ್ ಜೋಷಿ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯಲು ಅನರ್ಹರು. ಇದರ ವಿರುದ್ಧದ ಹೋರಾಟಕ್ಕೆ ಹಿರಿಯ ಸಾಹಿತಿ ದೇವನೂರು ಮಹಾದೇವ ಅವರ ಬೆಂಬಲ ಕೋರೋಣ. ಮೈಸೂರಿನ ಸಾಹಿತಿಗಳು ಮತ್ತು ಪ್ರಗತಿಪರ ಹೋರಾಟಗಾರರನ್ನು ಮಂಡ್ಯದ ಸಮಾವೇಶಕ್ಕೆ ಕರೆತರುವುದಾಗಿ ಹೇಳಿ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಹಣ ದುರುಪಯೋಗ: ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಬಿ. ಜಯಪ್ರಕಾಶಗೌಡ ಮಾತನಾಡಿ, ಮಂಡ್ಯದ ಸಮ್ಮೇಳನದಲ್ಲಿ ಮಗ್ಗಿ ಪುಸ್ತಕದಂತಹ ಕೃತಿಗಳನ್ನು ಪ್ರಕಟ ಮಾಡಲಾಗಿದೆ. ಪರಿಷತ್ತಿನ ಬೈಲವನ್ನು ಮನಸ್ಸೋ ಇಚ್ಛೆ ತಿದ್ದುಪಡಿ ಮಾಡಲಾಗಿದೆ. ಅಧಿಕಾರವನ್ನು ತಮ್ಮೊಬ್ಬರಲ್ಲಿ ಕೇಂದ್ರೀಕರಿಸಿಕೊಳ್ಳುವ ಹುನ್ನಾರ ಅಡಗಿದೆ. ಜಿಲ್ಲಾಧ್ಯಕ್ಷರ ಮೇಲೆ ಸರ್ವಾಧಿಕಾರಿ ಮನೋಭಾವ ಪ್ರದರ್ಶಿಸಿದ್ದಾರೆ ಎಂದರು.

ಯಾರಾದರೂ ಲೆಕ್ಕ ಕೇಳಿದರೆ ನಿಮಗ್ಯಾಕೆ ಕೊಡಬೇಕು? ಯಾರಿಗೆ ಕೊಡಬೇಕು? ಯಾವಾಗ ಕೊಡಬೇಕು? ನನಗೆ ಗೊತ್ತಿದೆ. ಅವರಿಗೆ ಕೊಡುತ್ತೇನೆ ಎಂಬ ದಾಷ್ಟ್ಯದ ಉತ್ತರವನ್ನು ನೀಡುತ್ತಾರೆ. ಕಸಾಪ ಹಣವನ್ನು ನ್ಯಾಯಾಲಯದ ಪ್ರಕರಣಗಳಿಗೆ ಬಳಸುವ ಮೂಲಕ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.

ಮಹಾರಾಷ್ಟ್ರದ ಪುಂಡರು ಬೆಳಗಾವಿಯಲ್ಲಿ ತಂಟೆ ತೆಗೆದಾಗ ಜೋಷಿ ದನಿಯೆತ್ತಲಿಲ್ಲ. ಕನ್ನಡ ಭಾಷೆ ಶಿಕ್ಷಣದಲ್ಲಿ ಮತ್ತು ಆಡಳಿತದಲ್ಲಿ ಕಡಗಣಿಸಲ್ಪಟ್ಟಿದೆ. ಅದರ ವಿರುದ್ಧ ಮಾತನಾಡುತ್ತಿಲ್ಲ. ಪದವಿ ತರಗತಿಗಳಲ್ಲಿ ಕನ್ನಡಕ್ಕೆ ನೀಡುವ ಅವಧಿಗಳು ಕಡಿಮೆಯಾಗಿದೆ. ಆ ಬಗ್ಗೆಯೂ ಕೂಡ ಮೌನ ವಹಿಸಿದ್ದಾರೆ. ಹಾಗಾಗಿ ಮೇ 17ರಂದು ಮಂಡ್ಯದಲ್ಲಿ ಮೈಸೂರು ವಿಭಾಗ ಮಟ್ಟದ ಜನಾಂದೋಲನ ಹೋರಾಟವಿದೆ ಎಂದರು.

ಪ್ರಗತಿಪರರ, ಬಂಡಾಯ ಸಾಹಿತಿಗಳ ಬೆಂಬಲ

ತಮ್ಮ ಮೇಲಿನ ಆರೋಪಗಳೆಲ್ಲವನ್ನ ಸಾಕ್ಷಿ ಸಮೇತ ಸುಳ್ಳು ಎಂದು ಜೋಷಿ ಸಾಬೀತು ಮಾಡಲಿ ಎಂದು ಪ್ರೊ. ಜಯಪ್ರಕಾಶ್ ಗೌಡರು ಸವಾಲು ಹಾಕಿದರು. ಬೆಂಗಳೂರಿನ ಅನೇಕ ಸಾಹಿತಿಗಳು ಪ್ರತಿಭಟನೆ ಸಮಾವೇಶವನ್ನು ಬೆಂಬಲಿಸಿದ್ದಾರೆ. ಡಾ. ಬರಗೂರು ರಾಮಚಂದ್ರಪ್ಪ, ಡಾ.ಕೆ. ಮರುಳಸಿದ್ದಪ್ಪ, ಬಂಜೆಗೆರೆ ಜಯಪ್ರಕಾಶ್, ಜಾಣಗೆರೆ ವೆಂಕಟರಾಮಯ್ಯ, ಕೆ. ಎಸ್. ವಿಮಲ, ಪ್ರೊ.ಎಸ್.ಜಿ. ಸಿದ್ದಾರಾಮಯ್ಯ ಅವರ ಬೆಂಬಲವಿದೆ ಎಂದರು. ಸಭೆಯಲ್ಲಿ ಕರಾ ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ. ಎಸ್. ಎಸ್ . ರಾಮೇಗೌಡ, ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾ ಶೇಖರ್, ಹಿರಿಯ ಜಾನಪದ ವಿದ್ವಾಂಸ ಡಾ. ರಾಗೌ, ಚಿಂತಕ ಪ್ರೊ.ಕಾಳಚನ್ನೇಗೌಡ, ಕನ್ನಡ ಪ್ರಾಧ್ಯಾಪಕರಾದ ಡಾ.ಹೆಚ್.ಆರ್. ತಿಮ್ಮೇಗೌಡ, ಡಾ. ತ್ರಿವೇಣಿ, ಡಾ.ಪಿ. ಬೆಟ್ಟೇಗೌಡ, ಸಾಮಾಜಿಕ ಹೋರಾಟಗಾರ ಅರವಿಂದ ಶರ್ಮ, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಪತ್ರಕರ್ತರಾದ ಮಾ. ವೆಂಕಟೇಶ್, ಪ್ರಕಾಶ್ ಬಾಬು, ರಂಗಕರ್ಮಿ ಚಂದ್ರು ಮಂಡ್ಯ, ಸಾಹಿತಿಗಳಾದ ಸಾತನೂರು ದೇವರಾಜು, ಡಾ.ನೀ. ಗೂ. ರಮೇಶ್, ಜಯಪ್ಪ ಹೊನ್ನಾಳಿ, ಡಾ.ಬಿ. ಬಸವರಾಜು, ಯಶೋಧ ರಾಮಕೃಷ್ಣ, ಗಾಯಕಿ ಸುಗಂಧಮ್ಮ, ಮಂಡ್ಯ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ. ವೀರಪ್ಪ, ಡಾ. ಮೀರಾ ಶಿವಲಿಂಗಯ್ಯ, ಪುಣ್ಯಕೋಟಿ ಸಮಾಜ ಸೇವ ಟ್ರಸ್ಟಿನ ಅಧ್ಯಕ್ಷ ಹನುಮಂತೇಶ್, ಪರಿಸರವಾದಿ ಪರಶುರಾಮೇಗೌಡ ಉಪಸ್ಥಿತರಿದ್ದರು.

> ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಲ್ಲಿ ಕುಳಿತು ಭ್ರಷ್ಟಾಚಾರ ಎಸಗಿರುವ ಜೋಷಿಯ ವಿರುದ್ಧದ ಸೂಕ್ತ ಕ್ರಮಕ್ಕೆ ಒತ್ತಾಯಿಸಿ ಹೋರಾಟ ಮಾಡುವ ಜೊತೆಗೆ, ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿಗೆ ಗಡುವು ವಿಧಿಸಬೇಕು. ಆ ಗಡುವಿನಲ್ಲಿ ಕ್ರಮವಾಗದಿದ್ದರೆ ಉಗ್ರ ಹೋರಾಟ ಮಾಡೋಣ.
> – ತಜ್ಞ ಪ್ರೊ.ಪಿ.ವಿ. ನಂಜರಾಜ ಅರಸು, ಇತಿಹಾಸ ತಜ್ಞ

ಹೋರಾಟಕ್ಕೆ ದೇವನೂರು ಬೆಂಬಲ

ಸಭೆಯ ಬಳಿಕ ಹಿರಿಯ ಸಾಹಿತಿ ದೇವನೂರು ಮಹಾದೇವ ಅವರ ಮನೆಗೆ ಕನ್ನಡ ನಾಡು ನುಡಿ ಜಾಗೃತಿ ಸಮಿತಿಯ ನಿಯೋಗ ಭೇಟಿ ನೀಡಿ ಜೋಷಿಯವರ ದುರಾಡಳಿತದ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಪ್ರತಿಕ್ರಿಯಿಸಿದ ದೇವನೂರು ಅವರು, ಈ ಎಲ್ಲಾ ಬೆಳವಣಿಗೆಗಳು ಮಾಧ್ಯಮಗಳ ಮೂಲಕ ತಮಗೆ ಗೊತ್ತಿದೆ. ಆದ್ದರಿಂದ ನಿಮಗೆ ನನ್ನ ನೈತಿಕ ಬೆಂಬಲವಿದೆ. ಹೋರಾಟ ಮುಂದುವರಿಯಲಿ. ನಾನು ಕೂಡ ಈ ಬಗ್ಗೆ ಮುಖ್ಯಮಂತ್ರಿಯವರ ಜೊತೆ ಚರ್ಚಿಸಿ ಕ್ರಮ ಜರುಗಿಸಲು ಒತ್ತಾಯಿಸುವೆ ಎಂದರು.

ಬಂಟರ ಸಾಧನೆ ಅಪೂರ್ವ

ಮೈಸೂರಿನಲ್ಲಿ ಬಂಟರ ಸಂಘದ ಸ್ವರ್ಣ ಮಹೋತ್ಸವ ಸಮಾರಂಭವನ್ನು ಮಾಜಿ ಸಚಿವ ರಮಾನಾಥ ರೈ ಉದ್ಘಾಟಿಸಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಜಿ.ಟಿ.ದೇವೇಗೌಡ, ಬಂಟರ ಸಂಘದ ಅಧ್ಯಕ್ಷ ಟಿ.ಪ್ರಭಾಕರ್ ಶೆಟ್ಟಿ, ಇತರರು ಇದ್ದರು.

ಮೈಸೂರು: ಧರ್ಮದ ಬಗ್ಗೆ ಗೌರವ ಇರಬೇಕು ಆದರೆ, ಮತಾಂಧರಾಗಬಾರದು ಎಂದು ಮಾಜಿ ಸಚಿವ ರಮಾನಾಥ ರೈ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದ ಆಶಾ ಪ್ರಕಾಶ ಶೆಟ್ಟಿ ಬಂಟರ ಭವನದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಬಂಟರ ಸಂಘದ ಸ್ವರ್ಣ ಮಹೋತ್ಸವ ಹಾಗೂ ವಿನಯ ಮತ್ತು ಕೆ.ಸುಬ್ರಹ್ಮಣ್ಯ ರೈ ಬಯಲು ರಂಗ ಮಂದಿರ ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೋಮುವಾದಕ್ಕೆ ನನ್ನ ವಿರೋಧವಿದೆ. ಸಾಮರಸ್ಯದಿಂದ ಬದುಕುವುದು ನನಗೆ ಇಷ್ಟದ ಕೆಲಸ. ನನ್ನ ಸಾಮಾಜಿಕ ಬದುಕಿನಲ್ಲಿ ಎಲ್ಲ ಜಾತಿ, ಧರ್ಮ, ಭಾಷೆ ಜನತೆಗೆ ನಿಷ್ಠೆಯಿಂದ ಕೆಲಸ ಮಾಡಿದ್ದೇನೆ ಎಂದರು. ರಾಜಕಾರಣ ಬಹಳ ಕಷ್ಟವಿದೆ. ನಾನು ಸುಖದಲ್ಲಿ ಇದ್ದೆ ಎಂದು ಭಾವಿಸಿದ್ದಾರೆ. ಆದರೆ, ನಾನು ಎಂದಿಗೂ ಪರಿಸ್ಥಿತಿಗೆ ರಾಜೀ ಮಾಡಿಕೊಳ್ಳದೇ ಪ್ರಾಮಾಣಿಕವಾಗಿ ಕೆಲಸ ಮಾಡಿರುವ ತೃಪ್ತಿ ಇದೆ. ನನ್ನ ಸಮಾಜಕ್ಕೆ ಅಗೌರವ ತರುವ ಯಾವುದೇ ಒಂದು ಕೆಲಸ ಮಾಡಿಲ್ಲ ಎಂದು ಹೇಳಿದರು. ಮೈಸೂರಿನ ಕಡಿಮೆ ಸಂಖ್ಯೆ ಇರುವ ಬಂಟರು ದೊಡ್ಡ ಸಾಧನೆ ಮಾಡಿದ್ದಾರೆ. ಪಾರಂಪರಿಕ ಮೌಲ್ಯ ಕಾಣುವ ಮಾದರಿಯಲ್ಲಿ ಬೃಹತ್ ಭವನ ನಿರ್ಮಾಣ ಮಾಡಿರುವುದು ಅಪೂರ್ವ ಸಾಧನೆ. ಮೈಸೂರು ಬಂಟರ್ ಸಂಘಕ್ಕೂ ನನಗೂ ಸಾಕಷ್ಟು ಋಣಾನು ಬಂಧವಿದೆ ಎಂದರು. ರಾಜೀವ ಗಾಂಧಿ ವಿವಿ ವಿಶ್ರಾಂತ ಕುಲಪತಿ ಡಾ.ಎಸ್.ಚಂದ್ರಶೇಖರ ಶೆಟ್ಟಿ ಮಾತನಾಡಿದರು.ವಿವಿಧ ಕ್ಷೇತ್ರದ ಸಾಧಕರಾದ ಡಾ.ಎಸ್.ರಮಾನಂದ ಶೆಟ್ಟಿ, ಆದಾಯ ತೆರಿಗೆ ಇಲಾಖೆ ಉಪ ಆಯುಕ್ತ ಅಧಿಕಾರಿ ನಿವ್ಯಾ ಪಿ.ಶೆಟ್ಟಿ, ಉದ್ಯಮಿ ರಾಜೇಶ್ ಶೆಟ್ಟಿ, ನಟರಾದ ಪ್ರಮೋದ್ ಶೆಟ್ಟಿ, ಶೈನ್ ಶೆಟ್ಟಿ, ರಣಜಿ ಆಟಗಾರ ಅಭಿಲಾಷ್ ಶೆಟ್ಟಿಗೆ ಅಭಿನಂದಿಸಲಾಯಿತು.

ಸಾಧಕರನ್ನ ಸಮಾಜ ಎಂದೂ ಮರೆಯಲ್ಲ

ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ | ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ

ಮೈಸೂರು: ಸಮಾಜಕ್ಕೆ ಅರ್ಪಿಸಿಕೊಂಡವರನ್ನು ಜನ ಯಾವತ್ತೂ ಮರೆಯುವುದಿಲ್ಲ, ಸದಾ ಸ್ಮರಿಸುತ್ತಿರುತ್ತಾರೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಹೇಳಿದರು.

ಚಾಮರಾಜನಗರ ರಂಗವಾಹಿನಿ, ಡಾ. ರಾಮ ಮನೋಹರ ಲೋಹಿಯಾ ಟ್ರಸ್ಟ್ ವತಿಯಿಂದ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಏರ್ಪಡಿಸಿದ್ದ ಮುಳ್ಳೂರು ನಾಗರಾಜ ರಾಜ್ಯ ಮಟ್ಟದ ಕಾವ್ಯ ಪ್ರಶಸ್ತಿ ಪ್ರದಾನ, ರಾಜಶೇಖರ ಕೋಟಿ ನೆನಪು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೇವಲ ಸಂಸಾರಕ್ಕೆ ಸೀಮಿತರಾದವರನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಕೆಲವರು ಸಾಧಕರಿರುತ್ತಾರೆ. ಮತ್ತೆ ಕೆಲವರು ಸಮಯ ಸಾಧಕರು ಇರುತ್ತಾರೆ. ಸಾಧಕರು ಅವರಿಗೋಸ್ಕರ ಬದುಕುವುದಿಲ್ಲ, ಸಮಾಜಗೋಸ್ಕರ ಬದುಕುತ್ತಾರೆ ಎಂದು ಅವರು ಹೇಳಿದರು.

ಮುಳ್ಳೂರು ನಾಗರಾಜ ಅವರು ಸರಕಾರಿ ಕೆಲಸವನ್ನು ತಿರಸ್ಕರಿಸಿ, ಸಮಾಜಕ್ಕೆ ಅರ್ಪಿಸಿಕೊಂಡವರು. ತಮ್ಮ ಸಾಹಿತ್ಯದ ಮೂಲಕ ದಲಿತ ಸಂಘರ್ಷ ಸಮಿತಿಯ ಹೋರಾಟಕ್ಕೆ ಜೀವ ತುಂಬಿದವರು. ಕೋಟಿ ಅವರು ಪತ್ರಿಕೋದ್ಯಮದ ಮೂಲಕ ಎಲ್ಲಾ ಹೋರಾಟಗಳಿಗೆ ಪ್ರೋತ್ಸಾಹ ನೀಡಿದಂಥವರು ಎಂದು ಅವರು ಸ್ಮರಿಸಿದರು.

ಎಪ್ಪತ್ತರ ದಶಕದ ಅಖಂಡ ದಲಿತ ಚಳವಳಿಯನ್ನು ಪ್ರಪಂಚದ ಬೇರೆ ಯಾವುದೇ ಚಳವಳಿಗೆ ಹೋಲಿಸಲಾಗದು. ಅಷ್ಟರಮಟ್ಟಿಗೆ ಆ ಚಳವಳಿ ಪ್ರಾಮಾಣಿಕತೆಯಿಂದ, ತಲ್ಲೀನತೆಯಿಂದ ಕೂಡಿತ್ತು. ವೇದನೆ- ನಿವೇದನೆ ಇತ್ತು. ಜೀವಂತಿಕೆ ಇತ್ತು. ಅಷ್ಟೊಂದು ಅಂತಃಶಕ್ತಿ ಇತ್ತು. ಎಲ್ಲಿಯೇ ದೌರ್ಜನ್ಯ ನಡೆದರೂ ಪ್ರತಿಭಟಿಸಲಾಗುತ್ತಿತ್ತು. ದಲಿತೇತರರು ಕೂಡ ಆ ಹೋರಾಟದ ನೆರಳಿನಲ್ಲಿ ನೆಮ್ಮದಿಯಿಂದ ಇದ್ದರು ಎಂದು ಅವರು ಹೇಳಿದರು.



ಚಾಮರಾಜನಗರ ರಂಗವಾಹಿನಿ, ಡಾ. ರಾಮ ಮನೋಹರ ಲೋಹಿಯಾ ಟ್ರಸ್ಟ್ ವತಿಯಿಂದ ಕಾವ್ಯ ಪ್ರಶಸ್ತಿ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಮುಳ್ಳೂರು ನಾಗರಾಜ ಅವರ ಕೊಡುಗೆ ಸ್ಮರಿಸಿ ನಂಜನಗೂಡಿನ ಪ್ರಮುಖ ರಸ್ತೆಗೆ ಅವರ ಹೆಸರಿಡಲಾಗಿದೆ ಎಂದರು. ಕೋಟಿಯವರು ಪತ್ರಿಕೆಯ ಜೊತೆಗೆ ಕ್ರೀಡೆಗೆ ಉತ್ತೇಜನ ನೀಡುತ್ತಿದ್ದರು. ಜನರ ಧ್ವನಿಯಾಗಿ ಕೆಲಸ ಮಾಡಿದರು ಎಂದರು.

ಮುಳ್ಳೂರು ನಾಗರಾಜ ಅವರನ್ನು ಕುರಿತು ಕಲಬುರಗಿ ಕೇಂದ್ರೀಯ ವಿವಿ ಪ್ರಾಧ್ಯಾಪಕ ಡಾ.ಅಪ್ಪಗೆರೆ ಸೋಮಶೇಖರ್, ರಾಜಶೇಖರ ಕೋಟಿ ಅವರನ್ನು ಕುರಿತು ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು. ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿ ಪುರಸ್ಕೃತರಾದ ಎಸ್.ಎಸ್. ಚಾಂದ್ ಪಾಷ, ಪಿ. ನಂದಕುಮಾರ್ ಮಾತನಾಡಿ, ಕೃತಜ್ಞತೆ ಸಲ್ಲಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಜಂಟಿ ನಿರ್ದೇಶಕಿ ಲಕ್ಷ್ಮಮ್ಮ, ರಂಗಕರ್ಮಿ ಕೆ.ಆರ್. ಗೋಪಾಲಕೃಷ್ಣ, ನಂಜನಗೂಡು ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಮುಖ್ಯ ಅತಿಥಿಗಳಾಗಿದ್ದರು. ರಂಗವಾಹಿನಿ ಅಧ್ಯಕ್ಷ ಸಿ.ಎಂ. ನರಸಿಂಹಮೂರ್ತಿ ಪ್ರಾಸ್ತಾವಿಕ ಭಾಷಣ ಮಾಡಿದರು. ಸಂಚಾಲಕ ರೂಬಿನ್ ಸಂಜಯ್, ಪತ್ರಕರ್ತ ಮುಳ್ಳೂರು ರಾಜು ನಿರೂಪಿಸಿದರು.ನಂತರ ಹನೂರು ಚನ್ನಪ್ಪ ರಚನೆಯ 'ಬೆಲ್ಲದ ದೋಣಿ' ನಾಟಕ ಪ್ರದರ್ಶನ ನಡೆಯಿತು.

ಕೊಪ್ಪ ಗ್ರಾಪಂ ನೂತನ ಅಧ್ಯಕ್ಷರಾಗಿ ಸಂತೋಷ್

ಮದ್ದೂರು: ಮದ್ದೂರು ತಾಲೂಕಿನ ಕೊಪ್ಪ ಗ್ರಾಪಂಗೆ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಸಂತೋಷ್ ಕೊಟ್ಟಿಗೆಯರ್ ಅವಿರೋಧವಾಗಿ ಆಯ್ಕೆಯಾಗಿ ದ್ದಾರೆ. ಹಿಂದಿನ ಅಧ್ಯಕ್ಷ ಕೆ.ಪಿ.ರುದ್ರೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ನಿಗದಿಯಾಗಿದ್ದ ಚುನಾವಣೆ ವೇಳೆ ಸಂತೋಷ್ ಕೊಟ್ಟಿಗೆಯಾರ್ ಅವರನ್ನು ಹೊರತುಪಡಿಸಿ ಬೇರಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ತಾಪಂ ಇಒ ರಾಮಲಿಂಗಯ್ಯ ಅವಿರೋಧ ಆಯ್ಕೆ ಪ್ರಕಟಿಸಿದರು. ನೂತನ ಅಧ್ಯಕ್ಷರನ್ನು ಗ್ರಾಪಂ ಸದಸ್ಯರು, ಸ್ಥಳೀಯ ಮುಖಂಡರು ಅಭಿನಂದಿಸಿ ಗೌರವಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ಸಂತೋಷ್, ಸದಸ್ಯರಿಗೆ, ಸ್ಥಳೀಯ ಮುಖಂಡರಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು ಹಾಗೂ ಇನ್ನಿತರ ಮೂಲ ಸೌಲಭ್ಯ ಕಲ್ಪಿಸಲು ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಹೇಳಿದರು. ಕೇಂದ್ರ ಮತ್ತು ರಾಜ್ಯ ಸರಕಾರದಿಂದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಪ್ರಾಮಾಣಿಕ ಯತ್ನ ನಡೆಸುವುದಾಗಿ ಜತೆಗೆ ಪಂಚಾಯಿತಿಯಲ್ಲಿ ಸಿಗುವ ಎಲ್ಲಾ ರೀತಿಯ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಭರವಸೆ ನೀಡಿದರು.



ಕೊಪ್ಪ ಗ್ರಾಪಂಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಂತೋಷ್ ಕೊಟ್ಟಿಗೆಯಾರ್ ಅವರನ್ನು ಗ್ರಾಪಂ ಸದಸ್ಯರು ಮುಖಂಡರು ಅಭಿನಂದಿಸಿದರು.

ಗ್ರಾಪಂ ಉಪಾಧ್ಯಕ್ಷೆ ಸಾವಿತ್ರಮ್ಮಸುರೇಶ್, ಸದಸ್ಯರಾದ ಟಿ.ಎಸ್.ಉಮಾ, ಕವಿತಾ ಕೆ.ಎಸ್ .ನವೀನ್, ಸಿ.ಪಿ.ಜ್ಯೋತಿ, ಕೆ.ಸಿ.ಗಿರೀಶ್, ಜಯಶೀಲ, ಎಚ್.ಜಿ.ಯೋಗಾನಂದ, ಶಭಾನ, ಕುಮಾರ್‌ಕೊಪ್ಪ, ಕೆ.ಎಂ.ಪರ್ವಿಜ್, ಜಿ.ವಿಜಯಕುಮಾರಿ, ಬಿ.ಸಿ. ಸುರೇಶ, ಜೋಗಿಗೌಡ, ಜಯಲಕ್ಷ್ಮಿ, ಎಚ್.ಜಿ. ಮಮತಾ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಸಿ.ಜೋಗಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಎನ್.ದಿವಾಕರ್, ಗ್ರಾಪಂ ಮಾಜಿ ಸದಸ್ಯ ಅಂಕೇಗೌಡ, ಮುಖಂಡರಾದ ಕೆ.ಜೆ. ಕೃಷ್ಣೇಗೌಡ, ಫೈನಾನ್ಸ್ ರಮೇಶ್, ಕೆ.ಟಿ.ಬಾಬು, ಕೆ.ಎಸ್ .ಪುಟಸ್ವಾಮಿ, ಬಿ.ಎಂ.ರವಿ, ಎಚ್.ಜಿ.ರಾಮಚಂದ್ರು, ಸುಧಾರಾಮು, ಶಿವಲಿಂಗ ಹಾಜರಿದ್ದರು.

ತಲ ಕಾವೇರಿಯ ಸನ್ನಿಧಿಯಲ್ಲಿ ಅತಿರುದ್ರ, ಜಪಯಜ್ಞ ಆರಂಭ

ಮಡಿಕೇರಿ: ಲೋಕಕಲ್ಯಾಣಾರ್ಥವಾಗಿ 11 ದಿನಗಳ ಕಾಲ ನಡೆಯುವ ಅತಿರುದ್ರ ಜಪಯಜ್ಞ ಕಾವೇರಿ ನದಿಯ ಉಗಮ ಸ್ಥಾನ ತಲಕಾವೇರಿ ಸನ್ನಿಧಿಯಲ್ಲಿ ದೇವಾಲಯದ ಪ್ರಧಾನ ಅರ್ಚಕ ವೇ.ಬ್ರ.ಪ್ರಶಾಂತ್ ಆಚಾರ್ಯ ಅವರ ನೇತೃತ್ವದಲ್ಲಿ ಆರಂಭಗೊಂಡಿತು.

ಅರುಣೋದಯ ವೇಳೆ ಮಹಾಗಣಪತಿ ಹೋಮ ನೆರವೇರಿತು. ಕ್ಷೇತ್ರದ ತಕ್ಕರಾದ ಕೋಡಿ ಮೋಟಯ್ಯ ಅವರು ಅತಿರುದ್ರ ಜಪಯಜ್ಞದ ಯಶಸ್ಸಿಗಾಗಿ ಪ್ರಾರ್ಥಿಸಿದರು. ರುದ್ರ ದೇವರ ಕೃಪಾಶೀರ್ವಾದವು ಲೋಕಕ್ಕೆ ಲಭಿಸಲಿ, ಪ್ರಸ್ತುತ ಎದುರಾಗಿರುವ ಭಾರತ ಮತ್ತು ಪಾಕಿಸ್ತಾನ ಬಿಕ್ಕಟ್ಟು ಶಾಂತವಾಗಲಿ. ಉಗ್ರರಿಂದ ಹತ್ಯೆಗೊಳಗಾದವರಿಗೆ ಸದ್ಗತಿ ಸಿಗಲಿ ಎಂದು ಪ್ರಾರ್ಥಿಸಿದರು.

ಜಪಯಜ್ಞ ಸಮಿತಿಯ ಗೌರವಾಧ್ಯಕ್ಷ ಮಿತ್ತೂರು ಈಶ್ವರ ಭಟ್ ಮಾತನಾಡಿ, ಈ ಜಪಯಜ್ಞ ಮುಂದಿನ ಮೇ 21 ರವರೆಗೆ



ನಡೆಯಲಿದೆ. ಮೇ 19 ರಂದು ಮಡಿಕೇರಿಯ ಲಕ್ಷ್ಮೀನರಸಿಂಹ ಕಲ್ಯಾಣ ಮಂಟಪದಲ್ಲಿ ರುದ್ರ ಹೋಮ ಹಾಗೂ ಮೇ 21 ರಂದು ಕಣಿವೆಯ ರಾಮಲಿಂಗೇಶ್ವರ ದೇಗುಲದಲ್ಲಿ ಚಂಡಿಕಾ ಹೋಮ ನೆರವೇರಲಿದೆ ಎಂದರು.

ಸಮಿತಿಯ ಕಾರ್ಯಾಧ್ಯಕ್ಷ ರಮೇಶ್ ಹೊಳ್ಳ ಮಾತನಾಡಿ ರುದ್ರಜಪಯಜ್ಞವು ತಲಕಾವೇರಿ ಕೈಲಾಸ ಆಶ್ರಮದಲ್ಲಿ ನಡೆಯಲಿದ್ದು, ಸರ್ವರು ಸಹಕರಿಸುವಂತೆ ಕೋರಿದರು. ಸಮಿತಿಯ ಸಂಚಾಲಕ ಉದಯ ಕುಮಾರ್, ಸಂಪತ್ ಕುಮಾರ್, ಬಿ.ಸಿ. ದಿನೇಶ್, ಅರ್ಚಕ ಗುರುರಾಜ್ ಆಚಾರ್, ರವಿ ರಾಮಾನುಜಮ್ ಹಾಜರಿದ್ದರು.

ಗಡಿ ಜಿಲ್ಲೆಯ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ

ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಮಹಿಳಾ ಉಚಿತ ಹಾಸ್ಟೆಲ್‌ಗೆ ಭೂಮಿಪೂಜೆ

ಚಾಮರಾಜನಗರ: ರಾಜ್ಯದ ದಕ್ಷಿಣ ಭಾಗದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ ಎಂದು ದಾವಣಗೆರೆ ಕ್ಷೇತ್ರದ ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ನಗರ ಸಮೀಪದ ಕರಿನಂಜನಪುರದ ಬಳಿ ಶರಣೆ ಅಕ್ಕ ಮಹಾದೇವಿ ವಿದ್ಯಾರ್ಥಿನಿಯರ ಹಾಗು ಮಹಿಳಾ ಅಭಿವೃದ್ಧಿ ಟ್ರಸ್ಟ್ ವತಿಯಿಂದ ಗುಬ್ಬಿ ತೋಟದಪ್ಪನವರ ವೀರಶೈವ ಲಿಂಗಾಯತ ಮಹಿಳಾ ಉಚಿತ ವಿದ್ಯಾರ್ಥಿನಿ ಲಯದ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗುಬ್ಬಿ ತೋಟದಪ್ಪ ಉಚಿತ ವಿದ್ಯಾರ್ಥಿನಿಲಯ ಆರಂಭಿಸಿ, ಭವಿಷ್ಯ ರೂಪಿಸುತ್ತಿರುವ ಟ್ರಸ್ಟ್‌ನ ಸೇವಾ ಕಾರ್ಯ ಪ್ರಶಂಸನೀಯ. ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ಶಾವನೂರು ಕುಟುಂಬದಿಂದ ಸಂಪೂರ್ಣ ಸಹಕಾರ ನೀಡಲಾಗುತ್ತದೆ ಎಂದರು.

2006ರಿಂದಲೇ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಸ್ಟೆಲ್ ಆರಂಭಿಸಿ, ಉಚಿತ ವಸತಿ, ಊಟದ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಅವರಿಗೆ ಉನ್ನತ ಶಿಕ್ಷಣವನ್ನು ಕೊಡಿಸಿ, ಸ್ವಾವಲಂಬನೆ ಬದುಕು ರೂಪಿಸಿ ಕೊಳ್ಳಲು ಎಲ್ಲಾ ರೀತಿಯ ಸಹಕಾರ



ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಭೂಮಿಪೂಜೆ ಸಮಾರಂಭವನ್ನು ಉದ್ಘಾಟಿಸಿದರು.

ನೀಡುತ್ತಿರುವ ಸಂಸ್ಥೆಯ ಕಾರ್ಯಕ್ಕೆ ಅಭಾರಿಯಾಗಿದ್ದೇನೆ ಎಂದರು.

ಈ ಸಂಸ್ಥೆಯ ಸ್ವಂತ ಕಟ್ಟಡ ನಿರ್ಮಿಸುವ ಕಾರ್ಯದಲ್ಲಿ ನಾನು ಭಾಗವಹಿಸಿರುವುದು ಹೆಮ್ಮೆ ತಂದಿದೆ. ಅಕ್ಕಮಹಾದೇವಿ ಟ್ರಸ್ಟ್ ನ ಸದಸ್ಯರು ನನ್ನನ್ನು ಭೇಟಿಯಾಗಿ ಚಾಮರಾಜನಗರಕ್ಕೆ ಆಹ್ವಾನಿಸಿದಾಗ ಬಹಳ ಸಂತೋಷವಾಯಿತು. ಸುತ್ತೂರುಶ್ರೀಗಳ ನೇತೃತ್ವದಲ್ಲಿ ನಿಮ್ಮೆಲ್ಲರನ್ನು ನೋಡುವ ಭಾಗ್ಯ ನನ್ನದಾಗಿದೆ. ಮಹಿಳೆ ಯರು ಸುಶಿಕ್ಷಿತರಾದಾಗ ಕುಟುಂಬ ಪ್ರಗತಿಯಾ ಗುತ್ತದೆ. ಈಗ ನಮ್ಮ ಕಾಂಗ್ರೆಸ್ ಸರಕಾರ ಕುಟುಂಬದ ಪ್ರತಿ ಮಹಿಳೆಗೆ 2 ಸಾವಿರ ಗೃಹಲಕ್ಷ್ಮೀ ನೀಡುತ್ತಿದೆ. ಇದು ಬಹಳಷ್ಟು ಕುಟುಂಬ ಗಳು ಆರ್ಥಿಕ ಸಬಲತೆ ಕಾಣಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿದೇಶಿ ಕೇಂದ್ರಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ಗುಬ್ಬಿ ತೋಟದಪ್ಪ ಅವರು ಮಾಡಿರುವ ಸೇವೆ ಚಿರಸ್ಥಾಯಿಯಾಗಿದೆ. ಅವರು ಅಂದೇ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹಾಸ್ಟೆಲ್‌ಗಳನ್ನು ಆರಂಭಿಸಿದ್ದರು. ಮೈಸೂರು ಮಹಾರಾಜರಿಗೆ 1 ಲಕ್ಷ ರೂ. ದೇಣಿಗೆ ನೀಡಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವಂತೆ ತಿಳಿಸಿದ್ದರು. ಅವರ ದಾನವನ್ನು ಪ್ರಶಂಸಿಸಿದ ಅಂದಿನ ಮೈಸೂರು ಒಡೆಯರು ಅವರಿಗೆ 'ರಾವ್ ಬಹದ್ದೂರ್' ಎಂದು ಬಿರುದುಕೊಟ್ಟರು ಎಂದರು.

ಟ್ರಸ್ಟ್‌ನ ಅಧ್ಯಕ್ಷ ಕಾಳನಹುಂಡಿ ಗುರುಸ್ವಾಮಿ ಪ್ರಸ್ತಾ ವಿಕವಾಗಿ ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ವ್ಯವಸ್ಥಿತ ಹಾಸ್ಟೆಲ್‌ಗೆ 17 ಗುಂಟೆ ಜಾಗವನ್ನು ಪಿ. ವಿಜಯಾಂಬ ಎಚ್.ಜಿ. ಕುಮಾರಸ್ವಾಮಿ ಹಾಗೂ ರೂಪ ಎಚ್.ಜಿ. ಮಹದೇವಪ್ರಸಾದ್ ದಾನ ನೀಡಿದ್ದಾರೆ ಎಂದರು.

ಗುಬ್ಬಿ ತೋಟದಪ್ಪ ವಿದ್ಯಾರ್ಥಿನಿಲಯದ ರಾಜ್ಯಾಧ್ಯಕ್ಷ ರೇವಣ್ಣಸಿದ್ದಯ್ಯ ಮಾತನಾಡಿದರು.

ವೇದಿಕೆಯಲ್ಲಿ ಮರಿಯಾಲ ಮಠದ ಶ್ರೀಇಮ್ಮಡಿ ಮುರುಘರಾಜೇಂದ್ರಸ್ವಾಮೀಜಿ, ಶ್ರೀಚನ್ನಬಸವಸ್ವಾಮೀಜಿ, ಶಾಸಕ ಸಿ. ಪುಟ್ಟರಂಗಶೆಟ್ಟಿ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ನಗರಸಭೆ ಅಧ್ಯಕ್ಷ ಸುರೇಶ್, ಪೌರಾಯುಕ್ತ ರಾಮದಾಸ್, ಉದ್ಯಮಿ ನಿಶಾಂತ್, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ನಗರಸಭಾ ಸದಸ್ಯ ಮನೋಜ್ ಪಟೇಲ್, ನಿವೇಶನ ದಾನಿಗಳಾದ ಪಿ. ವಿಜಯಾಂಬ ಮತ್ತು ಎಚ್.ಜಿ. ಕುಮಾರಸ್ವಾಮಿ ಇದ್ದರು.

ಮಾಜಿ ಶಾಸಕ ಮಹದೇವ್ ಹುಟ್ಟು ಹಬ್ಬ ಆಚರಣೆ

ಪಿರಿಯಾಪಟ್ಟಣ: ಮಾಜಿ ಶಾಸಕ ಕೆ.ಮಹದೇವ್ ರವರ ಹುಟ್ಟು ಹಬ್ಬವನ್ನು ಅವರ ನಿವಾಸದಲ್ಲಿ ಅಭಿಮಾನಿಗಳು, ಕಾರ್ಯಕರ್ತರು ಸರಳವಾಗಿ ಆಚರಿಸಿದರು. ಈ ವೇಳೆ ಮಾತನಾಡಿದ ಮಾಜಿ ಶಾಸಕ ಕೆ. ಮಹದೇವ್, ಈ ವರ್ಷ

ರೈತರಿಗೆ ಉತ್ತಮ ಮಳೆ ಬೆಳೆಯಾಗಿ ರೈತರ ಜೀವನ ಹಸನಾಗಬೇಕು. ಅಲ್ಲದೇ ದೇಶ ಸಂಕಷ್ಟದ ಪರಿಸ್ಥಿತಿಯಲ್ಲಿದ್ದು ಯುದ್ಧದಲ್ಲಿ ಮಡಿದ ಹುತಾತ್ಮ ಯೋಧರ ಆತ್ಮಕ್ಕೆ ಶಾಂತಿ ದೊರಕಬೇಕು. ಜಾತಿ ಧರ್ಮ ಮೀರಿ ದೇಶದ ಪರವಾಗಿ ಪ್ರತಿಯೊಬ್ಬರು ಧ್ವನಿ ಎತ್ತಬೇಕು. ರಾಜಕೀಯದಲ್ಲಿ ಸೋಲು ಗೆಲುವು ಸಾಮಾನ್ಯ. ಆದರೆ ಕಾರ್ಯಕರ್ತರು ತೋರುತ್ತಿರುವ ಅಭಿಮಾನ ಪ್ರೀತಿಗೆ ನಾನು ಎಂದು ಚಿರಋಣಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮೈಮುಲ್ ಮಾಜಿ ಅಧ್ಯಕ್ಷ ಪಿಎಂ ಪ್ರಸನ್ನ, ಪುರಸಭೆ ಅಧ್ಯಕ್ಷ ಪ್ರಕಾಶ್ ಸಿಂಗ್, ಮಾಜಿ ಪುರಸಭೆ ಅಧ್ಯಕ್ಷರಾದ ಮಂಜುನಾಥ ಸಿಂಗ್,ಕೆ.ಮಹೇಶ್,ಪುರಸಭೆ ಸದಸ್ಯ ಕೃಷ್ಣ, ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಪ್ರೀತಿ ಅರಸ್, ಮುಖಂಡರಾದ ಅಪೂರ್ವಮೋಹನ್,ಮಲ್ಲಿಕಾರ್ಜುನ್, ಉಮೇಶ್, ಸಿಂಧೂ,ಪುಟ್ಟರಾಜ ಇದ್ದರು.

ಸಮಾಚಾರ ಸಣ್ಣದಲ್ಲ

ಜಾನಪದ ಪರಿಷತ್ ಗೆ ಮೋಹನ್ ಜಿಲ್ಲಾಧ್ಯಕ್ಷ

ತುಮಕೂರು: ಕರ್ನಾಟಕ ಜಾನಪದ ಪರಿಷತ್ತಿನ ತುಮಕೂರು ಜಿಲ್ಲಾ ಘಟಕಕ್ಕೆ ಅಧ್ಯಕ್ಷರಾಗಿ ಜಾನಪದ ಗಾಯಕ ಎನ್. ಮೋಹನ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಗ್ರಾಮೀಣ ಜನಪದ ಸಂಸ್ಕೃತಿಯನ್ನು ಬಳಸಿ, ಉಳಿಸಿ, ಬೆಳೆಸಿ, ಪಸರಿಸುವಲ್ಲಿ ಮೋಹನ್ ಸಕ್ರಿಯವಾಗಿದ್ದು ಜಿಲ್ಲೆಯಲ್ಲಿ ಜಾನಪದ ಕ್ಷೇತ್ರವನ್ನು ಸದೃಢಗೊಳಿಸಲು ಕಾರ್ಯೋನ್ಮುಖರಾಗುವಂತೆ ಸೂಚಿಸಿ ನೇಮಕ ಮಾಡಲಾಗಿದೆ ಎಂದು ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಪ್ರೊ ಹಿ.ಚಿ.ಬೋರಲಿಂಗಯ್ಯ, ಮ್ಯಾನೇಜಿಂಗ್ ಟ್ರಸ್ಟ್ ಆದಿತ್ಯ ನಂಜರಾಜ್ ತಿಳಿಸಿದ್ದಾರೆ.

ಬೈಕಿಗೆ ಕಾರು ಡಿಕ್ಕಿ : ಒಬ್ಬನ ಸಾವು

ನಾಗಮಂಗಲ: ತಾಲೂಕಿನ ಬೆಂಗಮಂಗಲ ಮತ್ತು ಅಂಚೆಭೂವನಹಳ್ಳಿ ಸಮೀಪ ಚಾಮರಾಜನಗರ – ಜೇವರ್ಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ವೇಗವಾಗಿ ಬಂದ ಕಾರು ಬೈಕ್‌ಗೆ ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬ ಮೃತಪಟ್ಟ ಘಟನೆ ಭಾನುವಾರ ಸಂಜೆ ನಡೆದಿದೆ. ಮುಳಕಟ್ಟೆ ಗ್ರಾಮದಲ್ಲಿ ಅಡುಗೆ ಕೆಲಸಕ್ಕೆ ಬಂದಿದ್ದ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಸಿ.ಎಸ್.ಪುರ ಗ್ರಾಮದ ರಾಮೇಗೌಡ(45) ಮೃತವ್ಯಕ್ತಿ. ಡಿಕ್ಕಿ ಹೊಡೆದ ರಭಸಕ್ಕೆ ಬೈಕ್‌ನಿಂದ ಬಿದ್ದು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಅಲ್ಲದೇ ಬೈಕ್‌ನಲ್ಲಿದ್ದ ಮತ್ತೊಬ್ಬನಿಗೂ ಗಂಭೀರ ಗಾಯಗಳಾಗಿವೆ. ಸ್ಥಳೀಯರು ಗಾಯಾಳುವನ್ನು ಬಿ.ಜಿ.ನಗರದ ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಚಿಂತಾಮಣಿ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಸಪ್ತಗಿರಿ ಆಸ್ಪತ್ರೆ ಆಶ್ರಯದಲ್ಲಿ ಚೌಡರೆಡ್ಡಿಪಾಳ್ಯದಲ್ಲಿ ನಡೆದ ಉಚಿತ ಹೃದಯ ರೋಗ, ನರ ರೋಗ,ಕ್ಯಾನ್ಸರ್,ಮೂತ್ರ ಪಿಂಡದ ಕಲ್ಲು ಕಾಯಿಲೆಗಳ ತಪಾಸಣಾ ಶಿಬಿರ ಯಶಸ್ವಿಗೊಂಡಿತು. ನಗರದ ವಿವಿಧ ಭಾಗಗಳಿಂದ ಮಹಿಳೆಯರು, ಪುರುಷರು ತಪಾಸಣೆಗಳನ್ನು ಮಾಡಿಸಿದರು.ಎಸ್‌ಡಿಪಿಐ ಅಧ್ಯಕ್ಷ ಅನ್ಸರ್ ಪಾಷಾ ಮಾತನಾಡಿ, ನಾವು ಆರೋಗ್ಯ ಲೆಕ್ಕಿಸದೆ ದುಡಿಯುತ್ತೇವೆ. ಆದರೆ ಆರೋಗ್ಯ ಕೈಕೊಟ್ಟಾಗ ದುಡಿದ ಹಣ ಒಯ್ದು ಸುರಿಯುತ್ತೇವೆ. ಅಧಿಕ ರಕ್ತದೊತ್ತಡ,ಸಕ್ಕರೆ ಕಾಯಿಲೆ, ಹೃದಯಾಘಾತದಂತಹ ರೋಗಗಳು ಹೆಚ್ಚುತ್ತಿವೆ. ಆರೋಗ್ಯದತ್ತ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಎಂದರು. ಜಿಲ್ಲಾ ಸಮಿತಿಯ ಸದಸ್ಯ ಮನ್ಸೂರ್ ಪಾಷಾ,ಅಬ್ದುಲ್ ರಬ್,ರಂಜಾನ್,ರಾಮಾಂಜಿ ಇದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಕೋಲಾರ: ಮಾಲೂರು ತಾಲ್ಲೂಕಿನ ಹಿರಿಯ ಮುತ್ಸದ್ದಿ ರಾಜಕಾರಣಿ, ಎರಡು ಬಾರಿ ಮಾಲೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಸೇವೆ ಸಲ್ಲಿಸಿದ ಹೆಚ್. ವಿ. ದ್ಯಾವೀರಪ್ಪ ಅವರ ಸವಿನೆನಪಿನಲ್ಲಿ ಸಮಾಜ ಸೇವಕರಾದ ಹೂಡಿ ವಿಜಯ್ ಕುಮಾರ್ ರವರ ನೇತೃತ್ವದಲ್ಲಿ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಯ ನುರಿತ ವೈದ್ಯರಿಂದ ಬೃಹತ್ ಆರೋಗ್ಯ ಶಿಬಿರ ಮಾಲೂರಿನ ದೊಡ್ಡಕಡತೂರು ಗ್ರಾಮದಲ್ಲಿ ನಡೆಯಿತು. ಶಿಬಿರದಲ್ಲಿ ನೂರಾರು ಜನತೆಗೆ ಆರೋಗ್ಯ ತಪಾಸಣೆ ನಡೆಸುವ ಜತೆಗೆ ರೋಗಿಗಳು ಉಚಿತವಾಗಿ ಚಿಕಿತ್ಸೆ ಪಡೆದುಕೊಂಡರು. ಅಗತ್ಯ ಔಷಧಗಳನ್ನು ರೋಗಿಗಳಿಗೆ ನೀಡಲಾಯಿತಲ್ಲದೆ ಹೆಚ್ಚಿನ ಚಿಕಿತ್ಸೆ ಇರುವವರಿಗೆ ಉನ್ನತ ಆಸ್ಪತ್ರೆಗಳಿಗೆ ಮನೆಗೆ ವಾಹನ ಕಳಿಸಿ ಕರೆದುಕೊಂಡು ಉಚಿತವಾಗಿ ಆಪರೇಷನ್ ಮಾಡಿಸಿ ಪುನಃ ಮನೆಗೆ ವಾಪಸ್ ಕರೆದುಕೊಂಡು ಬರಲಾಗುತ್ತದೆ. ಆಸ್ಪತ್ರೆಯ ಎಲ್ಲ ಖರ್ಚು ವೆಚ್ಚಗಳನ್ನು ನಾವೇ ಭರಿಸುತ್ತೇವೆ ಎಂದು ಹೂಡಿ ವಿಜಯಕುಮಾರ್ ಈ ಸಂದರ್ಭದಲ್ಲಿ ತಿಳಿಸಿದರು. ಕೋಲಾರದ ಎಸ್ಸೆನ್ನಾರ್ ಆಸ್ಪತ್ರೆಯ ರಕ್ತನಿಧಿ ಘಟಕದವರು ಸುಮಾರು 50ಕ್ಕೂ ಹೆಚ್ಚು ಯೂನಿಟ್ ರಕ್ತವನ್ನು ಸಂಗ್ರಹಿಸಿದರು. ಇದೇ ಸಂದರ್ಭದಲ್ಲಿ ರೋಗಿಗಳಿಗೆ ಉಚಿತವಾಗಿ ರಕ್ತಪರೀಕ್ಷೆ ಮತ್ತು ಹೃದಯದ ಎಕೋ ಪರೀಕ್ಷೆ ಮಾಡಲಾಯಿತು.

ವಿರಾಮ
ಪ್ರತಿ ಭಾನುವಾರ

ಕಾಂಗ್ರೆಸ್ ಸರಕಾರ ಕೊಟ್ಟ ಮಾತು ತಪ್ಪಿಲ್ಲ

ರಾಮನಗರ ಜಿಲ್ಲಾ ಯುವ ಕಾಂಗ್ರೆಸ್ ಘಟಕದ ಪದಗ್ರಹಣ | ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ

ರಾಮನಗರ: ನಮ್ಮ ಸರಕಾರಕ್ಕೆ ಎರಡು ವರ್ಷ ತುಂಬಿದ್ದು, ಮೇ 20 ರಂದು ವಿಜಯನಗರದಲ್ಲಿ ನಡೆಯುವ ಪಕ್ಷದ ಬೃಹತ್ ಸಮಾವೇಶದಲ್ಲಿ ತಾಂಡಾ, ಹಟ್ಟಿ , ಕಂದಾಯ ಭೂಮಿ ನಿವಾಸಿಗರಿಗೆ ಒಂದು ಲಕ್ಷ ಜನರಿಗೆ ಪಟ್ಟಾ ಖಾತೆ ನೀಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ರಾಮನಗರದಲ್ಲಿ ಭಾನುವಾರ ನಡೆದ ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭ 'ಯುವ ಪರ್ವ' ಸಮಾವೇಶದಲ್ಲಿ ಮಾತನಾಡಿದರು.

ಕಾಂಗ್ರೆಸ್ ಸರಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿದೆ. ಯುವಕರಿಗೆ ಯುವನಿಧಿ ಮೂಲಕ ನೆರವಿಗೆ ನಿಂತಿದೆ. ಮಹಿಳೆಯರ ಪರವಾಗಿ ಐತಿಹಾಸಿಕ ಯೋಜನೆಗಳನ್ನು ತಂದು ಇತಿಹಾಸ ಸೃಷ್ಟಿಸಿದೆ. ಗೃಹಲಕ್ಷ್ಮೀ ಸೇರಿದಂತೆ ಅನೇಕ ಉಚಿತ ಯೋಜನೆಗಳನ್ನು ದಳ, ಬಿಜೆಪಿಯವರು ನೀಡಿದ್ದಾರೆಯೇ ಎಂದು ಪ್ರಶ್ನಿದರು. ಯುವ ಕಾಂಗ್ರೆಸ್ ಘಟಕವೆಂದರೆ ನಾಯಕತ್ವ ಬೆಳೆಸುವ ಪ್ರಯೋಗ ಶಾಲೆ. ನೀವು ನಾಯಕರಾಗಿ ಬೆಳೆಯಬೇಕು ಎಂದರೆ ತಳಮಟ್ಟದಿಂದ ಕೆಲಸ ಮಾಡಬೇಕು. ಕೊಟ್ಟ ಜವಾಬ್ದಾರಿಯನ್ನು ನಿಭಾಯಿಸಬೇಕು. ಯುವಕರಿಗೆ ನಿಮ್ಮ ಶಕ್ತಿಯ ಅರಿವಿಲ್ಲ. ಯಾರೋ ಮಾಡುವ ಟೀಕೆಗಳಿಗೆ ಹೆದರಬಾರದು ಎಂದರು.

ನಿಮ್ಮ ಏರಿಯಾ, ಬೂತ್ ಮಟ್ಟದಲ್ಲಿ ನೀವು ಪ್ರಬಲವಾಗಿ ಬೆಳೆಯಬೇಕು. ನೀವು ಮಾಡುವ ಕೆಲಸಗಳು ಶಾಶ್ವತವಾಗಿ ಉಳಿಯಬೇಕು. ಜನರ ಮನಸ್ಸನ್ನು ಗೆಲ್ಲಬೇಕು. ನಿಮ್ಮನ್ನು ನಾಯಕರನ್ನಾಗಿ ರೂಪಿಸಬೇಕು ಎನ್ನುವುದು ನನ್ನ ಗುರಿ, ಹಿಂಬಾಲಕರನ್ನಾಗಿ ಮಾಡುವುದಲ್ಲ. ನೀವು ನನ್ನ ಸಹಪಾಠಿಗಳು ಎಂದರು. ಯುವ ಹಾಗೂ ವಿದ್ಯಾರ್ಥಿ ಕಾಂಗ್ರೆಸ್ ಮೂಲಕ ಬೆಳೆದವರು ಪಕ್ಷವನ್ನು ಎಂದಿಗೂ ಬಿಟ್ಟು ಹೋಗುವುದಿಲ್ಲ. ಬೂತ್, ಪಂಚಾಯತಿ, ವಾರ್ಡ್ ಮಟ್ಟದಲ್ಲಿ ನಿಮಗೆ ನೀಡಿದ ಜವಾಬ್ದಾರಿ ನಿಭಾಯಿಸಿದಾಗ, ಪಕ್ಷಕ್ಕೆ ಹೆಚ್ಚಿನ ಮತಗಳನ್ನು ತಂದುಕೊಟ್ಟಾಗ ಮಾತ್ರ ನೀವು ನಾಯಕರಾಗಿ ಹೊರಹೊಮ್ಮಬಹುದು. ಆಗ ಶಾಸಕರು ನಿಮ್ಮನ್ನು ಹುಡುಕಿಕೊಂಡು ಬಂದು ಅಧಿಕಾರ ನೀಡುವ ಕೆಲಸ ಮಾಡುತ್ತಾರೆ ಎಂದು ಹೇಳಿದರು. ಅಧಿಕಾರ ಎಂದಿಗೂ ಶಾಶ್ವತವಲ್ಲ. ದೇವೇಗೌಡರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ನಂತರ ಪ್ರಧಾನಿಯಾದರು. ಅವರಿಂದ ತೆರವಾದ ಸ್ಥಾನಕ್ಕೆ ಚಿತ್ರನಟ ಅಂಬರೀಶ್‌ರನ್ನು ನಿಲ್ಲಿಸಿದ್ದರು. ನಾವು ಅಂದು ಹೋರಾಟ ಮಾಡಿ ಸಿ.ಎಂ.ಲಿಂಗಪ್ಪ ಅವರನ್ನು ನಿಲ್ಲಿಸಿ ಗೆಲ್ಲಿಸಿದೆವು ಎಂದು ಹೇಳಿದರು.



ರಾಮನಗರದಲ್ಲಿ ಭಾನುವಾರ ನಡೆದ ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳ ಪದಗ್ರಹಣ ಸಮಾರಂಭ 'ಯುವ ಪರ್ವ' ಸಮಾವೇಶವನ್ನು ಡಿಕೆ ಶಿವಕುಮಾರ್ ಉದ್ಘಾಟಿಸಿದರು.

ಬಿಜೆಪಿ, ದಳ, ಕಾಂಗ್ರೆಸ್ ಹೀಗೆ ರಾಜಕೀಯದಲ್ಲಿ ಯಾವುದು ಶಾಶ್ವತವಲ್ಲ. 8 ಬಾರಿ ಶಾಸಕನಾಗಿರುವ ನಾನು, ದೇಶದ ಪ್ರಧಾನಿಗಳಾಗಿ ದೇವೇಗೌಡರು ಮೂರು ಬಾರಿ ಆಯ್ಕೆಯಾಗಿದ್ದಾರೆ ಎನ್ನುವುದೆಲ್ಲಾ ರಾಜಕೀಯದಲ್ಲಿ ಕ್ಷಣಿಕ. ರಾಮನಗರ, ಮೈಸೂರು, ಮಂಡ್ಯದಲ್ಲಿ ನಾವು ಗೆದ್ದಿಲ್ಲವೇ. ಮೈಸೂರು ಭಾಗದಲ್ಲಿ 40 ಕ್ಕೂ ಹೆಚ್ಚು ಸ್ಥಾನ ಗೆದ್ದಿದ್ದೇವೆ. ಸೋತಿರುವ ಕ್ಷೇತ್ರದಲ್ಲಿ ಮುಂದೆ ಗೆಲ್ಲಲು ಪ್ರಯೋಗ ಪ್ರಾರಂಭ ಮಾಡಿದ್ದೇವೆ ಎಂದರು.

ಗ್ರೇಟರ್ ಬೆಂಗಳೂರು ಎಂದು ಮಾಡಲು ಹೊರಟಿದ್ದೇವೆ. ಇದನ್ನು ಕೈ ಬಿಡಿ ಎಂದು ದೇವೆಗೌಡರು, ಸಂಸದ ಮಂಜುನಾಥ್ ಅವರು ಪತ್ರ ಬರೆದಿದ್ದರು. ಈ ಹಿಂದೆ ಇದಕ್ಕೆ ಸಹಿ ಹಾಕಿದವರು ಕುಮಾರಸ್ವಾಮಿ. ಆದರೆ ಅವರಿಗೆ ಇದನ್ನು ಮುಂದುವರೆಸಲು ಆಗುವುದಿಲ್ಲ. ಈಗ ನಾನೇಕೆ ಅದನ್ನು ಡಿನೋಟಿಫಿಕೇಷನ್ ಮಾಡಲಿ. ರೈತರಿಗೆ ನಾಲ್ಕು ಪಟ್ಟು ಪರಿಹಾರ ದೊರೆಯುವಂತೆ ಮಾಡುತ್ತೇನೆ. ಯೋಗೇಶ್ವರ್, ಇಕ್ಬಾಲ್ ಅವರೆಲ್ಲಾ ಸೇರಿ ನಿಮ್ಮ ಬದುಕನ್ನು ಭದ್ರ ಮಾಡುತ್ತೇವೆ ಎಂದರು. ಈ ಹಿಂದೆ ಅಧಿಕಾರದಲ್ಲಿ ಇದ್ದಾಗ ಏಕೆ ಒಂದೇ ಒಂದು ಜಿಲ್ಲಾಸ್ಪತ್ರೆ ಮಾಡಲಿಲ್ಲ. ರಾಜ್ಯದಾದ್ಯಂತ 100 ಕಾಂಗ್ರೆಸ್ ಕಚೇರಿಗಳನ್ನು ಕಟ್ಟಲಾಗುತ್ತಿದೆ. ಬೆಂಗಳೂರಿನಲ್ಲಿ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುವ ಸಂದರ್ಭದಲ್ಲಿಯೇ ಇಲ್ಲಿಯೂ ನೆರವೇರಿಸಲಾಗುತ್ತದೆ. ಚನ್ನಪಟ್ಟಣ ತಾಲೂಕಿನ ಅಧ್ಯಕ್ಷರು ಎಲ್ಲರೂ ಸೇರಿ 50 ಲಕ್ಷ ದೇಣಿಗೆ ಸಂಗ್ರಹ ಮಾಡಲಾಗುವುದು ಎಂದು ಹೇಳಿದ್ದಾರೆ ಎಂದರು. ನಾವೊಬ್ಬರೇ ಕಚೇರಿ ಕಟ್ಟಬಹುದು. ಆದರೆ ಎಲ್ಲರೂ ಕೈ ಜೋಡಿಸಬೇಕು. ಆಗ ಮಾತ್ರ ಇದು ನನ್ನದು, ನನ್ನ ಪಕ್ಷ ಎನ್ನುವ ಅಭಿಮಾನವಿರುತ್ತದೆ. ದಾನಿಗಳ ಹೆಸರು ಶಾಶ್ವತವಾಗಿ ಉಳಿಯಬೇಕು ಎಂದು ದಾನಿಗಳ ಹೆಸರಿರುವ ಫಲಕ ಅಳವಡಿಸಲಾಗುವುದು. ಒಂದು ವರ್ಷದೊಳಗೆ ಜಿಲ್ಲಾ ಕಾಂಗ್ರೆಸ್ ಕಟ್ಟಡ ನಿರ್ಮಾಣವಾಗುವಂತೆ ನೋಡಿಕೊಳ್ಳಲಾಗುವುದು. ಕಟ್ಟಡಕ್ಕೆ ದೇಣಿಗೆ ನೀಡುವವರು ಚೆಕ್‌ನಲ್ಲಿ ನೀಡಬೇಕು ಎಂದು ಮನವಿ ಮಾಡಿದರು.

ರಾಮನಗರ ಯುವ ಕಾಂಗ್ರೆಸ್ ಅಧ್ಯಕ್ಷನಾಗಿ ಅಧಿಕಾರವಹಿಸಿಕೊಂಡಿರುವ ಚಂದ್ರ ಸಾಗರ್ ಮತ್ತು ತಂಡಕ್ಕೆ ಅಭಿನಂದನೆಗಳನ್ನು ತಿಳಿಸಿದರು. ಸಚಿವ ರಾಮಲಿಂಗಾರೆಡ್ಡಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್ ಎಂ ರೇವಣ್ಣ, ಮಾಜಿ ಸಂಸದ ಡಿ. ಕೆ.ಸುರೇಶ್, ಶಾಸಕರಾದ ಇಕ್ಬಾಲ್ ಹುಸೈನ್, ಎಚ್ ಸಿ ಬಾಲಕೃಷ್ಣ, ಸಿ ಪಿ ಯೋಗೇಶ್ವರ್, ಡಾ ರಂಗನಾಥ್, ಎಂಎಲ್ಸಿ ಎಸ್ ರವಿ, ಯುವ ಕಾಂಗ್ರೆಸ್ ಮುಖಂಡ ಬಿ.ವಿ.ಶ್ರೀನಿವಾಸ್, ರಾಜ್ಯಾಧ್ಯಕ್ಷ ಮಂಜುನಾಥ್ ಗೌಡ, ಯುವ ಕಾಂಗ್ರೆಸ್ ಜಿಲ್ಲಾ ಉಸ್ತುವಾರಿ ಪಾರುಮಿತಾ, ಮಾಜಿ ಶಾಸಕರಾದ ರಾಜು, ಅಶ್ವಥ್, ಮುಖಂಡ ದುಂತೂರು ವಿಶ್ವನಾಥ್ ಮತ್ತಿತರರು ಭಾಗವಹಿಸಿದ್ದರು.

ಆಪರೇಷನ್ ಯಶಸ್ವಿಗೆ ದೇಗುಲದಲ್ಲಿ ವಿಶೇಷ ಪೂಜೆ

ತುಮಕೂರು: ಪಾಕಿಸ್ಥಾನದ ವಿರುದ್ಧ ಭಾರತೀಯ ಸೇನೆ ಕೈಗೊಂಡಿರುವ ಆಪರೇಷನ್ ಸಿಂಧೂರವನ್ನು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ನಗರ ವೀರಶೈವ ಸಮಾಜದ ವತಿಯಿಂದ ಬೆಂಬಲಿಸಿ ನಗರದ ಸೋಮೇಶ್ವರ ದೇವಾಲಯದಲ್ಲಿ ವಿಶೇಷ ಹೋಮ, ಹವನ ಹಾಗೂ ಪೂಜೆ ನೆರವೇರಿಸಿ ಪ್ರಾರ್ಥಿಸಲಾಯಿತು.

ಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀಸಿದ್ದಲಿಂಗ ಸ್ವಾಮೀಜಿ, ಹಿರೇಮಠದ ಶ್ರೀ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಬೆಳ್ಳಾವಿಯ ಕಾರದ ಮಠದ ಶ್ರೀಕಾರದ ವೀರಬಸವ ಸ್ವಾಮೀಜಿ, ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ದೇಶದ ಒಳಿತಿಗಾಗಿ ಹೋರಾಡುತ್ತಿರುವ ಸೈನಿಕರ ಆರೋಗ್ಯಕ್ಕಾಗಿ ವಿಶೇಷ ಮೃತ್ಯುಂಜಯ ಹೋಮ ನೆರವೇರಿಸಲಾಯಿತು.

ದೇಶದ ಪ್ರಧಾನಮಂತ್ರಿ ಸೇರಿದಂತೆ ಪಾಕಿಸ್ತಾನದ ವಿರುದ್ಧ ಹೋರಾಡುತ್ತಿರುವ ಪ್ರತಿಯೊಬ್ಬ ಸೈನಿಕರಿಗೂ ಆಯಸ್ಸು ಹಾಗೂ ಆರೋಗ್ಯ ಹಾಗೂ ಹೋರಾಡುವ ಶಕ್ತಿ ಕರುಣಿಸಲಿ ಎಂದು ಪ್ರಾರ್ಥಿಸಲಾಯಿತು.ದುಷ್ಟರ ಸಂಹಾರಕ್ಕಾಗಿ ಮಹಾಗಣಪತಿ ಹೋಮ, ಜಯಾಧಿ ಹೋಮ, ಶೋಭ ರಹಿತ ಹೋಮ ಪೂಜಾದಿ ಕೈಂಕರ್ಯ ನೆರವೇರಿಸಲಾಯಿತು.

ಶ್ರೀಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಪಹಲ್ಗಾಮ್ ಪ್ರಕರಣದ ನಂತರ ಭಾರತ ದೇಶ ಒಂದು ದೃಢ ನಿರ್ಧಾರ ಕೈಗೊಂಡಿದೆ. ಅಮಾಯಕರನ್ನು ಅತ್ಯಂತ ಹೀನಾಯವಾಗಿ ಹತ್ಯೆ ಮಾಡಿರುವುದರ ವಿರುದ್ಧ ಪಾಕಿಸ್ತಾನಕ್ಕೆ ಬುದ್ಧಿ ಕಲಿಸಲು, ಭಯೋತ್ಪಾದಕತೆಯನ್ನು ನಿರ್ಮೂಲನೆ ಮಾಡಲು ದೃಢ ನಿರ್ಧಾರ ಕೈಗೊಂಡಿರುವುದು ಉತ್ತಮ ಬೆಳವಣಿಗೆ ಎಂದರು.

ಶ್ರೀಶಿವಾನಂದ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಪಾಕಿಸ್ತಾನದಲ್ಲಿ ನಂಬಿಕೆ, ವಿಶ್ವಾಸ, ಪ್ರಾಮಾಣಿಕತೆ, ಪಾದರ್ಶಕತೆ, ಕರುಣೆ, ದಯೆ ಎಂಬ ಪದಗಳಿಗೆ ಅರ್ಥವೇ ಇಲ್ಲ. ಭಯೋತ್ಪಾದಕರನ್ನು ಉತ್ಪಾದನೆ ಮಾಡುವಂತಹ ದೇಶ ಪಾಕಿಸ್ತಾನ. ಹಾಗಾಗಿ ಅವರ ಭಾಷೆಯಲ್ಲೇ ಉತ್ತರಿಸಬೇಕು. ದೇಶದ ಮನೋಬಲ, ಆತ್ಮಸ್ಥೈರ್ಯ ಹೆಚ್ಚಿಸುವುದಾಗಿ ನಾವೆಲ್ಲ ರೂ ಒಂದಾಗಬೇಕು. ನಾವೆಲ್ಲರೂ ದೇಶದ ಜತೆ, ಸೈನಿಕರ ಜತೆ ಇರಬೇಕು ಎಂದರು.

ಬೆಳ್ಳಾವಿ ಶ್ರೀ ಕಾರದ ವೀರಬಸವ ಸ್ವಾಮೀಜಿ ಮಾತನಾಡಿ, ನಮ್ಮ ರಾಷ್ಟ್ರದಲ್ಲಿ ಹೆಣ್ಣಿಗೆ ಪ್ರಾತಿನಿಧ್ಯ ಕೊಟ್ಟಿದೆ. ನಮ್ಮ ಹೆಣ್ಣು ಮಕ್ಕಳನ್ನು ಕೆಣಕಿದ ಪಾಕಿಸ್ತಾನದವರಿಗೆ ನಮ್ಮ ದೇಶದ ಶಕ್ತಿಯನ್ನು ಪ್ರಧಾನಿಗಳು, ರಕ್ಷಣಾ ಸಚಿವರು, ಗೃಹ ಸಚಿವರು ಹಾಗೂ ಸೈನಿಕರು ತೋರಿಸುತ್ತಿದ್ದಾರೆ ಎಂದರು. ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಡಾ. ಎಸ್. ಪರಮೇಶ್ ಮಾತನಾಡಿ, ಪಾಕಿಸ್ತಾನದವರು ನಮ್ಮ ದೇಶದ ಅಮಾಯಕರನ್ನು ಅವರ ಹೆಸರು, ಜಾತಿ ಕೇಳಿ ಹೊಡೆದುಕೊಂದರು.ಇದಾದ ಬಳಿಕವೂ ಪಾಕ್ ದೇಶದ ನಾಗರಿಕರನ್ನು ಗುರಿಯಾಗಿಸಿ ದಾಳಿ ಮಾಡುತ್ತಿದೆ. ಈ ದಾಳಿಗೆ ನಮ್ಮ ದೇಶದ ಸೈನಿಕರು ದಿಟ್ಟ ಪ್ರತ್ಯುತ್ತರ ನೀಡುತ್ತಿದ್ದಾರೆ. ನಮ್ಮ ಸೈನಿಕರ ಒಳಿತಿಗಾಗಿ ಪ್ರಾರ್ಥಿಸಿ ಇಂದು ಸೋಮೇಶ್ವರ ದೇಗುಲದಲ್ಲಿ ಹೋಮ, ಹವನ, ಪೂಜೆಯನ್ನು ನೆರವೇರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಟಿ.ಸಿ. ಓಹಿಲೇಶ್ವರ್, ಮಂಜುನಾಥ್ ಬಾವಿಕಟ್ಟೆ, ದರ್ಶನ್ ಕೆ.ಎಲ್., ಪ್ರದೀಪ್, ಮಾಜಿ ಯೋಧ ನಾಗರಾಜು, ಸತ್ಯಮಂಗಲ ಜಗನ್ನಾಥ್ ಮತ್ತಿತರರು ಪಾಲ್ಗೊಂಡಿದ್ದರು.

ನಗರ ವೀರಶೈವ ಸಮಾಜದ ವತಿಯಿಂದ ಶ್ರೀ ಸೋಮೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ನೆರವೇರಿಸಿ ಪ್ರಾರ್ಥಿಸಲಾಯಿತು.

ಪರಿಶ್ರಮವಿದ್ದಲ್ಲಿ ಉತ್ತಮ ಭವಿಷ್ಯ

ಚಿಕ್ಕಬಳ್ಳಾಪುರ: ಪದವಿ ವಿದ್ಯಾರ್ಥಿಗಳು ವ್ಯಾಸಾಂಗದ ಅವಧಿಯಲ್ಲಿ ಮೋಜಿನ ಬದುಕಿಗೆ ಒತ್ತು ನೀಡದೆ ಸಕಾರಾತ್ಮಕ ಚಿಂತನೆಯೊಂದಿಗೆ ಅಧ್ಯಯನದಲ್ಲಿ ತೊಡಗಿದರೆ ನಿಶ್ಚಿತ ಗುರಿಮುಟ್ಟಲು ಸಾಧ್ಯ ಎಂದು ಆದಿಚುಂಚನಗಿರಿ ಮಠದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ನಗರ ಹೊರವಲಯ ಬಿಜಿಎಸ್ ಸಭಾಂಗಣದಲ್ಲಿ ಚಿಕ್ಕಬಳ್ಳಾಪುರ ವಿಭಾಗದ ಬಿಜಿಎಸ್ ಶಿಕ್ಷಣ ಸಂಸ್ಥೆಗಳ ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ನಡೆದ ಘಟಿಕೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಪಾಲಕರು ಹಾಗೂ ಶಿಕ್ಷಕರು ತಮ್ಮ ಜವಾಬ್ದಾರಿ ನಿರ್ವಂಚನೆಯಿಂದ ನಿರ್ವಹಿಸಿದಾಗ ಮಾತ್ರ ಶೈಕ್ಷಣಿಕವಾಗಿ ಸಾಧನೆ ಸಾಧ್ಯ. ಒಂದು ಜ್ಯೋತಿ ಬೆಳಗಲು ಎಣ್ಣೆ ಬತ್ತಿ ಇರಬೇಕು. ಹಾಗೆಯೇ ಬದುಕು ಹಸನಾಗಲು ಗುಣಮಟ್ಟದ ಶಿಕ್ಷಣ, ಶಿಸ್ತುಬದ್ಧ ಜೀವನ,ಉದ್ಯೋಗಕ್ಕೆ ಬೇಕಾದ ಕೌಶಲಗಳು ಮುಖ್ಯ ಎಂದು ತಿಳಿಸಿದರು.

ಸಂಸದ ಡಾ. ಕೆ.ಸುಧಾಕರ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಎದುರಾಗುವ ಅನೇಕ ಸವಾಲುಗಳ ನಡುವೆಯೂ, ಶೈಕ್ಷಣಿಕವಾಗಿ ಉತ್ತಮ ಸಾಧನೆ ತೋರಬೇಕು ಎಂದು ಸಲಹೆ ನೀಡಿದರು. ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಭೆಗೆ ಮಾತ್ರ ಸ್ಥಾನವಿದೆ.ಇಂತಹ ಸಂದರ್ಭದಲ್ಲಿಯೂ ಕೂಡ ಅಪ್ರತಿಮ ಸಾಧಕರನ್ನು ಮೊದಲು ಗುರುತಿಸುವಂತಹ ಕೆಲಸವಾಗುತ್ತದೆ. ದೊರೆಯುವ ಅವಕಾಶಗಳನ್ನು ಬಳಸಿಕೊಂಡು ವಿಶಿಷ್ಟ ಸಾಮರ್ಥ್ಯವನ್ನು ಪ್ರದರ್ಶಿಸದಿದ್ದಲ್ಲಿ ಹಿನ್ನಡೆ ಅನುಭವಿಸಬೇಕಾಗುತ್ತದೆ. ಇದಕ್ಕೆ ಅವಕಾಶ ನೀಡುವುದಿಲ್ಲ ಎಂಬ ಎಚ್ಚರವಿರಬೇಕು ಎಂದರು.

ಪದವಿ ಪ್ರದಾನ ಸಮಾರಂಭದಲ್ಲಿ ಒಟ್ಟು 672 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಶ್ರೀಮಂಗಳನಾಥ ಸ್ವಾಮೀಜಿ, ಬಿಜಿಎಸ್ ಶಿಕ್ಷಣ ಸಂಸ್ಥೆಯ ಆಡಳಿತಾದಿಕಾರಿ ಎನ್.ಶಿವರಾಮರೆಡ್ಡಿ, ಪ್ರಾಂಶುಪಾಲರಾದ ಜಿ.ಟಿ.ರಾಜು, ಡಾ. ಬಿ.ಆರ್. ವೆಂಕಟೇಶ್ ಬಾಬು ಮತ್ತಿತರರು ಇದ್ದರು.

ಚಿಕ್ಕಬಳ್ಳಾಪುರ ಬಿಜಿಎಸ್ ಸಭಾಂಗಣದಲ್ಲಿ ನಡೆದ ಘಟಿಕೋತ್ಸವದಲ್ಲಿ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಪದವಿ ಪ್ರದಾನ ಮಾಡಿದರು. ಶಾಖಾಮಠದ ಶ್ರೀ ಮಂಗಳನಾಥ ಸ್ವಾಮೀಜಿ, ಸಂಸದ ಡಾ. ಕೆ.ಸುಧಾಕರ್ ಇದ್ದರು.

ಆನಂದ್‌ಗೆ 'ಸಾಹಿತ್ಯ ಕಲ್ಪತರು ಪ್ರಶಸ್ತಿ'

ಮಿಮಿಕ್ರಿ ಕಲಾವಿದ ಮೈಸೂರು ಆನಂದ್‌ಗೆ 'ಸಾಹಿತ್ಯ ಕಲ್ಪತರು ಪ್ರಶಸ್ತಿ' ಪ್ರದಾನ ಮಾಡಲಾಯಿತು.

ತಿಪಟೂರು: ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘದಿಂದ ಪ್ರತಿವರ್ಷದಂತೆ ಕೊಡಮಾಡುವ, ಸಾಹಿತ್ಯ ಕಲ್ಪತರು ಪ್ರಶಸ್ತಿಯನ್ನ ಖ್ಯಾತ ಮಿಮಿಕ್ರಿ ಕಲಾವಿದ ಮೈಸೂರು ಆನಂದ್‌ಗೆ ಪ್ರದಾನ ಮಾಡಲಾಯಿತು.

ನಗರದ ಸತ್ಯಗಣಪತಿ ಅಮೃತ ಮಹೋತ್ಸವ ಭವನದಲ್ಲಿ ನಡೆದ,ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘದಿಂದ ನಡೆದ ಭಾವಗೀತೆ ಗಾಯನ ಹಾಗೂ 'ಸಾಹಿತ್ಯ ಕಲ್ಪತರು ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ನೀಡಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ಯುವ ಸಮೂಹ ಸಂಸ್ಕೃತಿ ಹಾಗೂ ಸಂಸ್ಕಾರದಿಂದ ವಿಮುಖರಾಗಿರುವ ಕಾಲಘಟ್ಟದಲ್ಲಿ ನಮ್ಮ ಸಂಸ್ಕೃತಿ ಹಾಗೂ ಸಂಸ್ಕಾರದ ಬಂದು ನಿಂತಿದೆ. ಸಂಸ್ಕೃತಿ ಉಳಿವಿಗಾಗಿ ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ ನಮ್ಮ ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಸಂಸ್ಕಾರದ ಉಳಿವಿಗಾಗಿ ಇಂತಹ ಕಾರ್ಯಕ್ರಮ ಶ್ಲಾಘನೀಯ. ನಮ್ಮ ಸಾಹಿತ್ಯ ಹೃದಯವಂತಿಕೆ ಹೊಂದಿದ್ದು, ಮನುಷ್ಯನ ಭಾವನೆ ಸೆಳೆಯುವ ಗುಣ ಹೊಂದಿದೆ ಎಂದರು.

ಪತ್ರಕರ್ತ ಚೆನ್ನೇಗೌಡ ಮಾತನಾಡಿ, ತಿಪಟೂರು ಆರ್ಥಿಕ ಕೇಂದ್ರದ ಜೊತೆ ಸಾಂಸ್ಕೃತಿಕ ಶ್ರೀಮಂತಿಕೆ ಉಳಿಸಿಕೊಂಡಿದ್ದು, ತುಮಕೂರು ಜಿಲ್ಲೆ ಆರ್ಥಿಕತೆಯ ಬೆನ್ನೆಲುಬು ಕಲ್ಪತರು ನಗರಿ ತಿಪಟೂರು. ಕಲೆ, ಸಾಹಿತ್ಯ, ಸಂಸ್ಕೃತಿ ಜೀವಂತಿಕೆ ಉಳಿಸಿಕೊಂಡಿದೆ.ನಮ್ಮ ವೀರ ಸೈನಿಕರಿಗೆ ಗೌರವ ಕೊಡುವ ಮಹತ್ಕಾರ್ಯ ಪ್ರತಿಯೊಬ್ಬ ನಾಗರೀಕ ಮಾಡಬೇಕು.ಬಯಲು ಸೀಮೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಘ ಪ್ರತಿವರ್ಷ ನೀಡುವ ಸಾಹಿತ್ಯ ಕಲ್ಪತರು ಪ್ರಶಸ್ತಿಯನ್ನ ಕನ್ನಡ ಕಲ್ಪತರು ಎಂದು ಮಾಡಿ ಕನ್ನಡದ ಉಳಿವಿಗೆ ಸ್ಫೂರ್ತಿಯಾಗಬಹುದು ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ವೆಂಕಟನಾರಾಯಣ್ ಮಾತ ನಾಡಿ, ನಮ್ಮ ನಾಡು ನುಡಿ ಕಲೆ ಸಂಸ್ಕೃತಿ ಉಳಿವಿಗೆ ನಾವು ಹಿಂದಿಗಿಂತಲು,ಈಗ ಹೆಚ್ಚು ಕೆಲಸ ಮಾಡಬೇಕು. ನಮ್ಮ ಸಂಸ್ಕೃತಿ ಉಳಿಸಿ ಬೆಳೆಸಬೇಕು. ಕಲೆ ಸಾಹಿತ್ಯ ಸಂಸ್ಕೃತಿ ಬೆಳವಣಿಗೆಗೆ ಕಲ್ಪತರು ನಾಡು ತನ್ನದೇ ಆದಕೊಡುಗೆ ನೀಡಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಶಿಕ್ಷಣ ಸಚಿವ ಬಿ.ಸಿ ನಾಗೇಶ್, ಪತ್ರಕರ್ತ ಅಶ್ವಿನ್ ಗೌತಮ್, ಪಠ್ಯಪುಸ್ತಕ ಪರಿಸ್ಕರಣಾ ಸಮಿತಿ ಅಧ್ಯಕ್ಷ ರವೀಂದ್ರ, ಭರತ ನಾಟ್ಯಾ ವಿದ್ವಾನ್ ಎಲ್.ಜಿ ಮೀರ, ವಾಲಿಬಾಲ್ ಆಟಗಾರ ಎನ್.ಬಿ ಲೋಕೇಶ್, ತಾಪಂ ಇಒ ಸುದರ್ಶನ್, ತಹಸೀಲ್ದಾರ್ ಜಗನ್ನಾಥ್, ಖಜಾಂಚಿ ಆರ್.ಎಂ. ಕುಮಾರಸ್ವಾಮಿ ಇದ್ದರು.

ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹೋರಾಟ

ಗುಬ್ಬಿ: ರೈತರ ಸಮಸ್ಯೆ ಆಲಿಸಿದ ರಾಜ್ಯ ಮತ್ತು ಕೇಂದ್ರ ಸರಕಾರಗಳ ವಿರುದ್ಧ ಹಾಗೂ ರೈತರ ವಿದ್ಯುತ್ ಸಮಸ್ಯೆ, ನೀರಾವರಿ ಸಮಸ್ಯೆ, ಭೂ ಮಂಜೂರು ಹಾಗೂ ರೈತ ವಿರೋಧಿ ಕಾಯ್ದೆ ಹಿಂಪಡೆಯುವಂತೆ ಒತ್ತಾಯಿಸಿ ಶೀಘ್ರದಲ್ಲಿ ರೈತ ಸಂಘ ಸಾವಿರಾರು ರೈತರ ಜತೆಗೂಡಿ ಗಟ್ಟಿ ಹೋರಾಟ ನಡೆಸಲಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಎ.ಗೋವಿಂದರಾಜು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರೈತರ ಸಭೆಯ ನಂತರ ಮಾತನಾಡಿದ ಅವರು ಪಾಕಿಸ್ತಾನದ ವಿರುದ್ಧ ಯುದ್ಧ ನಡೆಯುತ್ತಿರುವ ಹಿನ್ನಲೆ ಹೋರಾಟವನ್ನು ಕೆಲ ದಿನಗಳ ಕಾಲ ಮುಂದೂಡಿ ನಂತರ ದಿನಾಂಕ ನಿಗದಿ ಮಾಡಿ ಬೃಹತ್ ಮಟ್ಟದ ಗಟ್ಟಿ ಹೋರಾಟ ಕೈಗೊಳ್ಳುತ್ತೇವೆ ಎಂದು ಹೇಳಿದರು.

ನಿರೀಕ್ಷೆಯಂತೆ ಯಾವುದೇ ಬದಲಾವಣೆ ತಾರದ ಕಾಂಗ್ರೆಸ್ ಸರಕಾರ ಅಕ್ರಮ ಸಕ್ರಮ ಯೋಜನೆಯಲ್ಲಿ ರೈತರಿಗೆ ಯಾವ ಕೆಲಸ ಮಾಡಿಕೊಟ್ಟಿಲ್ಲ. ಬಗರ್ ಹುಕುಂ ಸಮಿತಿಯ ರೈತರ ಅರ್ಜಿ ವಜಾಗೊಳಿಸಿ ಹತ್ತಾರು ವರ್ಷದಿಂದ ಅನುಭವದಲ್ಲಿದ್ದ ರೈತರಿಗೆ ಅನ್ಯಾಯ ಮಾಡಿದ್ದೀರಿ, ಬೆಸ್ಕಾಂ ಕಚೇರಿಯತ್ತ ರೈತರು ಹೋಗಲು ಭಯ ಪಡುವ ಸ್ಥಿತಿ ತರಲಾಗಿದೆ. ಪರಿವರ್ತಕ ಅಳವಡಿಕೆಗೆ ಲಕ್ಷ ಲಕ್ಷ ಹಣ ತೆತ್ತೆಬೇಕಿದೆ. ಈ ಮೊದಲೇ ಇದ್ದ ಹಳೆಯ ನಿಯಮ ಪಾಲಿಸಿ ರೈತರಿಗೆ ಉಚಿತ ಪರಿವರ್ತಕ, ಕಂಬ, ತಂತಿಗಳನ್ನು ನೀಡಬೇಕು ಎಂದು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರೈತರ ಸಭೆಯಲ್ಲಿ ಜಿಲ್ಲಾಧ್ಯಕ್ಷ ಎ. ಗೋವಿಂದರಾಜು ಮಾತನಾಡಿದರು.

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರಪ್ಪ, ತಾಲೂಕು ಅಧ್ಯಕ್ಷ ಕೆ.ಎನ್.ವೆಂಕಟೇಗೌಡ, ತಾಲೂಕು ಪ್ರಧಾನ ಕಾರ್ಯದರ್ಶಿ ಸಿ.ಜಿ.ಲೋಕೇಶ್, ಶಿರಾ ತಾಲ್ಲೂಕಿನ ಕೆಂಚಪ್ಪ, ತುಮಕೂರು ತಾಲ್ಲೂಕಿನ ಬೋರೇಗೌಡ, ತುರುವೇಕೆರೆ ತಾಲೂಕಿನ ಶ್ರೀನಿವಾಸ್, ಮಧುಗಿರಿ ತಾಲೂಕಿನ ರಮೇಶ್, ಜಿಲ್ಲಾ ಮುಖಂಡ ದೊಡ್ಡ ಮಾಳಯ್ಯ, ನಾಗರತ್ನಮ್ಮ, ಯತೀಶ್, ಗುರುಚನ್ನಬಸವಣ್ಣ, ಮೋಹನ್, ಮಾದೇವಣ್ಣ, ಸತ್ತಿಗಪ್ಪ, ಜಯಣ್ಣ ಇತರರು ಇದ್ದರು.

ತುರ್ತು ಸೇವೆಗೆ 3 ಸಾವಿರ ಸ್ವಯಂ ಸೇವಕರ ನೇಮಕ

ತುಮಕೂರು: ದೇಶದ ಗಡಿಯಲ್ಲಿ ಭಾರತ–ಪಾಕಿಸ್ತಾನ ನಡುವೆ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯಿಂದ ಸಂಭವನೀಯ ಅಪಘಾತಗಳಿಂದ ಸಾರ್ವಜನಿಕರನ್ನು ರಕ್ಷಿಸಲು ಜಿಲ್ಲೆಯಲ್ಲಿ 3 ಸಾವಿರ ಸ್ವಯಂ ಸೇವಕರನ್ನು ನೇಮಕ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಯಂ ಸೇವಕರನ್ನು ನೇಮಕ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಸ್ವಯಂ ಸೇವಕರ ನೇಮಕಾತಿಗಾಗಿ ಕಮ್ಯಾಂಡೆಂಟ್ ಹೋಮ್‌ಗಾರ್ಡ್,ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು, ನೆಹರು ಯುವ ಕೇಂದ್ರದ ಉಪನಿರ್ದೇಶಕರನ್ನು ನಿಯೋಜಿಸಲಾಗಿದೆ. ಯುದ್ಧಕ್ಕೆ ಸಂಬಂಧಿಸಿದಂತೆ ತುರ್ತು ಸಂದರ್ಭಗಳು ಘೋಷಣೆಯಾದಾಗ ಜನರ ಜೀವ ಹಾಗೂ ಆಸ್ತಿಗಳ ರಕ್ಷಣೆಗಾಗಿ ಸ್ವಯಂ ಸೇವಕರ ನೆರವನ್ನು ಪಡೆಯಲಾಗುವುದು ಎಂದು ತಿಳಿಸಿದರು. ಸಹಾಯವಾಣಿ ಸಂಖ್ಯೆ: 0816–2213400ಯನ್ನು ಸ್ಥಾಪಿಸಲಾಗಿದೆ. ಈ ಕೇಂದ್ರದಲ್ಲಿ ಕಂದಾಯ, ಪೊಲೀಸ್, ಬೆಸ್ಕಾಂ, ಅಗ್ನಿಶಾಮಕ ಅಧಿಕಾರಿಗಳು ಉಪಸ್ಥಿತರಿದ್ದು, ಸ್ವೀಕೃತ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಿ ಪರಿಹಾರ ನೀಡಲಿದ್ದಾರೆ. ಯುದ್ಧ ದಾಳಿ ಸಂಭವಿಸಿದಾಗ ಎಚ್ಚರಿಕೆ ಸದ್ದು ನೀಡಲು ಎಲ್ಲಾ ತಾಲೂಕು ಕಚೇರಿಯಲ್ಲಿ ಸೈರನ್ ಅಳವಡಿಸಬೇಕು ಎಂದು ಸೂಚನೆ ನೀಡಲಾಗಿದೆ ಎಂದರು. ಜಿಲ್ಲೆಯ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ 9000 ಹಾಸಿಗೆಗಳು ಲಭ್ಯವಿದ್ದು, 12 ಆಕ್ಸಿಜನ್ ಪ್ಲಾಂಟ್, ವೆಂಟಿಲೇಟರ್ ಸುಸ್ಥಿತಿಯಲ್ಲಿವೆ ಎಂದು ಮಾಹಿತಿ ನೀಡಿದರು.

SBI
ಭಾರತೀಯ ಸ್ಟೇಟ್ ಬ್ಯಾಂಕ್
ವಿದ್ಯಾನಗರ ರಾಮನಗರ ಶಾಖೆ (40796)
ಬೆಂಗಳೂರು–ಮೈಸೂರು ರಸ್ತೆ, ರಾಮನಗರ–562159.
Email: sbi.40796@sbi.co.in

ಅನುಬಂಧ–IV-A
[ನಿಯಮ 8(6)ಗೆ ನಿಬಂಧನೆಯನ್ನ ನೋಡಿ]
ಸ್ಥಿರ ಆಸ್ತಿಯ ಇ–ಹರಾಜಿನ ಮಾರಾಟದ ಸೂಚನೆ

ಸೆಕ್ಯುರಿಟೈಜೇಶನ್ ಅಂಡ್ ರಿಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ಫೋರ್ಸ್ಮೆಂಟ್ ಅಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ನ ನಿಯಮ 8(6)ರ ನಿಬಂಧನೆಯೊಂದಿಗೆ ಓದಿ ಸೆಕ್ಯೂರಿಟಿ ಇಂಟರೆಸ್ಟ್ (ಎನ್ಫೋರ್ಸ್ಮೆಂಟ್) ನಿಯಮ 2002 ಇದರ ಅಡಿಯಲ್ಲಿ ಸ್ಥಿರಾಸ್ಥಿಯ ಮಾರಾಟಕ್ಕಾಗಿ ಇ–ಹರಾಜಿನ ಮಾರಾಟದ ಸೂಚನೆ ನೀಡಲಾಗಿದೆ.
ಬ್ಯಾಂಕ್‌ಗೆ ಅಡಮಾನವಿಟ್ಟಿರುವ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯು ಬ್ಯಾಂಕಿನ ಭೌತಿಕ ಸ್ವಾಧೀನದಲ್ಲಿದೆ ಎಂದು ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರ (ರು)/ ಖಾತರಿದಾರರಿಗೆ (ರು) ಈ ಮೂಲಕ ಸೂಚನೆ ನೀಡಲಾಗಿದೆ. ಈ ಆಸ್ತಿಯನ್ನು 12/06/2025ರಂದು "ಎಲ್ಲಿ ಇದ್ದಂತೆ", "ಇರುವುದಾದರು ಇದ್ದಂತೆ" ಮತ್ತು "ಏನೇ ಇದ್ದರೂ" ಆಧಾರದ ಮೇಲೆ ಮಾರಾಟ ಮಾಡಲಾಗುತ್ತದೆ. ಸಾಲಗಾರರಾದ ಸಂತೋಷ್ ಕುಮಾರ್ S/o ಲೇಟ್ ರಾಮೇಗೌಡರಿಂದ ಬರಬೇಕಾದ ಬಾಕಿ ಮೊತ್ತ ರೂ. 87,78,223.00 (ಎಂಭತ್ತೇಳು ಲಕ್ಷದ ಎಪ್ಪತ್ತೆಂಟು ಸಾವಿರದ ಇನ್ನೂರ ಇಪ್ಪತ್ತ ಮೂರು ರೂಪಾಯಿಗಳು ಮಾತ್ರ) ದಿನಾಂಕ 28–11–2024ರವರೆಗೆ ಮತ್ತು ಮುಂದಿನ ಬಡ್ಡಿ, ವೆಚ್ಚಗಳು ಇತ್ಯಾದಿ.

ಮೀಸಲು ಬೆಲೆ (ಇದರ ಕೆಳಗೆ ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ)	ಅರ್ನೆಸ್ಟ್ ಹಣ ಠೇವಣಿ (EMD)	ಬಿಡ್ ಹೆಚ್ಚಳದ ಮೊತ್ತ	EMD ಮೊತ್ತಕ್ಕೆ ಠೇವಣಿ ಮಾಡಲು ಕೊನೆಯ ದಿನಾಂಕ
ರೂ. 1,43,90,000/–	ರೂ. 14,39,000/–	ರೂ. 50,000/–	11/06/2025, ಸಂಜೆ 4.00ರವರೆಗೆ

ಇ–ಹರಾಜಿನ ದಿನಾಂಕ ಮತ್ತು ಸಮಯ 12.06.2025, 10.00 AM ರಿಂದ 04.00 PM ರವರೆಗೆ

ಅಡಮಾನವಿಟ್ಟ ಆಸ್ತಿಯ ವಿವರಣೆ: ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಇ–ಆಸ್ತಿ ಸಂಖ್ಯೆ 152900400601420499, ಕನೇಶುಮಾರಿ ನಂ. 393/202, ಆಸ್ತಿ ಸಂಖ್ಯೆ 202, ಪೂರ್ವದಿಂದ ಪಶ್ಚಿಮಕ್ಕೆ: 12.00 ಮೀ., ಉತ್ತರದಿಂದ ದಕ್ಷಿಣಕ್ಕೆ: 12.00 ಮೀ. ಒಟ್ಟು 144.00 ಚ.ಮೀ. ವಿಳಾಸ: ಬೋಳಪ್ಪನಹಳ್ಳಿ ಗ್ರಾಮ, (ಬೇಚಾರಕ್), ಕಸಬಾ ಹೋಬಳಿ, ರಾಮನಗರ–562159, ಸಂತೋಷ್ ಕುಮಾರ್ S/o ಲೇಟ್ ರಾಮೇಗೌಡ ರವರ ಹೆಸರಿನಲ್ಲಿ, ಚಕ್ಕುಬಂದಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 213, ಉತ್ತರಕ್ಕೆ: ನಿವೇಶನ ಸಂಖ್ಯೆ 203, ದಕ್ಷಿಣಕ್ಕೆ: ರಸ್ತೆ.
ಅಧಿಕೃತ ಅಧಿಕಾರಿಗೆ ತಿಳಿದಿರುವಂತೆ, ಮೇಲಿನ ಯಾವುದೇ ಆಸ್ತಿಗಳ ಮೇಲೆ ಯಾವುದೇ ಹೊರೆ ಇಲ್ಲ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು ಒದಗಿಸಿದ ಲಿಂಕ್ ಅನ್ನು ನೋಡಿ https://baanknet.com ಹೆಚ್ಚಿನ ವಿವರಗಳಿಗೆ 8147391484 ಗೆ ಕರೆ ಮಾಡಿ

ದಿನಾಂಕ: 12.05.2025
ಸ್ಥಳ: ರಾಮನಗರ

ಸಹಿ/– ಅಧಿಕೃತ ಅಧಿಕಾರಿ
ಭಾರತೀಯ ಸ್ಟೇಟ್ ಬ್ಯಾಂಕ್

ಅದ್ದೂರಿ ಹೂವಿನ ಕರಗ ಮಹೋತ್ಸವ

ಬಾಗೇಪಲ್ಲಿ: ಪಟ್ಟಣದ ಗ್ರಾಮದೇವತೆ ಗಂಗಮ್ಮ ದೇವಿಯ ಸನ್ನಿಧಿಯಲ್ಲಿ ಶ್ರೀಧರ್ಮರಾಯಸ್ವಾಮಿಯ 36 ನೇ ವರ್ಷದ ಹೂವಿನ ಕರಗ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಬಾಗೇಪಲ್ಲಿ ಪಟ್ಟಣದ ಗಂಗಮ್ಮ ದೇವಿ ಟ್ರಸ್ಟ್ ಹಾಗೂ ಕರಗ ಮಹೋತ್ಸವ ಸಮಿತಿ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಧರ್ಮರಾಯನ ಕರಗ ಮಹೋತ್ಸವಕ್ಕೆ ಸಮಿತಿ ಸದಸ್ಯರು ಚಾಲನೆ ನೀಡುತ್ತಿದ್ದಂತೆ ರಾತ್ರಿ ಕರಗ ಹೊರುವ ಮೇಲೂರಿನ ಧಮೇಂದ್ರ ವೀರಕುಮಾರರೊಂದಿಗೆ ತಮಟೆ ವಾದ್ಯಗಳೊಡನೆ ಬಳೇ ತೊಡಿಸುವ ಕಾರ್ಯದಲ್ಲಿ ಭಾಗವಹಿಸಿದರು. ಬಳೇ ತೊಡೆಸಿದ ನಂತರ ವೀರಕುಮಾರರೊಂದಿಗೆ ತಮಟೆ ವಾದ್ಯಗಳೊಡನೆ ಶ್ರೀಗಂಗಮ್ಮ ದೇವಾಲಯಕ್ಕೆ ಪ್ರವೇಶ ಮಾಡಿ ದೇವಿಗೆ ವಿಶೇಷ ಪೂಜೆ ಸಲ್ಲಿಸುತ್ತಿದ್ದಂತೆ ಕರಗ ಹೊತ್ತ ಮೇಲೂರಿನ ಧಮೇಂದ್ರ ಅವರು ವೀರಕುಮಾರರು ಗೋವಿಂದ.. ಗೋವಿಂದ.. ಗೋವಿಂದಾ ನಾಮಸ್ಮರಣೆಯೊಂದಿಗೆ ಖಡ್ಗಗಳನ್ನು ಝುಳಪಿಸುತ್ತಾ ಹೂವಿನ ಕರಗಕ್ಕೆ ಸ್ವಾಗತ ಕೋರಿದರು.

ದೇವಾಲಯದಿಂದ ಹೂರಬಂದ ಹೂವಿನ ಕರಗ ತಮಟೆಗಳ ತಾಳಕ್ಕೆ ಕುಣಿಯುತ್ತಾ ಜನಸಾಗರವನ್ನು ರೋಮಾಂಚನಗೊಳಿಸಿತು.

ಮಹಿಳೆಯರು ಹೂವಿನ ಕರಗ ತಮ್ಮ ಮನೆ ಮುಂದೆ ಬರುವುದಕ್ಕೂ ಮುಂಚೆ ಬಣ್ಣದ ರಂಗೋಲಿ ಹಾಕಿ ಸ್ವಾಗತಿಸಿದರು. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಿಂದ ಸುಮಾರು 50 ಸಾವಿರಕ್ಕೂ ಹೆಚ್ಚು ಭಕ್ತರು ಜಮಾಯಿಸಿದ್ದರು. ಶಾಸಕ ಎಸ್.ಎನ್.ಸುಬ್ಬಾರೆಡ್ಡಿ, ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ.ಮುನಿರಾಜು, ಕರಗ ಸಮಿತಿ ಸದಸ್ಯರಾದ ಬಿ.ಆರ್.ನರಸಿಂಹನಾಯ್ಡು, ಎ.ಜಿ.ಸುಧಾಕರ್, ಸಿ.ಎಸ್.ವೆಂಕಟೇಶ್, ಮರಿಯಪ್ಪ, ಎ.ಸೂರ್ಯನಾರಾಯಣರೆಡ್ಡಿ, ಆದಿಮೂರ್ತಿ, ಗಡ್ಡಂ ನರಸಪ್ಪ, ಬೈಯಪ್ಪರೆಡ್ಡಿ, ಸುಬ್ಬರಾಯಪ್ಪ, ಅರ್ಚಕ ಅಪ್ಪುಸ್ವಾಮಿ ಮತ್ತಿತರರು ಇದ್ದರು.

ಪಟ್ಟಣದ ಗ್ರಾಮದೇವತೆ ಗಂಗಮ್ಮ ದೇವಿಯ ಸನ್ನಿಧಿಯಲ್ಲಿ ಹೂವಿನ ಕರಗ ಮಹೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

40 ಸಾವಿರ ಭಕ್ತರಿಗೆ ಊಟದ ವ್ಯವಸ್ಥೆ

ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ.ಮುನಿರಾಜು ನೇತೃತ್ವದಲ್ಲಿ ಅನ್ನಪ್ರಸಾದ ಕಾರ್ಯಕ್ರಮ ಅಯೋಜಿಸಿ ಸುಮಾರು 40 ಸಾವಿರ ಸಹಸ್ರಾರು ಭಕ್ತರಿಗೆ ತಟ್ಟೆ ಇಡ್ಲಿ, ರೈಸ್‌ಬಾತ್ ದಾಸೋಹ ನಡೆಯಿತು. ಬಾಗೇಪಲ್ಲಿಯ ಕರಗ ಮಹೋತ್ಸವಕ್ಕೆ ಈ ಬಾರಿ ನಿರೀಕ್ಷೆಗೂ ಮೀರಿ ಭಕ್ತರು ಆಗಮಿಸಿದ್ದರು.

ಮಾಸ್ತಿ ಸಿಪಿಐ ವಿರುದ್ಧ ಕಾನೂನು ಹೋರಾಟ

ಕೋಲಾರ: ಮಾಲೂರು ಶಾಸಕ ನಂಜೇಗೌಡರ ಕೈಗೊಂಬೆಯಾಗಿರುವ ಮಾಸ್ತಿ ಸರ್ಕಲ್ ಇನ್‌ಸ್ಪೆಕ್ಟರ್ ಓಂಪ್ರಕಾಶ್ ವಿರುದ್ಧ ಐಜಿ ಅವರಿಗೆ ದೂರು ನೀಡುವ ಜತೆಗೆ ಸ್ವಾಭಿಮಾನಿ ಜನತಾ ಪಕ್ಷದ ಮುಖಂಡ ಗೋಪಿನಾಥ್‌ರನ್ನು ಥಳಿಸಿರುವ ಈರೇಗೌಡರ ಬದಲು



ಅವರ ಚಾಲಕನನ್ನು ಆರೋಪಿ ಮಾಡಿರುವ ಎಫ್‌ಐಆರ್ ಅನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುತ್ತದೆ ಎಂದು ಪಕ್ಷದ ಸ್ಥಾಪಕ ಹೂಡಿ ವಿಜಯಕುಮಾರ್ ಹೇಳಿದರು. ಮಾಲೂರು ತಾಲೂಕಿನ ದೊಡ್ಡಕಡತೂರು ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮೇ.11 ರಂದು ತೊರಲಕ್ಕಿಯಲ್ಲಿ ಜಾತ್ರೆ ಹಾಗೂ ದೀಪೋತ್ಸವ ಇರುವ ಸಂಬಂಧ ಮುಖಂಡ ಗೋಪಿನಾಥ್ ಅವರು ಅನ್ನದಾನದ ಸಂಬಂಧ ಬ್ಯಾನರ್, ಫ್ಲೆಕ್ಸ್ ಹಾಕಿಸುತ್ತಿರುವಾಗ ಸ್ಥಳಕ್ಕೆ ಬಂದ ಶಾಸಕರ ಸಹೋದರ ಈರೇಗೌಡರು ಗೋಪಿನಾಥ್‌ರನ್ನು ಥಲಿಸಿ ಅಶ್ಲೀಲವಾಗಿ ನಿಂದಿಸಿದ್ದಾರೆ. ಈ ಕುರಿತು ಪೊಲೀಸ್ ಐಜಿಗೆ ದೂರು ನೀಡುವ ಜತೆಗೆ ನ್ಯಾಯಾಲಯದಲ್ಲಿ ಎಫ್‌ಐರ್‌ನ್ನು ಪ್ರಶ್ನಿಸಲಾಗುತ್ತದೆ ಎಂದು ತಿಳಿಸಿದರು. ಶಾಸಕರ ಜತೆಗೆ ಕೈ ಜೋಡಿಸಿದ ಬಹುತೇಕ ಅಧಿಕಾ ರಿಗಳು ಕಷ್ಟ ನಷ್ಟ ಅನುಭವಿಸುತ್ತಿದ್ದು ಇಂದಿನ ಮಾಸ್ತಿ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಮಾಲೂರು ತಹಸೀಲ್ದಾರ್ ಅವರು ಇದನ್ನು ಮನಗಂಡು ಸಂವಿಧಾನದಂತೆ ನಡೆಯಬೇಕು ಎಂದು ವಿಜಯಕುಮಾರ್ ಆಗ್ರಹಿಸಿದರು.

ಅನುದಿನವೂ ವಿರಾಮಕ್ಕೆ ಒಂದು ನೆಪ

ಆರಾಮ

@vishwavaninews
ವಿಶ್ವವಾಣಿ
ಬೆಂಗಳೂರು
12-05-2025
ಸೋಮವಾರ

ಚಿತ್ತವಿಹಾರ

ಇರಲಿ, ವಿಶ್ರಾಂತಿ

ಆಧುನಿಕ ಕಾಲಘಟ್ಟದಲ್ಲಿ ಬದುಕುತ್ತಿರುವ ನಮಗೀಗ ಬಿಡುವಿಲ್ಲದ ಕಾರ್ಯಯೋಜನೆಗಳು. ಸದಾ ಒತ್ತಡ. ಮತ್ತೆ ಮತ್ತೆ ಇಲ್ಲದುದನ್ನು ಪಡೆಯುವ ಧಾವಂತ. ಒಂದು ಕೈಗೆ ಎಟುಕಿದ ತಕ್ಷಣಕ್ಕೆ ಮತ್ತೊಂದಕ್ಕಾಗಿ ಹಂಬಲಿಸುತ್ತದೆ ನಮ್ಮ ಮನಸ್ಸು. ಸಲ್ಲದ ಕಾರಣಗಳಿಗೆ ನಿರಾಸೆ ನೋವು; ಬದುಕನ್ನು ನಿತ್ಯವೂ ಸಂಕೀರ್ಣಗೊಳಿಸಿಕೊಳ್ಳುತ್ತಲೇ ಇರುತ್ತೇವೆ. ಎಲ್ಲವೂ ಇದ್ದರೂ ಏನೂ ಇಲ್ಲ ಎನ್ನುವ ಭಾವ. ಅದೆಷ್ಟೋ ಬಾರಿ ನಮ್ಮ ಬಯಕೆಗಳಿಗೆ ಕಡಿವಾಣ ಹಾಕಲು ಬಯಸಿ ಸೋಲುತ್ತೇವೆ. ಬಹುಮುಖ್ಯವಾಗಿರುವುದನ್ನು ಅರಿತು ಕೊಳ್ಳದೇ, ಎಲ್ಲವನ್ನೂ ಬೆನ್ನಟ್ಟಿ ಧಾವಿಸುವ ಧಾವಂತದಲ್ಲಿ ನಾವೆಲ್ಲ ಬಂಧಿಯಾಗಿದ್ದೇವೆ. ಚಟುವಟಿಕೆಯಲ್ಲಿ ನಿರತವಾಗಿದ್ದರೂ ಝೆನ್ ಗುರುಗಳೊಬ್ಬರು ಎಂದೂ ಬೇಸರಿಸಿಕೊಂಡ ಸಂದ ರ್ಭವನ್ನು ಅವರ ಅನುಯಾಯಿಗಳು ಕಂಡಿರ ಲಿಲ್ಲ. ಸದಾ ಅನುಯಾಯಿಗಳ ಜೊತೆ ಬೆರೆತು ಅವರ ಕಷ್ಟ ಕಾರ್ಪಣ್ಯಗಳನ್ನು ತುಂಬ ಸಂಯಮ ದಿಂದ ಆಲಿಸುತ್ತಿದ್ದರು. ಸಂತಸ ಸಂಭ್ರಮದಿಂದ ಅವರು ತಮ್ಮ ಬದುಕನ್ನು ಆನಂದಿಸುತ್ತಿದ್ದರು. ಇಂತಹ ಅವರ ಆನಂದಮಯ ಬದುಕಿನ ರಹಸ್ಯ ಮಾತ್ರ ಎಲ್ಲರಿಗೂ ಯಕ್ಷ ಪ್ರಶ್ನೆಯಾಗಿತ್ತು. ಒಬ್ಬ ಅವರ ಅನುಯಾಯಿ ಸಮೃದ್ಧ ಸಂತಸದ ಬದುಕಿನ ರಹಸ್ಯವನ್ನು ಕೇಳಿದಾಗ ಝೆನ್ ಗುರುಗಳು ಅಂತಹದ್ದೇನೂ ವಿಶೇಷ ಸಂಗತಿ ಇಲ್ಲ. ನಾನು ವಾರದಲ್ಲಿ ಒಂದು ಬಾರಿಯಾದರೂ ನನಗಿಷ್ಟವಾದ ಕೆಲಸಗಳಲ್ಲಿ ನನ್ನನ್ನು ತೊಡಗಿಸಿಕೊಳ್ಳುತ್ತೇನೆ. ಕೆಲವು ಬಾರಿ ಏನೂ ಮಾಡದೇ ಸುಮ್ಮನಿರುತ್ತೇನೆ. ನನ್ನ ಅಂತರಂಗದ ಮಾತುಗಳಿಗೆ ಕಿವಿಯಾಗುತ್ತೇನೆ. ದನಿಯಾಗುತ್ತೇನೆ. ಕೆಲವು ಕ್ಷಣಗಳ ಕಾಲ ಸುಮ್ಮನೆ ವಿಶ್ರಮಿಸುತ್ತೇನೆ ನನ್ನ ಅಂತರಾಳದ ಭಾವನೆಗಳನ್ನು ಪೋಷಿಸುತ್ತೇನೆ. ಎಂದರು.

ಒತ್ತಡದ ಮಧ್ಯೆಯೂ ವಿಶ್ರಾಂತಿ ಪಡೆಯುವ ಅಗತ್ಯತೆಯನ್ನು ಅರಿತುಕೊಳ್ಳಬೇಕು. ವಿಶ್ರಾಂತಿ ಎನ್ನುವುದು ದಿನವಿಡೀ ಏಕಾಂಗಿಯಾಗಿರುವುದು ಎಂದರ್ಥವಲ್ಲ. ದೈನಂದಿನ ವ್ಯವಹಾರಿಕ ಕೆಲಸಗಳಿಂದ ಒಂಚೂರು ದೂರ ಸರಿದು ಇನ್ನಿತರ ಕೆಲಸಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದು. ನಮ್ಮ ಕುಟುಂಬದವರೊಡನೆ ಕಾಲ ಕಳೆಯುವುದು, ಮಕ್ಕಳೊಡನೆ ಒಂದಷ್ಟು ಹರಟುವುದು, ಪ್ರೀತಿಪಾತ್ರ ಸ್ನೇಹಿತರೊಂದಿಗೆ ಸುತ್ತಾಡುವುದು. ಬೆಳಗಿನ ಸಮಯದಲ್ಲಿ ಒಂದಷ್ಟು ಸಮಯ ವಾಯುವಿಹಾರ ಮಾಡುವುದು, ಪ್ರಶಾಂತವಾದ ನದಿಯ ತಟದಲ್ಲಿ ಸಾಗುತ್ತ ನೀರಿನ ಅಲೆಗಳನ್ನು ಮಂತ್ರಮುಗ್ಧವಾಗಿ ನೋಡುತ್ತ ನಿಲ್ಲುವುದು. ಇಷ್ಟವಾದ ಪುಸ್ತಕವನ್ನು ಓದುವುದು. ಸಂಗೀತವನ್ನು ಕೇಳುವುದು. ಕಣ್ಣು ಮುಚ್ಚಿ ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತುಕೊಳ್ಳುವುದು. ಇಂತಹ ಕೆಲವು ಚಟುವಟಿಕೆಗಳು ಅಂತರಂಗದ ಭಾವನೆಗಳನ್ನು ಪೋಷಿಸಲು, ಚೈತನ್ಯಶೀಲರಾಗಲು, ಜೀವನವನ್ನು ಇನ್ನಷ್ಟು ಚೆನ್ನಾಗಿ ಕಳೆಯಲು ಸಹಾಯ ಮಾಡಬಲ್ಲದು. ಇಷ್ಟವೆನಿಸುವ ಸಂಗತಿಗಳಲ್ಲಿ ಒಂದಷ್ಟು ಕಾಲ ಕಳೆಯುವುದನ್ನು ರೂಢಿಸಿಕೊಂಡರೆ ಖಂಡಿತವಾಗಿಯೂ ನಾವು ಹೆಚ್ಚು ಸೃಜನಶೀಲರಾಗಲು, ಮತ್ತು ಹೆಚ್ಚು ಸಂತಸದಿಂದ ಇರಲು ಸಹಾಯವಾಗುತ್ತದೆ.

● ಮಹಾದೇವ ಬಸರಕೋಡ

ಚಿತ್ತವಿಹಾರ

ಆಪರೇಷನ್ ಸಿಂಧೂರ

ಕೆಲವು ವಿಷಯಗಳಲ್ಲಿ
ಮಾಡಿಕೊಳ್ಳಬೇಕು
ತಿದ್ದಿಕೊ ಎಂಬ ಅರಿಕೆ
ಮಿತಿ ಅತಿಯಾದಾಗ
ತಕ್ಕ ಬುದ್ಧಿ ಕಲಿಸಿ
ನೀಡಲೇಬೇಕು ಎಚ್ಚರಿಕೆ!

● ಮಹಾಂತೇಶ ಮಾಗನೂರ

ಕೊಲ್ಲೂರು ಸನಿಹದಲ್ಲಿರುವ ಕೊಡಚಾದ್ರಿ ಶಿಖರದಿಂದ ಕಾಣುವ ನೋಟವು ಬಹು ಸುಂದರ. ವಾತಾವರಣ ತಿಳಿಯಾಗಿದ್ದರೆ, ಇಲ್ಲಿಂದ ಕಾಣಿಸುವ ಸೂರ್ಯಾಸ್ತದ ದೃಶ್ಯವು ಒಂದು ಅದ್ಭುತ. ಮುಳುಗುವ ಸೂರ್ಯನು ಚಿನ್ನದ ಕೊಡ, ಬಳೆಯ ರೂಪವನ್ನು ಪಡೆಯುವ ವಿಚಾರವೇ ಒಂದು ವಿಸ್ಮಯ. ಚಾರಣ ಮಾಡುವವರಿಗೂ ಈ ಶಿಖರ ಉತ್ತಮ ಅನುಭವ ನೀಡಬಲ್ಲದು. ನಡೆಯಲು ಕಷ್ಟ ಎನಿಸುವವರಿಗೆ, ರೋಮಾಂಚಕ ಎನಿಸುವ ಜೀಪ್ ಪಯಣ ಲಭ್ಯ.

ಮೋಹಕ ಶಿಖರ ಕೊಡಚಾದ್ರಿ

● ಮೋಹನ ಭಟ್ಟ, ಅಗಸೂರು

ಕೊಡಚಾದ್ರಿಗೆ ಪಯಣ ಎಂಬುದು ಅತ್ಯಂಕ ಆಕರ್ಷಣೀಯವಾದುದು. ಕರ್ನಾಟಕದಲ್ಲಿಯ ಹತ್ತಾರು ಗಿರಿಶಿಖರಗಳಲ್ಲಿ ಇದು ಮಹತ್ವದ ಸ್ಥಾನ ಪಡೆದಿದೆ. ಆದಿ ಶಂಕರಾಚಾರ್ಯರು ಇಲ್ಲಿಗೆ ಆಗಮಿಸಿ ಧ್ಯಾನವನ್ನು ಮಾಡಿದ್ದರು, ದೇವಿ ಮುಕಾಂಬಿಕೆ ಪ್ರಸನ್ನಳಾಗಿ ಆಶೀರ್ವದಿಸಿದ್ದಳು ಎಂಬುದು ಐತಿಹ್ಯವಾಗಿದೆ. ಕಾಶ್ಮೀರದಲ್ಲಿಯ ಸರ್ವಜ್ಞ ಪೀಠದಂತೆ ಇಲ್ಲಿಯೂ ಇತ್ತು ಎಂದು ಹೇಳಲಾಗುವದು. ಈಗ ಶಿಖರದ ಕೆಳಭಾಗದಲ್ಲಿರುವ ಪಾರ್ವತಿದೇವಿ ದೇವಾಲಯ ಮುಕಾಂಬಿಕಾ ದೇವಿಯ ಮೂಲಸ್ಥಾನ ವಾಗಿತ್ತು. ನಂತರ ಕೊಲ್ಲೂರಿಗೆ ಸ್ಥಳಾಂತರವಾಯಿತು. ಇದಕ್ಕೆ ಪೂರಕವಾಗಿ ಕೊಲ್ಲೂರಿನ ಮುಕಾಂಬಿಕಾ ದೇವಸ್ಥಾನದ ಮುಂದಿರುವ ತ್ರೀಶೂಲವಿದೆ. ಇದನ್ನು ದೇವಿ ದುಷ್ಟ ಶಕ್ತಿಯ ಸಂಹಾರಕ್ಕಾಗಿ (ಕೊಲ್ಲಲು) ಬಳಸಿದ ಆಯುಧವಾಗಿತ್ತು. ಮುಂದೆ ಇದೇ ಕೊಲ್ಲೂರಾಯಿತು. ದೈವತ್ವ ಹೊಂದಿದ್ದ ಶಂಕರರು ಸ್ಥಾಪಿಸಿದ ದೇವಳಗಳು ಇಂದಿಗೂ ಭಕ್ತರ ಕೇಂದ್ರವಾಗಿದೆ. ಅವರು ಕುಳಿತ ಪ್ರದೇಶಗಳು ಎಲ್ಲೆಡೆ ಪೂಜಾಕೇಂದ್ರವಾಗಿವೆ. ಇತ್ತೀಚೆಗೆ ನಡೆದ ಶಂಕರ ಪಂಚಮಿ ಮಹೋತ್ಸವದ ಸಂದರ್ಭದಲ್ಲಿ ಕೊಡಚಾದ್ರಿಯ ಶಂಕರ ಶಿಖರಕ್ಕೆ ಸಾವಿರಾರು ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದ್ದಾರೆ.

ಕೊಡಚಾದ್ರಿಗೆ ವರ್ಷ ಪೂರ್ತಿ ಪ್ರವಾಸಿಗರು, ಯಾತ್ರಿಕರು, ಚಾರಣಿಗರು, ಸಾಹಸಕ್ಕೆ ಆಗಮಿಸುವವರ ಸಂಖ್ಯೆ ಏರುತ್ತಲೇ ಇದೆ. ಕೊಲ್ಲೂರಿಗೆ ಆಗಮಿಸಿ ಬೆಳಿಗ್ಗೆ ಜೀಪಿನಲ್ಲಿ ಬಂದು ಶಂಕರ ಶಿಖರಕ್ಕೆ ಆಗಮಿಸಿ ವಾಪಸಾಗುವವರೂ ಇದ್ದಾರೆ.



ಮುಕಾಂಬಿಕಾ ವನ್ಯಜೀವಿ ಉದ್ಯಾನವನ ಕೂಡಾ ಇದಾಗಿದೆ. ನಿಟ್ಟೂರು ಪ್ರವೇಶದ್ವಾರದ ಮೂಲಕ ಬೆಳಗ್ಗೆ ಆರರಿಂದ ಸಂಜೆ ನಾಲ್ಕರವರೆಗೆ ಮಾತ್ರ ಪ್ರವೇಶವೇಳೆಯನ್ನು ನಿಗದಿ ಪಡಿಸಲಾಗಿದೆ.

ಕೇರಳದ ನಂಟು

ಕೊಲ್ಲೂರಿಗೂ, ಕೊಡಚಾದ್ರಿಗೂ ಮತ್ತು ಕೇರಳದ ಜನರಿಗೂ ಆತ್ಮೀಯ ಸಂಬಂಧವಿದೆ. ಕೇರಳದ ಕಾಲಟಿಯ ಶಂಕರಾಚಾರ್ಯರು ಕೊಲ್ಲೂರು ಮತ್ತು ಕೊಡಚಾದ್ರಿಗೆ ಬಹು ಹಿಂದೆಯೇ ಬಂದು, ಇಲ್ಲಿನ ಧಾರ್ಮಿಕ ತಾಣಗಳನ್ನು ಸ್ಥಾಪಿಸಿದ್ದರಿಂದಾಗಿಯೇ ಇರಬಹುದು, ಪ್ರತಿ ವರ್ಷ ಸಾವಿರಾರು ಜನರು ಕೇರಳದಿಂದ ಇಲ್ಲಿಗೆ ಬರುತ್ತಾರೆ. ಧಾರ್ಮಿಕ ಪ್ರವಾಸ ಬರುವ ಕೇರಳದವರು, ಕೊಡಚಾದ್ರಿಯಲ್ಲಿರುವ ಸರ್ವಜ್ಞ ಪೀಠ ಮತ್ತು ಮೂಲ ಮೂಕಾಂಬಿಕಾ ದೇಗುಲವನ್ನು ಕಂಡು ನಮಿಸುತ್ತಾರೆ.

ಪ್ರತಿದಿನ ಸುಮಾರು ಇನ್ನೂರು ಜೀಪ್‌ಗಳು ಪ್ರವಾಸಿಗರನ್ನು ಮತ್ತು ಯಾತ್ರಿಕರನ್ನು ಕರೆದುಕೊಂಡು, ಈ ಮಾರ್ಗವನ್ನು ಪ್ರವೇಶಿಸುತ್ತವೆ ಮತ್ತು ಕೊಡಚಾದ್ರಿಯ ತುದಿಗೆ ಕರೆದೊಯ್ಯುತ್ತವೆ.

ಕೊಡಚಾದ್ರಿಯನ್ನು ಪ್ರವೇಶಿಸಲು ಕೆಲವು ನಿಬಂದನೆಗಳಿವೆ. ನಿಟ್ಟೂರು ಪ್ರವೇಶದ್ವಾರದ ಮೂಲಕ ಅನುಮತಿ ಪಡೆದ, ಜಿಪಿಎಸ್ ಅಳವಡಿಸಿದ, ಅನುಮತಿ ಜೀಪುಗಳಿಗಷ್ಟೇ ಪರ್ವತದ ಮೇಲಕ್ಕೆ ಪ್ರವೇಶ. ಕಲ್ಲು, ಮಣ್ಣುಗಳಿಂದ, ತಿರುವುಗಳಿಂದ ಕೂಡಿದ ಮಣ್ಣು ಕಲ್ಲು ರಸ್ತೆ ಪ್ರಯಾಣ ಕ್ಲಿಷ್ಟ; ಕಡಿದಾದ ದಾರಿಯನ್ನು ಜೀಪುಗಳು ಮಾತ್ರ ಏರಬಲ್ಲವು. ಕೊಡಚಾದ್ರಿಯ ಶಿಖರವೇರುವ ಹಾಗೂ ದೇವಸ್ಥಾನಗಳ ಸಂಕೀರ್ಣ ಇರುವ ಪ್ರದೇಶದ ವರೆಗೆ ಮಾತ್ರ ಇವು ಸಂಚರಿಸುತ್ತವೆ. ಚಾರಣಗರಿಗಾಗಿ ಪ್ರತ್ಯೇಕ ಚಾರಣ ಹಾದಿ ಇಲ್ಲಿದೆ. ಕೊಡಚಾದ್ರಿ ಶಿಖರವೇರುವವರು, ಸನಿಹದಲ್ಲಿರುವ ಹಿಡ್ಲುಮನೆ ಜಲಪಾತವನ್ನು ನ ಓಡಲು ಹೋಗಬಹುದು. ಇಲ್ಲಿದೆ ಸುಂದರ ಜಲಧಾರೆ. ವರ್ಷದ ಎಲ್ಲ ಋತು ಗಳಲ್ಲಿಯೂ (ವಿಶೇಷವಾಗಿ ಅಕ್ಟೋಬರ್ ನಿಂದ ಎಪ್ರಿಲ್ ವರೆಗೆ). ರಾಜ್ಯ ಹಾಗೂ ಹೊರ ರಾಜ್ಯದ ಪ್ರವಾಸಿಗರ ಆಗಮನ ಸಾಮಾನ್ಯ. ಕೊಡಚಾದ್ರಿ ಶಿಖರದ ತಪ್ಪಲಿನಲ್ಲಿ ದೇಗುಲವಿದೆ; ಆಹಾರವನ್ನು ಒದಗಿಸುವ ಒಂದೆರಡು ಮನೆಗಳಿವೆ. ಶಿಖರದ ಬಳಿ ಇರುವ ಕಲ್ಲಿನ ಸರ್ವಜ್ಞಪೀಠದ ಬಳಿ ನಿಂತರೆ, ಬಹು ಸುಂದರ ದೃಶ್ಯ ಕಾಣಿಸುತ್ತದೆ. ಕೊಡಚಾದ್ರಿಗೆ ನಡೆದು ಹೋಗುವುದಾದ್ಲಿ, ಚಾರಣಗರ ಪ್ರವೇಶ ದಿನಕ್ಕೆ ಮುನ್ನೂರು ಎಂದು ನಿಗದಿಪಡಿಸಲಾಗಿದೆ. ಇದಕ್ಕೆ ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸಿ ಪೂರ್ವಾನುಮತಿ ಪಡೆಯುವದು ಕಡ್ಡಾಯ. ಕೊಡಚಾದ್ರಿಯ ಸರಹದ್ದಿನಲ್ಲಿ, ಕೆಳಭಾಗದಲ್ಲಿ ನೂರಾರು ಹೋಮ್ ಸ್ಟೇಗಳಿಗೆ ವರ್ಷಪೂರ್ತಿ ಗ್ರಾಹಕರು ಆಗಮಿಸುತ್ತಾರೆ. ಯಾಂತ್ರಿಕ ನಗರ ಬದುಕಿನಿಂದ ಕೆಲಕಾಲ ದೂರ ಇರಲು, ಮಲೆನಾಡಿನ ಸೌಂದರ್ಯ, ಪ್ರಶಾಂತ ಹಸಿರು ವಾತಾವರಣದಲ್ಲಿ ವಿಹರಿಸಲು ಆಸೆ ಇರುವವರಿಗೆ ಕೊಡಚಾದ್ರಿ, ಒಂದು ಉತ್ತಮ ತಾಣ.

ಅದ್ಭುತ ಸೂರ್ಯಾಸ್ತ

ಕೊಡಚಾದ್ರಿ ಶಿಖರವನ್ನು ಚಾರಣ ಮಾಡಿಯಾದರೂ ಏರಬಹುದು, ಒರಟಾದ ರಸ್ತೆಯಲ್ಲಿ ಜೀಪ್ ಮೂಲಕವೂ ಏರಬಹುದು: ಈ ಸುಂದರ ಶಿಖರದ ತುದಿಯನ್ನು ತಲುಪಿದಾಗ, ಚೇತೋಹಾರಿ ಪ್ರಕೃತಿ ದೃಶ್ಯ ಲಭ್ಯ. ಇದರ ತುದಿಯಿಂದ ಅರಬ್ಬೀ ಸಮುದ್ರ ಕಾಣಿಸುತ್ತದೆ ಮತ್ತು ಅಲ್ಲಿನ ಸೂರ್ಯಾಸ್ತವು ಬಹು ಮೋಹಕ. ವಾತಾವರಣ ತಿಳಿಯಾಗಿದ್ದಾಗ ಮಾತ್ರ ಸೂರ್ಯಾಸ್ತದ ಅತಿ ಸುಂದರ ದೃಶ್ಯ ಲಭ್ಯ; 'ಸಮುದ್ರದಲ್ಲಿ ಸೂರ್ಯನು ಮುಳುಗುವುದು' ಎಂಬ ಮಾತಿಗೆ ತಕ್ಕ ಅರ್ಥವನ್ನು ಇಲ್ಲಿನ ಸೂರ್ಯಾಸ್ತ ಒದಗಿಸುತ್ತದೆ. ನೀರಿನಲ್ಲಿ ಸೂರ್ಯ ಜಾರುವಾಗ, ವಕ್ರೀಭವನದಿಂದಾಗಿ, ಸೂರ್ಯನ ಸ್ವರೂಪವು ತಲೆಕೆಳಗಾದ ಕೊಡಪಾನದ ರೀತಿ, ಬಳೆಯ ರೀತಿ, ಇಂಗ್ಲಿಷ್ ಟೋಪಿಯ ರೀತಿ ಕಾಣಿಸುವುದು ನಿಸರ್ಗದ ಅದ್ಭುತ ಎಂದೇ ಹೇಳಬಹುದು. ಈಚಿನ ದಿನಗಳಲ್ಲಿ ವಾತಾವರಣದಲ್ಲಿ ಸೇರಿಕೊಂಡಿರುವ ಕಲ್ಮಶದಿಂದಾಗಿ, ಪ್ರತಿ ದಿನ ಸೂರ್ಯಾಸ್ತವು ಸ್ಪಷ್ಟವಾಗಿ ಕಾಣಿಸದು.

ಅತಿರಂಜಿತ ಸುದ್ದಿ ಸರಿಯಲ್ಲ!

**ಮುತ್ತಿರುವುದೊಂದು ಭೂಮಿಯನಿಂದು ದುರ್ದೈವ !
ಮೃತ್ಯು ಕುಣಿಯುತಿಲಿಹನು ಕೇಕೆ ಹಾಕುತಲಿ
ಸುತ್ತಿಪುದು ತಲೆಯನನುದಿನದ ಲೋಕವಾರ್ತೆ
ಇದಕೆಲ್ಲ ಕಡೆಯಂತೋ - ಮಂಕುತಿಮ್ಮ॥**

ಈಗ ಈ ಜಗತ್ತಿನಲ್ಲಿ ನಡೆಯುತ್ತಿರುವುದಾದರೂ ಏನು? ಭೂಮಿಯನ್ನು ಒಂದು ದುರ್ದೈವವು ಮುತ್ತಿಕೊಂಡಿದೆ. ಇಂದು ಜಗತ್ತಿನ ವ್ಯವಸ್ಥೆಗಳು, ವ್ಯವಸ್ಥೆಗಳಲ್ಲಿನ ವೈಪರೀತ್ಯಗಳು, ವೈಪರಿತ್ಯಗಳನ್ನು ಈ ಮೀಡಿಯಾ ಹಾಗೂ ಪತ್ರಿಕೋದ್ಯಮದವರು ತೋರಿಸುವಂಥಹ ಪರಿ, ಅಂದರೆ ನಡೆಯುವ ಘಟನೆಗಳನ್ನು ವೈಭವೀಕರಿಸುವುದು, ರಂಜನೀಯವಾಗಿಸುವುದು. ಈ ಜಗದ ವೈಪರೀತ್ಯಗಳನ್ನು ಅತಿಯಾದ ವೈಭವೀಕರಿಸುವುದರಿಂದ ಸಮಾಜದಲ್ಲಿ ಆತಂಕ, ತಳಮಳವನ್ನು ಸೃಷ್ಟಿಸುವುದೇ ಆಗಿದೆ.

ಇಂದು ತಂತ್ರಜ್ಞಾನ ಮುಂದುವರೆದು ಮಾಹಿತಿ ಎಂಬುದು ನಮ್ಮ ಬೆರಳಿನ ತುದಿಯಲ್ಲಿಯೇ ಇದೆ. ಈ ವಿಜ್ಞಾನ ಮುಂದುವರೆದು ಮಾಹಿತಿಯ ತಂತ್ರಜ್ಞಾನ ಮುಂದುವರೆದ ಹಾಗೆಲ್ಲ ಜನರಲ್ಲಿ ಶಾಂತಿ ನೆಮ್ಮದಿ ಮೂಡುವ ಬದಲಿಗೆ ಮತ್ತಷ್ಟು ಆತಂಕಗಳೇ, ತಳಮಳವೇ ಸೃಷ್ಟಿಯಾಗುತ್ತಿರುವುದೇ ಈ ಸಮಾಜದಲ್ಲಿ ಬೆಳವಣಿಗೆಗಳಾಗುತ್ತಿವೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಅಂದರೆ ಪ್ರತಿದಿನವೂ ಜಗತ್ತಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅವಲೋಕಿಸಿ ದಲ್ಲಿ ಜಾತಿ ಜಾತಿಗಳ ನಡುವೆ, ಧರ್ಮಧರ್ಮಗಳ ನಡುವೆ, ನಾನು ಶ್ರೇಷ್ಠ ಆತ ಕನಿಷ್ಟ ಎಂಬ ಅಸಮಾನತೆಗಳು, ಸ್ವಾರ್ಥಸಹಿತ ಬದುಕಿನ ನಡುವಳಿಗಳು, ಕಾಮ, ಕ್ರೋಧ, ಮಧ, ಲೋಭ, ಮೋಹ, ಮಾತ್ಸರ್ಯಗಳ ಹೊಯ್ದಾಟದಲ್ಲಿ ಅಲ್ಲಿ ಸ್ಫೋಟ, ಅಲ್ಲಿ ಇಷ್ಟು ಜನರ ಸಾವು, ಇಲ್ಲಿ ಕೊಲೆ, ಅಲ್ಲಿ ಬೆಂಕಿ, ಅನ್ಯಾಯ, ಅಕ್ರಮಗಳು ಜರುಗುತ್ತಲೇ ಇರುತ್ತವೆ. ಈ ಉನ್ಮತ್ತತೆಯ ಕೋಲಾಹಲವನ್ನು ಈ ಕಗ್ಗದಲ್ಲಿ 'ಮುತ್ತಿರುವುದೊಂದು ಭೂಮಿಯನಿಂದು ದುರ್ದೈವ' ಎಂದು ಉಲ್ಲೇಖಿಸಿ, ನಡೆಯುತ್ತಿರುವ ಅನ್ಯಾಯ ಅಕ್ರಮಗಳನ್ನು 'ಮೃತ್ಯು ಕುಣಿಯುತಲಿಹನು ಕೇಕೆ ಹಾಕುತಲಿ' ಎಂದು ವಿಷಾದಿಸುತ್ತಾರೆ. ಲೋಕದಲ್ಲಿ ಯಾವುದೇ ಘಟನೆಗಳು ಜರುಗಿದರೂ ಸಹ ಅದನ್ನು ಜನರಿಗೆ ತಲುಪಿಸುವ ಹೊಣೆಗಾರಿಕೆಯೇ ಲೋಕವಾರ್ತೆಯ (ಮೀಡಿಯಾ) ಕೆಲಸ. ಇಂಥಹ ಹೊಣೆಗಾರಿಕೆಯನ್ನು ಅರಿತವರು ತಮ್ಮ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆಯೇ ? ಎಂಬುದು ಈ ಮುಕ್ತಕದ ತಿರುಳು.

ಸಮಾಜದಲ್ಲಿ ಯಾವುದೇ ಅಹಿತಕರ ಘಟನೆ ಜರುಗಿದಾಗ ಅದನ್ನು ವೈಭವೀಕರಿಸಿ ಸಮಾಜದ ಮುಂದೆ ಇಟ್ಟಾಗ ಅದರಿಂದ ಜನರಲ್ಲಿ ಆತಂಕ ಹೆಚ್ಚಾಗಿ ಜನರಲ್ಲಿ ತಳಮಳ ಸೃಷ್ಟಿಯಾಗುತ್ತದೆ. ಇಂಥಹ ವ್ಯವಸ್ಥೆಗಳಿಂದ ಬೆದರಿದವರ ಮೇಲೆ ಹಗ್ಗವೆಸೆದರೂ ಆ ಹಗ್ಗವನ್ನೇ ಹಾವು ಎಂದುಕೊಳ್ಳುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುವಂತಾಗಿದೆ. ಉದಾಹರಣೆಗೆ, ಗಡಿಯಲ್ಲಿ ಆತಂಕದ ಸ್ಥಿತಿಯಿದ್ದು, ಕೆಲವು ಕ್ಷಿಪಣಿಗಳು ಸ್ಫೋಟಗೊಂಡಾಗ, ದೊಡ್ಡ ಬಾಂಬುಗಳೇ ಸ್ಫೋಟಗೊಂಡವು ಎಂಬ ಅತಿರಂಜಿತ ವರದಿಯು, ವೀಕ್ಷಕರ ಮನಸ್ಸಿನಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತದೆ. ಸಮಾಜದಲ್ಲಿ ಆತಂಕ ನಿರ್ಮಾಣ ಮಾಡುವಂತಹ ಸುದ್ದಿಗಳಿಗೆ ಕಡಿಮೆ ಪ್ರಾಶಸ್ತ್ಯ ನೀಡಿ, ಜನರಲ್ಲಿ ಆತಂಕ ದೂರಮಾಡಿ ಅವರಲ್ಲಿ ನೆಮ್ಮದಿಯ ವಾತಾವರಣ ಕಲ್ಪಿಸುವ ಕೆಲಸಗಳಾಗಬೇಕಿದೆ. ಶಾಂತ ಸಾಗರದಂತಿರುವ ಜನರಲ್ಲಿ ಭಯದ ವಾತಾವರಣವನ್ನು ಕಲ್ಪಸುವ ವ್ಯವಸ್ಥೆಗೆ ಕಡೆಯೆಂತೋ! ಎಂದು ಅರಿತುಕೊಂಡು ಪತ್ರಿಕಾ ರಂಗವು ಪ್ರಜಾಪ್ರಭುತ್ವದ ನಾಲ್ಕನೆ ಅಂಗವೆಂಬ ಜವಾಬ್ದಾರಿಯನ್ನ ಅರಿತು, ಜನರಲ್ಲಿ ವಿಶ್ವಾಸ ತುಂಬುವಂತಹ ಕೆಲಸ ಮಾಡಬೇಕು.

ಮತ್ತೆ ಬರಲಿ ಅಮೃತ ಘಳಿಗೆ



ಕನಸುಗಳನ್ನು, ಭಾವನೆಗಳನ್ನು ರಂಗುರಂಗಾಗಿ ವರ್ಣಿಸಿ ಆನಂದಿಸುವ ಕಾಲ ಮುಗಿದು, ಈಗ ವಿಚಾರಪೂರ್ಣವಾದ ವಾಸ್ತವತೆಯ ನೆಲೆಯ ಮೇಲೆ ನಿರ್ಮಿತವಾದ ಕಾವ್ಯಗಳ ಸೃಷ್ಟಿಯಾಗುತ್ತಿದೆ. ಭಾಷೆಯ ಉಪಮೆ, ಉತ್ಪ್ರೇಕ್ಷೆಗಳಿಂದ ವಿಷಯ ಗಳನ್ನು ವರ್ಣಿಸುವ ಬದಲು, ಪ್ರತಿಮೆಗಳಿಂದ ಅರ್ಥವನ್ನು ಸೂಚಿಸುವಂಥ ಕವನಗಳು ಒಡ ಮೂಡುತ್ತಿವೆ. ನಮ್ಮ ಕವಿಗಳು ಇತ್ತೀಚೆಗೆ ಕಾವ್ಯದಲ್ಲಿ ಪ್ರತಿಮೆಗಳನ್ನು ಉಪಯೋಗಿಸಿ, ಕಾವ್ಯಕ್ಕೆ ಹೊಸ ಸತ್ವವನ್ನು ತುಂಬುತ್ತಿದ್ದಾರೆ. ಟಿ.ಎಂ. ರಮೇಶ್ ಕೂಡ ಇದಕ್ಕೆ ಹೊರತಾಗಿಲ್ಲ ಎಂಬುದು ಅವರ 'ಮತ್ತೆ ಬರಲಿ ಅಮೃತ ಘಳಿಗೆ' ಸಂಕಲನದ ಕವಿತೆಗಳನ್ನು ಓದಿದಾಗ ಅರಿವಾಗುತ್ತದೆ. **(ಬೆನ್ನುಡಿಯಿಂದ)**

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1		2	■	3		4	■	5
■	■	6			■	7		
8	9		■		■		■	
■		■	10		11	■	12	■
13				■	14			
■		■	15	16		■		■
17	■	18	■		■	19		
20			■	21			■	■
	■	22			■	23		

ಎಡದಿಂದ ಬಲಕ್ಕೆ

1. ಜನರ ಮಧ್ಯೆ ಜೋಪಾನ (3)
3. ದೊರಕು, ಸಿಗು (3)
6. ನೀರಾಗು, ಮರುಕಗೊಳ್ಳು (3)
7. ಮಳೆ ತರಬಲ್ಲ ಮೋಡ (3)
8. ನೂಲು ತೆಗೆಯುವ ಉಪಕರಣ (3)
10. ಸದರವಿಲ್ಲಿ ತಲೆಕೆಳಗಾಗಿದೆ (3)
13. ಚತುರ್ಯುಗಗಳಲ್ಲಿ ಈಗಿನದ್ದು (4)
14. ನಾರದರ ಬಾಯಲ್ಲಿ ಸದಾ ಇರುವ ಹೆಸರು (3)
15. ಜೈನರ ದೇವಾಲಯ (3)
19. ಒಂದು ಬಗೆಯ ಸೊಪ್ಪು ತರಕಾರಿ (3)
20. ಗಾಡಿಯಲ್ಲಿ ಕಂಡ ಇಂದ್ರಜಾಲ (3)
21. ವರ್ಷಾವಧಿಯ ಎಂದರ್ಥ (3)
22. ಮನುಜ ಮಾಡುವ ಕಾರ್ಯ (3)
23. ವಿಧಿ ಬರಹವಿದೆ ಎಂದು ನಂಬಿರುವ ಹಣೆ (3)

ಮೇಲಿಂದ ಕೆಳಕ್ಕೆ

2. ನಲಿಯುವಾಗ ಕಂಡದ್ದು ಅಸಲಿಯಲ್ಲದ್ದು (3)
3. ಚುರುಕು ಅಥವಾ ಅವಸರ (4)
4. ಸುಂದರವಾದ ಮುಖವುಳ್ಳವನು (3)
5. ನೀರು ಹರಿಯುವ ನಾಲೆ (3)
9. ಇರುವ ಸ್ಥಳದಿಂದ ಅಲ್ಲಾಡಿಸು (4)
10. ಕಂಕುಳ ಇಲ್ಲಿ ಅಡಿಮೇಲಾಗಿದೆ (3)
11. ಒಂದು ಬಗೆಯ ವಾದ್ಯ ವಿಶೇಷ (3)
12. ಬೇರೆ ದೇಶದ ರಾಜಪ್ರತಿನಿಧಿ (4)
16. ಜೊತೆಯಲ್ಲಿ ವಾಸಿಸುವುದು (4)
17. ದೊಡ್ಡದಾದ ಭೇರಿ (3)
18. ಮಣ್ಣಿನಿಂದ ಮಾಡಿದ ಚಿಕ್ಕ ಪತ್ರೆ (3)
19. ಜಗಳ ಇಲ್ಲಿ ಅಸ್ತವ್ಯಸ್ತವಾಗಿದೆ (3)

ಸರಿಯುತ್ತರಗಳು

ರಾಮೇಶ್ವರಂನ ಲಿಂಗಗಳ ಕಥೆ

ತಮಿಳುನಾಡಿನ ''ರಾಮೇಶ್ವರಂ'' ಶಿವನ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದೆ. ಹಿನ್ನೆಲೆ ಪ್ರಕಾರ ತ್ರೇತಾಯುಗದ ರಾಮಾಯಣದಲ್ಲಿ ರಾವಣ ಸೀತೆಯನ್ನು ಮೋಸದಿಂದ ಅಪಹರಿಸಿದನು. ಆಕೆಯನ್ನು ಬಂಧನದಿಂದ ಬಿಡಿಸಿ ತರಲು ರಾಮ-ರಾವಣರಿಗೆ ಯುದ್ಧವಾಯಿತು. ರಾವಣನನ್ನು ರಾಮ ಸಂಹರಿಸಿದ. ರಾವಣನಿಗೆ ರಾಕ್ಷಸ ಗುಣಗಳಿದ್ದರೂ ಅವನು ಬ್ರಾಹ್ಮಣ. ಮಹರ್ಷಿಗಳ ಮಗ.

ಮೇಲಾಗಿ ಅತಿರೇಕದ ಶಿವ ಭಕ್ತನಾಗಿದ್ದ. ರಾವಣ ಶಿವನ ಕುರಿತು ಕಠಿಣ ತಪಸ್ಸು ಮಾಡಿ ಆತ್ಮಲಿಂಗವನ್ನೇ ತಂದಂತಹ ಮಹಾನ್ ಶಿವ ಭಕ್ತ. ಬ್ರಾಹ್ಮಣನಾದ ರಾವಣನನ್ನು ರಾಮ ಸಂಹರಿಸಿದ್ದರಿಂದ ಬ್ರಹ್ಮ ಹತ್ಯಾ ದೋಷ ಬರುತ್ತದೆ ಅಂತ ಪರಿಹಾರಕ್ಕಾಗಿ ಲಂಕೆಯಿಂದ ಬಂದ ಕೂಡಲೇ ಅಗಸ್ತ್ಯರ ಆದೇಶದಂತೆ ರಾಮೇಶ್ವರಂನಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಿ ದೋಷ ಪರಿಹಾರ ಮಾಡಿಕೊಳ್ಳಲು ಕೈಲಾಸದಿಂದ ಶಿವಲಿಂಗವನ್ನು ತರುವಂತೆ ಹನುಮಂತನಿಗೆ ಹೇಳಿದನು.

ಆಂಜನೇಯ ಶಿವಲಿಂಗವನ್ನು ತರಲು ಕೈಲಾಸಕ್ಕೆ ನೆಗೆದ. ಆದರೆ ಅಲ್ಲಿ ಶಿವಲಿಂಗ ಸಿಗಲಿಲ್ಲ. ಮುಹೂರ್ತದ ಸಮಯ ಮೀರುತ್ತಿದೆ ಸಮಯ ಆಗಿಬಿಡುತ್ತದೆ ಎಂದುಕೊಂಡು, ಸಮುದ್ರ ದಡದಲ್ಲಿದ್ದ ಮರಳಿನಿಂದಲೇ ಸೀತೆ ಒಂದು ಲಿಂಗವನ್ನು ಮಾಡಿ ರಾಮನಿಗೆ ಪೂಜಿಸುವಂತೆ ಹೇಳಿದಳು. ರಾಮ ಮರಳು ಲಿಂಗವನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿದ. ಇನ್ನೇನು ಪೂಜೆ ಆಯಿತು ಎನ್ನುವಾಗ ಕೈಲಾಸದಿಂದ ಹನುಮಂತನು ಲಿಂಗವನ್ನು ತಂದನು. ಆದರೆ ರಾಮ ಶಿವಲಿಂಗಕ್ಕೆ ಪೂಜೆ ಮಾಡಿ ಮುಗಿಸಿದ್ದನ್ನು ನೋಡಿ ಹನುಮಂತನಿಗೆ ಬೇಸರವಾಯಿತು. ಆದರೂ ಪ್ರಭು ನಾನು ತಂದ ಲಿಂಗಕ್ಕೆ ಪೂಜೆ ಮಾಡಬೇಕು ಎಂದು ಸ್ವಲ್ಪ ಅಸಮಧಾನದಿಂದಲೇ ರಾಮನಿಗೆ ಹೇಳಿದಾಗ, ರಾಮ ಹೇಳಿದ ಆಯಿತು ನೀನು ತಂದ ಲಿಂಗಕ್ಕೆ ಪೂಜೆ ಮಾಡುವೆ. ಈಗ ನಾನು ಪೂಜೆ ಮಾಡಿದ ಲಿಂಗವನ್ನು ತೆಗೆದುಬಿಡು ಎಂದನು. ಹನುಮನು ಉತ್ಸಾಹದಿಂದ ಆ ಮರಳಿನ ಲಿಂಗಕ್ಕೆ ಕೈ ಹಾಕಿ ತೆಗೆಯಲು ಎಷ್ಟೇ ಪ್ರಯತ್ನಿಸಿದರೂ ಅದು ಬರಲಿಲ್ಲ. ಪ್ರಯತ್ನಿಸಿದಕ್ಕೆ ಅವನ ಕೈಗೆ ನಾಲ್ಕು ಮರಳಿನ ಕಣಗಳು ಅಂಟಿದವೇ ಹೊರತು ರಾಮ ಪ್ರತಿಷ್ಠಾಪನೆ ಮಾಡಿ ಪೂಜಿಸಿದ ಶಿವಲಿಂಗವನ್ನು ಹನುಮನಿಂದ ಅಲುಗಾಡಿಸಲೂ ಆಗಲಿಲ್ಲ. ಹನುಮನ ಕೋಪ ತಣ್ಣಗಾಯಿತು.

ಆದರೂ ಬಹಳ ವ್ಯಾಕುಲಗೊಂಡಿದ್ದ ಹನುಮಗೆ ರಾಮ ಹೇಳಿದ. ಬೇಸರಪಡಬೇಡ ಹನುಮ, ನೀನು ತಂದ ಲಿಂಗವನ್ನು ಪ್ರತಿಷ್ಠಾಪಿಸಿ ಪೂಜೆ ಮಾಡುವೆ. ಇನ್ನು ಮುಂದೆ ಇಲ್ಲಿಗೆ ಬರುವ ಭಕ್ತರು, ನೀನು ತಂದ ಶಿವ ಲಿಂಗವನ್ನು ಮೊದಲು ದರ್ಶನ ಪೂಜೆ ಮಾಡಿ ನಂತರ ನಾವು ಮಾಡಿದ ''ಮರಳು ಲಿಂಗ'' ದರ್ಶನ ಪೂಜೆ ಮಾಡುತ್ತಾರೆ ಎಂದನು. ಹನುಮಗೆ ಸಂತೋಷವಾಯಿತು. ಇಂಥದೊಂದು ಘಟನೆಗೆ ತಮಿಳುನಾಡಿನ ರಾಮೇಶ್ವರಂ ಕ್ಷೇತ್ರ ಸಾಕ್ಷಿಯಾಗಿದೆ.

ರಾಮೇಶ್ವರಂ ಕ್ಷೇತ್ರಕ್ಕೆ ಬರುವ ಭಕ್ತರು ಮೊದಲು ಗರ್ಭಗುಡಿಯಲ್ಲಿರುವ ಹನುಮ ತಂದ ಶಿವಲಿಂಗಕ್ಕೆ ಪೂಜೆ ಮಾಡಿ ನಂತರ ರಾಮ ಸೀತೆ ಮರಳಿನ ಶಿವಲಿಂಗ ಮಾಡಿ ಪ್ರತಿಷ್ಠಾಪಿಸಿದ ಲಿಂಗಕ್ಕೆ ಪೂಜೆ ಸಲ್ಲಿಸುತ್ತಾರೆ. ಆಂಜನೇಯ ತಂದ ಲಿಂಗಕ್ಕೆ ವಿಶ್ವಲಿಂಗವೆಂದು, ರಾಮ ಸೀತೆ ತಯಾರಿಸಿ ಪ್ರತಿಷ್ಠಾಪಿಸಿದ ಲಿಂಗಕ್ಕೆ ರಾಮನಾಥ ಲಿಂಗವೆಂದು ಕರೆಯುತ್ತಾರೆ.

ಹೀಗೆ ಮರಳಿನಲ್ಲಿ ಈಶ್ವರ ಲಿಂಗವನ್ನು ಮಾಡಿ ಪ್ರತಿಷ್ಠಾಪಿಸಿದ ಶ್ರೀ ರಾಮ, ಅಣು ರೇಣು ತೃಣ ಕಾಷ್ಠಗಳಲ್ಲೂ ಭಗವಂತನ ಇರುವಿಕೆ ಇದೆ ಎಂದು ಸಿದ್ಧಪಡಿಸಿದ್ದಾನೆ. ಭಗವಂತ ಮನಸ್ಸು ಮಾಡಿದರೆ ಪಂಚಮ ಮಹಾಭೂತಗಳ ಒಂದೊಂದು ಅಂಶದಲ್ಲೂ ಪ್ರಕಟಗೊಳ್ಳುವ ಸಾಮರ್ಥ್ಯ ಅವನಿಗೆ ಇದೆ. ಅದನ್ನು ನಂಬಿ ಆ ನಂಬಿಕೆಯೊಡನೆ ಪೂಜಿಸುವ ಮಾನಸಿಕ ತಯಾರಿ ನಮಗಿರಬೇಕು. ಪ್ರಕೃತಿಯ ಆರಾಧನೆಯೇ ಭಗವಂತನ ಆರಾಧನೆ.

ಇದೆಲ್ಲಕ್ಕಿಂತ ಹೆಚ್ಚಾಗಿ ತನಗಾಗಿ ಶಿವಲಿಂಗವನ್ನು ಹುಡುಕಾಡಿ ತಂದ ಹನುಮಂತನ ಭಕ್ತಿಗೆ ಒಲಿದು ಅದಕ್ಕಾಗಿ ವಿಶೇಷ ಪೂಜೆ ಸಲ್ಲುವಂತೆ ಮಾಡಿದ ಶ್ರೀ ರಾಮನ ವಿಶಾಲ ಹೃದಯ. ನಮ್ಮ ಭಾರತದ ಪ್ರತಿಯೊಂದು ತೀರ್ಥ ಸ್ಥಳಕ್ಕೂ ಕೂಡ ತನ್ನದೇ ಆದ ಐತಿಹ್ಯವಿದೆ. ಇಂತಹ ಕಥೆಗಳನ್ನ ನಮ್ಮ ಮಕ್ಕಳಿಗೆ ಹೇಳಿ ಆ ಸ್ಥಳ ಪುರಾಣದ ಬಗ್ಗೆ ತಿಳಿಸಿದಾಗ ಅವರು ನಮ್ಮ ಧರ್ಮವನ್ನು, ಅದರ ತಳಹದಿಯನ್ನು ಮತ್ತಷ್ಟು ಶ್ರದ್ಧೆಯಿಂದ ಆಚರಿಸಲು ಸಹಾಯವಾಗುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ದ್ವಂದ್ವಗಳ ಭ್ರಮೆ

ಕೃಷ್ಣ ಹೇಳುತ್ತಾನೆ ಹಂಬಲ ಮತ್ತು ದ್ವೇಷದಿಂದ (ಇಚ್ಛಾ-ದ್ವೇಷ) ಉದ್ಭವವಾಗುವ ವೈರುಧ್ಯಗಳ ಭ್ರಮೆಯಿಂದಾಗಿ ಎಲ್ಲ ಜೀವಿಗಳು ಬ್ರಹ್ಮಾತ್ಮಕ ಅಜ್ಞಾನಕ್ಕೆ ಒಳಗಾಗುತ್ತವೆ.(7.27) ನಾವು ಒಳಗಾಗುವ 2 ಮೂಲಭೂತ ಭ್ರಮೆಗಳಿವೆ. ಒಂದು 3 ಗುಣಗಳಿಂದ (ಯೋಗ ಮಾಯೆಯಿಂದ) ಉಂಟಾಗುತ್ತದೆ. ಎರಡನೆಯದು ಹಂಬಲ ಮತ್ತು ಜಿಗುಪ್ಸೆ ಯಿಂದ ಉಂಟಾಗುತ್ತದೆ. ಒಂದು ಪರಿವರ್ತನೆ ಗೊಂಡರೆ ಮತ್ತೊಂದು ಸಹಜವಾಗಿ ದಾಟಲ್ಪಡುತ್ತದೆ.

ಅಜ್ಞಾನ ಮೊದಲ ಹಂತದ ಭ್ರಮೆ. ಇದರ ಪರಿಣಾಮ ದುಃಖ. ದುಃಖವು ವ್ಯಕ್ತಿಯು ಇದರ ದ್ವಂದ್ವವಾದ ಸಂತೋಷದ ಬೆನ್ನು ಹತ್ತಿದಾಗ ಕಳೆಯುವ ಕಾಲದಲ್ಲಿ ಪಡೆಯುವ ನೋವಲ್ಲದೆ ಮತ್ತೇನು ಅಲ್ಲ. ಭ್ರಮೆಯ ಮುಂದಿನ ಹಂತ ನಿಗ್ರಹಿಸುವಿಕೆ. ಇಲ್ಲಿ ವ್ಯಕ್ತಿ ತಾನು ಹಂಬಲ ಮತ್ತು ದ್ವೇಷದ ಭ್ರಮೆಯಿಂದ ಮುಕ್ತನಾಗಿದ್ದೇನೆಂದು ಧೈರ್ಯದ ಮುಖವಾಡ ವನ್ನು ಧರಿಸು ವುದು. ಅವರು ಇತರರನ್ನು ಕಡೆಗಣಿಸುತ್ತಾರೆ. ಅವರನ್ನು ಕೃಷ್ಣ ಈ ಮೊದಲು ಆತ್ಮಘಾತುಕರು ಎಂದು ಕರೆದಿದ್ದಾನೆ.(3.6). ಆದರೆ ವಾಸ್ತವವೆಂದರೆ ಈ ನಿಗ್ರಹಿಸುವಿಕೆಯು ಒಳಗೇ ಅಡಗಿರುತ್ತದೆ ಹಾಗೂ ದುರ್ಬಲ ಕ್ಷಣದಲ್ಲಿ ಹೊರಬರುತ್ತದೆ. ಜ್ಞಾನಿಯಂತೆ ಸಾಕ್ಷಿಯ ಕೊನೆಯ ತಲುಪಬೇಕಾದರೆ ಈ ಭ್ರಮೆಗಳನ್ನು ಗೆಲ್ಲುವ ಮಾರ್ಗವನ್ನು ಕೃಷ್ಣ ಹೇಳುತ್ತಾನೆ. ಆದರೆ ಸತ್ಕರ್ಮಗಳನ್ನು ಮಾಡುವ ಜನರು ತಮ್ಮ ಪಾಪವನ್ನು ತೊಡೆದು ಹಾಕಿ ವೈರುಧ್ಯಗಳ ಭ್ರಮೆಯಿಂದ ಮುಕ್ತರಾಗಿ ಸ್ಥಿರವಾಗಿ ನನ್ನನ್ನೇ ಆರಾಧಿಸುತ್ತಾರೆ.(7.28). ಇದು ಪರಮಾತ್ಮನಿಗೆ ಶರಣಾಗಿ ಕೇವಲ ನಿಮಿತ್ತ ಮಾತ್ರನಾಗುವದಾಗಿದೆ.

ಗಮನಿಸಬೇಕಾದ ಒಂದು ಅಂಶವೆಂದರೆ ಒಂದು ನಿಗದಿತ ಪರಿಸ್ಥಿತಿಯಲ್ಲಿ ಜ್ಞಾನಿ ಮತ್ತು ಭ್ರಮೆಗೊಂಡ ವ್ಯಕ್ತಿ ಇಬ್ಬರೂ ಒಂದೇ ರೀತಿಯ ಅಜ್ಞಾನ ಮತ್ತು ಹತ್ತಿಕ್ಕುವ ಸ್ಥಿತಿಯಲ್ಲಿ ಇರುತ್ತಾರೆ, ಆದರೆ ಅಂತರ್ಯದಲ್ಲಿ ವ್ಯತ್ಯಾಸ ಇರುತ್ತದೆ. ಜ್ಞಾನಿಯು-ನೋವು-ನಲಿವು ಲಾಭ-ಹಾನಿ ಜಯ- ಅಪಜಯಗಳ ಮಧ್ಯೆ ಸಮತೋಲನ ಕಾಯುತ್ತಾನೆ ಹಾಗೂ ಅವನಿಗೆ ಯಾವುದೇ ಕರ್ಮ ಬಂಧನ ಇರುವುದಿಲ್ಲ, ಆದರೆ ಭ್ರಮೆಗೊಂಡ ವ್ಯಕ್ತಿ ಅಸಮತೋಲನ ಹೊಂದಿರುತ್ತಾನೆ. ಹಾಗೂ ಅವನ ಕರ್ಮ ಬಂಧನವೂ ಕಲ್ಲಿನ ಮೇಲೆ ಬರೆದ ಅಕ್ಷರಗಳಂತೆ ಶಾಶ್ವತವಾಗಿರುತ್ತದೆ. ಇದು ನಮ್ಮ ತಿಳುವಳಿಕೆಯನ್ನು ಕಷ್ಟಮಯವಾಗಿಸುತ್ತದೆ ಯಾಕೆಂದರೆ ಉದಾಹರಣೆಗಳಿಂದ ಯಾವುದೇ ಸಹಾಯವಾಗುವುದಿಲ್ಲ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರಿಷಿ ಪಟೇಲ್ ದಾಖಲೆ



ಲಂಡನ್: ಕ್ರಿಕೆಟ್ ಇತಿಹಾಸದಲ್ಲಿ ಒಂದೇ ಓವರ್‌ನಲ್ಲಿ 6 ಸಿಕ್ಸ್ ಸಿಡಿಸಿರುವುದು ಕೇವಲ 10 ಬ್ಯಾಟರ್‌ಗಳಾಗಿದ್ದು, ಮೊತ್ತ ಮೊದಲು ಆ ಸಾಧನೆ ಮಾಡಿದ ಹೆಗ್ಗಳಿಕೆಯು ವೆಸ್ಟ್ ಇಂಡೀಸ್‌ನ ಗ್ಯಾರಿ ಸೋಬರ್ಸ್ ಹೆಸರಿನಲ್ಲಿದ್ದರೆ, ಇದೀಗ ರಿಷಿ ಪಟೇಲ್ ಅದೇ ಸಾಧನೆಯನ್ನು ಮಾಡಿದ್ದಾರೆ. ಇಂಗ್ಲೆಂಡ್‌ನಲ್ಲಿ ನಡೆದ ಕೌಂಟಿ ಚಾಂಪಿಯನ್‌ಶಿಪ್‌ನಲ್ಲಿನ ಸೌಹಾರ್ದ ಪಂದ್ಯದಲ್ಲಿ ಲೀಸೆಸ್ಟರ್‌ಶೈರ್ ಫಾಕ್ಸಸ್ ಹಾಗೂ ಮೈನರ್ ಕೌಂಟಿ ಸ್ಟಾಫರ್ಡ್‌ಶೈರ್ ತಂಡಗಳು ಮುಖಾಮುಖಿ ಯಾಗಿದ್ದವು. ಆ ಪಂದ್ಯದಲ್ಲಿ ಲೀಸೆಸ್ಟರ್‌ಶೈರ್ ಫಾಕ್ಸಸ್ ಆರಂಭಿಕನಾಗಿ ಕಣಕ್ಕಿಳಿದ ರಿಷಿ ಪಟೇಲ್, ಸ್ಪಿನ್ನರ್ ಜ್ಯಾಕ್ ರೆಡ್‌ಮನ್ ಎಸೆದ ಓವರ್‌ನಲ್ಲಿ 6 ಸಿಕ್ಸರ್‌ಗಳನ್ನು ಬಾರಿಸಿ ಹೊಸ ದಾಖಲೆ ನಿರ್ಮಿಸಿದ್ದಾರೆ. ರಿಷಿ ಪಟೇಲ್ 40 ಎಸೆತಗಳಲ್ಲಿ 9 ಸಿಕ್ಸರ್ ಮತ್ತು 6 ಬೌಂಡರಿಗಳೊಂದಿಗೆ 96 ರನ್ ಬಾರಿಸಿದರು. ಲೀಸೆಸ್ಟರ್‌ಶೈರ್ ಫಾಕ್ಸಸ್ ತಂಡವು 20 ಓವರ್‌ಗಳಲ್ಲಿ 300 ರನ್ ಕಲೆ ಹಾಕಿತು, ಆ ಗುರಿಯನ್ನು ಬೆನ್ನತ್ತಿದ ಮೈನರ್ ಕೌಂಟಿ ಸ್ಟಾಫರ್ಡ್‌ಶೈರ್ ತಂಡ ಕೇವಲ 50 ರನ್‌ಗಳಿಗೆ ಆಲೌಟ್ ಆಗಿದೆ, ಆ ಮೂಲಕ ಲೀಸೆಸ್ಟರ್‌ಶೈರ್ ಫಾಕ್ಸಸ್ ತಂಡವು 250 ರನ್‌ಗಳ ಅಮೋಘ ಗೆಲುವು ದಾಖಲಿಸಿದೆ.

ಆರ್‌ಸಿಬಿಗೆ ಆಘಾತ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗದ ಬೌಲರ್ ಜೋಶ್ ಹೇಝಲ್‌ವುಡ್ ಅವರು ಭುಜದ ಗಾಯದಿಂದ ಬಳಲುತ್ತಿದ್ದು, ಇನ್ನೂ ಸಂಪೂರ್ಣವಾಗಿ ಫಿಟ್ ಆಗಿಲ್ಲ. ಈ ಹಿನ್ನೆಲೆಯಲ್ಲಿ ಐಪಿಎಲ್ ಟೂರ್ನಿ ಇನ್ನುಳಿದ ಪಂದ್ಯಗಳು ಆರಂಭವಾದರೂ ಜಾಶ್ ಹೇಝಲ್‌ವುಡ್ ಆರ್‌ಸಿಬಿಗೆ ಲಭ್ಯರಾಗುವುದು ಅನುಮಾನ ಎಂದು ಹೇಳಲಾಗುತ್ತಿದೆ. ಚೊಚ್ಚಲ ಕಪ್ ಗೆಲ್ಲುವ ವಿಶ್ವಾಸದಲ್ಲಿರುವ ಬೆಂಗಳೂರು ತಂಡಕ್ಕೆ ನಿರ್ಣಾಯಕ ಹಂತದಲ್ಲಿ ಈ ಕಾರಣದಿಂದ ಭಾರಿ ಹಿನ್ನಡೆಯಾಗಲಿದೆ. ಗಾಯದ ಸಮಸ್ಯೆಯಿಂದ ಮೇ 3 ರಂದು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಪಂದ್ಯಕ್ಕೂ ಜಾಶ್ ಹೇಝಲ್‌ವುಡ್ ಅಲಭ್ಯರಾಗಿದ್ದರು. ಹೇಝಲ್‌ವುಡ್ ಅವರು ಭಾರತ ವಿರುದ್ಧದ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿ, ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿ ಹಾಗೂ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಗೆ ಅಲಭ್ಯರಾಗಿದ್ದರು. ಇತ್ತೀಚೆಗೆ ಗುಣಮುಖರಾಗಿದ್ದ ಹೇಝಲ್‌ವುಡ್ ಐಪಿಎಲ್ ಮೂಲಕ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಿದ್ದರು.

ಸ್ಮೃತಿ ಮಂಧಾನ ಅಮೋಘ ಶತಕ | ತ್ರಿಕೋನ ಸರಣಿಯ ಫೈನಲ್‌ನಲ್ಲಿ ಭಾರತಕ್ಕೆ ಜಯ

ವನಿತೆಯರಿಗೊಲಿದ ಕ್ರಿಕೆಟ್ ಟ್ರೋಫಿ

ಕೊಲಂಬೊ: ಸ್ಮೃತಿ ಮಂಧಾನಾ (116 ರನ್) ಅವರ ಶತಕ ಹಾಗೂ ಸ್ನೇಹಾ ರಾಣಾ (38 ರನ್‌ಗಳಿಗೆ 4 ವಿಕೆಟ್) ಅವರ ಸ್ಪಿನ್ ಮೋಡಿಯ ಸಹಾಯದಿಂದ ಭಾರತ ತಂಡ ಮಹಿಳಾ ಕ್ರಿಕೆಟ್ ತಂಡವು ಇಲ್ಲಿ ನಡೆದ ತ್ರಿಕೋನ ಸರಣಿಯ ಫೈನಲ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು 97 ರನ್‌ಗಳಿಂದ ಮಣಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಭಾನುವಾರ ಇಲ್ಲಿನ ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದಿದ್ದ ಫೈನಲ್ ಪಂದ್ಯದಲ್ಲಿ ಭಾರತ ಹಾಗೂ ಆತಿಥೇಯ ಶ್ರೀಲಂಕಾ ತಂಡಗಳು ಕಾದಾಟ ನಡೆಸಿದ್ದವು. ಪಂದ್ಯದಲ್ಲಿ ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡೂ ವಿಭಾಗಗಳಲ್ಲಿ ಸಂಘಟಿತ ಪ್ರದರ್ಶನ ತೋರಿದ ಭಾರತ ಮಹಿಳಾ ತಂಡ ದೊಡ್ಡ ಅಂತರದಲ್ಲಿ ಗೆಲುವನ್ನು ತನ್ನದಾಗಿಸಿಕೊಂಡಿತು. ಭಾರತ ನೀಡಿದ್ದ 343 ರನ್‌ಗಳ ಬೃಹತ್ ಮೊತ್ತವನ್ನು ಹಿಂಬಾಲಿಸಿದ ಶ್ರೀಲಂಕಾ ತಂಡ, 48.2 ಓವರ್‌ಗಳಲ್ಲಿ 245 ರನ್‌ಗಳಿಗೆ ಆಲೌಟ್ ಆಯಿತು.

ಶ್ರೀಲಂಕಾ ತಂಡದ ಪರ ಅತ್ಯುತ್ತಮ ಬ್ಯಾಟ್ ಮಾಡಿದ ವಿಶ್ಮಿ ಗುಣರತ್ನೆ 36 ರನ್, ಚಾಮರಿ ಅಟಪಟ್ಟು 51 ರನ್, ನೀಲಾಕ್ಷಿ ಡಿ ಸಿಲ್ವಾ 48 ರನ್, ಹರ್ಷಿತಾ ಸಮರ ವಿಕ್ರಮ 26 ರನ್ ಹಾಗೂ ಅನುಷ್ಕಾ ಸಂಜೀವಾಣಿ 28 ರನ್‌ಗಳನ್ನು ಗಳಿಸಿದರು. ಲಂಕಾ ತಂಡವು ಉತ್ತಮ ಆರಂಭ ಪಡೆದರೂ ತಮ್ಮ ದೀರ್ಘ ಇನಿಂಗ್ಸ್‌ಗಳನ್ನು ಬೆಳೆಸುವಲ್ಲಿ ವಿಫಲರಾದರು. ಭಾರತದ ಪರ ಶಿಸ್ತುಬದ್ಧ ಬೌಲಿಂಗ್ ದಾಳಿ ನಡೆಸಿದ ಅಮನ್ಜೋತ್ ಕೌರ್ 54 ರನ್‌ಗಳನ್ನು ನೀಡಿ ಮೂರು ವಿಕೆಟ್‌ಗಳನ್ನು ಕಬಳಿಸಿದರು. ಸರಣಿಯಲ್ಲಿ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ತೋರಿದ ಸ್ನೇಹಾ ರಾಣಾ 38 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಬಳಿಸಿದರು.

342 ರನ್‌ಗಳನ್ನು ಕಲೆ ಹಾಕಿದ ಭಾರತ: ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತ ತಂಡ, ಸ್ಮೃತಿ ಮಂಧಾನಾ ಅವರ ಶತಕದ ಬಲದಿಂದ ತನ್ನ ಪಾಲಿನ 50 ಓವರ್‌ಗಳಿಗೆ 7 ವಿಕೆಟ್‌ಗಳ ನಷ್ಟಕ್ಕೆ 342 ರನ್‌ಗಳನ್ನು ಕಲೆ ಹಾಕಿ ಎದುರಾಳಿ ಲಂಕಾ ತಂಡಕ್ಕೆ 343 ರನ್‌ಗಳ ಗುರಿಯನ್ನು ನೀಡಿತ್ತು. ಮಂಧಾನಾ ಶತಕದ ಜೊತೆಗೆ ಅಗ್ರ ನಾಲ್ಕು ಬ್ಯಾಟರ್‌ಗಳು ಉತ್ತಮ ಪ್ರದರ್ಶನ ತೋರಿದ್ದರು. ಪಂದ್ಯದಲ್ಲಿ ಇನಿಂಗ್ಸ್ ಆರಂಭಿಸಿದ ಸ್ಮೃತಿ ಮಂಧಾನಾ ಹಾಗೂ ಪ್ರತೀಕಾ ರಾವಲ್ ಮೊದಲನೇ ವಿಕೆಟ್‌ಗೆ 70 ರನ್‌ಗಳನ್ನು ಕಲೆ ಹಾಕಿದರು. ಪ್ರತೀಕಾ ರಾವಲ್ 30 ರನ್ ಗಳಿಸಿ ಉತ್ತಮ ಆರಂಭ ಪಡೆದಿದ್ದರೂ, ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲಿಲ್ಲ. ಸ್ಮೃತಿ ಮಂಧಾನಾ, 101 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ 15 ಬೌಂಡರಿಗಳೊಂದಿಗೆ 116 ರನ್‌ಗಳನ್ನು ಕಲೆ ಹಾಕಿ, ತಮ್ಮ ಏಕದಿನ ಕ್ರಿಕೆಟ್‌ನಲ್ಲಿ 11ನೇ ಶತಕವನ್ನು ಪೂರ್ಣಗೊಳಿಸಿದರು. ಆ ಮೂಲಕ ಭಾರತ ತಂಡವನ್ನು 200ರ ಗಡಿ ಸನಿಹ ತಂದು ವಿಕೆಟ್ ಒಪ್ಪಿಸಿದರು.

ಮಧ್ಯಮ ಕ್ರಮಾಂಕದಲ್ಲಿ ಹರ್ಲೀನ್ ಡಿಯೋಲ್ 47 ರನ್, ಹರ್ಮನ್‌ಪ್ರೀತ್ ಕೌರ್ 41 ರನ್, ಜೆಮಿಮಾ ರೊಡ್ರಿಗಸ್ 44 ರನ್‌ಗಳನ್ನು ಕಲೆ, ಭಾರತ ತಂಡ ದೊಡ್ಡ ಮೊತ್ತವನ್ನು ಗಳಿಸುವಲ್ಲಿ ನೆರವು ನೀಡಿದ್ದರು.

ಪಂದ್ಯದಲ್ಲಿ ತಮ್ಮ ವೃತ್ತಿ ಜೀವನದ 11ನೇ ಶತಕವನ್ನು ಸಿಡಿಸಿದ ಸ್ಮೃತಿ ಮಂಧಾನಾ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸರಣಿಯಲ್ಲಿ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ತೋರಿ 11 ವಿಕೆಟ್‌ಗಳನ್ನು ಕಬಳಿಸಿದ ಭಾರತದ ಸ್ಪಿನ್ನರ್ ಸ್ನೇಹಾ ರಾಣಾ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾಗಿದರು.

ವಿಶ್ವಕಪ್ ಆರ್ಚರಿ: ಭಾರತಕ್ಕೆ ಏಳು ಪದಕ

ಶಾಂಘೈ: ಸೆಮಿಫೈನಲ್ ಆಘಾತದಿಂದ ಚೇತರಿಸಿದ ಭಾರತದ ಅನುಭವಿ ಬಿಲ್ಲಾರ್ತಿ ದೀಪಿಕಾ ಕುಮಾರಿ ಮಹಿಳೆಯರ ರಿಕರ್ವ್ ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಪಾರ್ಥ್ ಸಾಲುಂಖೆ ಅವರೂ ಮೊದಲ ಬಾರಿ ವಿಶ್ವಕಪ್ ರಿಕರ್ವ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗಳಿಸಿದರು. ಇದರೊಂದಿಗೆ ಭಾರತದ ಸ್ಪರ್ಧಿಗಳು ಭಾನುವಾರ ಮುಕ್ತಾಯಗೊಂಡ ಆರ್ಚರಿ ವಿಶ್ವಕಪ್ ಸ್ಟೇಜ್-2 ಕೂಟದಲ್ಲಿ ಒಟ್ಟು ಏಳು ಪದಕಗಳನ್ನು ಗೆದ್ದು ಅಭಿಯಾನ ಮುಗಿಸಿದರು.

ಶನಿವಾರ ಭಾರತದ ಕಾಂಪೌಂಡ್ ವಿಭಾಗದ ಬಿಲ್ದಾರರು ಒಟ್ಟು ಐದು ಪದಕಗಳನ್ನು ಗೆದ್ದು ಪ್ರಾಬಲ್ಯ ಮೆರೆದಿದ್ದರು. ಕೊನೆಯ ದಿನ ರಿಕರ್ವ್ ವೈಯಕ್ತಿಕ ವಿಭಾಗದಲ್ಲಿ ಎರಡು ಕಂಚಿನ ಪದಕಗಳು ಭಾರತದ ಪಾಲಾದವು. ಹಾಲಿ ಒಲಿಂಪಿಕ್ ಚಾಂಪಿಯನ್, 21 ವರ್ಷ ವಯಸ್ಸಿನ ಲಿಮ್ ಸಿಹಿಯೋನ್ ಅವರು ಸರಿಯಾಗಿ ಒಂದು ವರ್ಷ ಹಿಂದೆ ಯಚಿಯೋನ್ ವಿಶ್ವಕಪ್‌ನ ಸೆಮಿಫೈನಲ್ ಹಂತದಲ್ಲಿ ದೀಪಿಕಾ ಅವರನ್ನು ಮಣಿಸಿದ್ದರು. ಭಾನುವಾರವೂ ದಕ್ಷಿಣ ಕೊರಿಯಾದ ಸ್ಪರ್ಧಿ, 12ನೇ ಶ್ರೇಯಾಂಕದ ದೀಪಿಕಾ ಪಾಲಿಗೆ ಒಗಟಾಗಿ ಏಕಪಕ್ಷೀಯ ಪಂದ್ಯದಲ್ಲಿ ಸಿಹಿಯೋನ್ 7-1ರಿಂದ ಗೆದ್ದರು.

ಆದರೆ ಈ ಆಘಾತದಿಂದ ಸುಧಾರಿಸಿಕೊಂಡ 30 ವರ್ಷ ವಯಸ್ಸಿನ ದೀಪಿಕಾ ಕಂಚಿನ ಪದಕದ ಪ್ಲೇ ಆಫ್ ಸುತ್ತಿನಲ್ಲಿ ದಕ್ಷಿಣ ಕೊರಿಯಾ ಮತ್ತೋರ್ವ ಬಿಲ್ಲಾರ್ತಿ ಕಾಂಗ್ ಚೇ ಅವರನ್ನು 7-3 ರಿಂದ ಮಣಿಸಿದರು. ಇದು ಆರ್ಚರಿ ವಿಶ್ವಕಪ್‌ಗಳಲ್ಲಿ ಭಾರತದ ಬಿಲ್ಲಾರ್ತಿಗೆ 37ನೇ ಪದಕವಾಗಿದೆ. ಭಾರತದ ಅತ್ಯಂತ ಯಶಸ್ವಿ ಬಿಲ್ಲಾರ್ತಿ ಎಂಬ ಅವರ ಹಿರಿಮೆ ಇನ್ನಷ್ಟು ಗಟ್ಟಿಯಾಯಿತು.

ಪುರುಷರ ವಿಭಾಗದಲ್ಲಿ 21 ವರ್ಷ ವಯಸ್ಸಿನ ಪಾರ್ಥ್ ಸಾಲುಂಖೆ ಅವರು ಸೆಮಿಫೈನಲ್‌ನಲ್ಲಿ 1-7ರಲ್ಲಿ ಅಗ್ರ ಶ್ರೇಯಾಂಕದ ಕೊರಿಯನ್ ದಂತಕಥೆ ಕಿಮ್ ವೂಜಿನ್ ಅವರಿಗೆ ಮಣಿದಿದ್ದರು. ಒಲಿಂಪಿಕ್ಸ್‌ನಲ್ಲಿ ಹಲವು ಪದಕ ಗೆದ್ದಿರುವ ವೂಜಿನ್ ಎದುರು ಸಾಲುಂಖೆ ಕೇವಲ ಒಂದು ಪಾಯಿಂಟ್ ಗಳಿಸಲಷ್ಟೇ ಶಕ್ತರಾಗಿದ್ದರು.

ಎದೆಗುಂದದ ಭಾರತದ ಬಿಲ್ದಾರ ಕಂಚಿನ ಪದಕಕ್ಕೆ ನಡೆದ ಪಂದ್ಯದಲ್ಲಿ ಪರಿಣಾಮಕಾರಿಯಾಗಿ ಬಾಣಪ್ರಯೋಗ ಮಾಡಿ ತಮಗಿಂತ ಮೇಲಿನ ಕ್ರಮಾಂಕದ ಫ್ರಾನ್ಸ್‌ನ ಆರ್ಚರ್ ಬ್ಯಾಪ್ಟಿಸ್ಟ್ ಅಡಿಸ್ ಅವರನ್ನು 6-4 ರಿಂದ ಸೋಲಿಸಿದರು, ಇದು ಅವರಿಗೆ ವಿಶ್ವಕಪ್ ಚೊಚ್ಚಲ ಪದಕವಾಗಿದೆ. ವಿಶ್ವಕಪ್ ಸ್ಟೇಜ್-3 ಕೂಟ ಜೂನ್ 3ರಿಂದ 8ರವರೆಗೆ ಟರ್ಕಿಯ ಅಂತಾಲ್ಯದಲ್ಲಿ ನಡೆಯಲಿದೆ.

ಸೇನಾ ಕಾರ್ಯಾಚರಣೆಯಲ್ಲಿ ಟೂರ್ನಿ ಸ್ಥಗಿತ

ಇದೇ ವಾರದಲ್ಲೇ ಐಪಿಎಲ್ ಟೂರ್ನಿ ಪುನರಾರಂಭ ಖಚಿತ

ದೆಹಲಿ: ಭಾರತ- ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ ಸ್ಥಗಿಗೊಂಡಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ ಇದೇ 16 ಅಥವಾ 17ರಂದು ಆರಂಭಗೊಳ್ಳುವ ಸಾಧ್ಯತೆಯಿದೆ. ಫೈನಲ್ ಪಂದ್ಯವನ್ನು ಕೋಲ್ಕತ್ತದಲ್ಲಿ ನಡೆಯುವ ಸಾಧ್ಯತೆ ಕಡಿಮೆ. ಮೇ 9ರಂದು ಒಂದು ವಾರದ ಮಟ್ಟಿಗೆ ಐಪಿಎಲ್ ಪಂದ್ಯಾವಳಿ ಸ್ಥಗಿತಗೊಳಿಸಲಾಗಿತ್ತು, ಆದರೆ ಶನಿವಾರ ಯುದ್ಧ ಸ್ವರೂಪದ ಸಂಘರ್ಷ ಕೊನೆಗೊಳಿಸಲು ಎರಡೂ ದೇಶಗಳೂ ಒಪ್ಪಂದ ಮಾಡಿಕೊಳ್ಳುವ ಕಾರಣದಿಂದ ಐಪಿಎಲ್ ಲೀಗ್ ಮುಂದುವರಿಯಲು ಅವಕಾಶವಾಗಿದೆ.

ಐಪಿಎಲ್ ಆಡಳಿತ ಮಂಡಳಿ ಮತ್ತು ಬಿಸಿಸಿಐ ಅಧಿಕಾರಿಗಳು ಲೀಗ್ ಪುನರಾರಂಭಕ್ಕೆ ಸಂಬಂಧಿಸಿ ಯೋಜನೆ ರೂಪಿಸಲು ಭಾನುವಾರ ಸಭೆ ಸೇರಿದ್ದರು. 'ಸೂಕ್ತ ವೇಳಾಪಟ್ಟಿ ರೂಪಿಸಲು ಮಂಡಳಿಯು ಕಾರ್ಯಪ್ರವೃತ್ತವಾಗಿದೆ' ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ ಶುಕ್ಲಾ ತಿಳಿಸಿದ್ದಾರೆ.

'ಐಪಿಎಲ್ ವೇಳಾಪಟ್ಟಿ ಅಂತಿಮವಾಗಿಲ್ಲ. ಪರಿಹಾರ ಕಂಡುಕೊಳ್ಳಲು ಮಂಡಳಿ ಅಧಿಕಾರಿಗಳು ಯೋಜನೆ ರೂಪಿಸುತ್ತಿದ್ದಾರೆ. ಬಿಸಿಸಿಐ ಕಾರ್ಯದರ್ಶಿ, ಐಪಿಎಲ್ ಅಧ್ಯಕ್ಷರು ಫ್ರಾಂಚೈಸಿಗಳು ಮತ್ತು ಇತರ ಪ್ರಾಯೋಜಕರ ಜೊತೆ ಮಾತುಕತೆಯಲ್ಲಿ ಇರುವ ಕಾರಣ ಶೀಘ್ರವೇ ದಿನಾಂಕ ನಿರ್ಧಾರಕ್ಕೆ ಬರಲಾಗುವುದು. ಸಾಧ್ಯವಾದಷ್ಟು ಬೇಗ ಟೂರ್ನಿ ಆರಂಭಕ್ಕೆ ಪ್ರಯತ್ನ ನಡೆದಿದೆ' ಎಂದಿದ್ದಾರೆ.

ಲಖನೌ ಸೂಪರ್ ಜೈಂಟ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಣ ಪಂದ್ಯದೊಡನೆ ಲೀಗ್ ಪುನರಾರಂಭಗೊಳ್ಳಲಿದೆ ಎಂದು ಐಪಿಎಲ್ ಮೂಲವೊಂದು ತಿಳಿಸಿದೆ. ಎಲ್ಲ ತಂಡಗಳಿಗೆ ಆಟಗಾರರನ್ನು ಕರೆಸಿಕೊಳ್ಳುವಂತೆ ತಿಳಿಸಲಾಗಿದ್ದು, ಟೂರ್ನಿಯ ಮೇ 16 ಅಥವಾ 17ರಂದು ಲಖನೌ ಪಂದ್ಯದೊಡನೆ ಮುಂದುವರಿಯಲಿದೆ. ಅಂತಿಮ ವೇಳಾಪಟ್ಟಿ ಸೋಮವಾರ ಪ್ರಕಟವಾಗಲಿದೆ. ಇನ್ನು ಉಳಿದಿರುವ ಎಲ್ಲ ಪಂದ್ಯಗಳು ನಾಲ್ಕು ಕ್ರೀಡಾಂಗಣಗಳಲ್ಲಿ ಮಾತ್ರ ನಡೆಯಲಿವೆ. ದೆಹಲಿ ಮತ್ತು ಧರ್ಮಶಾಲಾಕ್ಕೆ ಉಳಿದ ಪಂದ್ಯಗಳ ಆತಿಥ್ಯ ಲಭ್ಯವಾಗುವುದಿಲ್ಲ. ಕ್ವಾಲಿಫೈಯರ್-1 ಮತ್ತು ಎಲಿಮಿನೇಟರ್ ಪಂದ್ಯಗಳು ನಿಗದಿಯಂತೆ ಹೈದರಾಬಾದಿನಲ್ಲೇ ನಡೆಯಲಿವೆ. ಆದರೆ ಫೈನಲ್ ಪಂದ್ಯದ ಅತಿಥ್ಯ ಕೋಲ್ಕತ್ತಾದ ಬದಲು ಅಹಮದಾಬಾದಿನಲ್ಲಿ ನಿಗದಿಯಾಗುವ ಸಾಧ್ಯತೆ ಹೆಚ್ಚು.

ಸದ್ಯದ ಅಂಕಪಟ್ಟಿ

ಗುಜರಾತ್ ಟೈಟನ್ (16 ಅಂಕ, ನೆಟ್ ರನ್‌ರೇಟ್ 0.793) ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು (16 ಪಾಯಿಂಟ್ಸ್, 0.482), ಪಂಜಾಬ್ ಕಿಂಗ್ಸ್ (15), ಮುಂಬೈ ಇಂಡಿಯನ್ಸ್ (14), ಡೆಲ್ಲಿ ಕ್ಯಾಪಿಟಲ್ಸ್ (13), ಕೋಲ್ಕತ್ತಾ ನೈಟ್ ರೈಡರ್ಸ್ (11) ಮತ್ತು ಲಖನೌ ಸೂಪರ್ ಜೈಂಟ್ಸ್ (10) ನಂತರದ ಸ್ಥಾನಗಳಲ್ಲಿವೆ.

ಟೆಸ್ಟ್ ತಂಡದಲ್ಲಿ ಪಾಟೀದಾರ್‌ಗೆ ಅವಕಾಶ?

ದೆಹಲಿ: ಮುಂದಿನ ತಿಂಗಳು ಇಂಗ್ಲೆಂಡ್ ವಿರುದ್ಧ ಆರಂಭವಾಗಲಿರುವ ಐದು ಪಂದ್ಯಗಳ ಟೆಸ್ಟ್ ಸರಣಿಗೆ ಭಾರತ ತಂಡವನ್ನು ಮೇ ಕೊನೆಯ ವಾರದಲ್ಲಿ ಪ್ರಕಟಿಸುವ ಸಾಧ್ಯತೆ ಇದೆ. ಟೆಸ್ಟ್ ಕ್ರಿಕೆಟ್‌ಗೆ ರೋಹಿತ್ ಶರ್ಮಾ ವಿದಾಯ ಹೇಳಿದ್ದಾರೆ ಹಾಗೂ ವಿರಾಟ್ ಕೊಹ್ಲಿ ಕೂಡ ದೀರ್ಘಾವಧಿ ಸ್ವರೂಪಕ್ಕೆ ನಿವೃತ್ತಿ ಘೋಷಿಸಲು ಬಯಸಿರುವ ಕಾರಣ ಟೆಸ್ಟ್ ತಂಡದಲ್ಲಿ ಪಾಟೀದಾರ್‌ಗೆ ಅವಕಾಶ ಸಿಗುವ ಸಾಧ್ಯತೆ. ಬೌಲಿಂಗ್ ಕಂಡೀಷನ್ಸ್ ಇಂಗ್ಲೆಂಡ್ ಟೆಸ್ಟ್ ಸರಣಿಗೆ ಭಾರತ ತಂಡವನ್ನು ಆಯ್ಕೆ ಮಾಡುವುದು ಅಗರ್ಕರ್ ಸಾರಥ್ಯದ ಬಿಸಿಸಿಐ ಆಯ್ಕೆ ಸಮಿತಿಗೆ ದೊಡ್ಡ ಸವಾಲಾಗಿದೆ. ಆರ್‌ಸಿಬಿ ತಂಡದ ನಾಯಕ ರಜತ್ ಪಾಟಿದಾರ್‌ಗೆ ಭಾರತ ಟೆಸ್ಟ್ ತಂಡದಲ್ಲಿ ಸರ್ಫರಾಝ್ ಖಾನ್ ಸ್ಥಾನದಲ್ಲಿ ಅವಕಾಶ ಪಡೆದುಕೊಳ್ಳಲಿದ್ದಾರೆಂದೂ ವರದಿಯಾಗಿದೆ.

ಟಾಕೀಸ್

ಮುತ್ತಣ್ಣನಿಗೆ ಸಂಜಿತ್ ದನಿ

ಹಿರಿಯ ನಟ ಪ್ರಣಮ್ ದೇವರಾಜ್ ಸನ್ ಆಫ್ ಮುತ್ತಣ್ಣನಾಗಿ ತೆರೆಗೆ ಬರಲು ರೆಡಿಯಾಗಿದ್ದಾರೆ. ಸನ್ ಆಫ್ ಮುತ್ತಣ್ಣ ಚಿತ್ರದಲ್ಲಿ ಪ್ರಣಮ್ ನಾಯಕನಾಗಿ ನಟಿಸಿದ್ದಾರೆ. ಈ ಚಿತ್ರಕ್ಕಾಗಿ ಯೋಗರಾಜ್ ಭಟ್ ಬರೆದಿರುವ ಒನ್ ಅಂಡ್ ಓನ್ಲಿ ಸುಖ.. ಎಂಬ ಹಾಡಿಗೆ ಸಂಜಿತ್ ಹೆಗ್ಡೆ ದನಿಯಾಗಿದ್ದಾರೆ. ಸಚಿನ್ ಬಸ್ರೂರ್ ಸಂಗೀತ ಸಂಯೋಜಿಸಿರುವ ಈ ಹಾಡು ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ. ಈಗಾಗಲೇ ರಿಲೀಸ್ ಆಗಿರುವ ಟೀಸರ್ ಹಾಗೂ ಹಾಡುಗಳ ಮೂಲಕ ಎಲ್ಲರ ಮೆಚ್ಚುಗೆ ಪಡೆದುಕೊಂಡಿರುವ ಈ ಚಿತ್ರ ಶ್ರೀಘ್ರದಲ್ಲಿಯೇ ತೆರೆಗೆ ಬರಲಿದೆ. ಪುರಾತನ ಫಿಲಂಸ್ ನಿರ್ಮಾಣದ ಈ ಚಿತ್ರವನ್ನು ಶ್ರೀಕಾಂತ್ ಹುಣಸೂರು ನಿರ್ದೇಶನ ಮಾಡಿದ್ದಾರೆ. ತಂದೆ - ಮಗನ ಬಾಂಧವ್ಯದ ಕಥಾಹಂದರ ಹೊಂದಿರುವ ಈ ಸಿನಿಮಾದ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಕ್ತಾಯವಾಗಿವೆ. ಪ್ರಣಂ ದೇವರಾಜ್ ಗೆ ನಾಯಕಿಯಾಗಿ ದಿಯಾ ಖ್ಯಾತಿಯ ಖುಷಿ ಅಭಿನಯಿಸಿದ್ದಾರೆ. ರಂಗಾಯಣ ರಘು ನಾಯಕನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಸುಚೇಂದ್ರ ಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ, ಸಂದೀಪ ಮಂಜುನಾಥ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ, ಪ್ರಮೋದ್ ಮರವಂತೆ ಚಿತ್ರದ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಕೃಷ್ಣ ಛಾಯಾಗ್ರಹಣ ಹಾಗೂ ಹರೀಶ್ ಕೊಮ್ಮೆ ಸಂಕಲನ ಈ ಚಿತ್ರಕ್ಕಿದೆ.



ಪೀಟರ್‌ಗಾಗಿ ಬಂದ ಅಜಯ್

ಪೀಟರ್ ಚಿತ್ರ ಕಂಟೆಂಟ್ ಮೂಲಕವೇ ಸಿನಿ ಪ್ರಿಯರ ಮನಗೆದ್ದಿದೆ. ಚಿತ್ರದ ಹಾಡುಗಳ ಮೇಲೆ ನಿರೀಕ್ಷೆಯೂ ಹೆಚ್ಚಿದೆ. ಇತ್ತೀಚೆಗಷ್ಟೇ ಮಲೆಯಾಳಂ ಗಾಯಕ ಪ್ರಣವಂ ಸಸಿಯಿಂದ ಹಾಡು ಹಾಡಿಸಿದ್ದ ಚಿತ್ರತಂಡ ಇದೀಗ ಬಾಲಿವುಡ್ ಗಾಯಕರನ್ನು ಕರೆಸಿದೆ. ಪೀಟರ್ ಗಾಗಿ ಬಾಲಿವುಡ್ ಖ್ಯಾತ ಗಾಯಕ ಹಾಗೂ ನಿರ್ದೇಶಕ ಅಜಯ್ ಗೋಗವಾಲೆ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಹಿಂದಿಯ ಪ್ರಭಾಸ್ ನಟನೆಯ ಆದಿ ಪುರುಷ್, ಅಮೀರ್ ಖಾನ್ ನಟನೆಯ ಪಿ ಕೆ, ಶಾರುಖ್ ನಟನೆಯ ಝೀರೋ ಮತ್ತು ಹಲವಾರು ದಿಗ್ಗಜರ ಚಿತ್ರಗಳಿಗೆ ಸಂಗೀತ ನಿರ್ದೇಶಿಸಿ ಹಾಡಿರುವ ಅಜಯ್ ಗೋಗವಲೆ ಈಗ ಕನ್ನಡದ ಪೀಟರ್ ಚಿತ್ರದ ಹಾಡಿಗೂ ದನಿಯಾಗಿ ದ್ದಾರೆ. ಪೀಟರ್ ಥ್ರಿಲ್ಲರ್ ಸಸ್ಪೆನ್ಸ್ ಕಥೆಯನ್ನು ಒಳಗೊಂಡಿದ್ದು, ಸುಕೇಶ್ ಶೆಟ್ಟಿ ನಿರ್ದೇಶನದಲ್ಲಿ ಮೂಡಿಬಂದಿದೆ. ರಾಜೇಶ್ ಧ್ರುವ, ಜಾಹ್ನವಿ ರಾಯಲ, ರವೀಕ್ಷಾ ಶೆಟ್ಟಿ, ಪ್ರತಿಮಾ ನಾಯಕ್, ರಘು ಪಾಂಡೇಶ್ವರ್, ರಾಮ ನಾಡಗೌಡ, ವರುಣ್ ಪಟೇಲ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕನ್ನಡ ಚಿತ್ರರಂಗದ ಸೌಂಡ್ ಇಂಜಿನಿಯರ್ ರವಿ ಹಿರೇಮಠ್ ಹಾಗೂ ರಾಕೇಶ್ ಹೆಗಡೆ ವೃದ್ಧಿ ಸ್ಟುಡಿಯೊಸ್ ಬ್ಯಾನರ್ ನಲ್ಲಿ ಪೀಟರ್ ಸಿನಿಮಾ ನಿರ್ಮಾಣವಾಗಿದೆ. ಗುರುಪ್ರಸಾದ್ ನರ್ನಾಡ್ ಛಾಯಾಗ್ರಹಣ, ನವೀನ್ ಶೆಟ್ಟಿ ಸಂಕಲನ, ದೇವರಾಜ್ ಕಲಾ ನಿರ್ದೇಶನ, ರಿತ್ವಿಕ್ ಮುರಳೀಧರ್ ಸಂಗೀತ ನಿರ್ದೇಶನ ಪೀಟರ್ ಚಿತ್ರಕ್ಕಿದೆ. ಮಡಿಕೇರಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಪೆದ್ದಿಯಲ್ಲಿ ಶ್ರೀಲೀಲಾ

ಟಾಲಿವುಡ್ ಪ್ರಸಿದ್ಧ ನಟ ರಾಮ್ ಚರಣ್, ಪೆದ್ದಿ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಬುಚ್ಚಿ ಬಾಬು ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದ ಫಸ್ಟ್ ಲುಕ್ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿತ್ತು. ಹಳ್ಳಿಯಲ್ಲಿ ನಡೆಯುವ ಕ್ರಿಕೆಟ್ ಹಾಗೂ ಕಬ್ಬಡಿ ಕ್ರೀಡೆಯ ಸುತ್ತ ಚಿತ್ರದ ಕಥೆ ಸಾಗುತ್ತದೆ ಎಂಬುದು ಈ ಟೀಸರ್ ನಲ್ಲಿ ಸ್ಪಷ್ಟವಾಗಿತ್ತು. ಬಾಯಲ್ಲಿ ಬೀಡಿ ಕಚ್ಚಿಕೊಂಡು ಬ್ಯಾಟ್ ಹಿಡಿದು ಬರುವ ರಾಮ್ ಚರಣ್ ಮೈದಾನದಾಚೆಗೆ ಚೆಂಡನ್ನು ಅಟ್ಟುತ್ತಾರೆ. ಇದನ್ನು ನೋಡಿ ಅಭಿಮಾನಿಗಳು ಥ್ರಿಲ್ ಆಗಿದ್ದರು. ರಾಮ್ ಚರಣ್ ರಗಡ್ ಲುಕ್ ನಲ್ಲಿ ಕಂಗೊಳಿಸಿದ್ದರು. ಪೆದ್ದಿ ಚಿತ್ರದಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಕೂಡ ನಟಿಸುತ್ತಿದ್ದು, ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಶಿವಣ್ಣ ಈಗಾಗಲೇ ಶಿವಣ್ಣ ಶೂಟಿಂಗ್ ನಲ್ಲಿಯೂ ಪಾಲ್ಗೊಂಡಿದ್ದಾರೆ. ಈ ಸಿನಿಮಾದಲ್ಲಿ ಶಿವಣ್ಣನ ಗೆಟಪ್ ಹೇಗಿರಲಿದೆ ಎಂಬ ಕಾತರವೂ ಅಭಿಮಾನಿಗಳಲ್ಲಿದೆ ಇದೆ. ಈ ಹಿಂದೆ ರಂಗಸ್ಥಳ ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಬುಚ್ಚಿ ಬಾಬು ಈಗ ರಾಮ್ ಚರಣ್ ಅವರಿಗಾಗಿಯೇ ಸಿನಿಮಾ ನಿರ್ದೇಶನ ಮಾಡುತ್ತಿರುವುದು ಕುತೂಹಲ ಮೂಡಿಸಿದೆ. ಹೈ ಬಜೆಟ್ ಚಿತ್ರದಲ್ಲಿ ಐಟಂ ಸಾಂಗ್ ಇದ್ದೇ ಇರುತ್ತದೆ. ಈ ಹಿಂದೆ ರಾಮ್ ಚರಣ್ ಅಭಿನಯದ ರಂಗಸ್ಥಳಂ ಚಿತ್ರದಲ್ಲಿಯೂ ಐಟಂ ಸಾಂಗ್ ಇತ್ತು. ಅಂತೆಯೇ ಪುಷ್ಪ ಚಿತ್ರದಲ್ಲಿ ಐಟಂ ಸಾಂಗ್ ಸೂಪರ್ ಹಿಟ್ ಆಗಿತ್ತು. ಈಗ ಪೆದ್ದಿಯಲ್ಲಿಯೂ ಭರ್ಜರಿ ಐಟಂ ಸಾಂಗ್ ಇರುವುದು ಖಚಿತವಾಗಿದೆ. ಪುಷ್ಪ 2 ನಲ್ಲಿ ಕಿಸ್ ಕಿಸ್ಸಿಕ್... ಅಂತ ಸೊಂಟ ಬಳುಕಿಸಿದ್ದ ನಟಿ ಶ್ರೀಲೀಲಾ ಪೆದ್ದಿಯಲ್ಲಿ ರಾಮ್ ಚರಣ್ ಜತೆಗೆ ಹೆಜ್ಜೆ ಹಾಕಲಿದ್ದಾರೆ ಎನ್ನಲಾಗುತ್ತಿದೆ. ಈ ಕುರಿತಂತೆ ಶ್ರೀಲೀಲಾ ಜತೆಗೆ ಚಿತ್ರತಂಡ ಮಾತುಕತೆ ನಡೆಸಿದೆ. ಟಾಲಿವುಡ್ ನಲ್ಲಿ ಭರ್ಜರಿ ಬೇಡಿಕೆ ಪಡೆದಿದ್ದ ಶ್ರೀಲೀಲಾ ಈಗ ಬಾಲಿವುಡ್ ಅಂಗಳದಲ್ಲಿಯೂ ಸದ್ದು ಮಾಡುತ್ತಿದ್ದಾರೆ. ಇದರ ಜತೆಗೆ ಕಾಲಿವುಡ್ ಸಿನಿಮಾಗಳಲ್ಲಿಯೂ ನಟಿಸುತ್ತಿದ್ದಾರೆ.

ಚೇಸರ್‌ನ ಹೊಸ ಗಾನ

ಬುದ್ಧಿವಂತ 2 ಚಿತ್ರವನ್ನು ನಿರ್ದೇಶಿಸಿರುವ ಜಯರಾಮ್, ಆ ಸಿನಿಮಾ ಬಿಡುಗಡೆಗೂ ಮೊದಲೇ ಚೇಸರ್ ಚಿತ್ರವನ್ನು ನಿರ್ದೇಶಿಸಿದ್ದು ತೆರೆಗೆ ತರಲು ಸಿದ್ಧವಾಗಿದ್ದಾರೆ. ಈ ಚಿತ್ರದಲ್ಲಿ ಸುಮಂತ್ ಶೈಲೇಂದ್ರ, ನಾಯಕನಾಗಿ ನಟಿಸಿದ್ದು, ರಕ್ಷಾ ಮೆನನ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಚೇಸರ್ ಚಿತ್ರದ ಬೇಬಿ ಲವ್ ಎಂಬ ಹಾಡು ಬಿಡುಗಡೆಯಾಗಿದೆ. ಕವಿರಾಜ್ ಸಾಹಿತ್ಯದ ಈ ಹಾಡಿಗೆ ಅರ್ಜುನ್ ಜನ್ಯ ಸಾಹಿತ್ಯ ರಚಿಸಿದ್ದು, ಜಸ್ಕರಣ್ ಸಿಂಗ್ ದನಿಯಲ್ಲಿ ಈ ಹಾಡು ಮಧುರವಾಗಿ ಮೂಡಿಬಂದಿದೆ. ಸುಮಂತ್ ಶೈಲೇಂದ್ರ ಹಾಗೂ ರಕ್ಷಾ ಮೆನನ್ ಕಾಣಿಸಿಕೊಂಡಿದ್ದಾರೆ. ಸಾಧಕೋಕಿಲ ಕೂಡ ಹಾಡಿನಲ್ಲಿ ಪ್ರತ್ಯಕ್ಷವಾಗುತ್ತಾರೆ. ಇದೊಂದು ಪ್ರೇಮಗೀತೆಯಾಗಿದ್ದು ಸುಂದರ ತಾಣದಲ್ಲಿ ಹಾಡನ್ನು ಸೆರೆಹಿಡಿಯಲಾಗಿದೆ. ರಂಗಾಯಣ ರಘು, ಸುಚೇಂದ್ರ ಪ್ರಸಾದ್, ರವಿಶಂಕರ್, ಚಿಕ್ಕಣ್ಣ ಮುಂತಾದವರು ತಾರಾಗಣದಲ್ಲಿದ್ದಾರೆ. ಮಾಲತಿ ಶೇಖರ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಚಂದ್ರಶೇಖರ್ ಛಾಯಾಗ್ರಹಣ, ಕಲೈ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರಲು ತಯಾರಿ ಮಾಡುಕೊಂಡಿದೆ.